ಕರ್ನಾಟಕ ಸರ್ಕಾರ

ಸಮಗ್ರ
ಕನ್ನಡ ಜನಪದ ಮತ್ತು ಯಕ್ಷಗಾನ
ಸಾಹಿತ್ಯ ಮಾಲೆ

ರಂಗಭೂಮಿ
ಸಾಹಿತ್ಯ

೧೮

(09 ಪ್ರಸಂಗಗಳು



ಯಕ್ಷಗಾನ ಭಾಗವತ ಪ್ರಸಂಗಗಳು

ಸಂ. ಡಾ. ಪಾದೇಕಲ್ಲು ವಿಷ್ಣುಭಟ್ಟ

ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ - ೧೮

ರಂಗ ಭೂಮಿ ಸಾಹಿತ್ಯ ಪ್ರಕಾರ ೧೫

ಭಾಗವತ ಪ್ರಸಂಗಗಳು

ಸಂಪಾದಕರು

ಡಾ|| ಪಾದೇಕಲ್ಲು ವಿಷ್ಣು ಭಟ್ಟ

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು - ೫೬೦ ೦೦೨.
ಬೆಂಗಳೂರು

Bhagawata Prasangagalu-: Edited by Dr. Padekallu Vishnu Bhat, published by Commissioner, Dept. of Kannada and Culture, Kannada Bhavana, J.C.Road, Bangalore-560 002 on the Occasion of Suvarna Kanataka, 2006.

ಈ ಆವೃತ್ತಿಯ ಹಕ್ಕು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಪ್ರಥಮ ಮುದ್ರಣ : ೨೦೦೬

ಪುಟಗಳು : xcvi + ೬೫೬

ಪ್ರತಿಗಳು : ೧೦೦೦

ಬಿಡಿ ಪ್ರತಿ ಬೆಲೆ : ರೂ.೫೦/-

First Print : 2006

Pages : xcvi + 656

Price : Rs.50/-

Copies : 1000

ಪ್ರಕಾಶಕರು :

'ಸುವರ್ಣ ಕರ್ನಾಟಕ' ಸಂದರ್ಭದಲ್ಲಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ.ಆರ್.ನಿರಂಜನ್ ಕೆ.ಎ.ಎಸ್. ಅವರಿಂದ ಪ್ರಕಟಿತ.

ಸಹಕಾರ : ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

ಮುಖಪುಟ ವಿನ್ಯಾಸ : ಪ.ಸ.ಕುಮಾರ್

ಅಕ್ಷರ ಸಂಯೋಜನೆ ಹಾಗೂ ಮುದ್ರಣ :
ಪ್ರಿಂಟ್ ಪಾರ್ಕ್
ನಂ. ೧೪೯೬/೪, ೩ನೇ ಕ್ರಾಸ್, ಮರಿಯಪ್ಪನ ಪಾಳ್ಯ
ಮಹಾಕವಿ ಕುವೆಂಪು ರಸ್ತೆ
ಬೆಂಗಳೂರು – ೫೬೦ ೦೨೧.
ದೂರವಾಣಿ : ೨೩೪೯೨ ೨೮೩೮

ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಪ್ರಕಟಣ ಯೋಜನೆ

ಸಂಪಾದಕ ಸಮಿತಿ

ಅಧ್ಯಕ್ಷರು
ಪ್ರೊ. ಹಿ. ಶಿ. ರಾಮಚಂದ್ರೇಗೌಡ

ಸದಸ್ಯರು
ಡಾ. ಸೋಮಶೇಖರ ಇಮ್ರಾಪುರ
ಡಾ. ಎಂ. ಎಸ್. ಲಠ್ಠೆ
ಡಾ. ಹೆಚ್. ಜೆ. ಲಕ್ಕಪ್ಪಗೌಡ
ಡಾ. ಬಿ. ಎ. ವಿವೇಕ ರೈ
ಡಾ. ತೀ. ನಂ. ಶಂಕರನಾರಾಯಣ
ಶ್ರೀಮತಿ ಶಾಂತಿನಾಯಕ
ಡಾ. ಸಿದ್ದಲಿಂಗಯ್ಯ
ಶ್ರೀ ಕೆರೆಮನೆ ಶಂಭು ಹೆಗಡೆ
ಡಾ. ಕೆ. ಚಿನ್ನಪ್ಪಗೌಡ

ಪದನಿಮಿತ್ತ ಸದಸ್ಯರು
ಅಧ್ಯಕ್ಷರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಅಧ್ಯಕ್ಷರು, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು

ಸದಸ್ಯ ಕಾರ್ಯದರ್ಶಿ
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮೇಲ್ವಿಚಾರಣಾ ಸಮಿತಿ

ಅಧ್ಯಕ್ಷರು

ಶ್ರೀ ಐ. ಎಂ. ವಿಠ್ಠಲಮೂರ್ತಿ, ಐ.ಎ.ಎಸ್.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಹಾಗೂ ಪ್ರವಾಸೋದ್ಯಮ ಇಲಾಖೆ

ಸದಸ್ಯರು

ಶ್ರೀ ಕೆ. ಆರ್. ನಿರಂಜನ್, ಕೆ.ಎ.ಎಸ್.,
ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಶ್ರೀ ಕೆರೆಮನೆ ಶಂಭು ಹೆಗಡೆ
ಅಧ್ಯಕ್ಷರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಶ್ರೀ ಜೆ. ಎನ್. ಶಾಮರಾವ್
ಲೆಕ್ಕಪತ್ರಾಧಿಕಾರಿಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಸಂಚಾಲಕರು

ಶ್ರೀ ಕಾ. ತ. ಚಿಕ್ಕಣ್ಣ
ಜಂಟಿ ನಿರ್ದೇಶಕರು (ಆಡಳಿತ)
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

"ಸುವರ್ಣ ಕರ್ನಾಟಕ-೨೦೦೬"

ಹೆಚ್. ಡಿ. ಕುಮಾರಸ್ವಾಮಿ
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು-೫೬೦ ೦೦೧
ದಿನಾಂಕ ೦೩-೧೦-೨೦೦೬

ಹೊನ್ನುಡಿ

ಕನ್ನಡ ನಾಡಿನ ಜಾನಪದ ಜಗತ್ತು ಅತ್ಯಂತ ವಿಸ್ತಾರವಾದುದು, ಸಮೃದ್ಧವಾದುದು ಮತ್ತು ವೈವಿಧ್ಯಮಯವಾದುದು. ಜನಪದ ಗೀತ ಸಂಗೀತ, ನೃತ್ಯ, ನಾಟಕ, ಚಿತ್ರಕಲೆ ಶಿಲ್ಪಕಲೆಗಳಿಂದ ಕಿಕ್ಕಿರಿದಿರುವ ಜಾನಪದವು ಜಗತ್ತಿನ ಮನುಕುಲದ ಸಂಸ್ಕೃತಿಯ ಹಾಗೂ ಎಲ್ಲಾ ಜ್ಞಾನ-ವಿಜ್ಞಾನಗಳ ಮೂಲ ನಡವಳಿಕೆ.

ಯಾವುದೇ ದೇಶದ ಜಾನಪದ ಸಂಪತ್ತು ಆ ದೇಶದ ಸಂಸ್ಕೃತಿಯ ತೋರುದೀವಿಗೆ. ಪಾರಂಪರಿಕವಾಗಿ ಶತಶತಮಾನಗಳಿಂದ ಉಳಿದು ಬೆಳೆದುಕೊಂಡು ಬಂದ ಈ ಸಂಪತ್ತು ದೇಶದ ಅಮೂಲ್ಯ ಆಸ್ತಿ. ನಮ್ಮ ಹಿರಿಯರ ಜ್ಞಾನ-ವಿವೇಕ-ಸಾಹಿತ್ಯಕ ಸಾಧನೆಗಳನ್ನು ಪರಿಚಯಿಸುವ, ತಿಳಿವಳಿಕೆಯನ್ನು ಹೊರಹೊಮ್ಮಿಸುವ ಮಣ್ಣಿನ ಮಕ್ಕಳ ಸಾಹಿತ್ಯವಾದ ಜಾನಪದವನ್ನು ಒಂದು ನಿಧಿಯಂತೆ ಕಾಪಾಡಿಕೊಂಡು ಬರದಿದ್ದರೆ ಅದು ದೇಶಕ್ಕಾಗುವ ದೊಡ್ಡ ನಷ್ಟವೇ ಸರಿ.

ಕನ್ನಡ ನಾಡಿನ ಜಾನಪದಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಕ್ರಿ.ಶ. ೯ನೇ ಶತಮಾನದ ಗದ್ಯ ಗ್ರಂಥವಾದ ವಡ್ಡಾರಾಧನೆಯು ಕನ್ನಡದ ಪ್ರಪ್ರಥಮ ಜನಪದ ಕಥಾ ಸಂಕಲನವೆನಿಸುತ್ತದೆ. ಇದುವರೆಗೂ ಅಸಂಖ್ಯಾತ ವಿದ್ವಾಂಸರು ಈ ಸಾಹಿತ್ಯವನ್ನು ಹೊರತರಲು ಶ್ರಮಿಸಿರುತ್ತಾರೆ. ಆದರೂ ಕರ್ನಾಟಕ ಜನಪದ ಸಾಹಿತ್ಯ ಪರಂಪರೆಯ ಹಿರಿಮೆಯನ್ನು ಒಟ್ಟಾಗಿ ಕೂಡಿಸಿ ಜಗತ್ತಿಗೆ ಪರಿಚಯಿಸುವ ಸದುದ್ದೇಶದಿಂದ ಕರ್ನಾಟಕ ಸರ್ಕಾರವು ತನ್ನ ಆದ್ಯ ಕರ್ತವ್ಯವೆಂದು ತಿಳಿದು, ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಪ್ರಕಟಣೆ ಯೋಜನೆಯನ್ನು ಹಮ್ಮಿಕೊಂಡು ಈ ಸಮೃದ್ಧ ಸಾಹಿತ್ಯ ರಾಶಿಯನ್ನು ಕನ್ನಡ ಜನತೆಗೆ ಅರ್ಪಿಸುತ್ತಿದೆ. ಈ ಯೋಜನೆಯಲ್ಲಿ ಜನಪದ ಪದ್ಯ-ಗದ್ಯ-ರಂಗಭೂಮಿ ಮತ್ತು ಭಾಷಿಕ ಪ್ರಕಾರಗಳಿಗೆ ಸಂಬಂಧಿಸಿದಂತೆ ಹಲವು ಸಂಪುಟಗಳಲ್ಲಿ ಹೊರತರಲಾಗುತ್ತಿದೆ.

ಈ ಸಾಹಿತ್ಯಮಾಲೆಯ ಕೃತಿ ಸಂಪುಟಗಳನ್ನು ಸಹೃದಯ ಓದುಗರು ಆಸ್ವಾದಿಸಿದರೆ ಕರ್ನಾಟಕ ಪ್ರಜಾ ಸರ್ಕಾರದ ಶ್ರಮ ಸಾರ್ಥಕವಾಗುತ್ತದೆ.

ಈ ಯೋಜನೆಯ ನೇತೃತ್ವ ವಹಿಸಿ ದುಡಿದ ಪ್ರೊ. ಹಿ. ಶಿ. ರಾಮಚಂದ್ರೇಗೌಡರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಂಪಾದಕ ಮಂಡಳಿಯ ಮಾರ್ಗದರ್ಶನವನ್ನು, ವಿವಿಧ ಸಂಪುಟಗಳ ಸಂಪಾದಕರಾಗಿ ನಾಡಿನ ಅನೇಕ ಜಾನಪದ ವಿದ್ವಾಂಸರು ತೋರಿರುವ ಆಸಕ್ತಿ ಹಾಗೂ ನೆರವನ್ನು ಸ್ಮರಿಸುತ್ತಾ ಸಮಗ್ರ ಕರ್ನಾಟಕದ ಪ್ರಾತಿನಿಧಿಕ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟಗಳನ್ನು ಸುವರ್ಣ ಕರ್ನಾಟಕ ವರ್ಷದ ಈ ಸುಸಂದರ್ಭದಲ್ಲಿ ಅತ್ಯಂತ ಸಂತೋಷದಿಂದ ಕನ್ನಡ ಜನತೆಗೆ ಸಮರ್ಪಿಸುತ್ತಿದ್ದೇನೆ.

(ಹೆಚ್.ಡಿ. ಕುಮಾರಸ್ವಾಮಿ)

ಪ್ರಕಾಶಕರ ಮಾತು

ಜಾಗತೀಕರಣದ ಪರಿಣಾಮಗಳು ಎಂದಿಗಿಂತಲೂ ತ್ವರಿತವಾಗಿ ಇಂದು ಮೂಲ ಸಂಸ್ಕೃತಿಯ ಮೇಲೆ ಧಾಳಿ ಮಾಡುತ್ತಿವೆ. ಗ್ರಾಮೀಣ ಸಾಹಿತ್ಯ, ಸಂಸ್ಕೃತಿ, ಕಲೆಗಳಂತಹ ಸೃಜನಶೀಲತೆಗೆ ಧಕ್ಕೆ ಉಂಟಾಗಿದೆ. ಈ ಸಂದಿಗ್ಧ ಕಾಲಘಟ್ಟದಲ್ಲಿ ವಿಸ್ಮೃತಿಗೆ ಒಳಗಾಗುತ್ತಿರುವ ಸಮುದಾಯಕ್ಕೆ ಸ್ಥಳೀಯ ಜ್ಞಾನ ಸಂಪತ್ತಿನ ಮಹತ್ವವನ್ನು ಮನವರಿಕೆ ಮಾಡಿಕೊಡಲು ಜಾನಪದವೇ ಮೂಲ ಆಕರವಾಗಿದೆ. ಈ ದಿಸೆಯಲ್ಲಿ "ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಪ್ರಕಟಣೆ"ಯು ಅತ್ಯಂತ ಮಹತ್ವದ ಯೋಜನೆಯಾಗಿದೆ.

ಸ್ವಾತಂತ್ರ್ಯಪೂರ್ವ ಕಾಲದಿಂದಲೂ ಅನೇಕ ಪ್ರಾತಃಸ್ಮರಣೀಯರು ಜನಪದ ಮತ್ತು ಯಕ್ಷಗಾನ ಸಾಹಿತ್ಯದ ಪ್ರಕಟಣೆಗಳನ್ನು ಹೊರತಂದಿದ್ದಾರೆ. ವಿಶ್ವವಿದ್ಯಾಲಯಗಳು, ಖಾಸಗಿ ಸಂಸ್ಥೆಗಳು, ಖಾಸಗಿ ಪ್ರಕಾಶಕರು, ಆಸಕ್ತ ಜಾನಪದ ವಿದ್ವಾಂಸರು ಬಿಡಿ ಬಿಡಿಯಾಗಿ ಪ್ರಕಟಿಸಿರುತ್ತಾರೆ. ಇವರನ್ನೆಲ್ಲಾ ಈ ಹೊತ್ತಿನಲ್ಲಿ ನೆನೆಯುತ್ತಾ, ಸಮೃದ್ಧ ಜನಪದ ಸಾಹಿತ್ಯವನ್ನು ಕ್ರೋಡೀಕರಿಸಿ, ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಾಹಿತ್ಯ ಪ್ರಕಟಣೆಯ ಬೃಹತ್ ಯೋಜನೆಯನ್ನು ಹಮ್ಮಿಕೊಂಡಿತು. ಈ ಯೋಜನೆಯನ್ನು ಕಾರ್ಯರೂಪಕ್ಕಿಳಿಸಲು ಜಾನಪದ ವಿದ್ವಾಂಸರಾದ ಪ್ರೊ. ಹಿ. ಶಿ. ರಾಮಚಂದ್ರೇಗೌಡ ಅವರ ಅಧ್ಯಕ್ಷತೆಯಲ್ಲಿ ಡಾ. ಸೋಮಶೇಖರ ಇಮ್ರಾಪುರ, ಡಾ. ಎಂ. ಎಸ್. ಲಠ್ಠೆ, ಡಾ. ಎಚ್. ಜೆ. ಲಕ್ಕಪ್ಪಗೌಡ, ಡಾ. ವಿವೇಕ ರೈ, ಡಾ. ತೀ. ನಂ. ಶಂಕರನಾರಾಯಣ, ಡಾ. ಸಿದ್ದಲಿಂಗಯ್ಯ, ಶ್ರೀ ಕೆರೆಮನೆ ಶಂಭು ಹೆಗಡೆ, ಡಾ. ಕೆ. ಚಿನ್ನಪ್ಪಗೌಡ, ಶ್ರೀಮತಿ ಶಾಂತಿನಾಯಕ ಮತ್ತು ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರನ್ನೊಳಗೊಂಡ ಸಂಪಾದಕ ಸಮಿತಿಯನ್ನು ರಚಿಸಲಾಯಿತು. ಈ ಯೋಜನೆಯ ಕಾರ್ಯ ನಿರ್ವಹಣೆಯ ಮೇಲ್ವಿಚಾರಣೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರು, ಕರ್ನಾಟಕ

ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಲೆಕ್ಕಪತ್ರಾಧಿಕಾರಿಗಳು ಸದಸ್ಯರಾಗಿಯೂ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರನ್ನು ಸಂಚಾಲಕರಾಗಿರುವಂತೆ ಸಮಿತಿಯನ್ನು ರಚಿಸಲಾಯಿತು.

ಈ ಬೃಹತ್ ಯೋಜನೆ ಕಾರ್ಯರೂಪಕ್ಕಿಳಿಯಲು ಸಂಪಾದಕ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ಮೇಲ್ವಿಚಾರಣಾ ಸಮಿತಿಯ ಅಧ್ಯಕ್ಷರ ಶ್ರಮ ಮತ್ತು ಸಹಕಾರ ಹೆಚ್ಚಿನದು. ಆಯಾ ಸಂಪುಟಗಳ ಸಂಪಾದಕರು, ಪರಿಶೀಲಕರು ಮತ್ತು ಸಂಪುಟಗಳನ್ನು ಮುದ್ರಣಕ್ಕೆ ಅನುಗೊಳಿಸಿದ ಯೋಜನೆಯ ಸಂಯೋಜಕರಾದ ಡಾ. ಚಕ್ಕೆರೆ ಶಿವಶಂಕರ್ ಹಾಗೂ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್ ಅವರ ಶ್ರದ್ಧೆ ಸಹಕಾರಗಳು ಅಮೂಲ್ಯವಾದುವು. ಈ ಎಲ್ಲ ಮಹನೀಯರಿಗೆ ಇಲಾಖೆಯ ಕೃತಜ್ಞತೆಗಳು ಸಲ್ಲುತ್ತವೆ. ಹಾಗೆಯೇ ಈ ಸಂಪುಟಗಳ ಮುಖಪುಟ ವಿನ್ಯಾಸ ರೂಪಿಸಿಕೊಟ್ಟ ಕಲಾವಿದ ಶ್ರೀ ಪ.ಸ. ಕುಮಾರ್ ಮತ್ತು ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಎಂ. ಮುನಿರಾಜು ಹಾಗೂ ಸಿಬ್ಬಂದಿಗೆ ನನ್ನ ನೆನಕೆಗಳು.

ಈ ಯೋಜನೆಯನ್ನು ಆಗುಮಾಡಿದ ಇಲಾಖಾ ಹಿಂದಿನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಉಷಾ ಗಣೇಶ್ ಮತ್ತು ಈಗಿನ ಇಲಾಖಾ ಕಾರ್ಯದರ್ಶಿಗಳಾದ ಶ್ರೀ ಐ. ಎಂ. ವಿಠ್ಠಲಮೂರ್ತಿ ಅವರಿಗೆ ಇಲಾಖೆಯ ವಂದನೆಗಳು. ಈ ಸಂಪುಟಗಳನ್ನು ಮುದ್ರಿಸಿಕೊಟ್ಟ ರಾಜಾ ಪ್ರಿಂಟರ್ಸ್‌ರವರಿಗೆ ನಮ್ಮ ಧನ್ಯವಾದ.

ಸುವರ್ಣ ಕರ್ನಾಟಕ ವರ್ಷದ ಸಂದರ್ಭದಲ್ಲಿ ನಿರ್ದೇಶನಾಲಯ ಹೊರತರುತ್ತಿರುವ ಈ ಸಂಪುಟಗಳನ್ನು ಕನ್ನಡ ಜನತೆ ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಾನು ನಂಬಿದ್ದೇನೆ.

(ಕೆ. ಆರ್. ನಿರಂಜನ್)
ಆಯುಕ್ತರು

ಅಧ್ಯಕ್ಷರ ಮಾತು

ಪೂರ್ವಾಪರ

ಹದಿನೆಂಟನೆಯ ಶತಮಾನದ ಆಧುನಿಕ ವಿಜ್ಞಾನ ನಮ್ಮ ದೇಶಕ್ಕೆ ಒಂದು ಮಹಾಪಲ್ಲಟವಾಗಿ ಪ್ರವೇಶಿಸಿತು. ಅದು ವಸಾಹತುಶಾಹಿಯ ಒಂದು ಪ್ರಭುತ್ವವೂ, ಹೊಸಜ್ಞಾನ ಮತ್ತು ಹೊಸ ವಸ್ತು ವಿನ್ಯಾಸದ ಒಂದು ಆವಿಷ್ಕಾರವೂ ಆಗಿತ್ತು. ನಮ್ಮೊಳಗೆ ನಾವು, ಕಟ್ಟಿಹಾಕಿಕೊಂಡಿದ್ದ ನಮಗೆ ಈ ಕಂಪನ ಕೆಲವರಲ್ಲಿ ಭಾರಿ ತಲ್ಲಣವನ್ನೂ, ಹಲವರಲ್ಲಿ ಬಿಡುಗಡೆಯ ತರಂಗಗಳನ್ನೂ ತಂದಿತು. ಅದನ್ನು ಮಿಸುಕುವ, ಮೀರುವ ಅಥವಾ ಸುಧಾರಿಸಿ ಸ್ವೀಕರಿಸುವ ಯಾವ ಶಕ್ತಿಯೂ ಆಗಿನ ಭಾರತೀಯ ಸಂದರ್ಭಕ್ಕೆ ಇರಲಿಲ್ಲ. 'ಒಪ್ಪಿಕೊ ಇಲ್ಲವೆ ಹಿಂದೆಸರಿ' ಎಂಬ ಕೊನೆಯ ಆದೇಶವದು. ಇದು ಕಾರಣವಾಗಿ ಪ್ರಭುತ್ವವನ್ನು ಮೀರಿದರೆ ಹೊಸಜ್ಞಾನ ತಪ್ಪಿಹೋಗುವ, ಹೊಸಜ್ಞಾನವನ್ನೇ ವಿರೋಧಿಸಿದರೆ ಜೀವನ ಹಿಂದೆ ಸರಿಯುವ ಅಪಾಯದ ಇಕ್ಕಟ್ಟಿನಲ್ಲಿ ಭಾರತದ ಶ್ರೀಮಂತ ಮತ್ತು ಬಡವ ಇಬ್ಬರೂ ಸಿಕ್ಕಿಕೊಂಡರು. ಅಂಥ ವಿಜ್ಞಾನ ನಮ್ಮ ಹತ್ತಿರ ಬಂತು.

ಆ ವಿಜ್ಞಾನ ಕೇವಲ ಜ್ಞಾನವಾಗಿ ಬಂದಿದ್ದರೆ ಭಾರತೀಯ ಪಂಡಿತರು ಅದರೊಂದಿಗೆ ತರ್ಕಕ್ಕೆ ಬಿದ್ದು ಅದನ್ನು ಹೇಗೋ ಸೋಲಿಸಿ ಓಡಿಸಿಬಿಡುತ್ತಿದ್ದರು. ಅದು ಆಯುಧವಾಗಿಯೂ, ಆಸೆಯಾಗಿಯೂ ಮೂಡಿಬಂದಿತ್ತು. ಬ್ರಿಟಿಷರನ್ನು ಸೋಲಿಸಬಹುದಿತ್ತು, ಬಡತನವನ್ನು ಸೋಲಿಸುಬಹುದಿತ್ತ ! ನಮ್ಮ ಆ ಕಾಲದ, ದೇಶದ ಬಡತನ ಅಂಥ ವಸ್ತುಜ್ಞಾನದ ಆದೇಶಕ್ಕೆ ತಲೆಬಾಗಿತು. ಜೊತೆಯಲ್ಲಿಯೇ ಸಂಸ್ಕೃತಿಯ ಬಡತನವನ್ನೂ ಘೋಷಿಸಿಕೊಂಡಿತಲ್ಲ ! ಅಲ್ಲಿ ನಮ್ಮ ಪತನದ ಹಾದಿ ತೆರೆಯಿತು. ಈ ಸೋಲೇ ಮತ್ತೊಂದು ಕಡೆಯಿಂದ ರಾಷ್ಟ್ರೀಯ ಚಳವಳಿಗೆ ಸ್ವರಸಂಯೋಜನೆ ಮಾಡಿತು. 'ಸಾಮಗ್ರಿ ಆಧುನಿಕತೆ'ಯನ್ನು ಎತ್ತಕಡೆಯಿಂದ ಬೇಕಾದರೂ ತರಬಹುದು 'ಸಂಸ್ಕೃತಿ ಆಧುನಿಕತೆ' ಎಂಬುದು ಹಾಗೆ ಬೇರೆ ಬೇರೆ ಕಡೆಯಿಂದ ತುಂಬಿಕೊಳ್ಳುವಂಥದಲ್ಲ. ಅದನ್ನು ನೆಲದೊಡಲ ಫಲವತ್ತತೆಯಿಂದಲೇ ಪುನರ್‌ನಿರ್ಮಿಸಿಕೊಳ್ಳುತ್ತ, ಅನ್ಯಸಂಸ್ಕೃತಿಗಳೊಂದಿಗೆ ಅನುಸಂಧಾನ ನಡೆಸತಕ್ಕದ್ದು ಎಂಬುದನ್ನು ರಾಷ್ಟ್ರೀಯವಾದಿಗಳೂ, ಕನ್ನಡ ಸಾಹಿತ್ಯ, ಸಂಸ್ಕೃತಿ ಪುನರ್ ನಿರ್ಮಾತೃಗಳೂ ಆದ ಕನ್ನಡ ಕವಿ ಚಿಂತಕರು ಕಂಡುಕೊಂಡರು. ಅಲ್ಲಿ ಹುಟ್ಟಿತು ನೋಡಿ ನಮ್ಮ ಜನಪದ ಸಾಹಿತ್ಯದ ಕಾಂಕ್ಷೆ.

ಈ ಮೊದಲೆ ಬ್ರಿಟಿಷರು ಜನಪದ ಸಾಹಿತ್ಯ, ಸಂಸ್ಕೃತಿ ಸಂಗ್ರಹದಲ್ಲಿ ತೊಡಗಿದ್ದರು. ಅದು ಅವರ ಸಾಮ್ರಾಜ್ಯ ವಿಸ್ತರಣೆಯ ಎರಡನೆ ಚಲನೆಯ ಹುನ್ನಾರು. ಮತ್ತೊಂದು ಬಗೆಯಲ್ಲಿ ಭಾರತದ ಜಾನಪದ ಕಜ್ಞಾಸಂಪತ್ತನ್ನು ಕೊಂಡೊಯ್ಯುವ ವಿಕ್ರಮದ ಮುಂದುವರಿದ ಕಥಾನಕ. ಈ ನಮ್ಮ ಸಂಸ್ಕೃತಿ, ಅವರು ನಮಗೆ ತಂದುಕೊಟ್ಟ ವಿಜ್ಞಾನದಂಥ ಶ್ರೇಷ್ಠತೆ ಎಂದು ಅವರು ತಿಳಿದಿರಲಿಲ್ಲ, ಮಂತ್ರ, ಮಾಯಾ ಲೋಕದ ಭಾರತೀಯ ಪುರಾತನರು ಹೇಗಿರಬಹುದು ಎಂಬ ಕುತೂಹಲ ಹಾಗೂ ಅದನ್ನು ಕಂಡು ಅನುಭವಿಸುವ ಪ್ರಭುವಿನ ಖುಷಿ ಅವರದಾಗಿತ್ತು, ತಪ್ಪೇನಿಲ್ಲ; ಪ್ರಭುಗಳೆ ಹಾಗೆ! ಆಳಿಸಿಕೊಳ್ಳುವವನ ಸಂಪತ್ತು, ಸಂಸ್ಕೃತಿ, ಸಾಹಿತ್ಯ - ಇವೆಲ್ಲ ಅಕಾಲಿಕ ಮತ್ತು ಹಳೆಯವು ಎಂದು ಅವರು ಹೇಳಬೇಕಿತ್ತು, ಅದು ಅವರ ಅಭಿವೃದ್ಧಿ ತತ್ವದ ಮುಂದುವರಿಕೆ ಮತ್ತು ಆಳಿಸಿಕೊಳ್ಳುವವನ ಅನಭಿವೃದ್ಧಿ ಮನೋಧರ್ಮದ ಸಮರ್ಥನೆ. ಅದು ಆಗಿನ ಭಾರತದಲ್ಲೂ ಕರ್ನಾಟಕದಲ್ಲೂ ಚೆನ್ನಾಗಿಯೇ ನಡೆಯಿತು.

ಆ ಕಾಲದ ಪರಿಸ್ಥಿತಿ ಹೊರಗಿನಿಂದ ಬಂದ ಜ್ಞಾನ 'ಆಧುನಿಕ', ನಮ್ಮದೆಂಬುದು 'ಪುರಾತನ' ಎಂದು ಮನಸೋಣು ಒಪ್ಪಿಕೊಂಡುಬಿಟ್ಟಿತ್ತು. ಭಾರತೀಯ ಉತ್ಪಾದನೆಯಲ್ಲಿ ಹೊಸತು ಮತ್ತು ಹಳತು ಎಂಬ ವಿಭಜಿತ ಧೋರಣೆ ಎಲ್ಲರ ಮನದೊಳಗೆ ದಾಖಲಾಗಿತ್ತು. ಆ ಕಾರಣದ ಮೇಲಿಂದ ನಮ್ಮ ಸಂಸ್ಕೃತಿ ಮತ್ತು ಜನಪದ ಸಾಹಿತ್ಯ ನಮ್ಮ ಹಳ್ಳಿಗಳಂತೆ ಹಳೆಯದು ಎಂದು ಹೇಳುವುದನ್ನು ಮರೆಯುತ್ತಿರಲಿಲ್ಲ. ಅದೇ ಸಂದರ್ಭದಲ್ಲಿ ಈ ಎಲ್ಲವೂ ನಮ್ಮ ಹೃದಯಕ್ಕೆ ಸಂಬಂಧಪಟ್ಟ, ಅತ್ಯಂತ ಆಪ್ತವಾದ ಸ್ಪಂದನ ಎಂಬುದನ್ನು ನಿರಾಕರಿಸುವಂತಿರಲಿಲ್ಲ. ಇಂತಹ ಒಂದು ಸಮಕಾಲೀನ ಸಂಘರ್ಷವನ್ನು ಎದುರು ಹಾಕಿಕೊಂಡ ಸಂದರ್ಭದಲ್ಲಿ ನಮ್ಮ ಹಿರಿಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಕಂಡು ಕಾಣಿಸಿ ವಿವರಿಸಿದರು. ಅಂತಹ ಜಾನಪದ ಸಾಹಿತ್ಯದ ಆಪ್ತತೆಗಾಗಿ ಅದರ ಕಡೆಗೆ ಕೈ ಚಾಚಿದರು, ಅದಕ್ಕಾಗಿ ಹಂಬಲಿಸಿ ಆಸೆಪಟ್ಟರು, ಅದನ್ನು ಕೊಡುವ ಜನತೆಯ ಮುಂದೆ ಬೇಡಿದರು, ಅವರ ಸೃಷ್ಟಿಸಂಸ್ಕೃತಿಗೆ ಉಪಕಾರ ಸ್ಮರಣೆ ಸಲ್ಲಿಸಿದರು. ಶಿಷ್ಟತೆಯ ಸ್ಥಾನ - ಮಾನ, ಅಹಂಕಾರವನ್ನು ತೊರೆದು ಜಾನಪದರೊಂದಿಗೆ ಒಂದಾಗುವ, ಒಡನಾಡುವ ಕಾರುಣ್ಯವನ್ನು ಮೆರೆದರು.

ಜಾನಪದ ಸಾಹಿತ್ಯ ಮತ್ತು ಅದರ ಸಂಗ್ರಹದ ಪ್ರಶ್ನೆ ಕೇವಲ ಒಂದು ಸಾಹಿತ್ಯ ಪ್ರಕಾರದ ಬಗೆಗಿನ ವ್ಯಾಮೋಹ ಆಗಿರಲಿಲ್ಲ. ಅದು ಪ್ರಸ್ತುತದಲ್ಲಿದ್ದ 'ಆಧುನಿಕ'ವೆಂಬ ಜಾಗತಿಕ ಸಂಸ್ಕೃತಿಯ ಸಂದರ್ಭದಲ್ಲಿ, ಸ್ಥಳೀಯ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಘಟಿಸುವ ಜವಾಬ್ದಾರಿಯೂ ಆಗಿತ್ತು. ಇದರೊಳಗೆ ಗ್ರಾಮೀಣ ಸಮುದಾಯಗಳನ್ನು ಚೇತರಿಸುವ ಮೂಲಕ ಅಖಂಡ ಭಾರತವನ್ನು ಪುನರ್‌ಸಂಘಟಿಸುವ ಪರೋಕ್ಷ ಪ್ರಯತ್ನವೂ ಇತ್ತು. ಹೀಗೆ ಒಂದು 'ಸಮಗ್ರ ಸಾಹಿತ್ಯ ಕರ್ನಾಟಕ' ಮತ್ತು 'ಸಂಸ್ಕೃತಿ ಭಾರತ'ವನ್ನು ನಿರ್ಮಿಸುವ ಹೊಣೆಗಾರಿಕೆಯನ್ನು ನಮ್ಮ ಹಿರಿಯರು ಹೊತ್ತರು. ಇದನ್ನು ಸಾಹಿತಿಗಳ ಮೂಲಕ ನಡೆದ ರಾಷ್ಟ್ರೀಯ ಚಳವಳಿ ಎನ್ನಬಹುದು. ಇವರಿಗೆ ಜನಪದಸಾಹಿತ್ಯ ಮುಖ್ಯ ಸಂಪನ್ಮೂಲವೂ,

ಸ್ಫೂರ್ತಿಯೂ, ಸಾಂಸ್ಕೃತಿಕ ಅಸ್ಮಿತೆಯೂ ಆಯಿತು. ಶಿಷ್ಟ ಸಾಹಿತ್ಯ, ಕವಿ ಮುದ್ದಣನ ಸಂದರ್ಭದಲ್ಲಿ ನಿಲುಗಡೆಗೆ ತಲುಪಿದ್ದು, ನವೋದಯ ಸಾಹಿತ್ಯ ಚಳವಳಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕಟ್ಟುವ ಹೊಸ ನಾಯಕತ್ವವನ್ನು ವಹಿಸಿತ್ತು. ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದ ಕೆಲವು ಪಾಶ್ಚಾತ್ಯ ದೇಶಗಳು ಜನಪದ ಸಾಹಿತ್ಯದ ಮೂಲಕ ತಮ್ಮ ದೇಶವನ್ನು ಪುನರ್‌ಸಂಘಟಿಸುವ ಮಾರ್ಗದರ್ಶನವನ್ನು ನೀಡಿದ್ದವು. ಅದು ನಮ್ಮ ಸಾಹಿತಿ-ಚಿಂತಕರಿಗೆ ಒಂದು ಹೆದ್ದಾರಿಯಾಯಿತು.

ಇಂಗ್ಲೆಂಡ್ ಕೈಗಾರಿಕೀಕರಣದಿಂದ ಕಳೆದುಕೊಳ್ಳುತ್ತಿರುವ ತಾಯ್ತನವನ್ನು ಮತ್ತೆ ಪಡೆಯಲು ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯ ಕಡೆಗೆ ಧಾವಿಸಿತು. ಫಿನ್ಲೆಂಡ್ ತನ್ನ ಪಕ್ಕದ ಸಾಮ್ರಾಜ್ಯಶಾಹಿಯನ್ನು ಎದುರಿಸಲು ಮತ್ತು ಸ್ವದೇಶವೆಂಬ ಸಂಸ್ಕೃತಿ ರಾಷ್ಟ್ರವನ್ನು ಸ್ಥಾಪಿಸಲು ಜನಪದ ಮಹಾಕಾವ್ಯ ಮತ್ತು ನಾಯಕರನ್ನು ಸಾಂಸ್ಕೃತಿಕ ವೀರರನ್ನಾಗಿ ಸ್ಥಾಪನೆಮಾಡಿತು. ಜರ್ಮನಿ ತಮ್ಮ ಮೂಲವನ್ನು ಪರೀಕ್ಷೆ ಮಾಡಿಕೊಳ್ಳಲು ಹಾಗೂ ಭದ್ರಮಾಡಿಕೊಳ್ಳಲು ಜನಪದ ಸಾಹಿತ್ಯ, ಭಾಷೆ ಮತ್ತು ಸಂಸ್ಕೃತಿಗಳ ಮೇಲೆ ಭಾರಿ ಹೊರೆಯನ್ನು ಹೊರಿಸಿತು. ರಷ್ಯಾ ಕಾರ್ಮಿಕ ರಾಜ್ಯ ಸ್ಥಾಪನೆಯ ಘೋಷಣೆಯ ಮೂಲಕ, ದುಡಿಯುವ ಜನರ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಮೂಲಕ ಜನರ ದನಿಗೆ ಮಾನ್ಯತೆ ನೀಡಿತು. ಭಾರತದಲ್ಲಿ ಇಂಥದೊಂದು ಚಟುವಟಿಕೆ ಗಾಂಧೀಜಿ ಅವರ ಸ್ವದೇಶಿ ಮತ್ತು ಗ್ರಾಮ ಸ್ವರಾಜ್ಯ ಚಿಂತನೆಯಿಂದ ಆರಂಭವಾಯಿತು.

ನಮ್ಮ ನವೋದಯ ಹಿರಿಯ ಸಾಹಿತಿಗಳು ಪಾಶ್ಚಾತ್ಯವನ್ನು ಪೌರ್ವಾತ್ಯದಿಂದ ಸರಿಗಟ್ಟಲು ಪ್ರಯತ್ನಶೀಲರಾದರೂ ಪಾಶ್ಚಾತ್ಯವೆಂಬುದು ಅವರಿಗೆ ನಿರಾಕರಣೆಯ ಜ್ಞಾನವಾಗಿರಲಿಲ್ಲ. ಈ ಎರಡರಲ್ಲಿಯ ಒಳ್ಳೆಯದರ ಆಯ್ಕೆ ಅವರ ಆದ್ಯತೆಯಾಗಿತ್ತು. ಪಾಶ್ಚಾತ್ಯ ಸಾಹಿತ್ಯದಲ್ಲಿಯ ಒಳ್ಳೆಯದನ್ನು ಹೆಸರಿಸುತ್ತಲೇ ಆ ಮಟ್ಟದ ಸಾಮರ್ಥ್ಯ ಪಡೆಯಲು ಜನಪದ ಸಾಹಿತ್ಯವೇ ಸರಿಯಾದ ಸಂಪನ್ಮೂಲ ಎಂಬುದನ್ನು ಮನಗಂಡರು. ಆ ಮೂಲಕ ಜನಪದ ಸಾಹಿತ್ಯ ಒಂದು ಸಾಹಿತ್ಯಕ ಅನನ್ಯತೆ ಮತ್ತು ಸ್ವೋಪಜ್ಞತೆ ಎಂದು ಗುರುತಿಸಿದರು. ಜನಪದ ಸಾಹಿತ್ಯವೆಂಬುದು: 'ಗೊರವರ ಡುಂಡುಚಿ ಬೀದಿವರೆಯ ಬೀರನಕತೆ' ಎಂಬ ಹಿಂದಿನ ಅವಹೇಳನಕಾರಿ ಧೋರಣೆಯನ್ನು ತಿರಸ್ಕರಿಸಿದರು. ೧೯೨೦ರ ಸುಮಾರಿನಿಂದಲೆ ನಮ್ಮ ಕನ್ನಡ ಸಾಹಿತಿಗಳು ಜನಪದಗೀತ ಸಂಗ್ರಹಗಳನ್ನು ಪ್ರಕಟಿಸತೊಡಗಿದರು, ನಮ್ಮ ಅಸ್ತಿತ್ವಕ್ಕಾಗಿ ಪಡಿ ನುಡಿದರು. ಹಾಗೆ ನೋಡಿದರೆ ಈ ಬದ್ಧತೆ ಅವರು ಸಮಕಾಲೀನವಾಗಿ ತಮ್ಮನ್ನು ಸೂಕ್ತ ಮಾಡಿಕೊಳ್ಳುವ ಸಂಗತಿಯೂ ಹೌದು. ಇಂಥ ಮುಕ್ತ ಮನಸ್ಸು ಮತ್ತು ವ್ಯಕ್ತ ವ್ಯಕ್ತಿತ್ವದ ಮೂಲಕ ಜನಪದ ಸಾಹಿತ್ಯ ಸಂಗ್ರಹಕ್ಕೆ ರಾಜಮಾರ್ಗವನ್ನು ಸೃಷ್ಟಿಸಿದರು. ಈಗ ಅವರ ಮಾರ್ಗದರ್ಶಕ ಮಾತುಗಳನ್ನು ಅನುಸರಿಸಿಯೇ ನಾವು ಮುಂದೆ ಹೋಗಬೇಕಿದೆ.

- ೨ -

ಮಾತಿನ ಸರಣಿ: ಮುತ್ತಿನ ಬೆಲೆ

ಬಿ. ಎಂ. ಶ್ರೀಕಂಠಯ್ಯ

'ಕನ್ನಡದಲ್ಲಿ ಇಂತಹ ಕಾಲ ಒದಗಿರುವಾಗ, ಕನ್ನಡ ಕವಿತೆ ತನ್ನ ಆಳತೆಯನ್ನೆ ಅಲ್ಲ, ಆಳವನ್ನೂ ಕೂಡಾ ಕಂಡುಕೊಳ್ಳುತ್ತಿರುವಾಗ, ಸಂಸ್ಕೃತ-ಇಂಗ್ಲಿಷ್ ಸಾಹಿತ್ಯಗಳ, ಇತರ ಸಾಹಿತ್ಯಗಳ, ಸರಿಯಾದ ಸಂಸ್ಕಾರದ ಜೊತೆಗೆ ಕನ್ನಡದ ಪ್ರೌಢಸಾಹಿತ್ಯದ ವ್ಯಾಸಂಗದ ಜೊತೆಗೆ , ಕನ್ನಡದ ಮತ್ತು ಇತರ ಸಾಹಿತ್ಯದ ಜನಪದ ಸಾಹಿತ್ಯವನ್ನೂ ಪರಾಮರ್ಶಿಸುವುದು ಅತ್ಯಾವಶ್ಯಕವಾದ ಕರ್ತವ್ಯ. ನವನಾಗರಿಕತೆಯ ಹೊಡೆತದಲ್ಲಿ, ಪ್ರೌಢಸಾಹಿತ್ಯದ ತಿರಸ್ಕಾರದಲ್ಲಿ ಈ ಜನಪದ ಸಾಹಿತ್ಯ ಉಳಿಯುವುದೇ ಕಷ್ಟವಾಗಿದೆ. ನಾಶವಾಗುವುದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳುವುದು ಕನ್ನಡಿಗರ ಕರ್ತವ್ಯ. ಸಾಹಿತ್ಯಾಭಿಮಾನಿಗಳೂ, ದೇಶವತ್ಸಲರೂ ಶ್ರದ್ಧೆಯಿಂದ ಮೂಲೆ ಮೂಲೆಗಳಿಂದಲೂ ತಮ್ಮ ತಮ್ಮ ಕಡೆಯಲ್ಲಿರುವ ಹಾಡುಗಳನ್ನು ಸಂಗ್ರಹಿಸುತ್ತಾ ಬಂದರೆ ಶೀಘ್ರದಲ್ಲಿಯೇ ಕನ್ನಡ ನಾಡಿನ ಹಾಡುಗಳೆಲ್ಲಾ ಒಂದುಗೂಡಿ ಒಂದು ದೊಡ್ಡ ಜನಪದ ಸಾಹಿತ್ಯಕೋಶವಾಗುವುದು'. **(ಗರತಿಯ ಹಾಡು ೧೯೩೧)**

ದ. ರಾ. ಬೇಂದ್ರೆ

'.........ತಾಯಿ, ಅಕ್ಕಗಳಿರಾ ! ಈ ಹಳ್ಳಿಯ ಹಾಡುಗಳ, ಹಳೆಯ ಹಾಡುಗಳ ಹೊಳೆಯನ್ನು ಇಂಗಗೊಡಬೇಡಿ. ಮತ್ತೆ ಹನಿಹನಿಯಾಗಿ ಹಳ್ಳವಾಗಲಿ, ಹಳ್ಳ ಹಳ್ಳ ಕೂಡಿ ಹೊಳೆಯಾಗಲಿ. ಈ ಅಪೇಕ್ಷೆಯನ್ನು ಕನ್ನಡತಿಯರು ಕೈಗೂಡಿಸಿಕೊಡರ ?

'ಕರ್ನಾಟಕದೊಳಗಿನ ಬೇರೆ ಬೇರೆ ಭಾಗದವರು ಹೀಗೆ ಪದ್ಯಗಳನ್ನು ಸಂಗ್ರಹಿಸಿ ಚೆನ್ನಾಗಿ ಬರೆದು ಕಳುಹಿಸಿದರೆ ಕನ್ನಡದ ಅಭ್ಯಾಸಕ್ಕೆ ದೊಡ್ಡದೊಂದು ಉಪಕಾರ ಮಾಡಿದಂತಾಗುವುದು. ಇದನ್ನು ಎಷ್ಟು ಒತ್ತಿಹೇಳಿದರೂ ಸಾಲದು !. **(ಗರತಿಯಹಾಡು ೧೯೩೧)**

ಮಾಸ್ತಿ ವೆಂಕಟೇಶ ಅಯ್ಯಂಗಾರ್

ಬೆಟಗೇರಿ ಕೃಷ್ಣಶರ್ಮ

'ಹೊಸಕಾಲದ ಕ್ರಾಂತಿಯಲ್ಲಿ ಮಾನವನ ಮನಸ್ಸು ಬುದ್ಧಿ ಹೃದಯಗಳು ಮಾಯವಾಗಿ ಹೋಗುವವೇನು?.. ಇದ್ದೇ ಇರುವವು. ಇವು ಇದ್ದೇ ಇರುವುದಾದರೆ ನಮ್ಮ ಹಳೆಯ ಜನಪದ ಸಾಹಿತ್ಯ ಉಳಿಯಲೇಬೇಕು, ಉಳಿದೇ ಉಳಿಯುವುದು. ನಾವೀಗ ಅದನ್ನು ಅಳಿಯದಂತೆ ಉಳಿಸಿ, ಹೊಸ ಕಾಲಕ್ಕೆ ನಮ್ಮ ಕಾಣಿಕೆ ಸಲ್ಲಿಸಲೇಬೇಕಾಗಿದೆ'. **(ಅಧ್ಯಕ್ಷ ಭಾಷಣ. ಮೂರನೆಯ ಕರ್ನಾಟಕ ಜಾನಪದ ಸಮ್ಮೇಳನ ೧೯೭೧)**

ಬಿ. ಎಸ್. ಗದ್ದಿಗೀಮಠ

'ಕರ್ನಾಟಕದ ಒಂದೊಂದು ಭಾಗದ ಜನಪದ ಸಾಹಿತ್ಯವನ್ನು ಕಲೆಹಾಕಿ ಬೆಳಕಿಗೆ ತಂದರೆ ಕನ್ನಡ ಜನತೆಯ ನಿಜವಾದ ಸಂಸ್ಕೃತಿಯ ಒಂದು ಅಮೂಲ್ಯವಾದ 'ವಿಶ್ವಕೋಶ'ವೇ ಆಗಬಹುದೆಂದು ಹೇಳಬಹುದು'. **(ಕನ್ನಡ ಜನಪದ ಗೀತೆಗಳು ೧೯೬೩)**

ದೇ. ಜವರೇಗೌಡ

'ಈ ತನಕ ವೈಯಕ್ತಿಕ ಮಟ್ಟದಲ್ಲಿ ತಕ್ಕಮಟ್ಟಿಗೆ ಸಂಗ್ರಹಕಾರ್ಯ ನಡೆದಿದೆ; ಆದರೆ ಆಗಬೇಕಾದ ಕಾರ್ಯ ಬೆಟ್ಟದಷ್ಟಿದೆ. ಅದನ್ನೆಲ್ಲ ಒಬ್ಬಿಬ್ಬರು ವ್ಯಕ್ತಿಗಳಿಂದ ನಿರೀಕ್ಷಿಸುವುದು ಕಷ್ಟ. ಸರ್ಕಾರವೊ, ಸರ್ಕಾರದ ನೆರವು ಪಡೆದ ಸಂಸ್ಥೆಗಳೊ ಈ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿದೆ'. **(ಜನಪದ ಸಾಹಿತ್ಯ ಸಮೀಕ್ಷೆ - ಜೀಶಂಪ ೧೯೬೭).**

ಎಚ್. ಎಲ್. ನಾಗೇಗೌಡ

'ಹಣಕೊಟ್ಟರೆ ಮುಂದೆ ಏನಾದರೂ ಸಿಕ್ಕಬಹುದು. ಆದರೆ ಜನಪದ ಸಾಹಿತ್ಯ ಸಿಕ್ಕುವುದಿಲ್ಲ. ಶರಾವತಿಯನ್ನು ಈಗ ಉಪಯೋಗಿಸಿಕೊಳ್ಳದಿದ್ದರೆ ಮುಂದೆ ಉಪಯೋಗಿಸಿಕೊಳ್ಳಬಹುದು. ಆದರೆ ಜನಪದ ಸಾಹಿತ್ಯ ಶರಾವತಿ ಒಮ್ಮೆ ಬತ್ತಿದರೆ ಮತ್ತೊಮ್ಮೆ ಹರಿಯಲಾರಳು'. **(ಹೊನ್ನ ಬಿತ್ತೇವು ಹೊಲಕೆಲ್ಲ ೧೯೬೩)**

ಜೀ.ಶಂ.ಪರಮಶಿವಯ್ಯ

'ಸಮೃದ್ಧವಾದ ಜನಪದ ಸಾಹಿತ್ಯ ದೇಶದ ಸೌಭಾಗ್ಯಗಳಲ್ಲೊಂದು, ಅದನ್ನು ಪ್ರಮುಖವಾದ ರಾಷ್ಟ್ರೀಯ ಸಂಪತ್ತು ಎಂಬಂತೆ ಕಾಪಾಡಿಕೊಳ್ಳಬೇಕು'. **(ಜನಪದ ಸಾಹಿತ್ಯ ಸಮೀಕ್ಷೆ ೧೯೬೭)**

ಕಟ್ಟುವ ಕನಸು ; ನೆಟ್ಟ ಸಸಿ

ಜನಪದ ಸಾಹಿತ್ಯದ ಸಂಗ್ರಹದ ಮಾತು ಆ ಸಾಹಿತ್ಯ ಸಂಗ್ರಹಕ್ಕೆ ಮಾತ್ರ ಮುಗಿಯದು. ಆ ಸಂಗ್ರಹದ ಮೂಲ ಉದ್ದೇಶ ಜನಪದ ಸಂಸ್ಕೃತಿಯ ಕಾಂಕ್ಷೆ, ಎಂದರೆ ಜೀವನ ಸಂಸ್ಕೃತಿಯ ಹುಡುಕಾಟ, ಬದುಕುವ ಸಂಸ್ಕೃತಿಯ ಬಯಕೆ. ಸಹಜ ಸಂಸ್ಕೃತಿ ಮತ್ತು ಭೋಗ ಸಂಸ್ಕೃತಿಯ ನಡುವಿನ ಈ ಸಂಘರ್ಷ ಬ್ರಿಟಿಷ್ ವಸಾಹತುಶಾಹಿ ಆಗಮನ ಕಾಲದಿಂದ ಮಾತ್ರವಲ್ಲ; ಶಿಷ್ಟ, ಜನಪದವೆಂಬ ಸಹಜ ಸಂಸ್ಕೃತಿಗಳ ನಿರಂತರ ಅನುಸಂಧಾನದ ಪ್ರಕ್ರಿಯೆ. ಅದು ಕಾರಣವಾಗಿ ಜನಪದ ಸಾಹಿತ್ಯ ಸಂಗ್ರಹದ ಕಾರ್ಯ ಮತ್ತು ಅಧ್ಯಯನ ಯಾವ ಕಾಲಕ್ಕೂ ಮುಗಿಯುವುದಿಲ್ಲ. ಹಾಗೆ ಮುಗಿದರೆ ಸಂಸ್ಕೃತಿಗಳೆಲ್ಲವೂ ಸತ್ತಿರುತ್ತವೆ. ಕರ್ನಾಟಕದ ಸಂದರ್ಭದಲ್ಲಿ ಶಿಷ್ಟ - ಜನಪದ - ವಸಾಹತು ಸಂಸ್ಕೃತಿಗಳ ಸಂಘರ್ಷ ಮತ್ತು ಅನುಸಂಧಾನ ಬೇರೆ ಬೇರೆ ದಾರಿಗಳಲ್ಲಿ ನಡೆಯುತ್ತಲೇ ಇದೆ. ಅಂತಹ ನಾಲ್ಕು ದಾರಿಗಳು ನಮಗೆ ಕಂಡಿವೆ :

೧ ಕನ್ನಡ ಭಾಷಾ ಅಭಿವೃದ್ಧಿಗಾಗಿ

೨ ಜನತಾ ಸಂಸ್ಕೃತಿಯ ಶೋಧಕ್ಕಾಗಿ

೩ ಜಾನಪದ ಅಧ್ಯಯನಕ್ಕಾಗಿ

೪ ಪರ್ಯಾಯ ಜ್ಞಾನ ಚಿಂತನೆಯಾಗಿ

ಕನ್ನಡ ಭಾಷಾಭಿವೃದ್ಧಿಗಾಗಿ ಜನಪದ ಸಾಹಿತ್ಯವನ್ನು ಯಾಕೆ ಮತ್ತು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ನಮ್ಮ ಹಿರಿಯ ಸಾಹಿತಿಗಳು ಹೇಳಿರುವುದನ್ನು ಈ ಮೊದಲು ಕಂಡಿದ್ದೇವೆ. ಜನತಾ ಸಂಸ್ಕೃತಿಯ ಪುನರುತ್ಥಾನದ ವಿಷಯದಲ್ಲಿ ಕೂಡ ಇದೇ ಹಿರಿಯರು ಅತ್ಯಂತ ಸಂವೇದನಾಶೀಲ ನಡೆಯನ್ನು ದಾಖಲಿಸಿದ್ದಾರೆ. ದೇವುಡು ಅವರ ಈ ಮಾತುಗಳನ್ನು ಗಮನಿಸಿ: 'ಈ ಸಂಸ್ಕೃತಿ ವಿಮರ್ಶೆಯ ದೃಷ್ಟಿಯಿಂದ ನಮಗೆ ನಮ್ಮ ನಾಡಿನ ಕುಲಕುಲಗಳೆಲ್ಲವೂ ಒಂದೇ ಸಮನಾಗಿ ಮಾನ್ಯವಾದುವು: ಹಾರುವರೆಂದು ಹೆಚ್ಚಲ್ಲ, ಹೊಲೆಯರೆಂದು ಕಡೆಯಿಲ್ಲ; ಕನ್ನಡ ನಾಡಿನಲ್ಲಿ ನೆಲಸಿ, ಕನ್ನಡಿಗರು ನಾವು ಎಂದು ಅಭಿಮಾನಪಡುವ ಪ್ರತಿಯೊಂದು ಕುಲವೂ ನಮಗೆ ಮಾನ್ಯವು. ಈ ಕನ್ನಡ ಕುಲಕುಲಗಳ ವ್ಯಷ್ಟಿಸಮಷ್ಟಿ ವ್ಯವಹಾರ ಪ್ರಪಂಚವನ್ನು ಸಂಸ್ಕೃತಿಯ ದೃಷ್ಟಿಯಿಂದ ಹುಡುಕಾಡುವುದು ಈ ಲೇಖನಗಳಲ್ಲಿ ಮಾಡುವ ಕೆಲಸ (ಕರ್ನಾಟಕ ಸಂಸ್ಕೃತಿ ೧೯೩೫). ಸಿಂಪಿ ಲಿಂಗಣ್ಣ ಅವರೂ ಇದೇ ಮಾರ್ಗದಲ್ಲಿ ಮುನ್ನಡೆದಿದ್ದಾರೆ: "ಇದು ದಲಿತರು ಉದ್ಧಾರವಾಗುವ ಕಾಲ; ದುಡಿಮೆಗಾರರು ರಾಜ್ಯ ಶಾಸಕರಾಗುವ ಕಾಲ; ಒಕ್ಕಲಿಗನು ನೇಗಿಲಯೋಗಿಯೆನಿಸುವ ಕಾಲ, ನಿರಕ್ಷರರು ಸಾಕ್ಷರರಾಗುವ ಕಾಲ; ಸಾಮಾನ್ಯ ಜನರೂ ಸುಖ ಬಯಸುವ ಕಾಲ; (ಜನಾಂಗದ ಜೀವಾಳ ೧೯೩೪).

ಕರ್ನಾಟಕದ ಹೆಚ್ಚಿನ ಜಾನಪದ ಅಧ್ಯಯನ ಎಂಬುದು ಜನಪದ ಸಾಹಿತ್ಯದ ಅಧ್ಯಯನವೆ ಆಗಿದೆ. ಕರ್ನಾಟಕದಲ್ಲಿ 'ಜಾನಪದವನ್ನು ಹುಟ್ಟಿಸಿ ಬೆಳಸಿದವರೆ ಸಾಹಿತಿಗಳು. ಜನಪದ ಸಾಹಿತ್ಯ ಸಂಗ್ರಹ ಬ್ರಿಟಿಷ್ ವಿದ್ವಾಂಸ ಜಾನ್ ಲೇಡನ್ (೧೮೦೩) ಕಾಲದಿಂದ ನಡೆಯುತ್ತ ಬಂದಿದೆ. ಅದರ ಸಾಹಿತ್ಯ ಅಧ್ಯಯನ ಕೂಡ ತುಂಬ ಹಿಂದಿನದು. ಜನಪದ ಸಾಹಿತ್ಯ ಸೇರಿದಂತೆ ಜನಪದರ ಏನೆಲ್ಲ ಹುಟ್ಟುವಳಿಗಳನ್ನು ಜಾನಪದವೆಂಬ ಸಮಗ್ರ ವಿಷಯದೊಳಗೆ ತಂದು ಅಧ್ಯಯನ ಮಾಡಿದ್ದು ೧೯೬೬ ರಿಂದ ಈಚೆಗೆ. ಕರ್ನಾಟಕ ಜಾನಪದ ಅಧ್ಯಯನದ ಪ್ರೇರಕರೆಂದರೆ ದೇ. ಜವರೇಗೌಡ. ಇವರನ್ನು ಅನುಸರಿಸಿದವರೆಂದರೆ, ಹಾ. ಮಾ. ನಾಯಕ ಮತ್ತು ಜೀ.ಶಂ. ಪರಮಶಿವಯ್ಯ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೊದಲಾಗಿ ಕನ್ನಡ ಎಂ.ಎ ತರಗತಿಗೆ ಐಚ್ಛಿಕವಾಗಿ ಎರಡು ಜಾನಪದ ಸಂಬಂಧಿ ಪತ್ರಿಕೆಗಳನ್ನು ಅಧ್ಯಯನಕ್ಕಾಗಿ ಅಳವಡಿಸಲಾಯಿತು (೧೯೬೬). ಅನಂತರ ೧೯೭೪ರಲ್ಲಿ ಪೂರ್ಣಪ್ರಮಾಣದಲ್ಲಿ ಜಾನಪದ ಎಂ.ಎ ತರಗತಿಗಳನ್ನು ಆರಂಭಿಸಲಾಯಿತು. ಈ ವಿಭಾಗಕ್ಕೆ ಕರ್ನಾಟಕದ, ಏಕೆ ಭಾರತದಲ್ಲಿಯೇ ಮೊದಲಾಗಿ ಜಾನಪದ ಪ್ರಾಧ್ಯಾಪಕರಾಗಿ ಜೀ.ಶಂ.ಪರಮಶಿವಯ್ಯ ನೇಮಕಗೊಂಡರು. ಇದೇ ಸಂದರ್ಭದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಹಾ. ಮಾ. ನಾಯಕ ಅವರು 'ಜಾನಪದ ಸ್ವರೂಪ' (೧೯೬೬) ಕುರಿತು ಒಂದು ಸಮಗ್ರ ದೃಷ್ಟಿಯ ಲೇಖನವನ್ನು ಬರೆದು ಜಾನಪದ ಅಧ್ಯಯನಕ್ಕೆ ರಾಜಮಾರ್ಗವನ್ನು ತೋರಿಸಿದರು. ಇಷ್ಟೆಲ್ಲದರ ಪ್ರೇರಣಾಶಕ್ತಿಯಾದ ದೇ.ಜವರೇಗೌಡರ ನುಡಿ ಇದು: 'ಜಾನಪದ ಸಂಪ್ರದಾಯ ಒಂದು ಜನಸಮುದಾಯದ ಸಮಷ್ಟಿ ಸೃಷ್ಟಿ, ಸಾಮಾಜಿಕ ಜೀವನದ ಸಂಕೇತ, ರಾಷ್ಟ್ರೀಯ ಸಂಸ್ಕೃತಿಯ ತಾಯಿ ಬೇರು; ಅದು ಜನಸಾಮಾನ್ಯರ ಶ್ರುತಿಯೂ ಅಹುದು, ಸ್ಮೃತಿಯೂ ಅಹುದು.... ಭಾರತೀಯತ್ವದ ಅಥವಾ ದೇಶೀಯತೆಯ ರಕ್ಷಣೆಗಾಗಿ ಜಾನಪದ ಸಂಪ್ರದಾಯದ ಜೀರ್ಣೋದ್ಧಾರ ಕಾರ್ಯ ನಡೆಯಬೇಕಾಗಿದೆ.....ಜಾನಪದ ಸಂಪ್ರದಾಯದ ಪುನಶ್ಚೇತನದಿಂದ ದಾಸ್ಯ ಮನೋಭಾವ ತೊಲಗಿ ಜನಜೀವನದಲ್ಲಿ ಹುರುಪು ಹುಮ್ಮಸ್ಸುಗಳು ಚಿಗುರಿ, ಆತ್ಮಪ್ರಜ್ಞೆ ಕೊನರಿ, ಕೆಚ್ಚುನೆಚ್ಚುಗಳು ಮೂಡಿ, ಹೊಸ ಚೇತನ ಮುಕ್ಕಳಿಸುತ್ತದೆ (ಜನಪದ ಸಾಹಿತ್ಯ ಸಮೀಕ್ಷೆ - ಜೀಶಂಪ; ಮನ್ನುಡಿಯಲ್ಲಿ ೧೯೬೭).

ಮೈಸೂರು ವಿಶ್ವವಿದ್ಯಾನಿಲಯ ಆರಂಭಿಸಿದ ಈ ಜಾನಪದ ಪ್ರಸ್ಥಾನ, ಇದೊಂದು ರಾಷ್ಟ್ರೀಯ ಅವಶ್ಯಕತೆ ಎನ್ನುವಂತೆ ಬಹುಬೇಗನೆ ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಿಗೆ ವ್ಯಾಪಿಸಿತು. ದೇಜಗೌ, ಹಾಮಾನಾ, ಜೀಶಂಪ ಅವರು ಈ ಪ್ರಸ್ಥಾನದ ಮಾರ್ಗದರ್ಶಿ ಮಾದರಿಗಳಾದರು. ಈ ಹಿಂದೆ ಜನಪದ ಸಾಹಿತ್ಯ ಸಂಗ್ರಹಕ್ಕೆ ಅಗ್ರಮಾನ್ಯತೆ ಇತ್ತು. ಈಗದು ಅಧ್ಯಯನದ ನೆರವನ್ನು ಪಡೆಯಬೇಕಾಗಿ ಬಂತು. ಜನಪದ ಸಾಹಿತ್ಯವನ್ನು ಕೇಳುವ - ಓದುವ ಪ್ರಕ್ರಿಯೆ ಅದನ್ನು ಸಾಂಸ್ಕೃತಿಕವಾಗಿ ಅರ್ಥೈಸುವತ್ತ ಮುನ್ನಡೆಯಿತು. ಅದು ಕಾರಣವಾಗಿ ಹಲವರು ಜನಪದ ಸಾಹಿತ್ಯವನ್ನು ಸಂಗ್ರಹಿಸುತ್ತಲೂ, ಅದರ ವಿಚಾರವನ್ನು ಹೇಳುತ್ತಲೂ ಹೋದರು. ಈ ನಿಟ್ಟಿನಲ್ಲಿ ಕರ್ನಾಟಕದ ವಿಶ್ವವಿದ್ಯಾನಿಲಯಗಳು

ಮಾರ್ಗದರ್ಶಕನ ಸ್ಥಾನದಲ್ಲಿ ನಿಂತರೆ, ಹೊರಗಿನಿಂದ ಅನೇಕರು ಈ ಮಾರ್ಗವನ್ನು ದೃಢೀಕರಿಸಿದ್ದಾರೆ.

ವಿಶ್ವವಿದ್ಯಾಲಯಗಳಿಗೆ ಜನಪದ ಸಾಹಿತ್ಯವೊಂದು ಅಧ್ಯಯನ ವಿಷಯವಾಗಬಲ್ಲದು ಎಂಬ ಸೂಚನೆಯನ್ನೂ ವಾತಾವರಣವನ್ನೂ ಸೃಷ್ಟಿಸಿಕೊಟ್ಟವರು ರಾಷ್ಟ್ರೀಯವಾದಿಗಳಾದ ಹಿರಿಯ ಕನ್ನಡ ಸಾಹಿತಿಗಳು. ಜನಪದ ಸಾಹಿತ್ಯ - ಜಾನಪದವನ್ನು ಅಧ್ಯಯನ ಶಿಸ್ತನ್ನಾಗಿ ಮಾಡಿಯೆ ತೀರುವ ಹಠವನ್ನು ಹೊತ್ತವರು ದೇ.ಜವರೇಗೌಡರು. ಜಾನಪದ ಡಿಪ್ಲೊಮಾ, ಜಾನಪದ ಎಂ.ಎ ತೆರೆಯುವುದರ ಜೊತೆಗೆ ಜನಪದ ಸಾಹಿತ್ಯವನ್ನು ಸಂಗ್ರಹಿಸಲು ಒಂದು ವಿಭಾಗವನ್ನೇ ಆರಂಭಿಸಿದರು. ಕರ್ನಾಟಕದಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ತರಲು ಕ್ಯಾತನಹಳ್ಳಿ ರಾಮಣ್ಣ, ಟಿ.ಎಸ್.ರಾಜಪ್ಪ, ಅಂಬಳಿಕೆ ಹಿರಿಯಣ್ಣ ನೇಮಕಗೊಂಡರು. ಇವರ ನಂತರ ಮೈಲಹಳ್ಳಿ ರೇವಣ್ಣ ಮತ್ತು ಜಯಲಕ್ಷ್ಮಿ ಸೀತಾಪುರ ಜನಪದ ಸಾಹಿತ್ಯ ಸಂಗ್ರಹದಲ್ಲಿ ತೊಡಗಿದರು. ಇದೇ ಸಂದರ್ಭದಲ್ಲಿ ಜಾನಪದ ವಸ್ತುಸಂಗ್ರಹಾಲಯವನ್ನೂ ದೇ.ಜ.ಗೌ. ಶುರುಮಾಡಿದರು. ಅವರ ಈ ಸಾಹಸ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳನ್ನು ಪ್ರೇರೇಪಿಸಿತು. ಈ ಮೂರು ಹಂತದ; ಜಾನಪದ ಅಧ್ಯಯನ, ಸಂಗ್ರಹ ಹಾಗೂ ವಸ್ತುಸಂಗ್ರಹಾಲಯ ಸ್ಥಾಪನೆ ಕಾರ್ಯಯೋಜನೆಯನ್ನು ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳು ಕೈಗೆತ್ತಿಕೊಂಡವು.

ಮೈಸೂರು ವಿಶ್ವವಿದ್ಯಾಲಯ ವಲಯವು ಈಗಾಗಲೇ ಎಸ್. ಕೆ. ಕರೀಂಖಾನ್, ಕೆ. ಆರ್. ಲಿಂಗಪ್ಪ ಹಾಗೂ ಮತ್ತಿತರರ ಜನಪದ ಸಾಹಿತ್ಯ ಹಾಡುಗಾರಿಕೆ ಪ್ರಚಾರದಿಂದ, ಮತಿಘಟ್ಟ ಕೃಷ್ಣಮೂರ್ತಿಯವರ ಸಮೃದ್ಧ ಜನಪದ ಸಾಹಿತ್ಯ ಸಂಗ್ರಹದ ದಾಖಲೆ ಮತ್ತು ತರೀಕೆರೆಯ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನದಿಂದ ಮೈನೆರೆದು ನಿಂತಿತ್ತು. ಈ ಸಂದರ್ಭವನ್ನು ಬಳಸಿಕೊಂಡು ಈ ವಲಯದಿಂದ ಕೆಳಗಿನ ಜಾನಪದ ವಿದ್ವಾಂಸರು ಸಂಗ್ರಹ, ಅಧ್ಯಯನ ಮತ್ತು ಪ್ರಸರಣಕಾರ್ಯವನ್ನು ಮುಂದುವರಿಸಿದರು. ಅವರೆಂದರೆ: ಮತಿಘಟ್ಟ ಕೃಷ್ಣಮೂರ್ತಿ, ಪಿ.ಆರ್. ತಿಪ್ಪೇಸ್ವಾಮಿ, ಸಿ. ಪಿ. ಕೆ., ರಾಗೌ, ಸುಧಾಕರ, ನಂ.ತಪಸ್ವೀ ಕುಮಾರ್, ಹ. ಕ. ರಾಜೇಗೌಡ, ಡಿ.ಕೆ.ರಾಜೇಂದ್ರ, ಹಿ.ಶಿ.ರಾಮಚಂದ್ರೇಗೌಡ, ಜಿ. ವಿ. ದಾಸೇಗೌಡ, ವೈಸಿ. ಭಾನುಮತಿ, ನಲ್ಲೂರು ಪ್ರಸಾದ್, ಮೇಟಿಕೆರೆ ಹಿರಿಯಣ್ಣ, ಚಂದ್ರು ಕಾಳೇನಹಳ್ಳಿ, ವಿ. ಎನ್. ಶಿವರಾಮು ಮುಂತಾದವರು.

ತಾವು ಬೇರೆಯಾಗುವುದಕ್ಕೆ ಮೊದಲು ಕುವೆಂಪು ಹಾಗೂ ಮಂಗಳೂರು ವಿಶ್ವವಿದ್ಯಾಲಯಗಳು ಮೈಸೂರು ವಿಶ್ವವಿದ್ಯಾಲಯದ ವಿಸ್ತರಿತ ಕೇಂದ್ರಸ್ಥಾನಗಳಾಗಿದ್ದವು. ಜನಪದ ಸಾಹಿತ್ಯ ಕಾರ್ಯಯೋಜನೆಯಲ್ಲಿ ಅವು ಮೈಸೂರು ವಿಶ್ವವಿದ್ಯಾಲಯವನ್ನು ಅನುಸರಿಸಿದವು. ಪ್ರತ್ಯೇಕ ವಿಶ್ವವಿದ್ಯಾಲಯಗಳಾದ ಮೇಲೂ ಅಲ್ಲಿನ ಕನ್ನಡ ಸಾಹಿತಿ-ಅಧ್ಯಾಪಕರು ಜನಪದ ಸಾಹಿತ್ಯದ ಮೇಲೆ ತೋರಿದ ಆಸಕ್ತಿ ಅನನ್ಯವಾಗಿದೆ. ಪ್ರತಿಯೊಬ್ಬರೂ ತಮ್ಮ ನೆಲೆಯಲ್ಲಿ ಗಣನೀಯವಾದ ಕೆಲಸ ಮಾಡಿದ್ದಾರೆ. ಕುವೆಂಪು

ವಿಶ್ವವಿದ್ಯಾಲಯದ ಕಡೆಯಿಂದ ಎಚ್.ಜೆ.ಲಕ್ಕಪ್ಪಗೌಡ, ತೀ.ನಂ. ಶಂಕರನಾರಾಯಣ, ಶ್ರೀಕಂಠ ಕೂಡಿಗೆ, ಬಸವರಾಜ ನೆಲ್ಲೀಸರ, ಎಂ. ಜಿ. ಈಶ್ವರಪ್ಪ, ಮೀರಾಸಾಬಿಹಳ್ಳಿ ಶಿವಣ್ಣ, ಮುಂತಾದವರು ಹಾಗೂ ಮಂಗಳೂರು ವಿಶ್ವವಿದ್ಯಾಲಯ ವಲಯದಿಂದ ಗುಂಡ್ಮಿ ಚಂದ್ರಶೇಖರ ಐತಾಳ, ಅಮೃತ ಸೋಮೇಶ್ವರ, ಬಿ.ಎ.ವಿವೇಕ ರೈ, ಕೆ. ಚಿನ್ನಪ್ಪಗೌಡ, ಶಿವರಾಮಶೆಟ್ಟಿ, ಅಭಯಕುಮಾರ್, ಎಸ್.ಎ. ಕೃಷ್ಣಯ್ಯ, ಅರವಿಂದ ಮಾಲಗತ್ತಿ, ಪ್ರಭಾಕರ ಜೋಷಿ, ಪಾಲ್ತಾಡಿ ರಾಮಕೃಷ್ಣ ಆಚಾರ್, ರಾಘವ ನಂಬಿಯಾರ್ ಈ ಮಂತಾದವರು ಜನಪದ ಸಾಹಿತ್ಯವಲ್ಲದೆ ಯಕ್ಷಗಾನ ಸಾಹಿತ್ಯದಲ್ಲೂ ಪ್ರಬುದ್ಧ ಸೇವೆ ಸಲ್ಲಿಸಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾಗಿದ್ದ ಆರ್. ಸಿ. ಹಿರೇಮಠರು, ದೇ. ಜವರೇಗೌಡರು ತಮ್ಮ ವಿಶ್ವವಿದ್ಯಾಲಯದಲ್ಲಿ ಸೃಷ್ಟಿಸಿದ್ದ ಮೂರು ಹಂತದ ಜನಪದ ಸಾಹಿತ್ಯ- ಜಾನಪದ ಕ್ರಿಯಾಯೋಜನೆಯನ್ನು ಅನುಸರಿಸಿದರು. ಇವರ ನಾಯಕತ್ವದ ಮುಂದುವರಿಕೆಯಾಗಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಹುದೊಡ್ಡ ಮೊತ್ತದ ಜನಪದ ಸಾಹಿತ್ಯ ಹಾಗೂ ಜಾನಪದ ಅಧ್ಯಯನದ ಫಲಶ್ರುತಿಯಾಗಿ ಅನೇಕ "ಜಾನಪದ ಸಾಹಿತ್ಯದರ್ಶನ" ಸಂಪುಟಗಳು ಹೊರಬಂದವು. ಕರ್ನಾಟಕ ವಿಶ್ವವಿದ್ಯಾಲಯ ವಲಯದಲ್ಲಿ ಎಂ.ಎಸ್. ಸುಂಕಾಪುರ, ಎಂ ಟಿ. ಧೂಪದ, ಸೋಮಶೇಖರ ಇಮ್ರಾಪುರ, ಎಂ. ಎಸ್. ವೃಷಭೇಂದ್ರಸ್ವಾಮಿ, ಎಂ. ಎಂ. ಕಲಬುರ್ಗಿ, ದೇವೇಂದ್ರಕುಮಾರ ಹಕಾರಿ, ಎಂ. ಬಿ. ನೇಗಿನಹಾಳ, ಎಂ. ಬಿ. ಕೊಟ್ರಶೆಟ್ಟಿ, ಸಿ. ಸಿ. ಎ. ಪೈ, ಎಲ್. ಆರ್. ಹೆಗಡೆ, ಎನ್. ಆರ್. ನಾಯಕ, ಶ್ರೀಮತಿ ಶಾಂತಿನಾಯಕ, ಎಂ.ಎಂ.ಪಡಶೆಟ್ಟಿ, ಜ್ಯೋತಿ ಹೊಸೂರ, ನಿಂಗಣ್ಣ ಸಣ್ಣಕ್ಕಿ, ಶ್ರೀರಾಮ ಇಟ್ಟಣ್ಣನವರ, ವಿಲಿಯಂಮಾಡ್ತ, ಎಂ. ಎಸ್. ವಾಲಿ, ಬಿ. ವಿ. ಮಲ್ಲಾಪುರ, ಎಚ್. ಎಂ. ಮಹೇಶ್ವರಯ್ಯ, ಕೆ. ಆರ್. ದುರ್ಗಾದಾಸ್, ಸೈಯದ್ ಜಮೀರುಲ್ಲಾ ಷರೀಫ್, ಶಾಲಿನಿ ರಘುನಾಥ, ಸಿ. ಕೆ. ನಾವಲಗಿ ಮುಂತಾದವರು ಕೆಲಸ ಮಾಡುತ್ತಾ ಬರುತ್ತಿದ್ದಾರೆ. ಇವರೆಲ್ಲರ ಹಿಂದೆ ಹಿರಿಯ ಶಕ್ತಿಯಾದ ಬಿ. ಎಸ್. ಗದ್ದಗೀಮಠರು ಜನಪದ ಸಾಹಿತ್ಯದಲ್ಲಿ ಮಾಡಿದ ಅಪಾರ ಸೇವೆ ಬೆಂಬಲವಾಗಿ ನಿಂತಿವೆ. ಬಹುದೊಡ್ಡ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ ಗುಲಬರ್ಗಾ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಹಿರಿಯ - ಕಿರಿಯ ಅನೇಕ ಸಾಹಿತಿಗಳು ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನದಲ್ಲಿ ತಮ್ಮ ಪ್ರಾದೇಶಿಕ ವೈಶಿಷ್ಟ್ಯವನ್ನು ಸರಿಯಾಗಿಯೆ ದಾಖಲಿಸಿದ್ದಾರೆ. ಅವರುಗಳಲ್ಲಿ ಬಿ. ಬಿ. ಹೆಂಡಿ, ಎಂ. ಎಸ್. ಲಠ್ಠೆ, ಮ. ಗು. ಬಿರಾದಾರ, ವೀರಣ್ಣ ದಂಡೆ, ಪಿ.ಕೆ. ಖಂಡೋಬಾ, ಡಿ. ಬಿ. ನಾಯಕ ಮುಖ್ಯರು.

ಕನ್ನಡ ವಿಶ್ವವಿದ್ಯಾಲಯ ತನ್ನ ಕಡಿಮೆ ವಯಸ್ಸಿನಲ್ಲೆ ಗಣನೀಯ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಿದೆ. ಈ ನೆಲೆಯಲ್ಲಿ ಹಿ. ಚಿ. ಬೋರಲಿಂಗಯ್ಯ, ಎ. ವಿ. ನಾವಡ, ಗಾಯತ್ರಿ ನಾವಡ ದಾಖಲೆಯ ಕೆಲಸ ಮಾಡಿದ್ದಾರೆ. ಮಂಜುನಾಥ ಬೇವಿನಕಟ್ಟಿ, ಎಸ್. ಸಿ. ರಮೇಶ, ಮೊಗಳ್ಳಿ ಗಣೇಶ, ವೆಂಕಟೇಶ ಇಂದುವಾಡಿ, ವೀರೇಶ ಬಡಿಗೇರ

ಇವರು ಗಮನ ಸೆಳೆಯುವ ಕೆಲಸ ಮಾಡಿದ್ದಾರೆ.. ಹೊಸಪೇಟೆಯಲ್ಲಿದ್ದು ಬಸವರಾಜ ಮಲಶೆಟ್ಟರು ಜನಪದ ಸಾಹಿತ್ಯ - ಬಯಲಾಟ ಕ್ಷೇತ್ರದಲ್ಲಿ ಅಪೂರ್ವವಾದ ಸಾಧನೆ ಮಾಡಿದ್ದಾರೆ. ಪುರುಷೋತ್ತಮ ಬಿಳಿಮಲೆಯವರು ಬಹುದೊಡ್ಡ ಪ್ರೇರಣೆಯಾಗಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ವಿಭಾಗವನ್ನು ಕಟ್ಟಿದವರು.

ರಾಜಧಾನಿ ವಿಶ್ವವಿದ್ಯಾಲಯವಾದ ಬೆಂಗಳೂರು ವಲಯದಲ್ಲಿ ಚಂದ್ರಶೇಖರ ಕಂಬಾರ, ಕಾಳೇಗೌಡ ನಾಗವಾರ, ಸಿದ್ಧಗಂಗಯ್ಯ ಕಂಬಾಳು, ಡಿ.ಲಿಂಗಯ್ಯ, ಜಿ.ಆರ್.ತಿಪ್ಪೇಸ್ವಾಮಿ, ರಂಗಾರೆಡ್ಡಿ ಕೋಡಿರಾಂಪುರ, ಕೆ. ಆರ್. ಸಂಧ್ಯಾರೆಡ್ಡಿ , ಧವಳಶ್ರೀ, ಸಿ.ವೀರಣ್ಣ, ಬಿಎಸ್.ಸ್ವಾಮಿ, ಎಸ್.ಪಿ. ಪದ್ಮಪ್ರಸಾದ್, ಟಿ.ಗೋವಿಂದರಾಜು, ರಾಜೇಗೌಡ ಹೊಸಹಳ್ಳಿ, ಎಂ.ಬೈರೇಗೌಡ, ಚಕ್ಕೆರೆ ಶಿವಶಂಕರ್, ಬೈರಮಂಗಲ ರಾಮೇಗೌಡ, ಕೃಷ್ಣಮೂರ್ತಿ ಹನೂರು, ಟಿ.ಎಸ್.ಸತ್ಯನಾಥ್, ಅಂದನೂರು ಶೋಭ, ಕುರುವ ಬಸವರಾಜ ಅವರಂಥ ಅನೇಕ ಜನಪದ ಸಾಹಿತ್ಯ ಕ್ಷೇತ್ರದ ಸಾಧಕರಿದ್ದಾರೆ. ಈ ವಲಯದ ಮಹಾ ಪ್ರೇರಣೆಗಳೆಂದರೆ ಚಂದ್ರಶೇಖರ ಕಂಬಾರ ಮತ್ತು ಎಚ್.ಎಲ್.ನಾಗೇಗೌಡರು. ನಾಗೇಗೌಡರಲ್ಲಿ ಅಪಾರವಾದ ಜನಪದ ಸಾಹಿತ್ಯ ಸಂಗ್ರಹವಿದೆ.

ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಪ್ರಕಟಣೆ, ಪ್ರಚಾರ, ಪ್ರಸಾರ, ವಿವರಣೆ, ವಿಶ್ಲೇಷಣೆ, ಸಮರ್ಥನೆ ಮತ್ತು ತಮ್ಮನ್ನು ತಾವೇ ಜನಪದ ಸಾಹಿತ್ಯಕ್ಕೆ ಸಮರ್ಪಿಸಿಕೊಳ್ಳುವ ಚಟುವಟಿಕೆ ಎಲ್ಲಿಗೆ ತಲುಪಿತು ಎಂದರೆ ಜನಪದ ಸಾಹಿತ್ಯವನ್ನು ಶಿಷ್ಟಸಾಹಿತ್ಯ ಚಟುವಟಿಕೆಗೆ ಸರಿಸಮವಾಗಿಸುವ ಪರ್ಯಾಯ ಚಿಂತನೆ ಹುಟ್ಟಿಕೊಂಡಿತು. ಇನ್ನೊಂದು ರೀತಿಯಲ್ಲಿ ಈ ಚಟುವಟಿಕೆ ಶಿಷ್ಟಸಾಹಿತ್ಯಕ್ಕೆ ತೋರಿದ ಸೃಜನಾತ್ಮಕ ಪ್ರತಿಭಟನೆಯಂತೆಯೂ ಕಾಣುತ್ತದೆ. ಆರಂಭಕಾಲದಲ್ಲಿ ಶಿಷ್ಟಸಾಹಿತ್ಯಕ್ಕೆ ಸೌಷ್ಟವವನ್ನು ಭರ್ತಿ ಮಾಡಿಕೊಳ್ಳಲು ಹುಟ್ಟಿದ ಜನಪದ ಸಾಹಿತ್ಯ ಸಂಗ್ರಹಪ್ರೇಮ ಇಪ್ಪತ್ತನೆಯ ಶತಮಾನದ ಏಳನೆಯ ದಶಕದ ಹೊತ್ತಿಗೆ ಶಿಷ್ಟಸಾಹಿತ್ಯಕ್ಕೆ ಸಮಸಾಹಿತ್ಯವೆಂಬಂತೆ ಎದ್ದುನಿಂತಿತು. ಇದಕ್ಕೆ ಸಮರ್ಥನೆ ಎನ್ನುವಂತೆ ೧೯೭೭ರಲ್ಲಿ ತರೀಕೆರೆಯಲ್ಲಿ, ೧೯೭೯ರಲ್ಲಿ ಮಂಗಳೂರಿನಲ್ಲಿ ಹಾಗೂ ೧೯೭೧ ರಲ್ಲಿ ನಾಗಮಂಗಲದಲ್ಲಿ ನಡೆದ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನಗಳೆ ಸಾಕ್ಷಿ. ಮೊದಲ ಸಮ್ಮೇಳನದ ಜವಾಬ್ದಾರಿಯನ್ನು ಜನಪದ ಸಾಹಿತ್ಯ ಕ್ಷೇತ್ರದ ನವಕೋಗಿಲೆ ಎಂದು ಹೆಸರು ಪಡೆದಿದ್ದ ಕೆ.ಆರ್.ಲಿಂಗಪ್ಪನವರು ವಹಿಸಿದ್ದರು. ಉಳಿದೆರಡು ಸಮ್ಮೇಳನಗಳ ಜವಾಬ್ದಾರಿಯನ್ನು ಐ.ಎ.ಎಸ್. ಅಧಿಕಾರಿಯೂ ಜಾನಪದ ಲೋಕದ ಸೃಷ್ಟಿಕರ್ತರೂ ಆದ ಎಚ್.ಎಲ್.ನಾಗೇಗೌಡರು ನಿರ್ವಹಿಸಿದರು. ದೊಡ್ಡಪ್ರಮಾಣದ ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳನ್ನು ಅನುಸರಿಸಿ ಕರ್ನಾಟಕದ ಜಿಲ್ಲೆ ಜಿಲ್ಲೆಗಳಲ್ಲಿ ಅನೇಕ ಜನಪದ ಸಾಹಿತ್ಯ ಸಮ್ಮೇಳನಗಳು ನಡೆದವು.

ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳ ಹಿಂದೆ ನಾಡಿನ ಹೆಸರಾಂತ ಸಾಹಿತ್ಯ ವಿಮರ್ಶಕರು ನಿಂತು ತಮ್ಮ ತಮ್ಮ ನೆಲೆಯಲ್ಲಿ ಜನಪದ ಸಾಹಿತ್ಯದ ಮಹತ್ವವನ್ನು

ಶೈಕ್ಷಣಿಕವಾಗಿ ಎತ್ತಿ ಓಡಿಯುವ ಪ್ರಯತ್ನ ನಡೆಸಿದ್ದರು. ತೀ. ನಂ. ಶ್ರೀಕಂಠಯ್ಯನವರಂಥ ಹಿರಿಯ ಕಾವ್ಯಮೀಮಾಂಸಕರು ತಮ್ಮ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಕಾವ್ಯಲಕ್ಷಣಕ್ಕೆ ಜನಪದ ಸಾಹಿತ್ಯದಿಂದ ಉದಾಹರಣೆಗಳನ್ನು ಎತ್ತಿಕೊಂಡು ಅದರ ಘನತೆಯನ್ನು ಹೆಚ್ಚಿಸಿದರು. ಈ ನಿಟ್ಟಿನಲ್ಲಿ ಹಿರಿಯ ಕವಿ ಕಾವ್ಯಮೀಮಾಂಸಕರಾದ ಜಿ. ಎಸ್. ಶಿವರುದ್ರಪ್ಪ ಮತ್ತು ಸಿ. ಪಿ. ಕೃಷ್ಣಕುಮಾರ್ ಅವರ ಕೊಡುಗೆ ಸ್ಮರಣೀಯವಾದುದು. ಸಿ. ಪಿ. ಕೆ. ಯವರು ಜನಪದ ಸಾಹಿತ್ಯದ ಸಾಮರ್ಥ್ಯವನ್ನು ಯಾಹೊತ್ತೂ ಶಿಷ್ಟಸಾಹಿತ್ಯಕ್ಕೆ ಕಡಿಮೆ ಇಲ್ಲವೆಂಬಂತೆ ಹಟಹಿಡಿದು ಬರೆದಿದ್ದಾರೆ. ಜನಪದ ಸಾಹಿತ್ಯವನ್ನೂ ಶಿಷ್ಟಸಾಹಿತ್ಯದ ಕ್ರಮದಂತೆ ಕಾವ್ಯಮೀಮಾಂಸಾ ಪರಿಧಿಗೆ ತರಬಹುದು ಎಂಬುದನ್ನು ಶ್ರಮವಹಿಸಿ ವೀರಣ್ಣ ದಂಡೆಯವರು ಸಾಧಿಸಿ ತೋರಿಸಿದ್ದಾರೆ.

ಜನಪದ ಸಾಹಿತ್ಯದ ಮೌಲ್ಯಮಾಪನ ದೃಷ್ಟಿಯಿಂದ ಗಿರಡ್ಡಿ ಗೋವಿಂದರಾಜು ಅವರ 'ಜನಪದ ಗೀತೆ' ಕೃತಿ ಜನಪದ ಸಾಹಿತ್ಯ ಪ್ರೇಮಿಗಳಲ್ಲಿ ಸಾಕಷ್ಟು ಪ್ರತಿಕ್ರಿಯೆಯನ್ನು ಸೃಷ್ಟಿಮಾಡಿತು. ಈ ಬರಹಕ್ಕೆ ಸಿಪಿಕೆಯವರು ತೀವ್ರವಾಗಿ ಪ್ರತಿಮಡಿದಿದ್ದಾರೆ. ಜನಪದ ಸಾಹಿತ್ಯದ ಸಾಹಿತ್ಯಕ ಮೌಲ್ಯಮಾಪನದ ದೃಷ್ಟಿಯಿಂದ ಚಂದ್ರಶೇಖರ ಕಂಬಾರ, ರಾಗೌ ಮತ್ತು ಹಿ. ಶಿ. ರಾಮಚಂದ್ರೇಗೌಡ ಅವರ ನಿಲುವು 'ಪ್ರಕಾರನ್ಯಾಯ'ದ ನೆಲೆಯಿಂದ ವ್ಯಕ್ತವಾಗಿದೆ. ಜನಪದ ಸಾಹಿತ್ಯ ಅಖಂಡ ಜಾನಪದದ 'ಉಪ ಉತ್ಪನ್ನ' ಎಂದು ಕಂಬಾರರು ಹೇಳಿದರೆ; ಜನಪದ ಸಾಹಿತ್ಯದ ಅನನ್ಯತೆಯೆ ಬೇರೆ ಎಂದು ರಾಗೌ ಪ್ರತಿಪಾದಿಸಿರುತ್ತಾರೆ. ಈ ವಿಷಯ ಕುರಿತು ಹಿ. ಶಿ. ರಾಮಚಂದ್ರೇಗೌಡ ಅವರ 'ಪ್ರಕಾರನ್ಯಾಯ' ಮತ್ತು 'ಪ್ರಕಾರ ಅಸ್ತಿತ್ವ' ದೃಷ್ಟಿಯಿಂದ ಜನಪದ ಸಾಹಿತ್ಯವನ್ನು ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ ಮತ್ತು ಅಸ್ತಿತ್ವ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಜನಪದ ಸಾಹಿತ್ಯವನ್ನು ಬೇರೆ ಬೇರೆ ಮಗ್ಗಲುಗಳಲ್ಲಿ ವಿವರಿಸುವ ಮತ್ತು ವಿಮರ್ಶಿಸುವ ಪ್ರಯತ್ನಗಳನ್ನು ಕರ್ನಾಟಕದ ಅನೇಕ ಸಾಹಿತ್ಯ ಚಿಂತಕರು ಮಾಡಿದ್ದಾರೆ.

ಪರ್ಯಾಯದ ಬೆಲೆ : ಗೊತ್ತಿಲ್ಲದ ನೆಲೆ

ಈಗ ಜಗತ್ತಿನಾದ್ಯಂತ ಪರ್ಯಾಯ ಜ್ಞಾನದ ಹುಡುಕಾಟ ತುಂಬ ತುರ್ತಿನ ಕೆಲಸವೆಂಬಂತೆ ನಡೆಯುತ್ತಿದೆ. ಅಭಿವೃದ್ಧಿಶೀಲ ದೇಶಗಳು ಇರುವ ಸೌಕರ್ಯಗಳನ್ನು ಇನ್ನೂ ಹೆಚ್ಚಿಸಿಕೊಳ್ಳುವ ಕಾರಣಕ್ಕೆ ಪರ್ಯಾಯ ಜ್ಞಾನದ ಹುಡುಕಾಟದಲ್ಲಿ ತೊಡಗಿವೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು 'ಪ್ರಭುರಾಷ್ಟ್ರಗಳ ಪ್ರಭುತ್ವ ವಿಜ್ಞಾನ'ಕ್ಕೆ ಪರ್ಯಾಯವಾಗಿ ತಮ್ಮ ತಮ್ಮ ದೇಶದ 'ಪಾರಂಪರಿಕ ಜ್ಞಾನ ಮಾದರಿ'ಗಳನ್ನು ಸಮಕಾಲೀನಗೊಳಿಸಿಕೊಳ್ಳುವ ಹವಣಿಕೆಯಲ್ಲಿವೆ. ಕರ್ನಾಟಕದಲ್ಲಿ ಜನಪದ ಸಾಹಿತ್ಯವನ್ನು ದೇಸಿಸಾಹಿತ್ಯವೆಂದೂ, ಜಾನಪದವನ್ನು ದೇಶಿಜ್ಞಾನವೆಂದೂ ಹೆಸರಿಸಿ ಅವುಗಳ ಪ್ರತ್ಯೇಕತೆ ಮತ್ತು ವಿಶಿಷ್ಟತೆಯನ್ನು ಬಹಳ ಕಾಲದಿಂದಲೂ ಗುರುತಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಹೊಸ ತಲೆಮಾರಿನ ಜಾನಪದ ಚಿಂತಕರು ಜಾನಪದವನ್ನು ಸಮಕಾಲೀನ ಜ್ಞಾನ - ವಿಜ್ಞಾನವನ್ನಾಗಿ ನಿರ್ವಚಿಸಿ

ಮಂಡಿಸುತ್ತಿದ್ದಾರೆ. ಉದಾಹರಣೆಗಾಗಿ ಹಿ. ಶಿ. ರಾಮಚಂದ್ರೇಗೌಡರ ಕೆಳಗಿನ ನುಡಿಗಳನ್ನು ಗಮನಿಸಿ;

'ಪುರದಪುಣ್ಯಂ ಪುರುಷರೂಪಿಂದೆ ಪೋಗುತಿದೆ
ಪರಿಜನದ ಭಾಗ್ಯವಡವಿಗೆ ನಡೆಯುತಿದೆ.'

– ರಾಘವಾಂಕ

"ವಿಜ್ಞಾನವೆಂಬ ಯಜಮಾನನಿಗೆ ಜನತೆಯ ಜ್ಞಾನ ಸೊರಗಿ ಸೋತುಹೋಯಿತು. ಇಲ್ಲಿಂದಲೆ ಬಡವರ ಸೋಲು ಆರಂಭವಾಯಿತು. ಎಲ್ಲ ಸ್ಥಳೀಯ ಕುಶಲಕರ್ಮಿಗಳು ಕೈಚೆಲ್ಲಿದರು. ಆ ಮೂಲಕ ಬಹುಜನರ ಸೃಜನಶೀಲತೆ ತಟಸ್ಥವಾಯಿತು. ಅನೇಕ ಶತಮಾನಗಳ ಜ್ಞಾನ ಅವನತಿಯ ಹಾದಿಹಿಡಿಯಿತು. ಇದೆ ಜಾನಪದ ; ಜನರ ಜ್ಞಾನ-ವಿಜ್ಞಾನ. ಒಂದು ದೇಶ ಸಮಗ್ರವಾಗಿ ಅಭಿವೃದ್ಧಿ ಹೊಂದಬೇಕಾದರೆ, ಬಹುಜನರು ಕ್ರಿಯಾಶೀಲರಾಗಬೇಕಾದರೆ, ಯುಗಶೀಲವಾದ ಜಾನಪದ ಮರುಹುಟ್ಟು ಪಡೆಯಬೇಕು ಮತ್ತು ಸಮಕಾಲೀನವಾಗಬೇಕು. ಥುತ್ತನೆ ಎದ್ದು ನಿಂತು ಬಡವರ ಹಾಗೂ ಬಹುಜನರ ಮನಸ್ಸು ಮತ್ತು ಶ್ರಮವನ್ನು ನಿಷ್ಕ್ರಿಯಗೊಳಿಸಿದ ಆಧುನಿಕತೆ ನಿಶ್ಯಸ್ತ್ರೀಕರಣಗೊಳ್ಳಬೇಕು. ಇಲ್ಲದಿದ್ದಲ್ಲಿ ನಮ್ಮನ್ನು ಅಮೆರಿಕ ಕಾಡಿದಂತೆ, ಅಮೆರಿಕವನ್ನು ಬಿನ್ ಲಾಡೆನ್ ಕಾಡಿದಂತೆ ನವ ಆಧುನಿಕತೆ ನಮ್ಮನ್ನೆಲ್ಲ ನಿರಂತರ ಭಯದಲ್ಲಿ ಇಟ್ಟಿರುತ್ತದೆ" (ಪುರದ ಪುಣ್ಯ ೬೧.೯೦೪).

ನಮ್ಮ ಜನಪದ ಸಾಹಿತ್ಯದ ಸಂಗ್ರಹ, ಅಧ್ಯಯನ ತಲುಪಬೇಕಾದ ಗುರಿ ಇದು. ಇಲ್ಲದಿದ್ದಲ್ಲಿ ಎಂದಿನಂತೆ ಜನಪದ ಸಾಹಿತ್ಯ ನಶಿಸಿಹೋಗುತ್ತಿದೆ, ನಾವು ಕಳೆದು ಹೋಗುತ್ತಿದ್ದೇವೆ ಎಂದು ಪರಿತಪಿಸುತ್ತಲೇ ಇರಬೇಕಾಗುತ್ತದೆ. ಈ ಪರ್ಯಾಯದ ಪ್ರಶ್ನೆ ಸರಳವಾದುದಲ್ಲ. ಅದು ನಮ್ಮ ಜೀವನ ಭದ್ರತೆಯ ಹುಡುಕಾಟ. ಜಾಗತೀಕರಣವೆಂಬ ವಸ್ತುರಾಕ್ಷಸನಿಂದ ಇಡೀ ಭಾರತೀಯ ಸಂಸ್ಕೃತಿ ವಸ್ತುಸಂಸ್ಕೃತಿಯಾಗಿ ಪರಿವರ್ತಿತವಾಗುತ್ತಿದೆ. ತಮ್ಮಲ್ಲೆ ವಸ್ತುವನ್ನು ಸೃಷ್ಟಿ ಮಾಡುವ ಜೀವನ ಸಂಸ್ಕೃತಿಯ ಆಶಯಗಳಾದ ಭೂಮಿ, ನೀರು, ಗಾಳಿ, ಆಹಾರ ಕಲುಷಿತಗೊಳ್ಳುತ್ತಿವೆ. ಜೀವನ ಸಂಸ್ಕೃತಿಯ ಅಭಿವ್ಯಕ್ತಿಗಳಾದ ಹೆಣ್ಣು, ಕಲಾವಿದರು, ಮಕ್ಕಳು ಮತ್ತು ಸಮುದಾಯಗಳು ಶಕ್ತಿಗುಂದುತ್ತಿವೆ. ಜೀವನ ಸಮತೋಲನಕ್ಕೆ ಒಡನಾಡಬೇಕಾದ ಅಂಚಿಗೆ ಸರಿದವರು, ರಾಜಕೀಯವನ್ನು ಎಟುಕಿಸಿಕೊಳ್ಳಲಾಗದ ಕಿರುಸಮುದಾಯಗಳು, ತಳ - ಕೆಳವರ್ಗದವರು ಸಾಂಸ್ಕೃತಿಕ ಅನನ್ಯತೆಯನ್ನು ಪಡೆಯದೆ ಹೋಗುತ್ತಾರೆ. ಅವರಿಗೊಂದು ಇತಿಹಾಸ ಮತ್ತೂ ದಕ್ಕದೆ ಹೋಗುತ್ತದೆ. ಇದರ ಅರ್ಥ ಭಾರತವನ್ನು ಇರುವ ಹಾಗೆಯೇ ಉಳಿಸಿಕೊಳ್ಳುವುದಲ್ಲ, ಜಾನಪದ ಜೀವನ ಚಿಂತನೆ ಹೇಳುವ 'ಎಲ್ಲರಿಗೂ ಬದುಕು ಮತ್ತು ಎಲ್ಲರಿಗೂ ಅವಕಾಶ' ಎಂಬುದನ್ನು

ಕಿರಿದಾಗಿ ನಿರ್ವಚಿಸಿ, ಅದರ ಸ್ಥಾನಮಾನವನ್ನು ಶಿಷ್ಟ ಸಾಹಿತ್ಯದ ಕೆಳಗೆ ಇಟ್ಟು ನೋಡುವ ಮನೋಧರ್ಮ ಹುಟ್ಟಿರುವುದೇ ವರ್ಗಶಾಹಿ ಮತ್ತು ವಸಾಹತುಶಾಹಿ ಜ್ಞಾನ ಮಾದರಿಗಳು ನಮ್ಮ ಮೇಲೆ ಸವಾರಿ ನಡೆಸುತ್ತಿರುವುದರಿಂದಾಗಿದೆ. ಆ ಕಾರಣದ ಮೇಲೆ ಜನಪದ ಸಂಸ್ಕೃತಿ ಮತ್ತು ಜನಪದ ಸಾಹಿತ್ಯದ ಮೌಲ್ಯಮಾಪನ ಸಮಸಂಸ್ಕೃತಿ ಸ್ಥಾನಮಾನದ ಮೇಲೆ ನಡೆಯಬೇಕಿದೆ.

ಕನ್ನಡ ಜನಪದ ಸಾಹಿತ್ಯ ಸಂಗ್ರಹ ಎರಡು ನೆಲೆಯಲ್ಲಿ ನಡೆಯಿತು. ರಾಷ್ಟ್ರೀಯ ಪುನರುತ್ಥಾನದ ಕಾರಣದಿಂದ ಮತ್ತು ರಾಷ್ಟ್ರದ ಮೂಲ ಸಂಪತ್ತಾದ ಎಲ್ಲವನ್ನೂ ಪುನಶ್ಚೇತನಗೊಳಿಸುವ ಸಂದರ್ಭದಲ್ಲಿ, ರಾಷ್ಟ್ರೀಯ ಸಂಪತ್ತುಗಳಲ್ಲಿ ಒಂದಾದ ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಗ್ರಹಿಸುವ ಪ್ರಯತ್ನ ಮೊದಲನೆಯದು. ಈ ಪ್ರವೃತ್ತಿ ಸಂಪೂರ್ಣವಾಗಿಯೂ ಭಾವನಾತ್ಮಕವಾದುದು. ರಾಷ್ಟ್ರೀಯ ಪುನರುತ್ಥಾನದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭಾಗವಹಿಸಿದ ನವೋದಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಈ ಹಿನ್ನೆಲೆಯಲ್ಲಿ ಸಂಗ್ರಹಿಸಿದರು. ಆದಕಾರಣ 'ಸಾಹಿತ್ಯವೆಂಬ ಸಾಮಗ್ರಿಗೆ' ಅವರು ಒತ್ತುಕೊಟ್ಟರು. ಅದರ ಉತ್ಪಾದಕರು, ಅವರ ಅಸ್ತಿತ್ವ, ನೆಲೆ-ಬೆಲೆ ಮತ್ತು ಜನಪದ ಸಾಹಿತ್ಯದ ಸಾಮಾಜಿಕ ಸಾಂಸ್ಕೃತಿಕ ಸಂದರ್ಭದ ಕಡೆಗೆ ಗಮನ ಹರಿಸಲಿಲ್ಲ. ರಾಷ್ಟ್ರದ ಆರಾಧನೆಯಂತೆ ಜನಪದ ಸಾಹಿತ್ಯವೂ ಒಂದು ರೀತಿಯ ಆರಾಧನೆಯ ಸಾಮಗ್ರಿಯ ಆಯಿತು. ಆ ಸಾಹಿತ್ಯವನ್ನು ಸಂಗ್ರಹಿಸುವ, ಪ್ರೇಮಿಸುವ ಮತ್ತು ಕೊಂಡಾಡುವ ಪ್ರವೃತ್ತಿ ತುಂಬು ಹೊಳೆಯಂತೆ ಹರಿಯಿತು. ಜನಪದ ಸಾಹಿತ್ಯವೂ ದೇಶವನ್ನು ಕಟ್ಟುವ ಒಂದು ಉಪಕರಣವಾಗಿ ಬಳಕೆಯಾಯಿತು. ಅಷ್ಟೇ ಪ್ರಮಾಣದಲ್ಲಿ ಸಾಹಿತ್ಯವೂ ಸಂಗ್ರಹವಾಯಿತು. ಜನಪದ ಸಾಹಿತ್ಯ ಸಂಗ್ರಹ ಜಂಗಮರು ತಾವಿರುವ ಕಡೆಯಲ್ಲಿ ಮಾತ್ರವಲ್ಲದೆ, ಜನಪದ ಸಾಹಿತ್ಯ ಸಂಗ್ರಹಯಾತ್ರೆಯನ್ನು ಕೈಕೊಂಡರು. ಈ ಸಂಗ್ರಹಯಾತ್ರೆ, ಅದನ್ನು ಕುರಿತ ಪ್ರಚಾರವೂ ಪ್ರಶಂಸೆಯೂ ಆಗಿತ್ತು. ಅದು ಅಗತ್ಯ ಭೂಮಿಕೆಯೂ ಆಯಿತು.

ಯಾವಾಗ ಜಾನಪದ ಎಂಬುದು ಅಧ್ಯಯನದ ವಿಷಯವೂ ಆಯಿತೊ ಆಗ ಅದಕ್ಕೊಂದು ಶಾಸ್ತ್ರೀಯ ಶಿಸ್ತು ಸೇರಿಕೊಂಡಿತು. ಅಲ್ಲಿಂದ ಜನಪದ ಸಾಹಿತ್ಯ ಸಂಗ್ರಹದ ಭರಾಟೆ ಕಡಿಮೆಯಾಯಿತು. ಯಾವಾಗ ಇದು ವೈಜ್ಞಾನಿಕವೆಂಬ ಹೆಸರಿನ ಪ್ರಜ್ಞಾಪೂರ್ವಕ ಚಟುವಟಿಕೆ ಆಯಿತೊ ಅಲ್ಲಿಂದ ಪ್ರೇಮದ ವಿವಾಹ ಕೌಟುಂಬಿಕ ಜವಾಬ್ದಾರಿ ಆದಂತಾಯಿತು. ಒಂದು ರೀತಿಯಲ್ಲಿ ಇದು ಜನಪದ ಸಾಹಿತ್ಯ ಸಂಗ್ರಹಕ್ಕೆ ತಗುಲಿದ ಪೆಟ್ಟು ಎನಿಸಿದರೂ ಮತ್ತೊಂದು ಬಗೆಯಲ್ಲಿ ಆ ಸಾಹಿತ್ಯದ ಅಂತರಂಗ ಪ್ರಕಾಶಿಸಲು ಅನುಕೂಲವಾಯಿತು.

ಅಭಿಮಾನದ ದೃಷ್ಟಿಯಿಂದ ಸಂಗ್ರಹಿಸಲಿ ಅಥವಾ ಅಧ್ಯಯನ ದೃಷ್ಟಿಯಿಂದ ಸಂಗ್ರಹಿಸಲಿ ಈ ಸಂಗ್ರಹ ಕಾರ್ಯ ಮಾತ್ರ ಸುಲಭದ್ದಲ್ಲ. ಮೂಲತ: ಅದು ಸಂಗ್ರಾಹಕನ ಅನುಭವ, ಬದ್ಧತೆ, ಶ್ರಮ ಮತ್ತು ಆರ್ಥಿಕ ಅನುಕೂಲತೆಯನ್ನು ಅಪೇಕ್ಷಿಸುತ್ತದೆ. ಆರಂಭಿಕ

ಕಾಲದಲ್ಲಿ ಸಂಗ್ರಾಹಕರಲ್ಲಿ ಆರ್ಥಿಕ ಬಡತನವಿದ್ದರೂ, ಅವರ ಸಾಂಸ್ಕೃತಿಕ ಸ್ವಾಭಿಮಾನವೆಂಬುದು ಕಷ್ಟನಷ್ಟಗಳ ಪರಿವೆಯನ್ನು ಮರೆತು ಜನಪದ ಸಾಹಿತ್ಯವನ್ನು ಹಾಡಿ, ಸಂಗ್ರಹಿಸಿ ಜನತೆಯ ಮುಂದೆ ಮಂಡಿಸಿತು. ಇದೊಂದು ಅಧ್ಯಯನದ ವಿಷಯವಾದ ತಕ್ಷಣದಿಂದ ಅದಕ್ಕೊಂದು ಉದ್ಯಮದ ಸ್ವರೂಪ ಉಂಟಾಯಿತು. ಲಾಭ-ನಷ್ಟಗಳ ಪರಿವೆ ಸಂಗ್ರಾಹಕನನ್ನು ಕಾಡಹತ್ತಿತು. ಈ ಹೊತ್ತಿಗೆ ಜನಪದ ಸಾಹಿತ್ಯವನ್ನು ಜನಪ್ರಿಯ ಸಾಹಿತ್ಯದಂತೆ ಪ್ರಕಟಿಸಿ ಬೀದಿಬದಿಯಲ್ಲಿ ಮಾರಿ ಕಾಸು ಮಾಡುವ ಪರಿಸ್ಥಿತಿ ನಿಂತುಹೋಯಿತು. ವ್ಯಾಪಾರಿಗಳು ಈ ಸಾಹಿತ್ಯವನ್ನು ಪ್ರಕಟಿಸುವುದನ್ನು ನಿಲ್ಲಿಸಿದರು, ಪ್ರಕಾಶಕರೆಂಬುವವರು ಹುಟ್ಟಿಕೊಂಡರು. ಅಕೆಡೆಮಿಷಿಯನ್ ಮತ್ತು ಪ್ರಕಾಶಕರೆಂಬ ಉದ್ಯಮ ಆಧಾರಿತ ದಣಿಗಳಿಂದಾಗಿ ಹೊಸ ಸಂಗ್ರಹಕಾರರು ಮುಂದೆ ಬರುವುದಾಗಲಿಲ್ಲ. ಜನಪದಸಾಹಿತ್ಯ ಸಂಗ್ರಹಕಾರ್ಯ ಬಹಳ ಶಿಸ್ತಿನ ವಿಷಯವಾಯಿತು. ಸಂಗ್ರಹಕಾರ್ಯಕ್ಕೂ ಹೆಚ್ಚು ಓದು ಮತ್ತು ವಿದ್ವತ್ತು ಬೇಕೆನಿಸಿತು. ಸಹಜವಾಗಿ ಹವ್ಯಾಸಿ, ಭಾಷಾಪ್ರೇಮಿ ಮತ್ತು ಅಲೆಮಾರಿ ಸಂಗ್ರಹಕಾರರು ಹಿಂದೆ ಸರಿದರು. ಜನಪದ ಸಾಹಿತ್ಯವನ್ನು, ಸಂಗ್ರಹಿಸುವುದಕ್ಕಿಂತ ಅದರ ಸತ್ವ ಮತ್ತು ಸಾರ್ಥಕತೆಯ ಪ್ರಶ್ನೆ ಮುಂದೆ ಬಂದು ವಿದ್ವಾಂಸರು ಮಾತ್ರವೇ ಈ ಕೆಲಸವನ್ನು ಮಾಡಬೇಕು ಎಂಬ ಮನೋಧರ್ಮ ಉಂಟಾಯಿತು. ಜನಪದ ಸಾಹಿತ್ಯ ಸಂಗ್ರಹ ಹಿಂದೆ ಸರಿದುದಕ್ಕೆ ಅದು ಒಂದು ಅಧ್ಯಯನ ಶಿಸ್ತಿಗೆ ಒಳಪಟ್ಟುದಷ್ಟೆ ಕಾರಣವಲ್ಲ. ಆಧುನಿಕವೆಂಬ ವಸ್ತುಪ್ರಧಾನ ಚಿಂತನೆ ಮತ್ತು ಬಳಕೆಯ ಜೀವನ ವಿಧಾನ ಪಾರಂಪರಿಕ ಮತ್ತು ಸ್ಥಳೀಯವೆಂಬ ಎಲ್ಲ ಸಾಂಸ್ಕೃತಿಕ ಉತ್ಪನ್ನಗಳನ್ನು ಜನಬಳಕೆಯಿಂದ ದೂರಮಾಡಲು ತೊಡಗಿದ್ದು ಮುಖ್ಯಕಾರಣವಾಗಿದೆ. ಸೀಮಿತ ವರ್ಗದ ವಿಶಿಷ್ಟ ಚಟುವಟಿಕೆಯಾಗಿದ್ದ ಬರಹದ ಸಾಹಿತ್ಯ ಆಧುನಿಕತೆಯ ಜೊತೆಗೆ ಸ್ಪರ್ಧಿಸಿ ಮತ್ತು ಹೊಂದಿಕೊಂಡು ಮರುಹುಟ್ಟು ಪಡೆದ ಕಾರಣದಿಂದ ಅದು ವರ್ಗಾತೀತವಾದ ಸಾಹಿತ್ಯಕ ಚಟುವಟಿಕೆಯಾಯಿತು. ಎಲ್ಲಾ ಜಾತಿ, ಪಂಗಡದ ವ್ಯಕ್ತಿಗಳೂ ಈ ಸಾಹಿತ್ಯದೊಂದಿಗೆ ಸ್ಪಂದಿಸುವುದು ಸಾಧ್ಯವಾಯಿತು. ಇದರಿಂದ ಸಾಹಿತ್ಯವೆಂದರೆ ಬರಹಗಾರರು ಬರೆದದ್ದು ಎಂಬ ಪ್ರತೀತಿ ದೃಢವಾಯಿತು. ಹೆಚ್ಚು ವ್ಯಕ್ತಿಗಳು ತಮ್ಮ ವ್ಯಕ್ತಿನಿಷ್ಠ ಮತ್ತು ವ್ಯಕ್ತಿವೃತ್ತಿ ಸಾಮರ್ಥ್ಯದೊಡನೆ ಈ ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡರು. ಜೊತೆ ಜೊತೆಯಲ್ಲೆ ಓದು ಮಾತ್ರ ಅರ್ಹತೆ, 'ಓದಿಲ್ಲದ್ದು' ಅನರ್ಹತೆ ಎಂಬ ಜೀವನ ತತ್ವ ಬಳಕೆಗೆ ಬಂತು. ಸಹಜವಾಗಿಯೆ ಅವಿದ್ಯಾವಂತರ ಜನಪದ ಸಾಹಿತ್ಯ ಸತ್ವದಲ್ಲಿ ಸಂಪುಷ್ಟವಾಗಿದ್ದರೂ ಗುರುತುಪಡೆಯುವಲ್ಲಿ ಹಿಂದೆ ಬಿದ್ದಕಾರಣ ವಿಸ್ಮೃತಿಗೆ ತುತ್ತಾಯಿತು. ಶಿಷ್ಟ ಸಾಹಿತ್ಯದ ನಿರಂತರ ಪ್ರಯೋಗಶೀಲತೆ ಜನಪದಸಾಹಿತ್ಯದ ನಿಧಾನ ಹಾಗೂ ನಿಶ್ಚಿತಚಲನೆಯನ್ನು ಹಿಂದೆ ಹಾಕಿತು. ಇದು ನಿಶ್ಚಿತ ಅಭಿರುಚಿಗೆ ನಿರಂತರ ಅಭಿರುಚಿ ಒಡ್ಡಿದ ಸವಾಲುಕೂಡ ಹೌದು. ಜನಪದ ಸಾಹಿತ್ಯ ಶಿಷ್ಟಸಾಹಿತ್ಯದಂತೆ 'ಅಧಿಕೃತ ಸಾಹಿತ್ಯವಾಗಲಿಲ್ಲ ಎಂಬ ಸತ್ಯಸ್ಯಸತ್ಯವೂ ಜನಪದ ಸಾಹಿತ್ಯ ಇನ್ನಿತರ ಆಧುನಿಕ ಸಾಹಿತ್ಯ ಪದ್ಧತಿಗಳೊಡನೆ ಸ್ಪರ್ಧಿಸದೆ ಹಿಂದೆ ಬೀಳಲು ಕಾರಣವಾಗಿದೆ. ಉದ್ಯಮ, ಉದ್ಯೋಗ,

ವೃತ್ತಿಯಲ್ಲದ ಈ ಸಾಹಿತ್ಯ ಆಧುನಿಕ ತತ್ವವಾದ 'ಸ್ಪರ್ಧೆ ಮತ್ತು ಗೆಲ್ಲು' ಸಮರದಲ್ಲಿ ಸೋಲೊಪ್ಪಿಕೊಳ್ಳುವುದು ಅನಿವಾರ್ಯವಾಯಿತು.

ಆದರೆ ಜನಪದ ಸಾಹಿತ್ಯದ ಸತ್ವ ಮತ್ತು ಸಾತತ್ಯ ಎಲ್ಲಿದೆ ಎಂಬುದನ್ನು ಗುರುತಿಸಿಕೊಳ್ಳಲಾಗದ ಹೆಳವತನ ನಮ್ಮನ್ನು ಕಾಡಬೇಕಿತ್ತೆ? ನವೋದಯ ಸಾಹಿತಿಗಳಾದ ಬಿ. ಎಂ. ಶ್ರೀ, ದ. ರಾ. ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆಟಗೇರಿ ಕೃಷ್ಣಶರ್ಮ, ಮಧುರಚೆನ್ನ- ಈ ಮೊದಲಾದ ಹಿರಿಯರು ಜನಪದ ಸಾಹಿತ್ಯದಿಂದ ಒಂದು ಸತ್ವವನ್ನು ಕಂಡುಕೊಂಡು ಅದನ್ನು ಹೆಕ್ಕಿ ತೆಗೆದು, ತಮ್ಮ ಸಾಹಿತ್ಯವನ್ನು ಮೈದುಂಬಿಸಿಕೊಂಡರು. ಅವರಿಂದ ಮುಂದೆ ನಮ್ಮ ಸಾಹಿತ್ಯ ಚಿಂತಕರಾಗಲೀ, ಸಂಸ್ಕೃತಿ ಚಿಂತಕರಾಗಲಿ ಜನಪದ ಸಾಹಿತ್ಯದ ಹೊಸ ಸಾಧ್ಯತೆಗಳನ್ನು ಹುಡುಕಲೇ ಇಲ್ಲ ಎಂಬುದು ದುರ್ದೈವದ ಸಂಗತಿ. ಅಲ್ಲಲ್ಲಿ ಕೆಲವು ಸಾಹಿತಿಗಳು ಜನಪದ ಸಾಹಿತ್ಯದ ಸೆಲೆಗಳನ್ನು ಹಿಡಿದು ಬರೆಯುತ್ತಿದ್ದಾರೆ ನಿಜ. ಆದರೆ ಅದು ಅವರ ಬರಹದ ಪ್ರವೃತ್ತಿಗಳಲ್ಲಿ ಒಂದಾಗಿದೆಯೆ ಹೊರತು ಅವರ ಸೃಜನಶೀಲತೆಯ ಪ್ರಕೃತಿಯಾಗಿಲ್ಲ. ಈ ಕಾರಣದಿಂದ ಆಧುನಿಕ ಸಂದರ್ಭದಲ್ಲಿ ಜನಪದ ಜೀವನ ಮತ್ತು ಸಂಸ್ಕೃತಿ ಹೊರಗಿನ ಸರಕು, ಕನಸು, ಅಪೇಕ್ಷೆ, ತುಡಿತ, ಆಕರ್ಷಣೆ ಆಗಿದೆಯೆ ಹೊರತು ಜೀವನ ಬಂಧ, ಸಂಬಂಧ ಅಥವಾ ಬದುಕೇ ಆಗಬೇಕಿತ್ತಲ್ಲ, ಆದು ಆಗಲಿಲ್ಲ; ಹಾಗೆ ಆಗುವ ಸಾಧ್ಯತೆಯೂ ಹತ್ತಿರದಲ್ಲಿ ಇಲ್ಲ.

ಯಾವಾಗ ಆಧುನಿಕ ವ್ಯಕ್ತಿಗಳು ವ್ಯಕ್ತಿತ್ವ ಪ್ರತ್ಯೇಕತೆಯನ್ನು ಅನುಭವಿಸುವ ಅಪೇಕ್ಷೆಯನ್ನು ಅನಿವಾರ್ಯ ಅಂತ ಮಾಡಿಕೊಂಡರೂ ಅಂದಿನಿಂದ ಜನಪದ ಸಾಹಿತ್ಯ ಮತ್ತು ಜನಪದ ಸಂಸ್ಕೃತಿಯನ್ನು ಅನುಭವಿಸುವ ಮತ್ತು ಅನುಸರಿಸುವ ಅವಕಾಶಗಳನ್ನು ಕಳಕೊಂಡರು. ಪ್ರಭುಕೇಂದ್ರಿತ ಮತ್ತು ಧರ್ಮಕೇಂದ್ರಿತ ರಾಜಸತ್ತೆ ಇದ್ದಾಗ ಜನಪದಜೀವನ ಸತ್ವವನ್ನು ಆಗಾಗ ಪಡೆಯುತ್ತ ತಮ್ಮನ್ನು ಹಿಗ್ಗಲಿಸಿಕೊಳ್ಳುತ್ತಿದ್ದವು. ಪ್ರಭುವ್ಯವಸ್ಥೆಯ ಅಧೀನದಲ್ಲಿದ್ದೂ ಮಹಾಕವಿ ಪಂಪ ತನ್ನ ಮೂಲ ನೆಲೆಯಾದ ಬನವಾಸಿ ದೇಶವನ್ನು ನೆನೆದು ತನ್ನನ್ನು ಹಿಗ್ಗಲಿಸಿಕೊಂಡನು. ಪ್ರಭು ಕೇಂದ್ರಿತ ಹಿರಿಯ ಪ್ರಜೆಗಳು ತಮ್ಮ ಬಾಲ್ಯಜೀವನದಲ್ಲಿ ಜನಪದ ಬದುಕನ್ನು ಅನುಭವಿಸಿದರೆ ಮತ್ತೆ ಅದಕ್ಕೆ ಹಿಂದಿರುಗುತ್ತಿದ್ದುದು ವಾನಪ್ರಸ್ಥ ಸಮಯದಲ್ಲಿಯೆ. ಆದರೆ ನಾವು ಪ್ರಜಾಪ್ರಭುತ್ವವೆಂಬ ಜನಪದ ಜೀವನ ತತ್ವದೊಳಗೆ ಇದ್ದರೂ ಬದುಕುತ್ತಿರುವುದು ಮಾತ್ರ 'ಆಧುನಿಕ ವಾನಪ್ರಸ್ಥ' ದಲ್ಲಿ. ಸತ್ತಲ್ಲದೆ ಬದುಕಲಾರೆವು ಎಂಬ ಈ ಸ್ಥಿತಿಗೆ ನಮ್ಮನ್ನು ನಾವು ಶಪಿಸಿಕೊಂಡಿರುವುದೆ ಕಾರಣವಾಗಿದೆ. ಅಂತಹ ಒಂದು ದುರವಸ್ಥೆಯಿಂದ ಬಿಡುಗಡೆಗೊಳ್ಳುವ ಕಾರಣಕ್ಕಾಗಿಯೇ ನಾವಿಂದು ಜನಪದ ಸಾಹಿತ್ಯವನ್ನು ಓದಬೇಕಾಗಿದೆ ಮತ್ತು ಜನಪದ ಸಂಸ್ಕೃತಿಯನ್ನು ಕಲಿಯಬೇಕಾಗಿದೆ. ಇದರಿಂದ ಆಧುನಿಕತೆಯನ್ನು ಕಳೆದುಕೊಳ್ಳುತ್ತೇವೆ ಎಂದು ನಾವ್ಯಾರು ಭಯಪಡಬೇಕಾಗಿಲ್ಲ. ಆಧುನಿಕತೆಯನ್ನು ಜನಪದ ಬದುಕಾಗಿ ಹಂಚಿಕೊಳ್ಳುವ ಸಾಧ್ಯತೆಗಳನ್ನಷ್ಟೆ ನಾವು ನಮ್ಮಲ್ಲಿ ಕಂಡುಕೊಳ್ಳಬೇಕಾಗಿದೆ.

ಕರ್ನಾಟಕ ಸರ್ಕಾರ; ಚಿಗುರಿದ ಸಂಸ್ಕೃತಿಯ ಸಾರ ಸರ್ಕಾರ ನಿಂತಕಡೆ ಜನಪದಗಳು ಚಲಿಸಬೇಕು

ಜನಪದಗಳು ತಾಟಸ್ಥ್ಯಕ್ಕೆ ಬರುತ್ತಿವೆ ಎಂದ ಕಡೆ ಸರ್ಕಾರ ಚಲಿಸಬೇಕು. ಜಗತ್ತಿನ ಎಲ್ಲ ಕಡೆಯೂ ಇಂತಹ ಚಲನೆಗಳು ಸಂಭವಿಸಿವೆ. ಕರ್ನಾಟಕದ ತಳ-ಕೆಳವರ್ಗಗಳು ಎಲ್ಲ ಅನುಕೂಲಗಳಿಂದ ವಂಚಿತವಾಗಿ ಸ್ತಬ್ಧತೆಯ ಕಡೆಗೆ ಹೊರಟಿವೆ ಎಂಬುದನ್ನು ಕಂಡ ಶ್ರೀ ಡಿ. ದೇವರಾಜ ಅರಸು ಅವರ ಸರ್ಕಾರ ಬೇರೆ ಬೇರೆ ರೀತಿಯಲ್ಲಿ ಅವುಗಳನ್ನು ಪ್ರೋತ್ಸಾಹಿಸಿ, ಪೋಷಿಸಿ ಮುಖ್ಯಧಾರೆಗೆ ಅಭಿಮುಖೀಕರಿಸಿದರು. ಭಾಷೆಯ ದೃಷ್ಟಿಯಿಂದ ಕರ್ನಾಟಕ ಸರ್ಕಾರ ಅನ್ಯತೆಗೆ ಸೋಲುತ್ತದೆ ಎಂದು ತಿಳಿದಾಗ ಕರ್ನಾಟಕ ಜನತೆ ಗೋಕಾಕ್ ಚಳವಳಿಯನ್ನು ಆರಂಭಿಸಿ ಕನ್ನಡ ಭಾಷೆ ಮತ್ತು ಕನ್ನಡ ಸಂಸ್ಕೃತಿಯನ್ನು ಸಮನೆಲೆಗೆ ತಂದರು. ಜನಪದಸಾಹಿತ್ಯ ಮತ್ತು ಸಂಸ್ಕೃತಿಯ ಪುನರುತ್ಥಾನದ ಸಂದರ್ಭಕ್ಕೆ ಇಂಥದೊಂದು ಚಲನೆ ಜನರ ಮಧ್ಯೆ ಉಂಟಾಗಬೇಕಿದೆ. ಆದರೆ ಅಂತಹ ಸೂಚನೆಗಳು ಕಾಣುತ್ತಿಲ್ಲ. ಇಂತಹ ಸ್ಥಿತಿಯನ್ನು ಅಲುಗಾಡಿಸಲು ಜನತೆಯ ಸಂಸ್ಕೃತಿಯ ಪ್ರತಿನಿಧಿಯಾಗಿರುವ ಸರ್ಕಾರ ಹೊಸಹೆಜ್ಜೆಯನ್ನು ಹಸನಾದ ಗೆಜ್ಜೆ ಸದ್ದಿನೊಂದಿಗೆ ಇಡಬೇಕಾಗಿದೆ. 'ಕನ್ನಡ ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ' ಗಳನ್ನು ಹೊರತರಲು ಹೊರಟಿರುವ ಕರ್ನಾಟಕ ಸರ್ಕಾರ ಮತ್ತು ಅದರ ಸಂಸ್ಕೃತಿ ಚಾಲಕ ಸಂಸ್ಥೆಯಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಂತಹ ಒಂದು ಮಹತ್ವದ ಕೆಲಸಕ್ಕೆ ಕೈಹಾಕಿದೆ.

ಭಾರತದ ಅನೇಕ ಸಂಸ್ಥಾನಗಳಲ್ಲಿ ಜನಪದ ಸಾಹಿತ್ಯ ಸಂಗ್ರಹ ಹಾಗೂ ಜಾನಪದ ಅಧ್ಯಯನ ನಡೆದಿದೆ. ಆದರೆ ಕರ್ನಾಟಕದ ಈ ದಿಸೆಯ ಕೆಲಸ ಆ ಎಲ್ಲವನ್ನೂ ಮೀರಿಸಿ ಮುಂದೆ ನಿಂತಿದೆ. ಈ ಸಾಧನೆಯ ಮೊದಲ ಗೌರವಕ್ಕೆ ಪಾತ್ರರಾದವರೆಂದರೆ ಕನ್ನಡ ನಿಜ ನೆಲದಿಂದ ಬಂದ ನಮ್ಮ ನಾಡಿನ ಸಾಹಿತಿಗಳು. ನೆಲ ಸಂಸ್ಕೃತಿಯ ನೆಲೆಯಲ್ಲಿ ನಿಂತು ನಾಡಿನ ಭವಿಷ್ಯದ ಬಗ್ಗೆ ತಲೆಬಿಸಿ ಮಾಡಿಕೊಂಡ ಸಂಸ್ಕೃತಿ ಚಿಂತಕರ ಪಾತ್ರ ಈ ಸಾಧನೆಯನ್ನು ಸತ್ವಯುತಗೊಳಿಸಿದೆ. ಪ್ರತ್ಯಕ್ಷವಾಗಿ ನಮ್ಮ ನಾಡಿನ ಎಲ್ಲ ವಿಶ್ವವಿದ್ಯಾನಿಲಯಗಳು ಜನಪದ ಸಾಹಿತ್ಯ ಮತ್ತು ಜಾನಪದ ಅಧ್ಯಯನವನ್ನು ತಮ್ಮ ಒಂದು ಬದ್ಧತೆಯನ್ನಾಗಿ ಸ್ವೀಕರಿಸಬೇಕು. ಕರ್ನಾಟಕ ಜಾನಪದ ಪರಿಷತ್ತಿನಂತಹ ಕೆಲವು ಖಾಸಗಿ ಸಂಸ್ಥೆಗಳು ಜಾನಪದ ಪುನರುದ್ಧಾರ ಕೆಲಸದಲ್ಲಿ ತೊಡಗಿವೆ. ಕರ್ನಾಟಕದ ರಾಜಕಾರಣ ಮತ್ತು ರಾಜ್ಯ ಪ್ರತಿನಿಧಿಗಳನ್ನು ದೂರವಿಟ್ಟು ಮಾತನಾಡುವಂತಿಲ್ಲ. ಗ್ರಾಮೀಣ ಪ್ರದೇಶದಿಂದ ಬಂದ ಎಲ್ಲ ಜನಪ್ರತಿನಿಧಿಗಳು ಜಾನಪದ ನಮ್ಮದೆಂದು ಪ್ರೀತಿಸಿ ಪ್ರೋತ್ಸಾಹ ಕೊಡುತ್ತಾ ಬರುತ್ತಿದ್ದಾರೆ. ಕರ್ನಾಟಕದಲ್ಲಿ ಜನಪದ ಕಲೆ ಮತ್ತು ಕಲಾವಿದರಿಗೆ ಸಿಗುತ್ತಿರುವ ಪ್ರೋತ್ಸಾಹ ಭಾರತದ ಬೇರಾವ ಸಂಸ್ಥಾನದಲ್ಲಿಯೂ ಸಿಗುತ್ತಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಇಂತಹ ಜನಪದ ಸಾಹಿತ್ಯ, ಕಲೆ, ಸಂಸ್ಕೃತಿ ಬದ್ಧ ರಾಜ್ಯಶಕ್ತಿಯ ಪ್ರತ್ಯುತ್ಪನ್ನವಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಾನಪದಕ್ಕೆ ಕೊಟ್ಟಿರುವ ಪ್ರೇರಣೆ, ಪ್ರೋತ್ಸಾಹ ಅಪಾರವಾದುದು. ತಾನೇ ನೇರವಾಗಿ ಹಾಗೂ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ

ಮೂಲಕ ಜನಪದ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಯ ಪುಸ್ತಕಗಳಿಗೆ ಆರ್ಥಿಕ ನೆರವು ನೀಡುತ್ತಿದೆ. ಜನಪದ ಸಾಹಿತ್ಯದ ಪ್ರಾಮಾಣ್ಯ ಸಂಗ್ರಹಗಳನ್ನು ಪುನರ್ ಮುದ್ರಿಸಿದೆ. ಜನಪದ ಕಲಾವಿದರಿಗೆ ಮಾಸಾಶನ, ಕಲಾವಿದ ಪ್ರಶಸ್ತಿ ಮತ್ತು ಅತ್ಯುನ್ನತ 'ಜಾನಪದ ಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಕಲಾವಿದರ ಪುನಶ್ಚೇತನ, ಗುರು-ಶಿಷ್ಯ ಪರಂಪರೆಯ ಮೂಲಕ ಜನಪದ ಕಲೆಗಳ ಪುನರುಜ್ಜೀವನ, ಜನಪದ ಕಲಾವಿದರಿಗೆ ವಾದ್ಯೋಪಕರಣಗಳ ಸಹಾಯ, ಶ್ರೇಷ್ಠ ಕಲಾವಿದರಿಗೆ ರಾಜ್ಯೋತ್ಸವದ ಪ್ರಶಸ್ತಿ ನೀಡಿ ರಾಜ್ಯದ ಇನ್ನಾವುದೇ ಕಲೆ, ಸಂಸ್ಕೃತಿಯ ಸಮಸಮಕ್ಕೆ ತಂದು ಅವರ ಸ್ವಾಭಿಮಾನವನ್ನು ಸ್ವಾಯತ್ತತೆಯನ್ನು ಮಾನ್ಯ ಮಾಡಿದೆ.

ಇದೀಗ ಇದೇ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇದರಿಂದ ಸುಮಾರು ಐದುನೂರು ಪುಟಗಳ ನೂರು ಜನಪದ ಸಾಹಿತ್ಯ ಸಂಪುಟಗಳು ಹೊರಬರುತ್ತಿವೆ. ಇದನ್ನು ಕನ್ನಡ ಜನಪದ ಸಾಹಿತ್ಯ ಪುನರುತ್ಥಾನದ ಪರ್ವ ಎಂದು ಕರೆಯಬಹುದು. ಈ ಬಗೆಯ ಕೆಲಸ ಭಾರತದ ಮತ್ತಾವುದೇ ರಾಜ್ಯದಲ್ಲಿ ಆರಂಭಗೊಂಡಿಲ್ಲ. ವಚನ ಸಾಹಿತ್ಯ ಹಾಗೂ ದಾಸಸಾಹಿತ್ಯವನ್ನು ಕುರಿತ ಸಂಪುಟಗಳನ್ನು ಪ್ರಕಟಿಸಿದ ನಂತರದ ಮೂರನೆಯ ಬೃಹತ್ ಕಾರ್ಯಯೋಜನೆ ಇದು. ಕನ್ನಡಿಗರನ್ನು ಇಷ್ಟೊಂದು ಸಂತಸಪಡಿಸಿದ ಸಂದರ್ಭ ಇನ್ನೊಂದಿಲ್ಲ. ಇದೊಂದು ನಿರಂತರವಾದ ನಾಡ ಚಳವಳಿ ಇದ್ದಂತೆ. ಈ ಕಾರಣಕ್ಕೆ ಕರ್ನಾಟಕ ಸಮಸ್ತ 'ಜನಶ್ರೀ' ಕರ್ನಾಟಕ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಋಣಿಯಾಗಿದೆ. ಈ ಋಣ ಯಾಕೆಂದರೆ ಕೆರೆಯ ನೀರನು ಕೆರೆಗೆ ಬಿಡಿ ಎಂಬಂತೆ ಜನತೆಯ ಸಾಹಿತ್ಯವನ್ನು ಜನರ ಮಧ್ಯೆ ಜನಪ್ರಿಯಗೊಳಿಸುವ ಕೆಲಸ, ನಿಮ್ಮ ಸಂಪತ್ತು ನಿಮ್ಮ ಪ್ರೇಮ, ನಿಮ್ಮ ಅಭಿಮಾನ ಮತ್ತು ನಿಮ್ಮ ಅಂತರಂಗದ ಅಭಿವೃದ್ಧಿಯನ್ನಾಗಿ ಮಾಡಿಕೊಳ್ಳಿ ಎಂಬ ಸಂದೇಶವನ್ನು ಕೊಟ್ಟಂತಾಗಿದೆ. ಜನರಿಂದ ಜನರಿಗಾಗಿ ಜನರಿಗೋಸ್ಕರ ಇರುವ ರಾಜಕೀಯ ಶಕ್ತಿ ಮಾತ್ರ ಇಂಥ ಕೆಲಸವನ್ನು ಮಾಡಬಲ್ಲದು. ಇಂತಹ ಮಹತ್ವದ ಯೋಜನೆಯನ್ನು ಕೊಟ್ಟ ಕರ್ನಾಟಕ ಸರ್ಕಾರಕ್ಕೆ ಸಮಗ್ರ ಕನ್ನಡ ಜನಪದ ಸಾಹಿತ್ಯ ಸಮಿತಿ ಗೌರವ ವಂದನೆಗಳನ್ನು ಸಲ್ಲಿಸುತ್ತದೆ.

ಜನಪದ ಸಾಹಿತ್ಯ ಮುಗಿಯದ ಸಾಹಿತ್ಯ. ಜನರ ಜೀವನದ ಜೊತೆಗೇ ಅದು ಬೆಳೆಯುತ್ತಿರುತ್ತದೆ. ಈ ಕಾರ್ಯಯೋಜನೆ ಕೂಡ ಹಾಗೆಯೇ ಮುಂದುವರಿಯಬೇಕಾದ ಅವಶ್ಯಕತೆ ಇದೆ. ಕರ್ನಾಟಕದಲ್ಲಿ ಇರುವ ಜಾನಪದ ವಾತಾವರಣ ಇದನ್ನು ಆಗು ಮಾಡಿಕೊಡುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ ಸಂಪುಟ ಸಮಿತಿ ಇಂತಹ ಪ್ರತಿಯೊಂದು ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡ ಸಂಪುಟ ಸಮಿತಿ ತುಂಬು ಜವಾಬ್ದಾರಿಯಿಂದ ತನ್ನ ಕೆಲಸದಲ್ಲಿ ತೊಡಗಿದೆ. ಕರ್ನಾಟಕದಲ್ಲಿ ಈಗಾಗಲೆ ಹಲವು ವ್ಯಕ್ತಿಗಳು ಮತ್ತು ಕೆಲವು ಸಂಸ್ಥೆಗಳು

ನಿರಂತರವಾಗಿ ಜನಪದ ಸಾಹಿತ್ಯ ಸಂಗ್ರಹಗಳನ್ನು ಪ್ರಕಟಿಸುತ್ತಾ ಬಂದಿವೆ. ಇವುಗಳಲ್ಲಿ ಕೆಲವು ಮಾತ್ರ ಶಾಸ್ತ್ರೀಯವಾಗಿದ್ದು ಹೆಚ್ಚಿನವು ಸಾಂದರ್ಭಿಕ ಒತ್ತಡ ಮತ್ತು ಅಗತ್ಯತೆಗೆ ಹೊಂದಿಕೊಂಡು ಪ್ರಕಟವಾಗಿವೆ. ಅನೇಕ ವೇಳೆ ಅವೆ ಅಂಶಗಳು ಪದೇಪದೇ ಬೇರೆಬೇರೆ ಸಂಗ್ರಹಗಳಲ್ಲಿ ಪುನರುಕ್ತಿಗೊಂಡಿವೆ. ಇವನ್ನು ಗಮನಕ್ಕೆ ತೆಗೆದುಕೊಂಡಿರುವ ಪ್ರಕಟಣ ಸಮಿತಿಯು ಇರುವುದನ್ನೆಲ್ಲ ಇದ್ದ ಹಾಗೇ ಪ್ರಕಟಿಸುತ್ತಿಲ್ಲ. ಒಂದು ಪ್ರಕಾರದ ಒಂದು ಪ್ರಧಾನ ಆಶಯದ ಮೇಲೆ ನೆಲೆ ನಿಂತಿರುವ ಒಂದು ಹಾಡು, ಕಥೆ, ಕಥನಗೀತೆ, ಗಾದೆ, ಒಗಟು, ಒಡಪು, ನುಡಿಗಟ್ಟು..... ಹೀಗೆ ಒಂದು ಪಾಠವನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಕರ್ನಾಟಕವನ್ನು ಸಾಂಸ್ಕೃತಿಕವಾಗಿ ಅಥವಾ ಭಾಷಿಕವಾಗಿ ವಿಶೇಷವಾಗಿ ಪ್ರತಿನಿಧಿಸುವ ಮತ್ತೊಂದು ಪಾಠವಿದ್ದಲ್ಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಯಾವುದೇ ಪಾಠವನ್ನು ಶಿಷ್ಟ ಸಂಪಾದನೆಯ ಕ್ರಮಕ್ಕೆ ಒಳಪಡಿಸಿರುವುದಿಲ್ಲ. ಆ ಕ್ರಮ ಬಹುಜನರಿಂದ, ಬಹುಪಾಠಗಳಲ್ಲಿ ಮತ್ತು ಬಹುಕಾಲಗಳಲ್ಲಿ ಸೃಷ್ಟಿಯಾಗುವ ಜನಪದ ಸಾಹಿತ್ಯಕ್ಕೆ ಸಲ್ಲತಕ್ಕುದಲ್ಲ. ಭಾಷಿಕ ದೋಷಗಳನ್ನು ಸರಿಪಡಿಸಲು ಮಾತ್ರ ಮುಂದಾಗಿದ್ದೇವೆ. ಅಗತ್ಯವಿದ್ದಷ್ಟು ಸಾಂಸ್ಕೃತಿಕ ಪದಕೋಶವನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಶಿಷ್ಟ ಮತ್ತು ಜನಪ್ರಿಯ ಸಾಹಿತ್ಯ ಪ್ರವೃತ್ತಿಗಳು ಜನಪದ ಸಾಹಿತ್ಯದ ಮೇಲೆ ಯಾವ ಕಾಲದಿಂದಲೂ ಪ್ರಭಾವಬೀರುತ್ತ ಬಂದಿವೆ. ಸಮೂಹ ಮಾಧ್ಯಮಗಳು ಈ ಹೊತ್ತು ಭಾರಿ ಪರಿಣಾಮವನ್ನು ಜನಜೀವನದ ಎಲ್ಲ ಕ್ಷೇತ್ರಗಳ ಮೇಲೆ ಬೀರುತ್ತಾ ಇವೆ. ಇಂತಹ ಸಂದರ್ಭಗಳಲ್ಲಿ ಶಿಷ್ಟ ಮತ್ತು ಜನಪದ ಸಾಹಿತ್ಯದ ನಡುವೆ 'ಮಧ್ಯಮ ಸಾಹಿತ್ಯ' ಸೃಷ್ಟಿಯಾಗಿದೆ. ಈ ಸಾಹಿತ್ಯ ಬಾಯಿ ಮಾತಿನಲ್ಲೂ ಇದೆ, ಬರಹದಲ್ಲೂ ಇದೆ. ಇದು ಜನಪದದ ಮಧ್ಯೆಯೇ ಪ್ರಚುರಪ್ರಚಾರದಲ್ಲಿದೆ. ಜನ ಈ ಸಾಹಿತ್ಯವನ್ನು ಜನಪದ ಸಾಹಿತ್ಯದ ಒಂದು ಭಾಗ ಎಂದು ಒಪ್ಪಿ ಸ್ವೀಕರಿಸಿ ಹಾಡುತ್ತಿದ್ದಾರೆ. ತತ್ವಪದಗಳು ಮತ್ತು ಭಜನೆಯ ಪದಗಳು ಈ ಪ್ರವೃತ್ತಿಗೆ ಮುಖ್ಯ ಸಾಕ್ಷಿಗಳಾಗಿವೆ. ಮೌಖಿಕ ಪರಂಪರೆಯೊಳಕ್ಕೆ ಬಂದು ಅನ್ಯೋನ್ಯವಾಗಿ ಸೇರಿಕೊಂಡ ಎಲ್ಲವೂ ಹಾಗೂ ಜಾನಪದೀಯವಾಗಿ ಪರಿಗಣಿತವಾದುದೆಲ್ಲವೂ ಜಾನಪದ ಎಂದು ನಮ್ಮ ವಿಶ್ವ ಪರಂಪರೆಯ ಜಾನಪದ ವಿದ್ವಾಂಸರು ಅನುಮೋದನೆ ನೀಡಿದ್ದಾರೆ. ಉತ್ತರ ಕರ್ನಾಟಕದಂಥ ಸಮೃದ್ಧ ಜಾನಪದ ಜೀವನವನ್ನು ಬದುಕುತ್ತಿರುವ ಜನ ತಮ್ಮ ಅಂತಃಸತ್ವದಲ್ಲಿ ಕೆಲವು ಶಿಷ್ಟ ಹಾಡುಗಳನ್ನು ಜಾನಪದೀಯಗೊಳಿಸಿಬಿಟ್ಟಿದ್ದಾರೆ. ದಾಸಸಾಹಿತ್ಯದ ಅನೇಕ ಹಾಡುಗಳು, ಶಿಶುನಾಳ ಷರೀಫರಂಥ ಜನಸಾಮಾನ್ಯರ ನಡುವಿನ ತತ್ವಚಿಂತಕರ ಹಾಡುಗಳು ಜನರ ಬಾಯಲ್ಲಿ ಜಾನಪದೀಯವಾಗಿವೆ. ವಚನ ಚಳವಳಿಯ ಮುಖ್ಯ ಧಾರೆಯ ಹಿಂದಿನಿಂದ ಬಂದ ಶರಣ ಕವಿಗಳ ಹಾಡುಗಳು ಭಜನೆಯ ಪದಗಳಾಗಿ ಹಾಡಲ್ಪಡುತ್ತಿವೆ. ಜನಪದ ಸಾಹಿತ್ಯದ ಒಂದು ಪ್ರಕಾರವನ್ನು ಮತ್ತೊಂದು ಉದ್ದೇಶಕ್ಕೆ ಬಳಸಿಕೊಳ್ಳುವ ಪರಿಪಾಠ ಎಲ್ಲ ಜನಪದಗಳಲ್ಲೂ ಇದೆ. ಪ್ರಕಾರದೊಳಗಿನ ಉಪಪ್ರಕಾರಗಳಲ್ಲಿ ಕಾರ್ಯಾಂತರವಾಗುವ ರೂಢಿಯೂ ಇದೆ, ಇದನ್ನು ಅಡ್ಡ ಪ್ರಕಾರ ಸ್ವಭಾವ ಎಂದು ಕರೆಯಬಹುದು. ವ್ಯಕ್ತಿಯೊಬ್ಬ ಮರಣ ಹೊಂದಿದಾಗ ಆ ದಿನ ರಾತ್ರಿ ಇಡೀ ದಾಸರ ಪದಗಳನ್ನು ಕರುಣಾಕೃತಿಯಾಗಿ

ಬಳಸಲಾಗುತ್ತದೆ. ಜನಪದದಲ್ಲಿ ಈ ಸಂದರ್ಭಕ್ಕೊಂದು ಮರಣಗೀತೆಗಳಿದ್ದಾಗ್ಯೂ, ಹಾಡುಗಾರರು ದಾಸರ ಪದಗಳನ್ನು ಬಳಸುತ್ತಿರುವುದು ಸಾಂದರ್ಭಿಕ ಔಚಿತ್ಯವೇ ಆಗಿದೆ. ಇತ್ತೀಚಿನ ದಿನಗಳಲ್ಲಿ ಪ್ರತಿ ಜಾನಪದ ಪ್ರಕಾರ ವಿಸ್ತೃತಗೊಂಡು ಆಧುನಿಕ ಅವಶ್ಯಕತೆಗಳಿಗಾಗಿ ಬಳಕೆಯಾಗುತ್ತಿದೆ. ಈ ಚಟುವಟಿಕೆಯನ್ನು ಪಾಶ್ಚಾತ್ಯ ಜಾನಪದ ವಿದ್ವಾಂಸರು 'ಸಾರ್ವಜನಿಕ ಜಾನಪದ' ಎಂದು ಕರೆದಿದ್ದಾರೆ. ಈಗ ಬರುತ್ತಿರುವ ಟಿ.ವಿ, ಧಾರಾವಾಹಿಗಳನ್ನು ಗಮನಿಸಿದರೆ ಮುಂದೊಂದು ದಿನ 'ಸಾರ್ವಜನಿಕ ಸಾಹಿತ್ಯ' ಎಂಬ ನಡುಮಧ್ಯದ ಸಾಹಿತ್ಯವೂ ಹುಟ್ಟಿಕೊಳ್ಳಬಹುದು. ಇಂತಹ ಸನ್ನಿವೇಶದಲ್ಲಿ ಜನಪದ ಸಾಹಿತ್ಯ ತಾಳುವ ಭಿನ್ನ ಉಪಪ್ರಕಾರಗಳ ಚಲನೆಯನ್ನು ಜಾನಪದ ವಿದ್ವಾಂಸರು ತೆರೆದ ಮನಸ್ಸಿನಿಂದ ನೋಡಬೇಕಾಗಿದೆ.

ಈ ಯೋಜನೆಯನ್ನು 'ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಪ್ರಕಟಣಾ ಯೋಜನೆ' ಎಂದು ಕರೆಯಲಾಗಿದೆ. ಇದರೊಳಗೆ ಬಯಲಾಟ ಮತ್ತು ಯಕ್ಷಗಾನ ಪ್ರಸಂಗಗಳನ್ನು ವಿಶೇಷ ಗಮನಕ್ಕೆ ಅರ್ಹವೆಂದು ಪರಿಗಣಿಸಲಾಗಿದೆ. ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯದ ಮಧ್ಯೆ ಜನಪರವಾಗಿ ಬೆಳೆದುನಿಂತಿರುವ ಈ ಸಾಹಿತ್ಯ ಒಂದು ವಿಶೇಷ ಸಾಹಿತ್ಯ ಪ್ರಕಾರವಾಗಿದೆ. ಶಿಷ್ಟ ಸಾಹಿತ್ಯ ಮೀಮಾಂಸೆ ಜನಪದ ಸಾಹಿತ್ಯವನ್ನು ಅವಗಣಿಸಿರುವಂತೆ ವಿವಿಧ ಬಯಲಾಟ ಪ್ರಕಾರಗಳ ಪ್ರಸಂಗ ಸಾಹಿತ್ಯವನ್ನು ತನ್ನಿಂದ ದೂರವಿರಿಸಿದೆ. ಶಿಷ್ಟ ಸಾಹಿತ್ಯವನ್ನು ಮೀರಿ ಬೆಳೆದ ಯಾವ ಸಾಹಿತ್ಯ ಪ್ರಕಾರವಿದ್ದರೂ ಅದನ್ನು ಗಮನಿಸುವುದು ಬೆಳೆಯುವ ಪ್ರತಿಭಾ ಚಟುವಟಿಕೆಯ ಪುರಸ್ಕಾರವಾಗುತ್ತದೆ. ಜನಪದ ಸಾಹಿತ್ಯ ಸಂಪುಟ ಸಮಿತಿ ತುಂಬ ಜವಾಬ್ದಾರಿಯಿಂದಲೆ ಈ ಬೆಳೆದ ಸಾಹಿತ್ಯ ಪ್ರಕಾರವನ್ನು ಗುರುತಿಸಿ ಗೌರವಿಸಿದೆ.

ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಯ ಈ ಯೋಜನೆಯಲ್ಲಿ ಮೊದಲಾಗಿ ಪ್ರಕಟಿತ ಸಾಹಿತ್ಯವನ್ನು ಆರಿಸಿ ವಿದ್ವಾಂಸರು ಹಾಗೂ ಕನ್ನಡ ಸಾಹಿತ್ಯಾಭಿರುಚಿಯುಳ್ಳ ಎಲ್ಲರಿಗೂ ಒಪ್ಪುವಂತೆ ಸಂಪುಟಗಳಲ್ಲಿ ಪ್ರಕಟಿಸಲಾಗುತ್ತದೆ. ಎರಡನೆಯ ಹಂತದಲ್ಲಿ ಕರ್ನಾಟಕ ನಾಡಿನಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ, ಪ್ರಕಟಿಸಲು ಸಾಧ್ಯವಾಗದೆ ಇಟ್ಟುಕೊಂಡಿರುವ ವ್ಯಕ್ತಿ ಹಾಗೂ ಸಂಸ್ಥೆಗಳ ಜನಪದ ಸಾಹಿತ್ಯವನ್ನು ಪ್ರಕಟಿಸಲು ಯೋಜಿಸಲಾಗಿದೆ. ಇಲ್ಲಿ ಕೂಡ ಈಗಾಗಲೆ ಬೇರೆ ಬೇರೆ ಕೃತಿಗಳಲ್ಲಿ ಕಾಣಿಸಿಕೊಂಡಿರುವ ಸಾಹಿತ್ಯ ಭಾಗವನ್ನು ಬಿಟ್ಟು ಹೊಸದೆನಿಸಿದುದನ್ನು ಕೈಗೆತ್ತಿಕೊಳ್ಳಲಾಗುವುದು. ಮೂರನೆಯ ಹಂತದಲ್ಲಿ ನಾಡಿನಾದ್ಯಂತ ಕಡೆದು ಬಿದ್ದಿರುವ ಅಪೂರ್ವವೂ, ಅಮೂಲ್ಯವೂ ಆದ ಜನಪದ ಸಾಹಿತ್ಯವನ್ನು ಕ್ಷೇತ್ರ ಕಾರ್ಯ ಮಾಡಿಸಿ, ಸಂಗ್ರಹಿಸಿ ಪ್ರಕಟಿಸುವ ಬಹುದೊಡ್ಡ ಯೋಜನೆ ಇದೆ. ನಮ್ಮ ಸಾಹಿತ್ಯ - ಸಂಸ್ಕೃತಿ ಚಿಂತಕರು 'ಕರ್ನಾಟಕದ ಮುರಿದ ಭಾಗವನ್ನು ಸರಿಪಡಿಸಿ ಕಟ್ಟಿರಿ, (ಅರ್ಚಕ ಬಿ. ರಂಗಸ್ವಾಮಿ: ಹುಟ್ಟಿದ ಹಳ್ಳಿ; ಹಳ್ಳಿಯ ಹಾಡು ೧೯೩೩) ಎಂಬ ಕಳಕಳಿಯ ಆದೇಶವನ್ನು ಕೊಟ್ಟಿದ್ದಾರೆ, ಅದನ್ನು ಪಾಲಿಸುವುದು ನಮ್ಮ ಕರ್ತವ್ಯ ಹಾಗೂ ಧರ್ಮವಾಗಿದೆ.

ಕರ್ನಾಟಕ ಸರ್ಕಾರವು ದಿನಾಂಕ ೧೦-೦೨-೨೦೦೪ರಂದು ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಯೋಜನೆಯ ನಿರ್ವಹಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇಲ್ಲಿ ನಾಡಿನ ಹಿರಿಯ ಹಾಗೂ ಶ್ರೇಷ್ಠ ಜಾನಪದ ತಜ್ಞರಿದ್ದಾರೆ. ಅವರ ಪ್ರತಿಭೆ ಮತ್ತು ಪರಿಶ್ರಮ ಇಲ್ಲಿ ಕೆಲಸ ಮಾಡಿದೆ. ಬಹಳ ಕಾಲದ ಕನಸೊಂದು ನನಸಾಗುತ್ತಿರುವ ಬಗ್ಗೆ ಅವರು ಸಂತಸಗೊಂಡಿದ್ದಾರೆ. ಇದೊಂದು ನಾಡಿಗೆ ಸಲ್ಲಿಸುವ ಸೇವೆಯ ಕೆಲಸವೆಂಬಂತೆ ದುಡಿಯುತ್ತಿದ್ದಾರೆ. ಅವರು ಕರ್ನಾಟಕ ಸರ್ಕಾರ ಹಾಗೂ ಕನ್ನಡಿಗರ ಗೌರವಕ್ಕೆ ಪಾತ್ರರಾಗಿದ್ದಾರೆ. ಕರ್ನಾಟಕದ ನಾನಾ ಕಡೆ ಬಹಳಕಾಲದಿಂದ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿ ನುರಿತಿರುವ ನೂರೈವತ್ತಕ್ಕೂ ಹೆಚ್ಚು ಜಾನಪದ ವಿದ್ವಾಂಸರು ಸಂಪುಟಗಳ ಸಂಪಾದಕರಾಗಲು ಒಪ್ಪಿಕೊಂಡಿದ್ದಾರೆ. ನಾಡ ಮೇಲಿನ ಅವರ ಪ್ರೀತಿ ಅಪಾರವಾದುದು. ಅವರನ್ನು ಕರ್ನಾಟಕ ಸಾಹಿತ್ಯ ಸಂಸ್ಕೃತಿ ಪ್ರೇಮಿಗಳು ಸ್ಮರಿಸುತ್ತಾರೆ. ಸಂಪುಟ ಸಮಿತಿ ಅವರನ್ನು ತುಂಬುಮನಸ್ಸಿನಿಂದ ವಂದಿಸುತ್ತದೆ.

ಈ ಸಂಪುಟಗಳು ಹೊರಬರುವಲ್ಲಿ ಕರ್ನಾಟಕ ಸರ್ಕಾರದ ಪ್ರಯತ್ನ ಶ್ಲಾಘನೀಯ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳು ಹಾಗೂ ನಿರ್ದೇಶಕರುಗಳು ಈ ನಿಟ್ಟಿನಲ್ಲಿ ಮುಕ್ತ ಸಹಕಾರವನ್ನು ನೀಡಿದ್ದಾರೆ. ಈ ಇಲಾಖೆಯ ಜಂಟಿ ನಿರ್ದೇಶಕರು ಸಾಹಿತಿಗಳೂ ಆದ ಶ್ರೀ ಕಾ.ತ. ಚಿಕ್ಕಣ್ಣನವರು ಪ್ರತಿಯೊಂದು ಹಂತದಲ್ಲೂ ಸಂಪುಟ ಸಮಿತಿಯ ಜೊತೆಗಿದ್ದು ಅವರ ಅಪಾರ ಶ್ರಮ ಮತ್ತು ಸಹಕಾರವನ್ನು ಧಾರೆ ಎರೆದಿದ್ದಾರೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಪ್ರಕಟಣೆಯ ಹಿಂದಿನ ಕೆಲಸಕಾರ್ಯಗಳನ್ನು ನಿರ್ವಹಿಸಿ ತುಂಬು ಬೆಂಬಲ ನೀಡಿದೆ. ಸುವರ್ಣ ಕರ್ನಾಟಕ ವರ್ಷದ ಈ ಸಂದರ್ಭದಲ್ಲಿ ಸುವರ್ಣ ಕರ್ನಾಟಕ ಮಾಲಿಕೆಯಲ್ಲಿ ಈ ಸಂಪುಟಗಳನ್ನು ಪ್ರಕಟಿಸುವ ಯೋಜನೆಯ ಮೂಲಕ ಈಗಿನ ಕರ್ನಾಟಕ ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರು ಮತ್ತು ಇಲಾಖೆಯ ಅನೇಕ ಸಿಬ್ಬಂದಿ ವರ್ಗದವರು ತಮ್ಮ ಸೇವೆಯನ್ನು ನೀಡಿ ಈ ಸಂಪುಟಗಳ ಸಿರಿಯನ್ನು ಹೆಚ್ಚಿಸಿದ್ದಾರೆ. ಈ ಸಮಸ್ತರಿಗೂ ನನ್ನ ಗೌರವಪೂರ್ವಕ ವಂದನೆಗಳು ಸಲ್ಲುತ್ತವೆ.

ಪ್ರೊ. ಹಿ. ಶಿ. ರಾಮಚಂದ್ರೇಗೌಡ
ಅಧ್ಯಕ್ಷರು
ಸಮಗ್ರ ಕನ್ನಡ ಜನಪದ ಮತ್ತು

ಪ್ರಸ್ತಾವನೆ

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಯೋಜನೆಯಂತೆ ಸಿದ್ಧಪಡಿಸಲಾಗುತ್ತಿರುವ ಯಕ್ಷಗಾನ ಪ್ರಸಂಗಸಂಪುಟಗಳಲ್ಲಿ ಇದೊಂದಾಗಿದ್ದು ಇದರಲ್ಲಿ ಒಂಬತ್ತು ಯಕ್ಷಗಾನ ಪ್ರಸಂಗಗಳನ್ನು ಸಂಕಲಿಸಲಾಗಿದೆ. ಈ ಒಂಬತ್ತು ಪ್ರಸಂಗಗಳು ವಿವಿಧ ಯಕ್ಷಗಾನ ಕವಿಗಳು ಬರೆದ ಕೃತಿಗಳಾಗಿದ್ದು ಎಲ್ಲವೂ ಈ ಮೊದಲು ಮುದ್ರಿತವಾಗಿ ಪ್ರಕಟಗೊಂಡಿವೆ. ಇಲ್ಲಿ ಸಂಕಲನಗೊಂಡ ಪ್ರಸಂಗಗಳು ಮತ್ತು ಪ್ರಸಂಗಕರ್ತರ ವಿವರ ಹೀಗಿದೆ :

೧. ಅಂಬರೀಷ ಚರಿತ್ರೆ	–	ಬಡಕಬ್ಬೈಲು ಪರಮೇಶ್ವರಯ್ಯ
೨. ಧ್ರುವಚರಿತ್ರೆ	–	ಹಟ್ಟಿಯಂಗಡಿ ರಾಮಭಟ್ಟ
೩. ವೃತ್ರಾಸುರನ ಕಾಳಗ	–	ಅದ್ಯಪಾಡಿ ರಾಮಕೃಷ್ಣಯ್ಯ
೪. ಸಮುದ್ರಮಥನ	–	ಮಟ್ಟಿ ವಾಸುದೇವ ಪ್ರಭು
೫. ರೇವತೀ ಕಲ್ಯಾಣ	–	ವಾಮಂಜೂರು ಪರಮೇಶ್ವರಯ್ಯ
೬. ಭಸ್ಮಾಸುರ ಮೋಹಿನಿ	–	ಕನ್ಯಾನ ವೆಂಕಟರಮಣ ಭಟ್ಟ
೭. ಇಂದ್ರವಿಜಯ	–	ಚೋರಾಡಿ ವೆಂಕಟರಮಣ ಭಟ್ಟ
೮. ಸತ್ಯಹರಿಶ್ಚಂದ್ರ	–	ನಾ. ನಾ. ಜೋಶಿ
೯. ಮದಾಲಸೆ ಕಲ್ಯಾಣ	–	ಮೈರ್ಪಾಡಿ ವೆಂಕಟರಮಣಯ್ಯ

ಇಲ್ಲಿ ಸಂಕಲಿತವಾದ ಎಲ್ಲ ಪ್ರಸಂಗಗಳು ಭಾಗವತ ಪುರಾಣಕ್ಕೆ ಸಂಬಂಧಿಸಿದ್ದು ಆ ಪುರಾಣದ ವಿವಿಧ ಸ್ಕಂಧಗಳಲ್ಲಿ ಈ ಪ್ರಸಂಗಗಳ ಮೂಲಕಥೆಗಳಿವೆ. ಈ ಕಥೆಗಳು ಕಂಡುಬರುವ ಸ್ಕಂಧಗಳ ವಿವರ ಹೀಗಿದೆ :

೧. ಅಂಬರೀಷ ಚರಿತ್ರೆ	–	ನವಮಸ್ಕಂಧ
೨. ಧ್ರುವಚರಿತ್ರೆ	–	ಚತುರ್ಥಸ್ಕಂಧ
೩. ವೃತ್ರಾಸುರನ ಕಾಳಗ	–	ಷಷ್ಠಸ್ಕಂಧ
೪. ಸಮುದ್ರಮಥನ	–	ಅಷ್ಟಮಸ್ಕಂಧ
೫. ರೇವತೀ ಕಲ್ಯಾಣ	–	ದಶಮಸ್ಕಂಧ

೬. ಭಸ್ಮಾಸುರ ಮೋಹಿನಿ – ದಶಮಸ್ಕಂಧ
೭. ಇಂದ್ರವಿಜಯ – ಷಷ್ಠಸ್ಕಂಧ
೮. ಸತ್ಯಹರಿಶ್ಚಂದ್ರ – ನವಮಸ್ಕಂಧ
೯. ಮದಾಲಸೆ ಕಲ್ಯಾಣ – ನವಮಸ್ಕಂಧ

ಈ ಪ್ರಸ್ತಾವನೆಯಲ್ಲಿ ಈ ಒಂಬತ್ತು ಪ್ರಸಂಗಗಳ ಕವಿಪರಿಚಯ, ಕಥಾವಿಚಾರ ಮತ್ತು ಪ್ರಸಂಗವೈಶಿಷ್ಟ್ಯಗಳ ವಿವರಗಳನ್ನು ಕ್ರಮವಾಗಿ ಕೊಡಲಾಗಿದೆ. ಯಕ್ಷಗಾನ ಕವಿಗಳಲ್ಲಿ ಹಲವರು ತಮ್ಮ ಹೆಸರುಗಳನ್ನು ಪ್ರಸಂಗಗಳಲ್ಲಿ ಹೇಳಿಕೊಂಡಿಲ್ಲ. (ಪಾರ್ತಿಸುಬ್ಬನಂತಹ ಪ್ರಸಿದ್ಧ ಕವಿಯ ಬಗೆಗೇ ಸಂಶೋಧಕ ವಿದ್ವಾಂಸರೊಳಗೆ ವಿವಾದಗಳು ನಡೆದುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು.) ಹೆಚ್ಚಿನ ಕವಿಗಳು ತಮ್ಮ ತಮ್ಮ ಆರಾಧ್ಯದೈವದ ಸ್ತೋತ್ರವನ್ನು ಪ್ರಸಂಗದ ಆದಿಯಲ್ಲಿ ಅಥವಾ ಅಂತ್ಯದಲ್ಲಿ ಅಥವಾ ಎರಡೂ ಕಡೆಗಳಲ್ಲಿ ಮಾಡಿದ್ದುಂಟು . ಈ ಸ್ತುತಿಗಳು ಕವಿಯು ಯಾವ ಪ್ರದೇಶಕ್ಕೆ ಸೇರಿದವನೆಂದು ನಿರ್ಣಯಿಸುವಲ್ಲಿ ಸಹಕಾರಿಗಳಾಗುತ್ತವೆ. ಹಲವರು ಕವಿಗಳ ಹೆಸರುಗಳು ಪರಂಪರೆಯಿಂದ ತಿಳಿದುಬರುತ್ತವೆ. ಕವಿಗಳೇ ತಿಳಿದುಬಾರದ ಯಕ್ಷಗಾನ ಪ್ರಸಂಗಗಳು ಸಾಕಷ್ಟಿವೆ. (ಯಕ್ಷಗಾನ ಕವಿಗಳ ದೇಶಕಾಲಗಳ ಬಗೆಗೆ ನಡೆದ ಸಂಶೋಧನೆ ಕಡಮೆಯಿಂದೇ ಹೇಳಬಹುದು. ಪಾರ್ತಿಸುಬ್ಬನ ಕಾಲವಿಚಾರದ ಬಗೆಗೆ ಮಾತ್ರ ಸಾಕಷ್ಟು ಚರ್ಚೆಗಳು ನಡೆದಿವೆ.)

ಈ ಸಂಪುಟದಲ್ಲಿ ಸೇರಿರುವ ಪ್ರಸಂಗಕರ್ತೃಗಳ ಬಗೆಗೆ ಅಷ್ಟಿಷ್ಟು ಮಾಹಿತಿಗಳು ಲಭ್ಯವಿವೆ. ಹೊಸ ಕಾಲದ ಕವಿಗಳೂ ಇಲ್ಲಿದ್ದಾರೆ. ಆ ಮಾಹಿತಿಗಳನ್ನೆಲ್ಲ ಒಟ್ಟು ಸೇರಿಸಿ ಇಲ್ಲಿ ಕವಿಪರಿಚಯದ ರೂಪದಲ್ಲಿ ನೀಡಲಾಗಿದೆ. ಕವಿಗಳ ಬಗೆಗೆ ಹೆಚ್ಚಿನ ವಿವರಗಳು ಬೇಕಿದ್ದಲ್ಲಿ ಯಕ್ಷಗಾನಕ್ಕೆ ಸಂಬಂಧಿಸಿದ ಸಂಶೋಧನಾತ್ಮಕ ಗ್ರಂಥಗಳಲ್ಲಿ ಮತ್ತು ಆ ಬಗೆಗಿನ ಪ್ರೌಢಪ್ರಬಂಧಗಳಲ್ಲಿ ಕಂಡುಕೊಳ್ಳಬಹುದು. ಪ್ರತಿ ಪ್ರಸಂಗದ ಕವಿವಿಚಾರ, ಕಥಾವಿಷಯ ಮತ್ತು ಪ್ರಸಂಗವಿಮರ್ಶೆಯನ್ನು ಮುಂದೆ ಕ್ರಮವಾಗಿ ಕೊಡಲಾಗಿದೆ. ಕವಿಗಳ ಬಗೆಗೆ ಉಪಲಬ್ಧವಾದ ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

೧. ಅಂಬರೀಷ ಚರಿತ್ರೆ :

ಕವಿ : ಬಡಕಬೈಲು ಪರಮೇಶ್ವರಯ್ಯ (೧೮೮೧–೧೯೪೯)

ಅಂಬರೀಷ ಚರಿತ್ರೆಯನ್ನು ಬರೆದ ಕವಿ ಬಡಕಬೈಲು ಪರಮೇಶ್ವರಯ್ಯನವರು. ಕೋಟ ಬ್ರಾಹ್ಮಣ ಪಂಗಡಕ್ಕೆ ಸೇರಿದ ಬಡಕಬೈಲು ಪರಮೇಶ್ವರಯ್ಯನವರ ಮನೆಮಾತು ಕನ್ನಡವಾಗಿದ್ದರೂ ತುಳುವಿನಲ್ಲಿ ಕೃತಿರಚನೆ ಮಾಡಿ ಪ್ರಸಿದ್ಧರಾದವರು. ಪೊಳಲಿಯ

ಸಮೀಪದ ಬಡಕಬೈಲು ಎಂಬಲ್ಲಿಗೆ ಕುಂದಾಪುರದ ಕಡೆಯಿಂದ ಶ್ಯಾನುಭೋಗಿಕೆಗಾಗಿ ಬಂದು ನೆಲೆನಿಂತು ಶ್ರೀಮಂತವಾದ ಕುಟುಂಬದ ಸಂಕಪ್ಪಯ್ಯ ಕಾಶಮ್ಮ ದಂಪತಿಯ ಎರಡನೆಯ ಮಗನಾಗಿ ಪರಮೇಶ್ವರಯ್ಯನವರು ೨–೧೨–೧೮೮೧ರಂದು ಜನಿಸಿದರು. ಸ್ವಲ್ಪ ಸಮಯ ಮನೆಯಲ್ಲೇ ವಿದ್ಯಾಭ್ಯಾಸ ಮಾಡಿ ಕರಂಬಾರು ಸುಬ್ಬಣ್ಣಯ್ಯನವರ ಶಾಲೆಯಲ್ಲಿ ೧೮೯೫ರಲ್ಲಿ ನಾಲ್ಕನೇ ತರಗತಿ ಉತ್ತೀರ್ಣರಾಗಿ ಅಲ್ಲಿಯೇ ಐಗಳಾಗಿಯೂ ಕೆಲಸ ಮಾಡಿದರು.

ಪಾವಂಜೆ ಹರಿದಾಸ ಲಕ್ಷ್ಮೀನಾರ್ಣಪ್ಪಯ್ಯರ ಹರಿಕತೆ ಕೇಳಿ ಪರಮೇಶ್ವರಯ್ಯನವರು ಸಂಗೀತ ಸಾಹಿತ್ಯಗಳೆಡೆಗೆ ಮನಸ್ಸು ಕೊಟ್ಟರು. ಕಲ್ಯಾಣಿ ಭೀಮರಾಯರಿಂದ ಪದ್ಯರಚನೆಯ ವಿಧಾನಗಳನ್ನು ಕಲಿಯುವಾಗಲೇ ಯಕ್ಷಗಾನದ ಭಾಗವತಿಕೆ, ಹಿಮ್ಮೇಳ, ಕುಣಿತ, ಅರ್ಥಗಾರಿಕೆ–ಗಳನ್ನೂ ಅಭ್ಯಾಸ ಮಾಡಿದರು. ಮುದ್ದಣನ ಕುಮಾರವಿಜಯವನ್ನು ನೋಡಿ 'ಗರುಡವಿಜಯ' ಎಂಬ ಹರಿಕತೆಯನ್ನೂ 'ಗರುಡೋದ್ಭವ'ವೆಂಬ ಪ್ರಸಂಗವನ್ನೂ ಬರೆದರು. ಇದರೊಂದಿಗೆ ಬಂಟ್ವಾಳ ಸೋಮಣ್ಣ ಸೇರಿಗಾರ ಎಂಬವರಿಂದ ಪಿಟೀಲು ಅಭ್ಯಾಸ ಮಾಡಿದರು. ಶಾಲೆಗಳಿಗಾಗಿ ನಾಟಕ, ಹಾಡುಗಳನ್ನು ಬರೆದರು. ೧೯೦೬ರಲ್ಲಿ ಪಂಜೆ ಮಂಗೇಶರಾಯರು ಇವರ ಮನೆಗೆ ಬಂದು ಇವರ ಸಾಹಿತ್ಯ ವ್ಯವಸಾಯವನ್ನು ಪರಿಶೀಲಿಸಿದ್ದಲ್ಲದೆ ಶಬ್ದಮಣಿದರ್ಪಣದ ಒಂದು ಪ್ರತಿಯನ್ನು ಕೊಟ್ಟರಂತೆ. ೧೯೧೫ರಲ್ಲಿ ಪರಮೇಶ್ವರಯ್ಯನವರಿಗೆ ಅಸೌಖ್ಯವಾಗಿ ಹಲವು ತಿಂಗಳುಗಳ ಕಾಲ ಕಷ್ಟಪಟ್ಟರು. ಆ ಕಾಲದಲ್ಲಿ ಅವರ ಹಲವು ರಚನೆಗಳು ಗೆದ್ದಲುಗಳ ಪಾಲಾದುವಂತೆ. ೧೯೧೬ರಲ್ಲಿ ಜ್ವರದಿಂದೆದ್ದ ಪರಮೇಶ್ವರಯ್ಯನವರು ಶ್ರೀ ಶಂಕರಾಚಾರ್ಯರ 'ಭಜಗೋವಿಂದಂ' ಕೃತಿಯನ್ನು ಕನ್ನಡದಲ್ಲಿ ಅನುವಾದಿಸಿ ಬರೆದು ಪಂಜೆಯವರಿಗೆ ತೋರಿಸಿದಾಗ ಅವರು ಮೆಚ್ಚಿ ಅಚ್ಚುಹಾಕಲು ತಿಳಿಸಿದರು ಮತ್ತು ತುಳುವಿಗೂ ಅನುವಾದಿಸುವಂತೆ ಸೂಚಿಸಿದರು. ಹಾಗೆಯೇ ಪರಮೇಶ್ವರಯ್ಯನವರು ೧೯೨೦ರಲ್ಲಿ ತುಳು ಅನುವಾದವನ್ನೂ ಪ್ರಕಟಿಸಿದರು. ೧೯೨೮ರಲ್ಲಿ 'ಕೃಷ್ಣಸಂಧಾನ' ಎಂಬ ಪ್ರಸಿದ್ಧ ಕೃತಿಯನ್ನು ತುಳುವಿಗೆ 'ಕಿಟ್ಣರಾಜೆ ಪರ್ಸಂಗೊ' ಎಂಬ ಹೆಸರಿನಲ್ಲಿ ಅನುವಾದಿಸಿದರು. ತುಳು ಚಳುವಳಿಯ ನೇತಾರರಾದ ದಿ. ಎಸ್. ಯು. ಪಣಿಯಾಡಿಯವರು ಅದನ್ನು ಮುದ್ರಿಸಿ ಪ್ರಕಟಿಸಿದರು. ತುಳು ಚಳವಳಿಯ ಪ್ರಮುಖ ಪ್ರಕಟಣೆಗಳಲ್ಲಿ ಇದು ಒಂದೆಂದು ಪರಿಗಣಿಸಲ್ಪಟ್ಟಿತು.

ಭಾಗವತಕ್ಕೆ ಸಂಬಂಧಿಸಿದಂತೆ ಬಡಕಬೈಲು ಪರಮೇಶ್ವರಯ್ಯನವರು ಪ್ರಾಯಶಃ "ಅಂಬರೀಷ ಚರಿತ್ರೆ" ಎಂಬ ಒಂದೇ ಪ್ರಸಂಗವನ್ನು ಬರೆದಂತೆ ತಿಳಿದುಬರುತ್ತದೆ.

ಈ ಪ್ರಸಂಗವು ಸುಮಾರು ೧೯೨೦ರೊಳಗಾಗಿ ರಚಿತವಾಗಿದ್ದಿರಬಹುದೆಂದು ಊಹಿಸಬಹುದೆಂದು ಊಹಿಸಬಹುದು. ೧೯೨೮ರಲ್ಲಿ ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯದಿಂದ ಪ್ರಕಾಶಿತವಾಗಿದೆ. ಅದರಲ್ಲಿ ಕವಿಯ ಹೆಸರು ಉಲ್ಲೇಖಿಸಲ್ಪಟ್ಟಿಲ್ಲ.

ಪ್ರಸಂಗದೊಳಗೂ ಎಲ್ಲಿಯೂ ಕವಿಯ ಹೆಸರಿಲ್ಲ. ಆದರೆ ಪ್ರಸಂಗದಲ್ಲಿರುವ ಗುರು ನರಸಿಂಹಸ್ತುತಿಯು ಈ ಕೃತಿ ಬಡಕಬೈಲು ಪರಮೇಶ್ವರಯ್ಯನವರೆಂದು ನಂಬಲು ಒಂದು ಪ್ರಬಲ ಆಧಾರವಾಗಿದೆ. ಕೋಟ ಬ್ರಾಹ್ಮಣರ ಕುಲದೈವ ಗುರುನರಸಿಂಹ. ಅಂಬರೀಷ ಚರಿತ್ರೆಯಲ್ಲಿ ಮೂರು ಕಡೆಯಲ್ಲಿ ಗುರುನರಸಿಂಹಸ್ಮರಣೆಯಿದೆ.

ಪ್ರಸಂಗಾರಂಭದ ಕಂದ–

ಶ್ರೀ ಸರುವೇಶಂ ನತತತಿ
ಪೋಷಂ ದಿನಕರಶತಕೋಟಿಪ್ರಕಾಶಂ ।
ವಾಸವನುತಪದ ಶ್ರೀ ನರ
ಕೇಸರಿ ಮಚ್ಚಿತ್ತವಾಸವಾಗಿಯೆ ಪೊರೆಗಂ ॥

ಪ್ರಸಂಗದ ಮೊದಲ ಭಾಮಿನಿ–

ಈಶನಡಿಗಳಿಗೆರಗಿ ಗಿರಿಜೆ ಮ
ಹಾ ಸರಸ್ವತಿಲಕ್ಷ್ಮಿಯರ ಸಂ
ತೋಷದಿಂ ತಲೆವಾಗುತಜಮುಖ್ಯಾಮರರಿಂಗೆರಗಿ ।
ವ್ಯಾಸನಾರದಮುಖ್ಯ ಹರಿಪದ
ದಾಸಜನಕಭಿನಮಿಸಿ ಗುರು ಲ–
ಕ್ಷ್ಮೀಶ ನರಸಿಂಹನೊಳು ಬೇಡಿದು ಪೇಳ್ವೆನೀ ಕಥೆಯ ॥

ಪ್ರಸಂಗಾಂತ್ಯದ ಭಾಮಿನಿ –

ಇದು ಪರಮ ಮಂಗಳ ಮಹೋದಯ
ವಿದು ಸದಾಯುಃ ಕೀರ್ತಿವರ್ಧನ
ವಿದು ಮುಕುಂದಪದಾಬ್ಜಭಕ್ತಿಪ್ರದ ಶುಭಪ್ರದವು ।
ವಿದಿತ ಭಾಗವತಾನುಭಾವವ
ನಿದನು ಹೇಳುವ ಕೇಳುವತಿ ಸದ್
ಹೃದಯರನು ಪಾಲಿಸುವ ಗುರುನರಸಿಂಹನತಿದಯದಿ ॥

ಶ್ರೀ ಮಂದಾರ ಕೇಶವ ಭಟ್ಟರು ಬಡಕಬೈಲು ಪರಮೇಶ್ವರಯ್ಯನವರ ಬಗೆಗೆ ತುಳುವಿನಲ್ಲಿ ಒಂದು ಪುಸ್ತಕವನ್ನು ಬರೆದಿದ್ದಾರೆ. ಈ ಪುಸ್ತಕದಲ್ಲಿ ಪರಮೇಶ್ವರಯ್ಯನವರು ಅಂಬರೀಷ ಚರಿತ್ರೆಯನ್ನು ಬರೆದ ಉಲ್ಲೇಖವಿಲ್ಲ. ಈ ವಿಷಯವನ್ನು ಕೇಳಿ ಅವರಿಗೆ ಬರೆದಾಗ ತಮ್ಮ ಚಿಕ್ಕಂದಿನಲ್ಲಿ ಅಂಬರೀಷ ಚರಿತ್ರೆ ಆಟ ನೋಡಿದ್ದಾಗಿಯೂ ಪ್ರಸಂಗದ ವಿಷಯ ತಿಳಿಯದೆಂದೂ ಬರೆದಿದ್ದಾರೆ.

ಪರಮೇಶ್ವರಯ್ಯನವರು ೧೯೪೭ರಲ್ಲಿ ತೀರಿಕೊಂಡರೆಂದೂ ತೀರಿಕೊಳ್ಳುವ

ಸಮಯದಲ್ಲಿ ಅವರು ಸಾರ್ವಜನಿಕ ಕಾರ್ಯಗಳಿಗಾಗಿ ಆಸ್ತಿ ಮಾರಾಟ ಮಾಡಬೇಕಾಗಿ ಬಂದು ಬಡವರಾಗಿದ್ದರೆಂದೂ ತಿಳಿದುಬರುತ್ತದೆ. ವಾಮಂಜೂರಿನ ಬೊಂಡಂತಿಲದ ಗಂಗಮ್ಮ ಎಂಬವರನ್ನೂ ಅನಂತರ ಕಾರಿಂಜದ ಪಾರ್ವತಮ್ಮ ಎಂಬವರನ್ನೂ ಪರಮೇಶ್ವರಯ್ಯನವರು ಮದುವೆಯಾಗಿದ್ದರು. ಅವರಿಗೆ ಮಕ್ಕಳಿರಲಿಲ್ಲ. ಅವರ ಮರಣಾನಂತರವೂ ಜೀವಿಸಿದ್ದ ಅವರ ಪತ್ನಿ ಇತ್ತೀಚಿನವರೆಗೆ ಕಷ್ಟಜೀವನ ನಡೆಸುತ್ತಿದ್ದರೆಂದು ತಿಳಿದುಬರುತ್ತದೆ.

ಕನ್ನಡ ಮತ್ತು ತುಳು ಎರಡೂ ಭಾಷೆಗಳಲ್ಲಿ ಬಡಕಬ್ಬೈಲು ಪರಮೇಶ್ವರಯ್ಯನವರಿಗೆ ಒಳ್ಳೆಯ ಪ್ರಭುತ್ವವಿತ್ತು. ಸಂಸ್ಕೃತವನ್ನು ಮೂಲಕ್ಕೆ ಅತಿ ಸಮೀಪವಾಗಿ ಅವರು ಕನ್ನಡ–ತುಳು □ ಎರಡೂ ಭಾಷೆಗಳಿಗೆ ಅನುವಾದಿಸಿದ್ದನ್ನು ಅವರ 'ಭಜಗೋವಿಂದಂ' ಅನುವಾದದಲ್ಲಿ ನೋಡಬಹುದು. ಅವರ ಕನ್ನಡ ಅನುವಾದವನ್ನು ನೋಡಿದ ಪಂಜೆ ಮಂಗೇಶರಾಯರು ಆ ಅನುವಾದವನ್ನು ಮುದ್ರಿಸಲು ಮತ್ತು ತುಳುವಿಗೂ ಅನುವಾದಿಸಲೂ ಸೂಚಿಸಿದರೆಂದ ಮೇಲೆ ಪಂಜೆಯವರು ಅದನ್ನು ಮೆಚ್ಚಿಕೊಂಡಿದ್ದುದು ಸ್ಪಷ್ಟ. ಅವರ 'ಕಿಟ್ಣರಾಜಿ ಪರ್ಸಂಗೊ' ಎಂಬ ಕೃತಿಯಂತೂ ಕನ್ನಡ ಮೂಲವನ್ನು ಅದೇ ಧಾಟಿಯಲ್ಲಿ ತುಳುವಿಗೆ ಅನುವಾದಿಸುವ ಪ್ರಯತ್ನ. ಇದರಲ್ಲಿ ಅವರು ಯಶಸ್ವಿಯಾಗಿದ್ದಾರೆ. ಬಹುಶಃ ಅವರ ಕನ್ನಡ ಸ್ವತಂತ್ರ ಕೃತಿ ಮುದ್ರಿತವಾಗಿ ನಮಗೆ ದೊರಕುತ್ತಿರುವುದು 'ಅಂಬರೀಷ ಚರಿತ್ರೆ'ಯೊಂದೇ ಎಂದು ತೋರುತ್ತದೆ.

ಬಡಕಬ್ಬೈಲು ಪರಮೇಶ್ವರಯ್ಯನವರ "ಅಂಬರೀಷ ಚರಿತ್ರೆ"ಯು ೧೦೦ ಪದ್ಯಗಳುಳ್ಳ ಒಂದು ಚಿಕ್ಕ ಪ್ರಸಂಗ. ಸಂಸ್ಕೃತ ಭಾಗವತದಲ್ಲಿ ನವಮ ಸ್ಕಂಧದ ೪ ಮತ್ತು ೫ನೇ ಅಧ್ಯಾಯಗಳಲ್ಲೂ ಕನ್ನಡ ಭಾಗವತದ ನವಮಸ್ಕಂಧದ ೩, ೪ ಮತ್ತು ೫ನೇ ಸಂಧಿಗಳಲ್ಲೂ ಅಂಬರೀಷನ ಕಥೆಯು ವಿವೃತವಾಗಿದೆ. ಕನ್ನಡ ಭಾಗವತವನ್ನು ಪರಮೇಶ್ವರಯ್ಯನವರು ಓದಿದುದು ಮಾತ್ರವಲ್ಲ, ನೇರವಾಗಿ ಅನುಸರಿಸಿದ್ದಾರೆ. ಕನ್ನಡ ಭಾಗವತದಲ್ಲಿ ಒಟ್ಟು ೧೧೬ ಭಾಮಿನಿ ಷಟ್ಪದಿಗಳಲ್ಲಿ ಅಂಬರೀಷನ ಕಥೆಯಿದ್ದರೆ (ಮೂರನೆಯ ಸಂಧಿ – ೪೩ ಪದ್ಯಗಳು; ೪ನೆಯ ಸಂಧಿ – ೪೩ ಪದ್ಯಗಳು ಮತ್ತು ೫ನೆಯ ಸಂಧಿ – ೩೦ ಪದ್ಯಗಳು) ಅದನ್ನು ಸಾಕಷ್ಟು ಸಂಕ್ಷೇಪಿಸಿ ಪರಮೇಶ್ವರಯ್ಯನವರು ಪ್ರಸಂಗ ರಚಿಸಿದ್ದಾರೆ.

ಹರಿಭಕ್ತನ ಮಹಿಮೆಯನ್ನೂ ದ್ವಾದಶೀವ್ರತ (ಏಕಾದಶೀ ವ್ರತ – ದ್ವಾದಶಿ ಪಾರಣೆ) ಮಹಿಮೆಯನ್ನೂ ಒಟ್ಟಿಗೆ ನಿರೂಪಿಸುವ ಕಥೆ ಅಂಬರೀಷನದು. ಹರಿಭಕ್ತನಾದ ಅಂಬರೀಷನ ಮೇಲೆ ಸಿಟ್ಟುಗೊಂಡು ಶಪಿಸಿದ ದುರ್ವಾಸನನ್ನು ಚಕ್ರ ಬೆನ್ನಟ್ಟುವುದನ್ನು ಬಿಟ್ಟರೆ ಈ ಪ್ರಸಂಗದಲ್ಲಿ ಯಾವುದೇ ಯುದ್ಧ ಪ್ರಸಂಗವಿಲ್ಲ; ಹಾಸ್ಯ ಪ್ರಸಂಗವಿಲ್ಲ; ಕಲ್ಯಾಣ (ವಿವಾಹ)ವಿಲ್ಲ. ಭಕ್ತಿಯ ಮತ್ತು ಹರಿಭಕ್ತನ ಮಹಿಮೆ ಮಾತ್ರ ಕಥೆಯ ಲಕ್ಷ್ಯವಾಗಿದೆ. ಆದುದರಿಂದಲೇ ಈ ಕಥೆಯು ಯಕ್ಷಗಾನಕ್ಕೆ ಹೊಂದುವಂತಹದಲ್ಲವೆಂದು

ಕೆಲವರು ಭಾವಿಸಿದ್ದೂ ಇದೆ. ಪ್ರಸಂಗಕರ್ತರೂ ಅರ್ಥಧಾರಿಗಳೂ ಆದ ವಿದ್ವಾನ್ ಪಾಂಡೇಶ್ವರ ಕಾಡಪ್ಪನವರು ಈ ಬಗ್ಗೆ ಹೇಳಿದ ಮಾತುಗಳು ಹೀಗಿವೆ– "ಭಾಗವತದಲ್ಲಿ ನನಗೆ ಪ್ರಿಯವಾದ ಕುಚೇಲೋಪಾಖ್ಯಾನ ಅಂಬರೀಷ ಚರಿತ್ರೆಗಳು ರಂಗಸ್ಥಳದಲ್ಲಿ ಯಶಸ್ಸನ್ನು ಗಳಿಸಲಾರವು. ಅಲ್ಲದೆ ಮೇಳದಲ್ಲಿ ಅಗತ್ಯವಾಗಿ ಬೇಕಾದ ಬಣ್ಣ ಹಾಸ್ಯಗಳಿಲ್ಲದವು." ಆದರೆ 'ಅಂಬರೀಷ ಚರಿತ್ರೆ' 'ಕುಚೇಲೋಪಾಖ್ಯಾನ'ಗಳೆರಡೂ ಯಕ್ಷಗಾನರಂಗಕ್ಕೆ ಬಂದಿವೆ. 'ಅಂಬರೀಷ ಚರಿತ್ರೆ'ಯನ್ನು ಬಡಕಬೈಲು ಪರಮೇಶ್ವರಯ್ಯನವರು ಬರೆದುದು ಮಾತ್ರವಲ್ಲ – ಇದು ಒಂದು ಕಾಲದಲ್ಲಿ ಆಟವಾಗಿ ಪ್ರದರ್ಶಿವಾಗುತ್ತಿತ್ತೆಂಬುದನ್ನು ಮಂದಾರ ಕೇಶವ ಭಟ್ಟರು ತಿಳಿಸಿರುತ್ತಾರೆ. ತನ್ನ ಬಾಲ್ಯದಲ್ಲಿ ಈ ಪ್ರಸಂಗದ ಆಟವನ್ನು ನೋಡಿದ್ದಾಗಿಯೂ ಅವರು ತಿಳಿಸಿರುತ್ತಾರೆ. ('ಕುಚೇಲೋಪಾಖ್ಯಾನ'ವೆಂಬ ಪ್ರಸಂಗವು ಪ್ರತ್ಯೇಕವಾಗಿ ಈಗ ಸಿಕ್ಕದಿದ್ದರೂ ಒಂದು ಕಾಲದಲ್ಲಿ ಪ್ರಯೋಗರೂಪದಲ್ಲಿ ರಂಗಕ್ಕೆ ಬಂದಿದೆ.) ಆದುದರಿಂದ ಯುದ್ಧಸಂದರ್ಭವೇ ಇಲ್ಲದ ಕೆಲವು ಪ್ರಸಂಗಗಳಲ್ಲಿ 'ಅಂಬರೀಷ ಚರಿತ್ರೆ'ಯೂ ಒಂದೆಂದು ಹೇಳಬಹುದಾಗಿದೆ.

ಕಥಾವಿಚಾರ; ಪ್ರಸಂಗವಿಮರ್ಶೆ :

ಬಡಕಬೈಲು ಪರಮೇಶ್ವರಯ್ಯನವರು ಮೊದಮೊದಲು ರಚಿಸಿದ ಕೃತಿಗಳಲ್ಲಿ ಇದೊಂದೆನ್ನಬೇಕಾಗಿದೆ. ಏಕೆಂದರೆ ಇಲ್ಲಿಯ ಪದ್ಯಗಳಲ್ಲಿ ಹಲವು ಕನ್ನಡ ಭಾಗವತದ ಪರಿವರ್ತಿತ ರೂಪಗಳಾಗಿದ್ದರೆ ಹಲವು ಅಲ್ಲಿಂದ ನೇರವಾಗಿ ಎತ್ತಿಕೊಂಡಂತಹವುಗಳಾಗಿವೆ.

ಹಲವು ಯಕ್ಷಗಾನ ಪ್ರಸಂಗಗಳಲ್ಲಿ ಮೂಲಗ್ರಂಥಗಳಿಂದ (ಮುಖ್ಯವಾಗಿ ಕನ್ನಡದ ಷಟ್ಪದೀ ಗ್ರಂಥಗಳಿಂದ) ಭಾಮಿನಿಗಳನ್ನೆತ್ತಿಕೊಂಡು ಪ್ರಸಂಗಭಾಗದಂತೆಯೇ ಸೇರಿಸಿಕೊಳ್ಳುವುದು ಕಂಡುಬರುತ್ತದೆ. ಆದರೆ 'ಅಂಬರೀಷ ಚರಿತ್ರೆ'ಯಲ್ಲಿರುವ ಹೆಚ್ಚಿನ ಭಾಮಿನಿಗಳೂ ಕನ್ನಡ ಭಾಗವತದಿಂದ ಎತ್ತಿಕೊಂಡಂತಹವಾಗಿದೆ. ಕೆಲವು ಉದಾಹರಣೆಗಳನ್ನು ನೋಡಬಹುದು –

ಸಲಿಸಿ ಬಹೆನಾವಶ್ಯಕವನೆನು
ತಲಘು ಮಹಿಮನು ಹೋಗಿ ಯಮುನೆಯ
ಸಲಿಲದಲಿ ಮುಳುಗಿದನು ಭಜಿಸುತ್ತಾಘಮರ್ಷಣವ
ತಳುವಿದನಲಾ ಮುನಿಪನೊಂದೇ
ಘಳಿಗೆ ತಾನೀ ದ್ವಾದಶೀಯೆನು
ತಳಲಿದನು ನೃಪನಿತ್ತಲಾ ವ್ರತಭಂಗವಾಯ್ತೆಂದು ॥

–ಕನ್ನಡ ಭಾಗವತ ೯–೩–೩೩

ಬಳಿಕವರು ಬೀಳ್ಕೊಂಡು ಯಮುನಾ
ಸಲಿಲವನು ಗಮಿಸುತ್ತ ಜಲದಲಿ
ಮುಳುಗಿ ಜಪನೇಮಾವಳಿಯನನುಕರಿಸುತಿರಲು
ತಳುವಿದನಲಾ ಮುನಿಪನೊಂದೇ
ಘಳಿಗೆ ತಾನೀ ದ್ವಾದಶಿಯೆನು
ತ್ತಳಲಿದನು ನೃಪನಿತ್ತಲಾ ವ್ರತಭಂಗವಾಯ್ತೆನುತಾ ॥
– ಅಂಬರೀಷ ಚರಿತ್ರೆ

ಬರಲು ನೃಪನಾಸನವನಿತ್ತುಪ
ಚರಿಸುತಿರಲದನರಿದು ಮುನಿಪತಿ
ಕೆರಳಿದನು ಕಲ್ಪಾಂತರುದ್ರನವೋಲು ರೋಷದಲಿ
ಮುರಿದ ಹುಬ್ಬಿನ ಬಿಟ್ಟ ಕಂಗಳ
ತಿರುಗುವಾಲಿಯ ರೌದ್ರವದನದ
ತರಳ ದೇಹದ ತಾಪಸನು ನೋಡಿದನು ನೃಪವರನ ॥
–ಕನ್ನಡ ಭಾಗವತ ೯–೩–೩೬

ಕೇದಾರ ಗೌಳ, ಅಷ್ಟತಾಳ

ಮುನಿಗಳಿತ್ತಲು ಸ್ನಾನಾದಿಗಳನು ತೀರಿಸಿ
ಬರಲಾಗಿ ಮನ್ನಿಸುತಾ ।
ಜನಪ ನಿಂದಿರುತಿರೆ ತಿಳಿದು ದೂರ್ವಾಸನು
ಕನಲಿ ಹೂಂಕರಿಸುತಲೀ ॥
ಮುರಿದ ಹುಬ್ಬಿನ ಬಿಟ್ಟ ಕಂಗಳ ರೌದ್ರದಿ
ತಿರುಹುವಾಲಿಯ ಮೋರೆಯಾ ।
ಉರಿಗಳ ಕಲ್ಪದ ಹರನ ಕೋಪದಲಿ ಭೂ
ವರನನೀಕ್ಷಿಸುತಿರ್ದನೂ ॥
– ಅಂಬರೀಷ ಚರಿತ್ರೆ

ಈ ಕೆಳಗಿನ ಪದ್ಯಗಳು "ಅಂಬರೀಷ ಚರಿತ್ರೆ"ಯಲ್ಲಿ ಕನ್ನಡ ಭಾಗವತದಲ್ಲಿ ಇದ್ದಹಾಗೆಯೇ ತೆಗೆದುಕೊಳ್ಳಲ್ಪಟ್ಟಿವೆ.

ಎನುತ ಜಟೆಗಳ ಕೆದರಿನಿಂದಿ
ರ್ದನುಪಮನು ಹೂಂಕರಿಸುತಡಿಗಡಿ
ಗನಲನೊಳು ನಿಂದಂತೆ ರೋಷಕರಾಳವಹ್ನಿಯಲಿ ।
ಮನಮುಳುಗಿ ಕೈಯಿಕ್ಕಿ ಹೆಢತಲೆ
ಗನಿಶರಳುಕಲು ಕಿತ್ತು ಜಡೆಯನು
(ಘನಭಯಂಕರ ಕಿತ್ತು ಜಡೆಯನು – ಪ್ರಸಂಗ)
ಜನಪನನು ತಿನ್ನೆನುತ ಬೀಸಾಡಿದನು ಮೇದಿನಿಗೆ ॥
–ಕನ್ನಡ ಭಾಗವತ ೯–೩–೪೧

ಅರಸ ಕೇಳು ಮುಕುಂದದಾಸರು
ಪರಿಭವಕ್ಕೊಳಗಹರೆ ಬಂದುದು
ಪರಮಪುರುಷನ ಚಕ್ರವದು ಸಂಕಟದಲಾಕ್ಷಣಕೆ
ಉರಿವ ಕೃತ್ಯೆಯನಟ್ಟಿ ಸುಟ್ಟುದು
ಸುರರು ಭಾಪೆನೆ ಧಾರೆಗಳ ದ
ಳ್ಳುರಿಯ ದಾಳಿಯ ಚೂಣಿಯಲಿ ಚುಂಬಿಸಿದುದಂಬರವ ॥
– ಕನ್ನಡ ಭಾಗವತ ೯–೪–೧

ಹೇಡಿಮುನಿ ಹರಿ ಚಕ್ರದುಷ್ಣಕೆ
(ರೂಢಿಪತಿ ಕೇಳ್ ಚಕ್ರದುರುಬೆಗೆ– ಪ್ರಸಂಗ)
ಬಾಡಿಬಳುಕುತ ಸಾಗರಂಗಳು
ಮಾಡುವವು ಶಾಂತಿಯನು ಮುಳುಗಿದನಡೆನುತ ಮುನಿಮುಳುಗೆ
ಕೂಡೆ ಹೊಕ್ಕುದು ತಳಮಳಲು ಕಾ
ದೋಡಿನೊಳಗಿಟ್ಟಂದವಾಗಲು
ಬೇಡೆನುತ್ತಲ್ಲಿಂದ ಸುರಗಿರಿ ಗುಹೆಗಳನು ಪೊಕ್ಕು ॥
– ಕನ್ನಡ ಭಾಗವತ ೯–೪–೪

ನೀನೆ ಜಗದಾತ್ಮಕ ಜಗನ್ಮಯ
ನೀನೆ ಜಗದುತ್ಪತ್ತಿ ವಿಲಯ
ಸ್ಥಾನ ನೀನೇ ಗುಣತ್ರಯಾತ್ಮಕನಖಿಳ ಶಕ್ತಿಯುತ ।
ನೀನೊಲಿದು ರಕ್ಷಿಸುವುದೆನ್ನನು
ದೀನನನು ದೇವೇಶಯೆನೆ ಚತು
ರಾನನನು ಕೇಳುತ್ತ ನಗುತಿಂತೆಂದನವನೊಡನೆ ॥
– ಕನ್ನಡ ಭಾಗವತ ೯–೪–೯

ಪ್ರಸಂಗದಲ್ಲಿರುವ ಪದ್ಯದ ಉತ್ತರಾರ್ಧದಲ್ಲಿ ಪಾಠಾಂತರ ಹೀಗಿದೆ–

ನೀನೊಲಿದು ಪಾಲಿಸುವುದೆಂದಾ
ಮೌನಿ ಪಾದದೊಳೆರಗಲಾ ಚತು
ರಾನನನು ನಗುತಾ ಮುನಿಯ ತೆಗೆದಪ್ಪುತಿಂತೆಂದ ।
– ಅಂಬರೀಷ ಚರಿತ್ರೆ

ಅರಿಯದಪರಾಧವನು ಮಾಡಿದೆ
ನುರುವ ನಿನ್ನೇಕಾಂತ ಭಕ್ತಗೆ
ಧರೆಯ ಹುಲು ನೃಪನಿಂದಲೇನಹುದೆಂದಹಂಕರಿಸಿ
ಬರಿದೆ ಬಳಲಿದೆನೆನ್ನ ಮನದಾ
ಸರನು ಕಳೆಯೆಲೆ ತಂದೆ ಹೊಕ್ಕೆನು
ಮೊರೆಯ ನಿನ್ನಂಘ್ರಿಗಳ ಕಮಲವೆ ತನಗೆ ಗತಿಯೆಂದ ॥
– ಕನ್ನಡ ಭಾಗವತ ೯–೪–೨೫

ಎದ್ದನಾಲಿಸುತೊಯ್ಯನಾ ನಿಜ
ನಿದ್ರೆಯನು ಕೆಲಕೊತ್ತಿ ಕರುಣಾ
ಮುದ್ರಿತೇಕ್ಷಣನೊಸರುವೆಳನಗೆವೆಳಗು ಪಸರಿಸಲು
ಕದ್ರುಜನ ಮೇಲ್ವಾಸಿನಲಿ ಕು
ಳ್ಳಿರ್ದು ಮುನಿಯನು ಕುಳ್ಳಿರಿಸಿಕೊಂ
ಡದ್ವಯನು ಮಾತಾಡಿದನು ಮನ್ನಿಸುತ ಮುನಿಯೊಡನೆ ॥
– ಕನ್ನಡ ಭಾಗವತ ೯–೪–೩೦

ಹರಿಪುರವ ಹೊರವಂಟು ತಾಪಾ
ತುರನು ಮರಳಿದ ತಾಪಸರಿಗೀ
ನಿರಭಿಮಾನತೆ ವರ ತಪೋವರ್ಧನದಿದೆಂದೆನುತ
ಪರಮ ಭಾಗವತಾಗ್ರ್ಯನೆನಿಪಾ
ಧರಣಿಪಾಲನ ಹೊರೆಗೆ ಬಂದಾ
ವರ ಮುನಿಪ ಪಾದವನು ಪಿಡಿದನು ಕಾವುದೆಂದೆನುತ ॥
– ಕನ್ನಡ ಭಾಗವತ ೯–೫–೨

ಈ ಪದ್ಯದ ಪೂರ್ವಾರ್ಧಕ್ಕೆ ಪ್ರಸಂಗದಲ್ಲಿ ಹೀಗೊಂದು ಪಾಠಾಂತರವಿದೆ-

ಅರಸಕೇಳಿಂತಾ ಮಹಾಸ್ತ್ರಕೆ
ಕರವ ಮುಗಿದೈವುತ್ತ ನೃಪ ಪರಿ
ಹರಿಪನೋ ಮುನಿದಪನೊ ತನಗೆಂದಧಿಕ ಭೀತಿಯಲಿ ।

- ಈ ಪಾಠಾಂತರವು ಮೇಲಿನ ಪದ್ಯಭಾಗಕ್ಕಿಂತ ಹೆಚ್ಚು ಉಚಿತವಾಗಿದೆ.

ಒಮ್ಮೆ ಮುರಹರನಾಮವನು ದು
ಷ್ಕರ್ಮಿಗಳು ಕೇಳಿದರೆ ಧರೆಯಲಿ
ನಿರ್ಮಲರು ತಾವಾಹರೈ ನೀನಾ ಜಗನ್ಮಯನ
ನೆಮ್ಮಿ ಬದುಕುವ ದಾಸರಲಿ ದು
ಷ್ಕರ್ಮ ಹೊದ್ದುವುದುಂಟೆ ತನ್ನೀ
ಜನ್ಮವಿದು ಫಲವಾಯ್ತು ತತ್ಸಂಭಾಷಣದಲೆಂದ ॥

- ಕನ್ನಡ ಭಾಗವತ ೯-೫-೧೯

ತನ್ನ ಕುಲದೇವರ ಸ್ತುತಿಮಾಡಿದ ಕೊನೆಯ ಪದ್ಯವನ್ನೂ ಪ್ರಸಂಗಕರ್ತರು ಭಾಗವತದಿಂದಲೇ ತೆಗೆದುಕೊಂಡಿದ್ದಾರೆ-

ಇದು ಪರಮಮಂಗಳ ಮಹೋದಯ
ವಿದು ಸದಾಯುಃಕೀರ್ತಿವರ್ಧನ
ವಿದು ಮುಕುಂದ ಪದಾಬ್ಜ ಭಕ್ತಿಪ್ರದ ಶುಭಪ್ರದವು
ವಿದಿತ ಭಾಗವತಾನುಭಾವವ
ನಿದನು ಹೇಳುವ ಕೇಳುವತಿ ಸದ್
ಹೃದಯರನು ಪಾಲಿಸುವನಾ ನಿತ್ಯಾತ್ಮ ಮುರವೈರಿ ॥

- ಕನ್ನಡ ಭಾಗವತ ೯-೫-೩೦

- ಈ ಪದ್ಯದಲ್ಲಿರುವ ಭಾಗವತಕಾರನ "ನಿತ್ಯಾತ್ಮ" ಅಂಕಿತವನ್ನು ತೆಗೆದು "ಪಾಲಿಸುವ ಗುರುನರಸಿಂಹನತಿದಯದೀ" ಎಂದು ಮಾರ್ಪಡಿಸಿಕೊಳ್ಳಲಾಗಿದೆ.

ಈ ಚಿಕ್ಕ ಪ್ರಸಂಗವು ಬಡಕಬೈಲು ಪರಮೇಶ್ವರಯ್ಯನವರ ಮೊದಲ ರಚನೆಗಳ-ಲ್ಲೊಂದೆಂಬುದಕ್ಕೆ ಈ ಉದಾಹರಣೆಗಳು ಸಾಕು. ಕವಿಯ ಕಾವ್ಯಶಕ್ತಿ ಈ ಪ್ರಸಂಗದಲ್ಲಿ ಹೆಚ್ಚು ಪ್ರಕಟವಾಗಿಲ್ಲ. ಮೂಲದ ನೆರಳಡಿಯಲ್ಲಿಯೇ ಬರವಣಿಗೆ ಸಾಗಿದೆ. ವಿಶಿಷ್ಟವೆನ್ನುವ ಇತರ ಗುಣವಾವುದನ್ನೂ ಇಲ್ಲಿ ನಿರೀಕ್ಷಿಸುವಂತಿಲ್ಲ. ಸಂಕ್ಷಿಪ್ತತೆಯೇ ಇಲ್ಲಿ ಕಾಣುವ ಮುಖ್ಯ ಲಕ್ಷಣ. (ಗಾಂವಕಾರ ತಿಮ್ಮಣ್ಣ ನಾಯಕರ 'ಅಂಬರೀಷ ಚರಿತ್ರೆ' ಈ ವಸ್ತುವನ್ನುಳ್ಳ ಇನ್ನೊಂದು ಪ್ರಸಂಗವಾಗಿದೆ.)

೨. ಧ್ರುವಚರಿತ್ರೆ :

ಕವಿ : ಹಟ್ಟಿಯಂಗಡಿ ರಾಮ ಭಟ್ಟ (ಸು. ೧೮ನೇ ಶತಮಾನ)

ಯಕ್ಷಗಾನ ಕ್ಷೇತ್ರದಲ್ಲಿ ಇಂದಿಗೂ ಪ್ರಚಲಿತವಾಗಿರುವ ಪ್ರಸಂಗಗಳನ್ನು ಬರೆದು ಪ್ರಸಿದ್ಧನಾದ ಹಟ್ಟಿಯಂಗಡಿ ರಾಮಭಟ್ಟನು ಕುಂದಾಪುರ ತಾಲೂಕಿನ ಹಟ್ಟಿಯಂಗಡಿ ಎಂಬಲ್ಲಿ ವಾಸವಾಗಿದ್ದನೆಂದೂ ಅಲ್ಲಿಯ ಲೋಕನಾಥೇಶ್ವರ ದೇವರ ಅರ್ಚಕರ ಮನೆತನಕ್ಕೆ ಸೇರಿದವನೆಂದೂ ತಿಳಿದುಬರುತ್ತದೆ. ಈತನ "ಧ್ರುವಚರಿತ್ರೆ', "ಅತಿಕಾಯ ಕಾಳಗ'ಗಳು ಬಹಳ ಪ್ರಸಿದ್ಧವಾದ ಕೃತಿಗಳು. ಆಶುಕವಿಯಾದ ಈತನು ಯಕ್ಷಗಾನ ಪ್ರಸಂಗಗಳನ್ನಲ್ಲದೆ ಹಲವು ತುಂಡು ಪದಗಳನ್ನೂ ಹಾಡುಗಳನ್ನೂ ಬೇರೆ ಬೇರೆ ದೇವಾಲಯಗಳ ದೇವರುಗಳಿಗೆ ಸಂಬಂಧಿಸಿದ ಸ್ತುತಿಪದ್ಯಗಳನ್ನೂ ಬರೆದಿರುವನೆಂದು ತಿಳಿದುಬರುತ್ತದೆ. ಈತನ ತಂದೆ ಸೂರಭಟ್ಟ, ಸೂರಿ ದೀಕ್ಷಿತರೆಂಬವರು ಇವರ ಗುರುಗಳಾಗಿದ್ದರೆಂದೂ ಗಟ್ಟದ ಮೇಲಿನ ಹನ್ನರ ಮಾಗಣೆಯ ಬೈಸಗಲ್ಲ ಶಂಕರಯ್ಯನೆಂಬ ಸಾಧುವಿನ ಉಪದೇಶದಿಂದ ಈತನು ಕವಿತ್ವಶಕ್ತಿಯನ್ನು ಪಡೆದನೆಂದೂ ತಿಳಿದುಬರುತ್ತದೆ.

"ಸುಧಾಮ ಚರಿತೆ'ಯೆಂಬ ಯಕ್ಷಗಾನ ಪ್ರಸಂಗದ ಪ್ರಾರಂಭದ ದ್ವಿಪದಿಯಲ್ಲಿ "ಗುರುಸೂರಿದೀಕ್ಷಿತರ ಪಾದವ ನೆನೆದು' ಎಂದು ಗುರುವನ್ನು ಸ್ಮರಿಸಿರುವುದು ತಿಳಿಯುತ್ತದೆ. "ಶ್ರೀರಾಮ ದೇವರ ಜೋಗುಳ ಪದ' ಎಂಬ ಪದ್ಯಮಾಲಿಕೆಯಲ್ಲಿ–

ಶ್ರೀ ಗುರುನಾಥ ಸದಾನಂದ ಬೋಧ
ಯೋಗಸಿಂಹಾಸನ ರೂಢ ವಿನೋದ ।
ಆಗಮ ನಿಗಮದ ಸಾರರೂಪಾದ
ಯೋಗೀಂದ್ರ ಶಂಕರ ಶರಣು ಚಿನ್ಮೋದ ॥

–ಎಂದು ಶಂಕರ ಗುರುವನ್ನು ಪ್ರಾರ್ಥಿಸಿರುವುದು ತಿಳಿದುಬರುತ್ತದೆ. "ಬಿಲ್ಲಹಬ್ಬ–ಕಂಸವಧೆ' ಪ್ರಸಂಗದ ಕೊನೆಗೆ ತನ್ನ ಬಗೆಗೆ ಕವಿಯು ಹೀಗೆ ಹೇಳಿಕೊಂಡಿದ್ದಾನೆಂದು ತಿಳಿಯುತ್ತದೆ–

ವಿರಚಿಸಿದೆನಿದ ಯಕ್ಷಗಾನದಿ
ಮೆರೆವ ಕನ್ನಡ ಭಾಷೆಯಲಿ ವ್ರಜ
ಪುರದೊಡೆಯ ಶ್ರೀ ಲೋಕನಾಥನ । ಕರುಣದಿಂದ ।
ಸೂರಭಟ್ಟಾಭಿದ ದ್ವಿಜನ ಸುಕು
ಮಾರನಾಗಿಹ ರಾಮ ಶರ್ಮನು
ಧಾರಿಣಿಯೊಳೀ ಕಥೆಯ ಕೇಳ್ವುದು । ಸೂರಿಜನರು ।

ತನ್ನ ಎಲ್ಲ ಕೃತಿಗಳಲ್ಲಿ ಹಟ್ಟಿಯಂಗಡಿಯ ಲೋಕನಾಥನ ಸ್ಮರಣೆಯನ್ನು ರಾಮಭಟ್ಟನು ಮಾಡಿರುತ್ತಾನೆ. ಲೋಕನಾಥ, ಲೋಕೇಶ, ವ್ರಜಪುರಪತಿ, ಗೋಷ್ಠಪುರಾಧೀಶ, ಗೋಷ್ಠಪುರೀಶ ಮೊದಲಾದ ಅಂಕಿತಗಳನ್ನು ಈತನು ಬಳಸಿದ್ದಾನೆ. ಧ್ರುವ ಚರಿತ್ರೆಯ ಮೊದಲಿಗೆ–

ಸೃಜಿಸುವೆನು ಸಂಗ್ರಹಿಸಿ ಯಕ್ಷಗಾನದಲಿ
ವ್ರಜಪುರಾಧಿಪ ಲೋಕನಾಥನೊಲುಮೆಯಲಿ ।

ಎಂದು ಹೇಳಿಕೊಂಡರೆ ಕೊನೆಗೆ–

ಇದನು ಪೇಳಿ ಕೇಳ್ವ ಸದ್
ಹೃದಯರನ್ನು ಗೋಷ್ಠನಗರ
ಸದನಲೋಕನಾಥ ಪೊರೆವ । ಮುದದಿ ಕೃಪೆಯೊಳು ।

ಎಂದು ಹೇಳಲಾಗಿದೆ.

ರಾಮಭಟ್ಟನು ಶಾಲಿವಾಹನ ಶಕ ವರ್ಷ ೧೭೧೬ನೆಯ ಆನಂದ ಸಂವತ್ಸರದ ಚೈತ್ರಶುದ್ಧ ನವಮಿಯಂದು ಜನ್ಮವೆತ್ತಿದನೆಂದು, ಅರ್ಥಾತ್ ಈತನ ಜನನ ಕ್ರಿ.ಶ. ೧೮೭೪ನೆಯ ಇಸವಿಯಲ್ಲಾಯಿತೆಂದು ಐರೋಡಿ ಶಿವರಾಮಯ್ಯನವರು ಹೇಳಿರುತ್ತಾರೆ. ಆದರೆ ರಾಮಭಟ್ಟನ ಕೃತಿಗಳ ಹಸ್ತಪ್ರತಿಗಳು ಕ್ರಿ.ಶ. ೧೭೧೬ರದು ದೊರೆಯುತ್ತವೆಂಬ ಕಾರಣ ಕೊಟ್ಟು ಅವನು ಕ್ರಿ.ಶ. ೧೬೭೪ರ ಆನಂದ ಸಂವತ್ಸರದಲ್ಲಿ ಜನಿಸಿರಬೇಕೆಂದು ಶಿವರಾಮ ಕಾರಂತರು ಹೇಳುತ್ತಾರೆ. ಆದರೆ ಈತನ ಕಾಲ ನಿರ್ಣಯಕ್ಕೆ ಬೇರೆ ಆಧಾರಗಳಿರದಿರುವುದರಿಂದ ಕಾರಂತರ ಕಾಲನಿರ್ಣಯವನ್ನು ಪೂರ್ಣವಾಗಿ ನಂಬಲಾಗುವುದಿಲ್ಲವಾದುದರಿಂದ ತಾತ್ಕಾಲಿಕವಾಗಿ ರಾಮ ಭಟ್ಟನು ೧೮ನೆಯ ಶತಮಾನದ ಕೊನೆಯಲ್ಲಿಯೂ ೧೯ನೆಯ ಶತಮಾನದ ಆದಿಯಲ್ಲಿಯೂ ಇದ್ದನೆಂದು ಭಾವಿಸಬಹುದಾಗಿದೆ.

ಕರ್ಣಾಟಕ ಕವಿಚರಿತ್ರೆಯಲ್ಲಿ ಹಟ್ಟಿಯಂಗಡಿ ರಾಮಭಟ್ಟನನ್ನು ೧೯ನೆಯ ಶತಮಾನದವನೆಂದು ಹೇಳಲಾಗಿದೆ. ಹಟ್ಟಿಯಂಗಡಿ ರಾಮಚಂದ್ರಯ್ಯ ಎಂಬ ಸಾರಸ್ವತ ಬ್ರಾಹ್ಮಣ ಕವಿಯ ಬಗೆಗೂ ಅಲ್ಲೇ ಹೇಳಲಾಗಿದೆ. ಈ ಉಲ್ಲೇಖಗಳನ್ನು ಗಮನಿಸಿದ ಡಾ. ಸಿ. ಆನಂದರಾಮ ಉಪಾಧ್ಯರು "ಒಂದೆಡೆ ಹವ್ಯಕ ಬ್ರಾಹ್ಮಣನೆಂತಲೂ ಇನ್ನೊಂದೆಡೆ ಹಟ್ಟಿಯಂಗಡಿ ರಾಮಚಂದ್ರಯ್ಯ ಎಂದು ಬರೆದು ಸಾರಸ್ವತ ಬ್ರಾಹ್ಮಣನೆಂತಲೂ ಬರೆಯಲಾಗಿದೆ. ಅಲ್ಲದೆ ಈತನು ಗೌರ್ನಮೆಂಟ್ ಅಡ್ವಕೇಟ್ ಶ್ರೀಮಾನ್

ಶಂಕರನಾರಾಯಣ ರಾಯರ ತಂದೆ ಎಂಬ ವಿಚಾರವೂ ಇದೆ. ಆದರೆ ಇವು ಯಾವುವೂ ಸರಿಯಾಗಿಲ್ಲ." ಎಂದು ಆಕ್ಷೇಪಿಸಿದ್ದಾರೆ. ಪರಿಶೀಲಿಸಿ ನೋಡಿದಾಗ ಉಪಾಧ್ಯರ ಈ ಆಕ್ಷೇಪವು ಸರಿಯಲ್ಲವೆಂದು ತಿಳಿಯುವುದು. ಹಟ್ಟಿಯಂಗಡಿ ರಾಮಭಟ್ಟ ಮತ್ತು ಹಟ್ಟಿಯಂಗಡಿ ರಾಮಚಂದ್ರಯ್ಯ ಇಬ್ಬರೂ ಬೇರೆ ಬೇರೆ ವ್ಯಕ್ತಿಗಳು. ಮೊದಲನೆಯವನು ಹವ್ಯಕ ಬ್ರಾಹ್ಮಣ ವರ್ಗಕ್ಕೆ ಸೇರಿದವನು; ಎರಡನೆಯವನು ಸಾರಸ್ವತ ಬ್ರಾಹ್ಮಣ ವರ್ಗಕ್ಕೆ ಸೇರಿದವನು. ಕವಿಚರಿತೆಯಲ್ಲಿ ರಾಮಭಟ್ಟನು ೧೯ನೆಯ ಶತಮಾನಕ್ಕೆ ಸೇರಿದವನೆಂಬುದು ಮಾತ್ರ ಸದ್ಯಕ್ಕೆ ಗ್ರಾಹ್ಯವಾದ ವಿಷಯವಾಗಿದೆ.

ಹಟ್ಟಿಯಂಗಡಿ ರಾಮಭಟ್ಟನು ಮುಖ್ಯ ಯಕ್ಷಗಾನ ಕವಿಗಳಲ್ಲೊಬ್ಬನು. ಈತನ ಕೃತಿಗಳು ಬಹಳ ಸೊಗಸಾಗಿದೆ. 'ಲವಕುಶರ ಕಾಳಗ', 'ಅತಿಕಾಯ ಕಾಳಗ' ಮೊದಲಾದವು ರಂಗದಲ್ಲಿ ಅತ್ಯಂತ ಯಶಸ್ವಿಯಾದ ಕೃತಿಗಳು. 'ಅತಿಕಾಯ ಕಾಳಗ'ದಲ್ಲಿ ಮೂಲರಾಮಾಯಣದಲ್ಲಿ ಇಲ್ಲದ ವಿಶಿಷ್ಟ ವಿಷ್ಣುಭಕ್ತ ಸ್ವಭಾವದಲ್ಲಿ ಅತಿಕಾಯನನ್ನು ಚಿತ್ರಿಸಿರುವುದು ವೈಶಿಷ್ಟ್ಯಪೂರ್ಣವಾಗಿದೆ. ಯಕ್ಷಗಾನದ ರಾಕ್ಷಸ ವ್ಯಕ್ತಿತ್ವಗಳಲ್ಲಿಯೇ ಅತಿಕಾಯನು ಪ್ರತ್ಯೇಕವಾಗಿ ನಿಲ್ಲುವಂತೆ ರಾಮಭಟ್ಟನು ಚಿತ್ರಿಸಿರುತ್ತಾನೆ. 'ಧ್ರುವಚರಿತ್ರೆ', ಬಿಲ್ಲಹಬ್ಬ–ಕಂಸವಧೆ' ಮತ್ತು 'ಸುಧಾಮ ಚರಿತ್ರೆ' ಇವು ಮೂರು ಅವನ ಭಾಗವತದ ಯಕ್ಷಗಾನ ಪ್ರಸಂಗಗಳು. ದ್ರೌಪದೀಸ್ವಯಂವರ, ಸುಭದ್ರಾಕಲ್ಯಾಣ, ರತಿಕಲ್ಯಾಣ, ದ್ರೌಪದೀವಸ್ತ್ರಾಪಹರಣ, ರಾಜಸೂಯ, ಸುಲೋಚನ ಚರಿತ್ರೆ, ಸೇತುಮಾಧವ, ಶೇಷಗರ್ವಾಪಹರಣ, ಗಿರಿಜಾವಿಲಾಸ, ಇಂದ್ರಜಿತುಕಾಳಗ ಇವು ಆತನ ಇತರ ಪ್ರಸಂಗಗಳು.

ಕಥಾವಿಚಾರ; ಪ್ರಸಂಗವಿಮರ್ಶೆ :

ಹಟ್ಟಿಯಂಗಡಿ ರಾಮ ಭಟ್ಟನ "ಧ್ರುವಚರಿತ್ರೆ" ಭಾಗವತದ ೪ನೆಯ ಸ್ಕಂಧದ (ಸಂಸ್ಕೃತ ಭಾಗವತ ೪–೮ರಿಂದ ೧೨; ಕನ್ನಡ ಭಾಗವತ ೪–೬ರಿಂದ ೧೦) ಆಧಾರದಿಂದ ರಚಿತವಾದ ಕೃತಿ. ಹಟ್ಟಿಯಂಗಡಿ ರಾಮ ಭಟ್ಟನು ಕನ್ನಡ ಭಾಗವತವನ್ನು ನೇರಾಗಿ ಅನುಸರಿಸುವುದು ಪ್ರಸಂಗದ ಅವಲೋಕನದಿಂದ ತಿಳಿಯುತ್ತದೆ.

ಭಾಗವತದಲ್ಲಿ ಧ್ರುವನ ಕಥೆಯು ಬಹಳ ಪ್ರಸಿದ್ಧವಾದುದು ಮತ್ತು ಭಾಗವತದ ಕೇಂದ್ರೀಯ ಭಾಗಗಳಲ್ಲೊಂದು. ಕಥೆಯಲ್ಲಿ ಎರಡು ಭಾಗಗಳನ್ನು ಘಟನೆಗಳ ಆಧಾರದಿಂದ ಮಾಡಿಕೊಳ್ಳಬಹುದು. ಧ್ರುವನು ಭಕ್ತನಾಗಿ ದೇವರನ್ನು ಒಲಿಸಿಕೊಳ್ಳುವುದು ಒಂದು ಭಾಗವಾದರೆ ಧ್ರುವನ ತಮ್ಮನಾದ ಉತ್ತಮನನ್ನು ಯಕ್ಷನು ಕೊಲ್ಲಲು ಯಕ್ಷೇಶ್ವರನ ಮೇಲೆ ಧ್ರುವನು ಯುದ್ಧಸಾರಿ ಸೋಲಿಸುವುದು ಎರಡನೆಯ ಭಾಗವಾಗಿದೆ. ಈ ಘಟನೆಗಳಿಗನುಗುಣವಾಗಿ ಪ್ರಸಂಗವೂ ಎರಡು ಸಂಧಿಗಳಲ್ಲಿ ವಿಭಕ್ತವಾಗಿದೆ. ಒಟ್ಟು ೪೬೩ ಪದ್ಯಗಳಿರುವ ಸಾಕಷ್ಟು ದೀರ್ಘವಾದ ಪ್ರಸಂಗವಿದು.

ಸಪ್ತಋಷಿಗಳ ಆಗಮನ, ಅವರಿಂದ ಮಂತ್ರಿತ ಚೂತಫಲ ಪ್ರದಾನ, ಅದನ್ನು ಸುರುಚಿಯು ತಿಂದು ಎಸೆದ ಗೊರಟವನ್ನು ಸುನೀತಿ ತಿಂದು ಇಬ್ಬರಿಗು ಪುತ್ರರುದಿಸಿದರೆಂಬ ಕಥೆಗೆ ಕವಿಗೆ ಬೇರಾವುದೋ ಜನಪದ ಮೂಲವಿರಬಹುದು. ಅಥವಾ ಇದು ಕಲ್ಪಿತವಿರಬಹುದು. ಮೂಲ ಭಾಗವತದಲ್ಲಾಗಲಿ ಕನ್ನಡ ಭಾಗವತದಲ್ಲಾಗಲಿ ಈ ಘಟನೆಯಿಲ್ಲ. ಅಲ್ಲಿ ಧ್ರುವನು ಸಿಂಹಾಸನದಲ್ಲಿರುವ ಉತ್ತಾನಪಾದನಲ್ಲಿಗೆ ಬರುವಲ್ಲಿಂದಲೇ ಕಥೆಯು ತೊಡಗುತ್ತದೆ. ಪ್ರಸಂಗದಲ್ಲಿ ರಾಣಿಯರು ಗರ್ಭ ಧರಿಸುವುದು, ಪುತ್ರೋತ್ಸವ ಇತ್ಯಾದಿಗಳೂ ಸುರುಚಿಯು ಧ್ರುವನನ್ನು ಕೊಲ್ಲಲು ನಾನಾ ಉಪಾಯಗಳನ್ನು ಮಾಡಿದಳೆಂಬುದೂ ವರ್ಣಿಸಲ್ಪಟ್ಟಿದೆ. ಸುರುಚಿಯ ಮತ್ಸರವನ್ನು ಮತ್ತು ಕಟು ಹೃದಯವನ್ನು ಚಿತ್ರಿಸಲು ಪ್ರಸಂಗಕರ್ತರು ಈ ಘಟನೆಗಳನ್ನು ಅಳವಡಿಸಿಕೊಂಡುದಾಗಿದೆ. ಆದರೆ, ಈ ಘಟನೆಗಳನ್ನು ರಂಗದ ಮೇಲೆ ಅಭಿನಯಿಸುವುದು ಕಷ್ಟಸಾಧ್ಯ. ಕಥಾ ನಿರೂಪಣೆಯ ದೃಷ್ಟಿಯಿಂದ ಈ ಭಾಗವೂ ಸೊಗಸಾಗಿಯೇ ಬಂದಿದೆ. ಧ್ರುವನನ್ನು ಹಾಡಿ ತೂಗಿದ ಜೋಗುಳದ ಹಾಡು ಈ ರೀತಿಯಿದೆ–

ರಾಗ ಬಿಲಹರಿ; ಅಷ್ಟತಾಳ

ಜೋ ಜೋ ಪರಮ ಭಾಗವತರ ಕಣಿಯೆ
ಜೋ ಜೋ ಧಾರ್ಮಿಕ ಜನಶಿರೋಮಣಿಯೆ
ಜೋ ಜೋ ಮನುವಂಶವನಸಾರಂಗ
ಜೋ ಜೋ ವಿಷ್ಣುಪಾದಾಂಬುಜಭೃಂಗ ॥ ಜೋ ಜೋ ॥

ಅಕಳಂಕ ದ್ವಿಜರಾಜವದನನೆ ಜೋ ಜೋ
ಸುಕಲಾಯುತರೂಪವದನನೆ ಜೋ ಜೋ
ವಿಕಸಿತ ತಿಲಸುಮನಾಸನೆ ಜೋ ಜೋ
ಸುಕುಮಾರಕಾಯಸುಹಾಸನೆ ಜೋ ಜೋ ॥ ಜೋ ಜೋ ॥

ಅರುಣಪಲ್ಲವಸಮಚರಣನೆ ಲಾಲಿ
ತರುಣಾರ್ಕನಿಭರತ್ನಾಭರಣನೆ ಲಾಲಿ
ಧರಣಿಪ ಮನುವಂಶೋದ್ಧರಣನೆ ಲಾಲಿ
ಕರುಣಾಕರ ಹರಿಶರಣನೆ ಲಾಲಿ ॥ ಲಾಲಿ ॥
ಕಂಬುಸದೃಶ ಸುಕಂಧರ ತ್ರುವಿ
ಬಿಂಬಮಾನ ಪ್ರವಾಳಾಧರ ತ್ರುವಿ
ಜಾಂಬೂನದಮಯ ಕುಂಡಲ ತ್ರುವಿ
ಗಂಭೀರತರನಾಭಿಮಂಡಲ ತ್ರುವಿ ॥ ತ್ರುವಿ ॥

ಈ ಜೋಗುಳ ಗೀತದ ಪದಶಯ್ಯೆ ಬಹಳ ಸೊಗಸಾಗಿದೆ. ಮೊದಲನೆಯ ಪದ್ಯದಲ್ಲಿ ಜೋ ಜೋ ಪ್ರತಿ ಚರಣದ ಮೊದಲಿಗೆ ಬಂದಿದ್ದರೆ ಎರಡನೆಯ ಪದ್ಯದಲ್ಲಿ ಪ್ರತಿ ಚರಣದ ಕೊನೆಗೆ ಬಂದಿದೆ. ಮೂರನೆಯ ಪದ್ಯದ ಪ್ರತಿ ಚರಣದ ಕೊನೆಗೆ ಲಾಲಿ ಬಂದಿದ್ದರೆ ನಾಲ್ಕನೆಯದರ ಪ್ರತಿ ಪಾದದ ಕೊನೆಗೆ ಶ್ರುವಿ ಬಂದಿದೆ. ಸೊಗಸಾದ ಹಾಡು ಇದು.

ಧ್ರುವನ ತಪಸ್ಸನ್ನು ಭಂಗಗೊಳಿಸಲು ಇಂದ್ರನ ಆಜ್ಞೆಯಂತೆ ಬಂದ ಶಾಕಿನಿ ಡಾಕಿನಿಯರು ತಮ್ಮೊಳಗೆ ಮಾತಾಡಿಕೊಳ್ಳುವ ರೀತಿ ಹೀಗೆ ವರ್ಣಿತವಾಗಿದೆ.

ರಾಗ ಕಲ್ಯಾಣಿ; ಅಷ್ಟತಾಳ

ನೋಡೆ ನಿಂದವನ । ಕುದಿದೀಗ ಪಾಕವ । ಮಾಡಬೇಕವನ ॥ ಪ ॥

ನೋಡೆ ಮುಂಗಡೆ ನಿಂದ ಬಾಲನ । ಬಾಡನುರೆ ಕೊಯ್ ಕೊಯ್ದು ಪಾಕವ।
ಮಾಡಿ ಕುಳ್ಳಿರ್ದುಂಡು ಪರಸುತ । ಪಾಡಬೇಹುದು ಹಾಡನೀರ್ವರು ॥ ೧ ॥

ಮುರಿದು ಕೊರಳನು ಹರಿದು ತೋಳ್ಗಳ । ತರಿದು ತೊಡೆಗಳ ಕೊರೆದು ಚಂದದಿ।
ಸುರಿದು ಕರುಳನು ಹುರಿದು ತುಪ್ಪದಿ । ಹಿರಿದು ಹರುಷದಿ ತಿನ್ನಬೇಹುದು ॥ ೨॥

ಸುತ್ತುಮುತ್ತಲು ಕುಳಿತು ದೈತ್ಯರ । ಮೊತ್ತ ಸಹ ವೈಯಾರದಿಂದಲಿ ।
ತುತ್ತು ತುತ್ತಿಗೆ ಚಪ್ಪರಿಸಿ ಹೊಡೆ । ದೆತ್ತಬೇಹುದು ಮರ್ತ್ಯಮಾಂಸವ ॥ ೩ ॥

ಹೀಗೆಂದುಕೊಂಡು ಅವರೊಳಗೇ ಜಗಳವಾಗಿ ತಪೋಜ್ವಾಲೆಯಿಂದ ಅವರು ಬೆಂದರಂತೆ. ಈ ಭಾಗ ಪ್ರಸಂಗಕರ್ತನಿಂದ ಕಲ್ಪಿತವೇ ಆಗಿದೆ. ಧ್ರುವನ ತಪಸ್ಸನ್ನು ಭಂಗಗೊಳಿಸಲು ದೇವಾಸುರರು ಒಟ್ಟಾಗಿ ಬಂದರೆಂಬ ವರ್ಣನೆ ಇರುವುದು ವಿಶೇಷವಾಗಿದೆ.

ವಿಷ್ಣು ಪ್ರತ್ಯಕ್ಷವಾದಾಗಿನ ಸ್ತುತಿರೂಪದ ವಾರ್ಧಕ ಪದ್ಯದಲ್ಲಿ ಪ್ರಸಂಗಕರ್ತನ ಅನುಪ್ರಾಸಪ್ರಿಯತೆ ಶಬ್ದಚಮತ್ಕಾರ ಶಕ್ತಿಗಳನ್ನು ನೋಡಬಹುದು–

ಜಯ ಜಯ ರಮಾಕಾಂತ ಸುನಿತಾಂತ ಗುಣವಂತ
ಜಯ ಜಯ ನಿರಾವರಣ ಶ್ರಿತಕರುಣ ಮತಚರಣ
ಜಯ ಜಯ ಹೃಷೀಕೇಶ ಸ್ಥಿರತೋಷ ಭವನಾಶ ಜಯತು
ಕೌಸ್ತುಭಭೂಷ ।

ಜಯ ಜಯ ಚಿದಾನಂದ ಸುಖಕಂದ ನಿರ್ದ್ವಂದ್ವ
ಜಯ ಜಯ ಜಗದ್ಭರಿತ ಸರ್ವಹಿತ ಸಚ್ಚರಿತ
ಜಯ ಜಯ ಮುನಿಧ್ಯೇಯ ನಿರಮೇಯ ನಿರಮಾಯ ಜಯತೆಂದನಾ
ಬಾಲನು ॥

ಧ್ರುವನು ದೈವಾನುಗ್ರಹ ಪಡೆದು ಹಿಂತಿರುಗಿ ಬಂದಮೇಲೆ ಸುರುಚಿಗೆ ವಂದಿಸಿದಾಗ ವಿಪ್ರೇಮದೊಳೆತ್ತಿ ಮುದ್ದಿಸಿ ಹಿಂದಣ ದೋಷವನೆಣಿಸಿ ಪೇಳಿದಳುಹಿ – ತಾನು ಹಿಂದೆ ಬಾಲಕ ಧ್ರುವನಿಗೆ ಮಾಡಿದ ಹಿಂಸೆಗಳನ್ನೆಲ್ಲ ನೆನೆದು ಪಶ್ಚಾತ್ತಾಪಪಟ್ಟು ಹೀಗೆ ಹೇಳಿದಳಂತೆ –

ರಾಗ ನೀಲಾಂಬರಿ; ಅಷ್ಟತಾಳ

ಮರೆವೆ ನಾನೆಂತಿದನು । ಹಿಂದಣದೀಗ । ಕೊರೆವುದೀ ಚಿತ್ತವನು ॥
ಹರಿಭಕ್ತ ನಿನ್ನ ಮೇ । ಲುರೆ ಖೂಳತನದಿ ದು ।
ರ್ಧರ ಕಷ್ಟವೆಸಗಿದೆನು । ಪಾತಕಿ ನಾನು ॥ ೧ ॥

ಭಿನ್ನ ಭೇದದಲಿ ನಾನು । ಮುಂದರಿಯದೆ । ಅನ್ಯಾಯವೆಸಗಿದೆನು ॥
ಎನ್ನ ಪಾತಕವೆನ್ನ । ನಿನ್ನೇನ ಮಾಳ್ಪುದೊ ।
ಪನ್ನಗಶಯನ ಬಲ್ಲ । ಬೇರಿಲ್ಲ ॥ ೨ ॥

ಕ್ರೂರ ಸ್ವಭಾವವನು । ಎನ್ನಲಿ ಸಲೆ । ಪ್ರೇರಿಸಿ ಮಾಧವನು ।
ಧಾರಿಣಿಯೊಳಗೆ ದು । ಶ್ಚಾರಿತ್ರೆಯೆಂಬಪ ।
ಕೀರುತಿಯುಳ ಗೆಯ್ದನು । ಎನ್ನುವನು ॥ ೩ ॥

ಬಾಲಕನಿಗೆ ಹಿಂಸೆಕೊಟ್ಟ ಕಥೆ ಮತ್ತು ಈ ಪಶ್ಚಾತ್ತಾಪದ ಕಥೆ ಮೂಲಕ್ಕೆ ಕೊಟ್ಟ ಹೊಸ ಆಯಾಮವಾಗಿದೆ. ಮೂಲದಲ್ಲಿ ಈ ವಿವರವಿಲ್ಲದಿದ್ದರೂ ಆಕೆಗೆ ಪಶ್ಚಾತ್ತಾಪವಾಗಿತ್ತೆಂಬ ಸೂಚನೆ ಮಾತ್ರವಿದೆ–

ಎಂದು ಜನನಿಗೆ ಸುರುಚಿಯಂಘ್ರಿಗೆ
ಬಂದು ತಲೆವಾಗಿದಡೆ ಜೀವಿಸು
ಕಂದ ಹಲಕಾಲೆನುತ ಹರಸಿದಳಪ್ಪಿ ಬಾಲಕನ
ಎಂದಡೇನದ್ಭುತವ ದೇವ ಮು

ಕುಂದನೊಲಿದಡೆ ಸಕಲ ಸುರನರ
ವೃಂದದೊಲವೊಡಗೊಡುವುದು ತಡವಿಲ್ಲ ಕೇಳೆಂದ ॥
-ಕನ್ನಡ ಭಾಗವತ ೪-೮-೪೮

ಯಕ್ಷೇಶ್ವರನೊಡನೆ ಧ್ರುವನ ಯುದ್ಧದ ವಿಸ್ತೃತ ವರ್ಣನೆ ಮೂಲದಲ್ಲಿದೆ. (ಕನ್ನಡ ಭಾಗವತ ೪-೯-೧೦ ರಿಂದ ೩೨) ಪ್ರಸಂಗದಲ್ಲಿ ಅದನ್ನು ಸಂಕ್ಷೇಪಿಸಲಾಗಿದೆ. ಧ್ರುವನು ಋಷಿಗಳ ಹೇಳಿಕೆಯಂತೆ ನಾರಾಯಣಾಸ್ತ್ರ ಪ್ರಯೋಗಮಾಡುವ ಮೊದಲಿನ ಯುದ್ಧದ ಚಿತ್ರ ಹೀಗೆ ಬಂದಿದೆ-

ರಾಗ ಸಾಂಗತ್ಯ; ರೂಪಕತಾಳ

ಎತ್ತನೋಡಿದರು ಕಾರ್ಗತ್ತಲೆ ಕವಿದಿಹು ।
ದೆತ್ತಿ ನೋಡುವರೆ ಮಸ್ತಕವ ।
ಸುತ್ತಲು ಕಲ್ಮರ ಮೊರಡಿ ಬೆಟ್ಟಗಳುದು ।
ರುತ್ತಿಹವೇನ ಮಾಡುವೆನು ॥

ಸಿಡಿಲ್ ಮಿಂಚು ಬಿರುಗಾಳಿ ಮಳೆ ಮಂಜೊಂದೆಸೆಯೊಳು ।
ಝುಡಿವುತ್ತಿರ್ಪಿನ್ನೊಂದು ದೆಸೆಯ ।
ಘುಡುಘುಡಿಸುತೆ ಪುಲಿ ಕರಡಿ ಸಿಂಹಗಳು ಬಾಯ್ ।
ಬಿಡುವವು ಬಲು ಘೋರರವದಿ ॥

"ಧ್ರುವ ಚರಿತ್ರೆ" ಪ್ರಸಂಗವು ಕನ್ನಡ ಭಾಗವತವನ್ನು ನಿಕಟವಾಗಿ ಅನುಸರಿಸಿದ್ದು ಪ್ರಸಂಗದ ಪದ್ಯಗಳಲ್ಲಿ ಕನ್ನಡ ಭಾಗವತದ ಪ್ರಭಾವವನ್ನೂ ಗುರುತಿಸುವಂತಿದೆ. ಉದಾ: ಧ್ರುವನು ತಪಸ್ಸಿಗೆ ಹೋಗುವೆನೆಂದಾಗಿನ ಸಂದರ್ಭ-

ಕೇಳಿದಾಗಳೆ ಸವತಿಯಿಂದ ಕ
ರಾಳ ವಚನದ ಖಡುಗ ಹತಿಯಲಿ
ಬಾಲೆ ಬಿದ್ದಳು ಬಾಳೆ ಕಾಲುರಿಗೊಂಡು ಕೆಡೆವಂತೆ ।
ಲೋಲಲೋಚನೆ ಬಾಷ್ಪ ಸಲಿಲೋ
ನ್ಮೀಲಿತೇಕ್ಷಣೆ ಶೋಕವಹ್ನಿ
ಜ್ವಾಲೆಯಲಿ ತನು ಬೆಂದು ಹೊರಳಿದಳಬಲೆ ಬಿಸುಸುಯ್ದು ॥
-ಕನ್ನಡ ಭಾಗವತ ೪-೬-೧೪

ಪ್ರಸಂಗದಲ್ಲಿ ಈ ಪದ್ಯದ ಪರಿವರ್ತಿತ ರೂಪ ಹೀಗೆ ಬಂದಿದೆ–

ಕೇಳಿದಾಗಲೆ ಸವತಿಯೆಂದ ಕ
ರಾಲ ವಚನದ ಖಡುಗಹತಿಯಲಿ
ಲೋಲಲೋಚನೆ ಚಿತ್ತದಲಿ ಕಡುನೊಂಡು ಬಸವಳಿದು ।
ಬಾಳೆ ಕಾಳುರಿಗೊಂಡ ತೆರದಲಿ
ಬೀಳುತವನಿಯೊಳಕಟ ಕಂದನ
ಬೀಳುಗೊಡುವೆನದೆಂತು ವನಕೆಂದೆನುತ ಹೊರಳಿದಳು ॥

ಧ್ರುವನಿಗೆ ದೇವರು ಪ್ರತ್ಯಕ್ಷವಾದ ಸಂದರ್ಭ–

ಅರಿಯನದನಾ ಬಾಲಕನು ಮೆಯ್
ಮರೆದು ಮನದಲಿ ಹರಿಪದಾಬ್ಜವ
ಸೆರೆವಿಡಿದು ಬೇರೊಂದನರಿಯದೆ ಯೋಗನಿಷ್ಠೆಯಲಿ ।
ಇರಲು ಮಿಂಚಿನವೋಲು ಹೊಳೆಹೊಳೆ
ದರತುದಂತರ್ಧಾನರಸ ಕಂ
ದೆರೆದು ಕಂಡನು ಮುಂದೆನಿಂದ ಮುಕುಂದನಾಕೃತಿಯ ॥

–ಕನ್ನಡ ಭಾಗವತ ೪–೮–೩

ಪ್ರಸಂಗದಲ್ಲಿ ಈ ಭಾಗ ಹೀಗಿದೆ–

ರಾಗ ಭೈರವಿ ; ತ್ರಿವುಡೆತಾಳ

ಪರಮಕರುಣಾಸಿಂಧು ಹಸುಳೆಯ । ಪೊರೆಗೆ ಬರಲಾ ಬಾಲನೇನುವ ।
ನರಿಯದೇಕೋಮನದಿ ಹರಿಯನು । ಸೆರೆವಿಡಿದು ಘನತರ ಸಮಾಧಿಯ
ಲಿರಲು ಮಿಂಚಿನ ತೆರದಿ ಹೊಳೆಹೊಳೆ । ದರಿತುದಂತರ್ಧಾನರಸ ಕಂ–
ದೆರೆದು ಕಂಡನು ಮುಂತೆ ನಿಂತಿಹ । ಸರಸಿಜಾಕ್ಷನ ದಿವ್ಯ ಮೂರ್ತಿಯ
ಕಂಡನಾಗ । ಸ್ವಾಮಿಯ । ಕಂಡನಾಗ ।

ಧ್ರುವನನ್ನು ವಿಷ್ಣುಲೋಕಕ್ಕೆ ಕರೆದೊಯ್ಯುವ ಸಂದರ್ಭ–

ಬರಲಿ ನಿನ್ನಯ ಜನನಿ ವಿಶ್ವಂ
ಭರನ ಭವನಕ್ಕೆನುತ ಹರಿಕಿಂ
ಕರರು ನೆನೆಯಲು ಬಂದಳಂದು ಸುನೀತಿ ಸುತನೆಡೆಗೆ ॥

–ಕನ್ನಡ ಭಾಗವತ ೪–೧೦–೩೬

ಪ್ರಸಂಗ ಪದ್ಯ ಹೀಗಿದೆ–

ಬರಲಿ ನಿನ್ನಯ ಮಾತೆ । ನಿನ್ನೊಡನೆ ಸ ।
ಚ್ಚರಿತೆ ಸದ್ಗುಣಭರಿತೆ । ಸಾಕ್ಷಾದ್ವಿಶ್ವಂ ।
ಭರನ ಸನ್ನಿಧಿಗೆನುತೆ ॥ ಸನ್ನುತಿಗೊಳುತೆ ॥
ಮುರಹರನ ಕಿಂಕರರನು ಮನದಲಿ । ಸ್ಮರಿಸಲಾಕ್ಷಣ ಬಂದಳಿಲ್ಲಿಗೆ
ಹರಿಮುಕುಂದ ರಮಾಧವಾಚ್ಯುತ । ಶರಣೆನುತ ಸ್ತುತಿಸುತ್ತ ಭರದಲಿ ॥

ಒಟ್ಟಿನಲ್ಲಿ ಹಟ್ಟಿಯಂಗಡಿ ರಾಮ ಭಟ್ಟನ "ಧ್ರುವಚರಿತ್ರೆ" ಒಂದು ಒಳ್ಳೆಯ ಪ್ರಸಂಗವಾಗಿದೆ. ಭಾಗವತದ ಪ್ರಾತಿನಿಧಿಕ ಪ್ರಸಂಗಗಳಲ್ಲಿ ಇದೊಂದೆಂದು ಪರಿಗಣಿಸಬಹುದಾಗಿದೆ. ಒಂದು ಒಳ್ಳೆಯ ಓದುಗಬ್ಬವಾಗಿಯೂ ಇದು ಸೊಗಸಾದ ಕೃತಿಯಾಗಿದೆ. ರಾಮ ಭಟ್ಟನ "ಅತಿಕಾಯ ಕಾಳಗ"ವೇ ಮೊದಲಾದ ಇತರ ಪ್ರಸಂಗಗಳಂತೆ ಈ ಕೃತಿಯೂ ಪ್ರಸಂಗಸಾಹಿತ್ಯ ಕ್ಷೇತ್ರದಲ್ಲಿ ಉನ್ನತಸ್ಥಾನ ಪಡೆಯುತ್ತದೆ. ಆತನ ಕವಿತ್ವಶಕ್ತಿ, ಭಾಷಾಶುದ್ಧಿ, ಘಟನೆಗಳ ಕಲ್ಪನೆ ಮತ್ತು ನಿರೂಪಣವಿಧಾನ, ಛಂದಸ್ಸಿನ ಮೇಲೆ ಹಿಡಿತ, ಯಕ್ಷಗಾನದ ಕಲಾಭಿಜ್ಞತೆ – ಎಲ್ಲವೂ ಉತ್ತಮ ಮಟ್ಟದ್ದಾಗಿರು–ವುದರಿಂದ ಯಕ್ಷಗಾನ ಸಾಹಿತ್ಯ ಕ್ಷೇತ್ರದಲ್ಲಿ ಈ ಕೃತಿಗೆ ಉನ್ನತಸ್ಥಾನ ದೊರಕುತ್ತದೆ.

೩. ವೃತ್ರಾಸುರನ ಕಾಳಗ :

ಕವಿ : ಅದ್ಯಪಾಡಿ ರಾಮಕೃಷ್ಣಯ್ಯ (ಸು. ೧೮೫೦ – ಸು. ೧೯೩೦)

ಅದ್ಯಪಾಡಿ ರಾಮಕೃಷ್ಣಯ್ಯನವರು ಮಂಗಳೂರಿನ ಬಜಪೆಯ ಸಮೀಪದ ಅದ್ಯಪಾಡಿ ಎಂಬ ಊರಿನವರು. ವಾಮನ ಚರಿತ್ರೆ, ವೃತ್ರಾಸುರನ ಕಾಳಗ, ಭದ್ರಾಯುಚರಿತೆ, ಮಾರ್ಕಂಡೇಯ ಚರಿತ್ರೆ ಎಂಬ ಕೃತಿಗಳನ್ನು ಇವರು ರಚಿಸಿರುತ್ತಾರೆ. ಈ ಕೃತಿಗಳ ಕೊನೆಗೆ ಸ್ವವಿಚಾರಗಳ ಬಗೆಗೆ ಹೇಳಿಕೊಂಡ ವಿವರಗಳು ಹೀಗಿವೆ –

ಉತ್ತರೆಯ ಸುತಗೆ ಮುನಿಪೋತ್ತಮ ಶುಕಾಚಾರ್ಯ
ವಿಸ್ತಾರವಾಗಿ ಪೇಳಿದ ಕಥಾಮೃತವಿದನು
ಉತ್ತಮದ ಶೈವವಿಪ್ರಂ ವೆಂಕಟರಮಣ ಪುತ್ರನಾ ರಾಮಕೃಷ್ಣಂ ॥
ಚಿತ್ತದೊಳು ಬೈಲಪುರದಾದಿನಾಥೇಶನಭಯ
ವಿತ್ತು ಪೇಳಿಸಿದನೀ ಕಥೆ ಯಕ್ಷಗಾನದಿಂ
ದುತ್ತಮರು ಇದನೋದಿ ತಪ್ಪಿರಲು ತಿದ್ದುವುದು ಕಾವ ಶ್ರೀ ನಿತ್ಯಾತ್ಮನು ॥
– ವಾಮನ ಚರಿತ್ರೆ

ಇನಿತು ಮೆರೆದಿರ್ದ ಭದ್ರಾಯು ಚರಿತೆಯ ಸೂತ
ಮುನಿಕುಲಾಗ್ರಣಿ ಶೌನಕಾದ್ಯರಿಗೆ ಪೇಳ್ದುದಂ
ಘನಕಥಾಸಾರವೆಂದಿದನು ವೆಂಕಟರಮಣ ಸುತ ರಾಮಕೃಷ್ಣಾಖ್ಯನಾ ।
ಮನದೊಳಗೆ ಬೈಲಪುರದಾದಿನಾಥೇಶ್ವರನು
ವಿನಯದಿಂ ನಿತ್ತು ಪೇಳಿಸಿದೆಕ್ಷಗಾನಮಂ
ಮನಿಷಿಗಳು ನೋಡುತಿದ ತಪ್ಪಿರಲು ತಿದ್ದುವುದು ಕಾಯ್ವ ಶ್ರೀ ನಿತ್ಯಾತ್ಮನು॥

ವೃತ್ರಾಸುರನ ಕಾಳಗದ ಅಂತ್ಯದಲ್ಲಿಯೂ ಇದೇ ರೀತಿಯ ಪದ್ಯವಿದೆ. (ಅದು ಪ್ರಾಯಶಃ ತಿದ್ದುಪಡಿಗೊಳಗಾಗಿದೆ.) ಅದ್ಯಪಾಡಿಗೆ ಬೈಲಪುರವೆಂಬ ಹೆಸರಿದೆ. ಅಲ್ಲಿ ಆದಿನಾಥೇಶ್ವರನ ದೇವಾಲಯವೂ ಇದೆ. ರಾಮಕೃಷ್ಣಯ್ಯನವರು ಆದಿನಾಥೇಶ್ವರನ ಭಕ್ತ. ಇವರು ೧೯ನೇ ಶತಮಾನದ ಕೊನೆಯಲ್ಲಿಯೂ ೨೦ನೇ ಶತಮಾನದ ಆದಿಭಾಗದಲ್ಲಿಯೂ ಜೀವಿಸಿದ್ದರೆಂದು ಸುರತ್ಕಲ್ ಕೆ ವೆಂಕಟರಾಯಾಚಾರ್ಯರು ತಿಳಿಸಿರುತ್ತಾರೆ. (ಭದ್ರಾಯು ಚರಿತೆಯು ೧೯೩೨ರಲ್ಲಿ ಪ್ರಕಟಗೊಂಡಿದೆ.) ರಾಮಕೃಷ್ಣಯ್ಯನವರು ಮಾರ್ಕಾಂಡೇಯ ಪುರಾಣವೆಂಬ ಪ್ರಸಂಗವನ್ನು ರಚಿಸಿದ್ದರೆಂದು ವೆಂಕಟರಾಯಾಚಾರ್ಯರು ಉಲ್ಲೇಖಿಸಿದ್ದುಂಟು. ಪ್ರಾಯಶಃ ಮಾರ್ಕಾಂಡೇಯ ಚರಿತ್ರೆಯೆಂಬ ಪ್ರಸಂಗವನ್ನೆ ಅವರು ಮಾರ್ಕಾಂಡೇಯ ಪುರಾಣವೆಂದು ಹೇಳಿದುದಿರಬೇಕು.

ರಾಮಕೃಷ್ಣಯ್ಯನವರು ಅದ್ಯಪಾಡಿಯ ಆದಿನಾಥೇಶ್ವರನ ಅರ್ಚಕರ ಕುಟುಂಬಕ್ಕೆ ಸೇರಿದವರೆಂದೂ ಯಕ್ಷಗಾನದ ಭಾಗವತಿಕೆಯನ್ನು ಬಲ್ಲವರಾಗಿದ್ದರೆಂದು ವೆಂಕಟರಾಯಾಚಾರ್ಯರು ತಿಳಿಸಿದ್ದಾರೆ. ಶೈವವಿಪ್ರನೆಂದುದರಿಂದ ಇವರು ಸ್ಥಾನಿಕ ಬ್ರಾಹ್ಮಣರೆಂದು ತಿಳಿಯುತ್ತದೆ.

ಹಲವು ಯಕ್ಷಗಾನ ಪ್ರಸಂಗಕರ್ತರಿಗೆ ಆಕರ್ಷಕವಾಗಿ ತೋರಿದ ವೃತ್ರವಧೆಯ ಕಥಾಸಂದರ್ಭವು ಭಾಗವತದಲ್ಲಿ ಒಂದು ಪ್ರಾತಿನಿಧಿಕವಾದ ಉಪಾಖ್ಯಾನವೂ ಹೌದು. ಭಾಗವತದ ಷಷ್ಠಸ್ಕಂಧದಲ್ಲಿರುವ (ಸಂಸ್ಕೃತ ಭಾಗವತ ೬–೯ರಿಂದ ೧೬; ಕನ್ನಡ ಭಾಗವತ ೬–೭ರಿಂದ ೧೪) ವೃತ್ರನ ಕಥೆಯನ್ನೂ ವೃತ್ರನ ಪೂರ್ವಕಥೆಯಾದ ಚಿತ್ರಕೇತು ಆಖ್ಯಾನವನ್ನೂ ಅದ್ಯಪಾಡಿ ರಾಮಕೃಷ್ಣಯ್ಯನವರು ಪ್ರಸಂಗವಾಗಿಸಿದ್ದಾರೆ. ಪ್ರಸಂಗವು ಎರಡು ಸಂಧಿಗಳಲ್ಲಿದ್ದು ಮೊದಲನೆಯ ಸಂಧಿಯಲ್ಲಿ ಚಿತ್ರಕೇತು ವೃತ್ತಾಂತವೂ ಎರಡನೆಯ ಸಂಧಿಯಲ್ಲಿ ವೃತ್ರಕಥಾ ವೃತ್ತಾಂತವೂ ಬಂದಿದೆ. ಪ್ರಸಂಗವು ಸಾಕಷ್ಟು ದೀರ್ಘವಾಗಿದೆ. ಹಳೆಯ ಪ್ರಸಂಗಗಳಲ್ಲಿ ಚಿತ್ರಕೇತುವಿನ ವೃತ್ತಾಂತವು ವಿವರವಾಗಿ ಇದೊಂದೇ ಪ್ರಸಂಗದಲ್ಲಿ ಬಂದಿದೆ. ಹೊಸಕಾಲದಲ್ಲಿ ಬಂದ ಅಂಬಾತನಯ ಮುದ್ರಾಡಿಯವರ 'ರಾಗ ತರಂಗಿಣಿ' ಅಥವಾ 'ರಾಜಾ ಚಿತ್ರಕೇತು' ಎಂಬ ಪ್ರಸಂಗವು ಇದೇ ಕಥಾಭಾಗವನ್ನೊಳಕೊಂಡಿದೆ.

ಕಥಾವಿಚಾರ; ಪ್ರಸಂಗವಿಮರ್ಶೆ :

ಈ ಕೃತಿಯು ಪ್ರಸಂಗವಾಗಿಯೂ ಓದುಗಬ್ಬವಾಗಿಯೂ ಸೊಗಸಾಗಿದೆ. ಉತ್ತಮ ವರ್ಣನೆಗಳು, ಸೊಗಸಾದ ಗೇಯಬಂಧಗಳು, ಕಥಾನಿರೂಪಣ ರೂಪದ ಉತ್ತಮ ಭಾಮಿನಿ ವಾರ್ಧಕಗಳು, ಒಳ್ಳೆಯ ಸಂಭಾಷಣೆಗಳು, ಯುದ್ಧ ಸಂದರ್ಭಗಳು, ಘಟನಾವೈವಿಧ್ಯಗಳು ಪ್ರಸಂಗದಲ್ಲಿವೆ. ಕೆಲವು ಉದಾಹರಣೆಗಳನ್ನು ನೋಡಬಹುದು–

ಮಗನ ಸಾವಿನ ಸಂದರ್ಭದಲ್ಲಿ ಚಿತ್ರಕೇತುವಿನ ಪತ್ನಿ ಕೃತದ್ಯುತಿಯ ಅಳಲು–

ರಾಗ ಬಿಲಹರಿ; ಆದಿತಾಳ

ಹಾ ಮಗನೇ ಗುಣವೃಂದಾ । ಅ । ಯ್ಯೋ ಮಗನೇ ಮಮ ಕಂದಾ ।
ಹೇ ಮಗನೇ ಮೋಹನ್ನಾ । ಹಾ ಮಗನೇ ಶಿಶುರನ್ನಾ ॥ ೧ ॥

ಎಂದಿಗೆ ಕಾಂಬೆನು ನಿನ್ನ । ಚಂದಿರನಂತಿಹ ವದನ ।
ಕಂದನೆ ಮೌನವಿದೇನು । ಬಂದರುಹೂ ಧೈರ್ಯವನು॥ ೨ ॥

ಪ್ರೀತರಾಡಲಿಕೆಂದು । ಪ್ರೀತಿಯೊಳ್ಳೈದಿಹರಿಂದು ।
ನೂತನದೀ ನೋಡುವರ । ಏತಕೆ ಬಿದ್ದಿಹೆ ಕುವರ ॥ ೩ ॥

ದುಃಖದ ಕೂಪದಿ ಬಿದ್ದು । ಸಿಕ್ಕಿದೆನಲ್ಲವೊ ಮುದ್ದು ।
ಅಕ್ಕರದೀ ಕರಪಿಡಿದು । ಫಕ್ಕನೆ ರಕ್ಷಿಸು ಒಲಿದು ॥ ೪ ॥

ಮಾತೆಯಲ್ಲವೆ ನಾನು । ಈ ತೆರದಾ ಮುನಿಸೇನು ।
ನೀತಿಯೆ ಎನ್ನಳಲಿಪುದು । ಜಾತನೆ ನೋಡ್ಕಣ್ತೆರೆದು ॥ ೫ ॥

ಇದರ ಮುಂದಿರುವ "ಏತಕಿಂತು ಮಡಿದೆ ಪೇಳು । ಕಂದ ಕಂದಾ" ಎಂಬ ದುಃಖದ ಸಂದರ್ಭದ ಪದ್ಯವು ಸೊಗಸಾಗಿದ್ದು ಪಾರ್ತಿಸುಬ್ಬನ ಪಂಚವಟಿಯ ಪದ್ಯದ ಅನುಸರಣೆಯೆಂದು ಗುರುತಿಸುವಂತಿದೆ. ದೇವತೆಗಳು ವಜ್ರಾಯುಧದಿಂದ ಸಿದ್ಧರಾಗಿ ಯುದ್ಧಕ್ಕೆ ನಡೆತಂದ ವರ್ಣನೆ ಹೀಗಿದೆ–

ರಾಗ ಆಹೇರಿ; ಝಂಪೆತಾಳ

ರಣಕೆ ನಡೆತಂದರಾಗ । ಸುಮನಸರು ।
ಕುಣಪ ಭೋಜನರುಗಳ ಗೆಲಲೆಂದು ಬೇಗ ।

ಕರಿಯನೇರುತ ಸುನಾಸೀರ ವಜ್ರಾಯುಧವ ।
ಕರದಿ ಧರಿಸುತ ನಡೆಯಲೆಡಬಲದಿ ಕ್ರತುಭುಜರ ।
ನೆರವಿ ಬೊಬ್ಬಿರುವುತ್ಯೆತಂದುನಾಕವ ಪೊಗುತ ।
ದುರುಳರನು ರಣಕೆ ಕರೆಯುತ್ತ । ವೈಮಾನಿ ।
ಕರು ಪೇಳ್ದರಾಗ ಮೂದಲಿಸಿ ಜರೆಯುತ್ತ ॥ ೧ ॥

ಎಲ್ಲಿ ರಕ್ಕಸರ ಪಡೆ ಬರಲಿ ಸಮರಾಂಗಣಕೆ ।
ನಿಲ್ಲಲೆಮ್ಮನು ಗೆಲ್ವ ಗರ್ವಿ ತಾನ್ಯಾರವನ ।
ಚೆಲ್ಲ ಬಡಿಯುತ ಜ್ವಾಲಿನೀ ನಿಕರಕೌತಣವ ।
ನಿಲ್ಲದೀಕ್ಷಣ ಗೈವೆವು । ಬನ್ನಿರೈ ।
ಖುಲ್ಲರೆಂದೆನುತ ಕೇಳುತ್ತ ಸುರಬಲವು ॥ ೨ ॥

ವೃತ್ರನು ಇಂದ್ರನನ್ನು ಕುರಿತು ವಜ್ರಾಯುಧವನ್ನು ಪ್ರಯೋಗಿಸಿ ತನ್ನನ್ನು ನಾಶಮಾಡೆಂದು ಅಂತ್ಯಕಾಲದಲ್ಲಿ ಹೇಳುವ ಸಂದರ್ಭ, ವೃತ್ರನ ವಿಷ್ಣುಸ್ತುತಿ ಸೊಗಸಾಗಿ ಬಂದಿವೆ. ವಿಷ್ಣುಸ್ತುತಿಯ ಸಂದರ್ಭದ ಒಂದು ವಾರ್ಧಕ ಹೀಗಿದೆ–

ಎರಕೆ ಬಲಿಯದೆ ಹಸಿದ ಹಂಸೆ ಮರಿಗಳು ತಾಯ
ಬರವ ಕಾಣದೆ ಮರುಗಿ ಬಾಯ್ಬಿಡುವ ಪರಿಯಂತೆ
ಪರಿಕಿಸಲಿಕೆಳೆಗರುವು ಹಸಿವಿಗವ್ವೆಯ ಬರವ ನೆನೆವಂತೆ ನಿರತ ನಿನ್ನ ॥
ಚರಣವಂ ನೆನೆನೆನೆದು ಕರಗುವೆನು ದೇವ ನಾ
ಹರವಿರಿಂಚಾದ್ಯಖಿಳ ಸುರರ ಪದವಿಯನೊಲ್ಲೆ
ಧರೆಯ ಸಾಮ್ರಾಜ್ಯದಲಿ ಮನವಿಟ್ಟು ಬಾಳೆ ತವ ಸನ್ನಿಧಿಯ ಹೊರತು ಹರಿಯೇ ॥

ನಹುಷನು ಶಚಿಯನ್ನೆಳೆಯುವಾಗ ಅಲ್ಲಿಗೆ ಅಗಸ್ತ್ಯನು ಬಂದು ಬುದ್ಧಿಹೇಳಿ ಕೇಳದ ನಹುಷನಿಗೆ ಶಾಪವಿತ್ತನೆಂದು ಈ ಪ್ರಸಂಗದಲ್ಲಿರುವ ಕಥೆ. ನಹುಷನು ಶಚಿಯನ್ನು ಬಲಾತ್ಕರಿಸಿದಾಗ ಆಕೆ ಗೋಳಿಡುವ ಸಂದರ್ಭ ಹೀಗಿದೆ–

ರಾಗ ನಿಧಾನ ಭೈರವಿ; ಝಂಪೆತಾಳ

ಹರಹರ ಎನ್ನುವನಿಂದೂ । ಮದ । ಗರುವದೊಳೊಬ್ಬನು ಬಂದು ।
ನರಗುರಿ ಎಳೆವನು ಮುಂದು । ಎನ್ನ । ಬಿಡಿಸಿಯಾರ್ಪಾರಾದರು ಬಂದು ॥ ೧॥

ಕಾಮಿಸುತ್ತೈತಂದಿವನೂ । ಸು । ತ್ರಾಮನ ಸತಿಯನೊಯ್ಯುವನು ।
ಕೈಮುಗಿವೆನು ಸರ್ವರನೂ । ಬಂದು । ಪ್ರೇಮದಿ ಬಿಡಿಸಿರೆನ್ನುವನು ॥ ೩ ॥

ಎಲ್ಲಿ ಬಿಟ್ಟೈದಿದೆ ರಮಣಾ । ನಿನ್ನ । ವಲ್ಲಭೆಯಲ್ಲೊ ಮೋಹನ್ನಾ ।
ಖುಲ್ಲನ ಕೈಯಿಂದೆನ್ನಾ । ಬಿಡಿ । ಸಿಲ್ಲವೆ ಮಮತೆಯ ರನ್ನಾ ॥ ೪ ॥

ಎಳೆಗರುವನು ಹುಲಿ ಪಿಡಿವಾ । ವೋ । ಲಳುಕದೆ ಕುಮತಿ ಮೇಲ್ವರಿವಾ ।
ಲಲನೆಯ ಮೇಲತಿ ದಯವಾ । ನಿಡು । ತುಳುಹಿರಿ ಮಮ ಪತಿವ್ರತವಾ
॥ ೫ ॥

ಯಾರೈ ರಕ್ಷಿಪರಿಂದೂ । ಕೈ । ಮೀರಿದ ಮದಮುಖ ಬಂದೂ ।
ಶ್ರೀರಮಣನೆ ಸಲಹೆಂದೂ । ಆ । ನಾರಿಯು ಕೂಗಿದಳಂದೂ ॥ ೬ ॥

ಪ್ರಸಂಗಕರ್ತರು ಹಿಂದಿನ ಕಾವ್ಯಗಳನ್ನೂ ಹಿಂದಿನ ಪ್ರಸಂಗಗಳನ್ನೂ ಚೆನ್ನಾಗಿ ಅಭ್ಯಾಸ–ಮಾಡಿರುವುದು ಕಂಡುಬರುತ್ತದೆ. ವಾರ್ಧಕ ಷಟ್ಪದಿಗಳ ರಚನೆಯಲ್ಲಿ ಲಕ್ಷ್ಮೀಶನ ಜೈಮಿನಿ ಭಾರತದ ಪದ್ಯಗಳ ಶಬ್ದಾಲಂಕಾರ ಪ್ರಭಾವವನ್ನು ಗುರುತಿಸುವಂತಿದೆ. ಉದಾ: ಶಿವನ ವರ್ಣನೆ –

ಎಡಬಲದಿ ಗುಹಗಣಪ ಭೂತಗಳ ಪ್ರೇತಗಳ
ಗಡಣ ಕೈಮುಗಿವ ಮುನಿಜಾಲಗಳ ಮೇಳಗಳ
ನಡುವೆ ನಂದಿಯನೇರ್ದ ಕೊರಳನಡು ಕಪ್ಪುಗಳ ಶಶಿಕಲಾ ಮೌಳಿಯಿಂದ ।
ತೊಡೆಯೇರ್ದ ಗೌರಿಯಳ ಶೃಂಗಾರಲಂಕಾರ
ಅಡಿಗೆರಗುವನಿಮಿಷವ್ರಾತಗಳ ಗೀತಗಳ
ನುಡಿಯುವಪ್ಸರೆಯರತಿ ಚಂದದಿಂ ನಂದದಿಂ ಮೆರೆದುಕೊಂಡಿರಲಭವನು ॥

ಚಿತ್ರಕೇತುವಿನ ರಾಣಿ ಗರ್ಭಿಣಿಯಾದಳೆಂಬ ಸಂದರ್ಭದಲ್ಲಿ ಬರುವ ಈ ಪದ್ಯವನ್ನು ಗಮನಿಸಬಹುದು–

ರಾಗ ಸೌರಾಷ್ಟ್ರ; ಏಕತಾಳ

ಧರಣೀಶನರಸಿ ಕೇಳ್ । ಪರಿಕಿಸೆ ನಿನ್ನಂಗ । ದಿರವು ಬೇರಾಗಿಹುದೇನು ।
ತರುಣಿ ನಾನೆಂದಿನಂ । ತಿರುವೆನಿಂದಿನಲಿ ಪೊಸ । ಪರಿಯೆಂದು ಪೇಳ್ವೆಯ
ನೀನು ॥ ೧ ॥

ನಳಿನಾಕ್ಷಿ ನಿನ್ನಾಸ್ಯ । ಥಳಥಳಿಸುತಲಿಂತು । ಬಿಳುಪುದೋರುವುದೇನೆ ಪೇಳು ।
ಲಲನೆಯಲ್ಲವೆ ನಿನ । ಗೊಳವ ಪೇಳುವುದೇನು । ತಿಳಿ ಹೊಸ ಮುಕುರ
ರಂಜಿಪುದು ॥ ೨ ॥

ವೃತ್ತಕುಚದಿ ಕಪ್ಪು । ಮೆತ್ತಿದಂತೇನಿದು । ಸತ್ಯವ ಪೇಳು ಸುಶೀಲೆ ।
ಸತ್ಯವ ಕೇಳಲು । ಮಿಥ್ಯವ ನುಡಿವೆನೆ । ಕಸ್ತೂರಿ ತಾಗಿದುದಲ್ಲೇ ॥ ३ ॥

–ಇದು ಶಂಬರಾಸುರ ಕಾಳಗದಲ್ಲಿ ರುಕ್ಮಿಣಿ ಗರ್ಭಿಣಿಯಾದ ಸಂದರ್ಭದ ವರ್ಣನೆಯ ನೇರ ಪ್ರಭಾವದಲ್ಲಿ ಬರೆದ ರಚನೆಯಾಗಿದೆ.

ಅದ್ಯಪಾಡಿ ರಾಮಕೃಷ್ಣಯ್ಯನವರು ಕನ್ನಡ ಭಾಗವತವನ್ನು ಬಿಡದೆ ಅನುಸರಿಸಿರುವುದೂ ಗಮನಾರ್ಹವಾಗಿದೆ. ಕೆಲವು ಪದ್ಯಗಳನ್ನು ಅಲ್ಲಿಂದ ನೇರವಾಗಿ ತೆಗೆದುಕೊಳ್ಳಲಾಗಿದೆ. ಕೆಲವನ್ನು ಪರಿವರ್ತಿಸಿಕೊಳ್ಳಲಾಗಿದೆ. ಉದಾ: ಶಿವನನ್ನು ಚಿತ್ರಕೇತು ಕಾಣುವ ಸಂದರ್ಭ–

ನಿರ್ಜನವೆ ನೋಡುವಡೆ ಸಭೆಯಿದು
ಲಜ್ಜೆಯಿಲ್ಲದೆ ತೊಡೆಯ ಮೇಲಿಂ
ತಬ್ಜವದನೆಯ ಧರಿಸಿ ಕುಳ್ಳಿರಬಹುದೆಯೆನುತಿರಲು ।
ದುರ್ಜನರ ನಿಂದೆಯನು ಕೊಂಬರೆ
ಸಜ್ಜನರು ತನುಭಾವವನು ನೆರೆ
ವರ್ಜಿಸಿದ ಪರಮಾತ್ಮನಿದ್ದನು ಕೇಳದವನಂತೆ ॥

–ಕನ್ನಡ ಭಾಗವತ, ೬–೧೫–೩೭

ರಾಗ ಕಾಂಬೋಧಿ; ಝಂಪೆತಾಳ

ನಿರ್ಜೀವಿಗಳ ತೆರನ ಬಗೆದು ಸರ್ವರನು ತಾ
ಲಜ್ಜೆಗಳ ತ್ಯಜಿಸಿ ಸತಿಯೊಡನೆ ।
ಧೂರ್ಜಟಿಯು ಮೆರೆವನೆನ್ನುತ್ತ ನಗುತಲಿ ಭೂಪ
ದುರ್ಜನತ್ವದ ಮಾತುಸುರ್ದ ॥

ಭಾಮಿನಿ

ದುರ್ಜನರ ನಿಂದೆಯನು ಕೊಂಬರೆ
ಸಜ್ಜನರು ತನು ಭಾವವನು ನೆರೆ

ವರ್ಜಿಸಿದ ಪರಮಾತ್ಮನಿದ್ದನು ಕೇಳದವನಂತೆ ।
ಊರ್ಜಿತದ ಸಭೆ ಕಿವಿಯ ಮುಚ್ಚುತ
ಧೂರ್ಜಟಿಯನೀಕ್ಷಿಸುತಲಿರಲಾ
ಗರ್ಜಿಸುತ ಕ್ರೋಧದಲಿ ನುಡಿದಳು ಶೈಲರಾಜಸುತೆ ॥

–ವೃತ್ರಾಸುರನ ಕಾಳಗ

ಈ ಕೆಳಗಿನ ಪದ್ಯಗಳು ಪ್ರಸಂಗದಲ್ಲಿ ಹಾಗೆಯೇ ಸೂಕ್ತ ಸಂದರ್ಭಗಳಲ್ಲಿ ಅಳವಡಿಸಲ್ಪಟ್ಟಿದೆ.

ಅಂತ್ಯಕಾಲವೊ ಜಗಕೆ ಮೇಣು ಕೃ
ತಾಂತನೋ ತ್ವಷ್ಟೃವಿನ ಕೋಪವೆ
ಸಂತತಿಯ ಜನನವನು ಪಡೆದುದೊ ಹರ ಮಹಾದೇವ ।
ಅಂತರಿಕ್ಷವನವನಿಯನು ದಿ
ಗ್ದಂತಿಗಳನಾವರಿಸಿ ಬರಸಿಡಿ
ಲಂತೆ ಜನಿಸಿದನೊಬ್ಬನಮರಾರಾತಿ ಕುಂಡದಲಿ ॥

–ಕನ್ನಡ ಭಾಗವತ ೬–೯–೮

ಕೊಟ್ಟೆನೊಡಲನು ಕೊಂಬುದಿದನು ಯ
ಥೇಷ್ಟವೆನುತವೆ ಕೋರಿಕೆಯನೊಡೆ
ಮೆಟ್ಟಿ ತುರಿಯದಲ್ಲಿದ್ದ ತುರಿಯಾತೀತನೆಂದೆನಿಸಿ ।
ಬಿಟ್ಟನೊಡಲನು ಮೇಲೆ ಸುಮನೋ
ವೃಷ್ಟಿ ಸುರಿದುದು ಭಾಪೆನುತ್ತ ಶ್ರೀ
ವಿಷ್ಟಾಪಾಧೀಶ್ವರರು ಪೊಗಳಿದರಧಿಕ ಹರುಷದಲಿ ॥

–ಕನ್ನಡ ಭಾಗವತ ೬–೧೦–೯

ಈ ಕೆಳಗಿನ ಪದ್ಯವು ಸ್ವಲ್ಪ ಪರಿವರ್ತಿತವಾಗಿರುವುದನ್ನು ಗಮನಿಸಬಹುದು–

ಮುಂದೆ ನಿನಗೀ ಬುದ್ಧಿ ಸಜ್ಜನ
ವೃಂದದಲಿ ಸಂಭವಿಸದಿರಲೆಂ
ದಿಂದುಮುಖಿ ಶಾಪವನು ಕೊಟ್ಟಳನುಗ್ರಹವ ಮಾಡಿ ।
ಅಂದದನು ಕೇಳುತ್ತ ನೃಪಕುಲ
ನಂದನನು ಮದವುಡುಗಿ ಚರಣ
ದ್ವಂದ್ವದಲಿ ನಮಿಸಿದನು ದಿವ್ಯ ವಿಮಾನದಿಂದಿಳಿದು ॥

–ಕನ್ನಡ ಭಾಗವತ ೬–೧೧–೪೫

ಇಂದಿರಾಧವ ಭಕ್ತನಾಮದ
ರಿಂದಸುರಜನ್ಮದಲಿ ಜ್ಞಾನವು
ಚಂದದಿಂ ದೊರಕಿರಲಿ ನಿನಗೆಂದೆನುತ ಗ್ರಹಿಸೆ ।
ಅಂದವನು ಕೇಳುತ್ತ ನೃಪಕುಲ
ನಂದನನು ಮದವುಡುಗಿ ಪುಷ್ಪಕ
ದಿಂದಲಿಳಿಯುತ ಚರಣಯುಗ್ಮಕೆ ಮಣಿವುತಿಂತೆಂದ ॥

–ವೃತ್ರಾಸುರನ ಕಾಳಗ

ವೃತ್ರಾಸುರನ ಕಾಳಗವು ಒಳ್ಳೆಯ ಪ್ರಸಂಗವಾಗಿ ಮುಖ್ಯವಾದುದಾಗಿದೆ. ಪದ್ಯರಚನೆ ಸುಲಲಿತವಾಗಿದ್ದು ಉತ್ತಮ ವರ್ಣನೆ ಸಂಭಾಷಣೆಗಳಿಂದ ಕೂಡಿ ಓದುಗಬ್ಬವಾಗಿಯೂ ಸೊಗಸಾದ ರಚನೆಯೆಂದು ಧಾರಾಳವಾಗಿ ಹೇಳಬಹುದು.

೪. ಸಮುದ್ರ ಮಥನ :

ಕವಿ : ಮಟ್ಟಿ ವಾಸುದೇವ ಪ್ರಭು (ಸು. ೧೭೮೫ – ೧೮೫೦)

"ಬಿಲ್ಲಹಬ್ಬ–ಕಂಸವಧೆ' ಮತ್ತು "ಸಮುದ್ರ ಮಥನ' ಪ್ರಸಂಗಗಳನ್ನು ಬರೆದ ಮಟ್ಟಿ ವಾಸುದೇವ ಪ್ರಭು ಮೂಲ್ಕಿಯವನು. ಈಯೆರಡು ಭಾಗವತಕ್ಕೆ ಸಂಬಂಧಿಸಿದ ಪ್ರಸಂಗಗಳಲ್ಲದೆ "ರಾಧಾವಿಲಾಸ' ಎಂಬ ಶೃಂಗಾರ ಪ್ರಸಂಗವನ್ನೂ ಈತನು ಬರೆದಿದ್ದಾನೆ. ಈತನ ಇನ್ನೊಂದು ಕೃತಿ "ಚಂದ್ರಹಾಸ ಚರಿತ್ರೆ'. ಈತನ ಜನನ ಮರಣಗಳಿಗೆ ಗೋವಿಂದಪ್ಪೈ ಅವರು ನಿರ್ಣಯಿಸಿದ ಕಾಲ ಸು. ೧೮೦೫–೧೮೬೫. ೧೮೧೪ರಲ್ಲಿ ಪ್ರತಿಗೊಂಡ "ಕಂಸವಧೆ ಬಿಲ್ಲ ಹಬ್ಬ'ದ ತಾಡವಾಲೆ ಸಿಕ್ಕುವುದೆಂಬ ಕಾರಣದಿಂದ ಹದಿನೆಂಟನೆಯ ಶತಮಾನದ ಕೊನೆಯಲ್ಲಿದ್ದನೆಂದು ಶಿವರಾಮ ಕಾರಂತರು ಅಭಿಪ್ರಾಯಪಡುತ್ತಾರೆ. ಸುಮಾರು ೧೭೮೫–೧೮೫೦ರಲ್ಲಿ ಈತ ಬದುಕಿದ್ದನೆಂದು ಇಟ್ಟುಕೊಳ್ಳಬಹುದು.

ಮಟ್ಟಿ ವಾಸುದೇವ ಪ್ರಭುವು ಪರಮ ದೈವಭಕ್ತನಾಗಿದ್ದು ಗಳಿಸಿಕೊಂಡ ಅಪರೋಕ್ಷ ಜ್ಞಾನದ ಬಗ್ಗೆ ಒಂದು ಹೇಳಿಕೆಯಿದೆ. ಶ್ರೀ ಮಧ್ವಾಚಾರ್ಯರ ಶಿಷ್ಯ ಹೃಷಿಕೇಶ ತೀರ್ಥರ ಪರಂಪರೆಯಲ್ಲಿ ಬಂದ ಶ್ರೀ ರಘುವರ ಭೂಷಣ ತೀರ್ಥರು ಆರಾಧಿಸುತ್ತಿದ್ದ ಶ್ರೀರಾಮ, ತಾಂಡವ ಕೃಷ್ಣ, ವೇದವ್ಯಾಸಾದಿ ಮೂರ್ತಿಗಳನ್ನು ಅವುಗಳು ನಖಶಿಖಾಂತ ಅಲಂಕರಿಸಲ್ಪಟ್ಟ ಆಭರಣಗಳ ಸಮೇತ "ನುತಿಸಲೆನ್ನಳವೇ ಕೀರ್ತಿಯ, ರಘುರಾಮನ ಮೂರ್ತಿಯ..." ಎಂಬ ಹಾಡಿನ ಮೂಲಕ ಬಣ್ಣಿಸಿದಾಗ ಅವನು ಆ ಮೂರ್ತಿಗಳನ್ನು ಒಮ್ಮೆಯೂ ಕಣ್ಣಾರೆ ಕಂಡಿಲ್ಲವಂತೆ. ಅವನು ರಚಿಸಿದ "ಭಾವಕಿ ನೋಡಿವನ್ಯಾರೇ"

ಎನ್ನುವ ಪದ್ಯವೊಂದು ಮೂಲಿಕೆ ಶ್ರೀ ವೆಂಕಟರಮಣ ದೇವಳದ ಉತ್ಸವದ ವೈಭವವನ್ನು ಒಬ್ಬಳು ಸಖಿ ತನ್ನ ಗೆಳತಿಗೆ ವಿವರಿಸುವಂತಿದೆ. ಬಂಟವಾಳ, ಮುಂಡಕೂರು ಗೋಕರ್ಣ ಗೋವೆಯ ಮಂಗೇಶ ಶಾಂತಾದುರ್ಗಾದಿ ದೇವರುಗಳನ್ನು ನುತಿಸಿ ಇವನು ಬರೆದ ಭಜನೆ ಹಾಡುಗಳು ನೂರಾರು.

ವಾಸುದೇವ ಪ್ರಭುವು ಗೌಡಸಾರಸ್ವತ ಬ್ರಾಹ್ಮಣನೆಂದೂ ಮಟ್ಟಿ ವಾಸುದೇವ ಪ್ರಭು–ವೆನ್ನುವುದರಿಂದ ಅವನ ಹಿರಿಯರು ಮಟ್ಟಿ ಎಂಬ ಊರಿನವರಾಗಿರಬೇಕೆಂದೂ ಇವನು ಬಹಳ ಮೇಲಾದ ಯಕ್ಷಗಾನ ಕವಿಯೆಂದೂ ವರಕವಿಯೆಂದೂ ವೀರರಸದಲ್ಲಿ ಪಾರ್ತಿಸುಬ್ಬನು ಹೇಗೋ ಹಾಗೆ ಪ್ರಭುವು ಶೃಂಗಾರರಸದಲ್ಲೆಂದೂ "ನಮ್ಮ ಜಿಲ್ಲೆಯ ಸಾಹಿತ್ಯದಲ್ಲಿ ಶೃಂಗಾರರಸವೆಂದರೆ ಅವರು ಕೊಟ್ಟರೆ ಉಂಟು" ಎಂದೂ ಗೋವಿಂದ ಪೈಗಳು ಹೇಳಿರುತ್ತಾರೆ. ವಾಸುದೇವ ಪ್ರಭುವಿನ ಮೊಮ್ಮಗನ ಮೊಮ್ಮಗ ಮಟ್ಟಿ ಶ್ರೀನಿವಾಸ ಪ್ರಭುಗಳೆಂಬವರು ಮಂಗಳೂರಿನಲ್ಲಿ ವಾಸ ಮಾಡುತ್ತಿದ್ದಾರೆಂದು ೧೯೬೩ರಲ್ಲಿ ಶಿವರಾಮ ಕಾರಂತರು ಬರೆದಿರುತ್ತಾರೆ.

ವಾಸುದೇವ ಪ್ರಭುವು ಉತ್ತಮ ಕವಿಯೆಂಬುದಕ್ಕೆ ಅವನ ಪ್ರಸಂಗಗಳೇ ಸಾಕ್ಷಿ. ಮುದ್ದಣನೂ ಮಟ್ಟಿ ವಾಸುದೇವ ಪ್ರಭುವಿನ ಕೃತಿಗಳನ್ನು ನೋಡಿದ್ದಾನೆ ಮತ್ತು ಅವುಗಳಿಂದ ಪ್ರಭಾವಿತನಾಗಿದ್ದಾನೆ ಎಂದು ಪು. ಶ್ರೀನಿವಾಸ ಭಟ್ಟರು ಅಭಿಪ್ರಾಯಪಡುತ್ತಾರೆ. ಮುದ್ದಣನ ಪದ್ಯಗಳ ಮೇಲೆ ಮಟ್ಟಿ ವಾಸುದೇವ ಪ್ರಭುವಿನ ಸಮುದ್ರ ಮಥನದ ಪದ್ಯಗಳ ಪ್ರಭಾವವಿರುವುದನ್ನು ಅವರು ಗುರುತಿಸುತ್ತಾರೆ. ಯಕ್ಷಗಾನ ಕವಿಗಳಲ್ಲಿ ಮಟ್ಟಿ ವಾಸುದೇವ ಪ್ರಭುವಿನದು ಮುಖ್ಯ ಹೆಸರು. ಅವನ ವಸ್ತುವಿನ ಆಯ್ಕೆ, ವರ್ಣನಾವೈಖರಿ, ಕಥಾನಿರೂಪಣೆ, ಸಂಭಾಷಣ ವಿಧಾನ, ಯಕ್ಷಗಾನೋಚಿತ ಪದ್ಯರಚನೆ, ಸರಳ–ಸರಸ, ಭಾಷಾಪ್ರಯೋಗ – ಇವುಗಳಿಂದಾಗಿ ಅವನ ಕೃತಿಗಳು ಜನಪ್ರಿಯವಾಗಿದೆ. ಭಕ್ತಿಸ್ಥಾಯಿಯಾಗಿರುವ ಅವನ ಮನೋಭೂಮಿಕೆಯಿಂದ ಬಂದ ಈ ಪ್ರಸಂಗಗಳು ರಂಗದಲ್ಲೂ ಯಶಸ್ವಿಯಾಗಿದೆ. ತಾಳಮದ್ದಲೆಯಲ್ಲೂ ಯಶಸ್ವಿಯಾಗಿವೆ.

ಕಥಾ ವಿಚಾರ ; ಪ್ರಸಂಗವಿಮರ್ಶೆ :

ಮಟ್ಟಿ ವಾಸುದೇವ ಪ್ರಭುವಿನ ಈ ಕೃತಿಯು ಒಂದು ಉತ್ತಮ ಯಕ್ಷಗಾನ ಪ್ರಬಂಧ. ಸಂಸ್ಕೃತ ಭಾಗವತದಲ್ಲಿ ಅಷ್ಟಮ ಸ್ಕಂಧದ ೬ ರಿಂದ ೯ನೆಯ ಅಧ್ಯಾಯಗಳಲ್ಲಿ ಮತ್ತು ಕನ್ನಡ ಭಾಗವತದಲ್ಲಿ ಅಷ್ಟಮ ಸ್ಕಂಧದ ಏಳರಿಂದ ಒಂಬತ್ತನೆಯ ಅಧ್ಯಾಯಗಳಲ್ಲಿ ಸಾಕಷ್ಟು ವಿವರವಾಗಿ ಸಮುದ್ರ ಮಥನದ ಕಥೆ ಬಂದಿದೆ. ವಾಸುದೇವ ಪ್ರಭುವು ಕನ್ನಡ ಭಾಗವತವನ್ನು ಚೆನ್ನಾಗಿ ತಿಳಿದಿದ್ದನೆಂಬುದೂ ಅದನ್ನೇ ಅನುಸರಿಸಿದ್ದನೆಂಬುದೂ ಅವನ ಪ್ರಸಂಗವನ್ನೋದಿದಾಗ ತಿಳಿಯುತ್ತದೆ.

ಪ್ರಸಂಗದ ಮೊದಲಿಗೆ ಮತ್ತು ಕೊನೆಗೆ ವಾಸುದೇವ ಪ್ರಭುವುದ ತನ್ನ ಕೃತಿಯನ್ನು

ಲಕ್ಷ್ಮೀ ಸ್ವಯಂವರವೆಂದು ಹೇಳುತ್ತಾನೆ. ವಿಷ್ಣುವು ಲಕ್ಷ್ಮಿಯನ್ನು ವರಿಸಿದುದೇ ಅವನ ಕಥೆಯ ಕೇಂದ್ರ. ಉಳಿದೆಲ್ಲ ಕಥೆಗಳು ಪೂರಕವಾದುವು. ಆದರೂ ಆಯೆಲ್ಲ ಘಟನೆಗಳಿಗೂ ಉಚಿತವಾದ ನಿರೂಪಣಾವಕಾಶವನ್ನು ವಾಸುದೇವ ಪ್ರಭುವು ಕಲ್ಪಿಸಿಕೊಂಡು ಈ ದೃಶ್ಯಕಾವ್ಯವನ್ನು ಶ್ರವ್ಯಕಾವ್ಯವಾಗುವಂತೆಯೂ ನೋಡಿಕೊಂಡಿದ್ದಾನೆ.

ಪ್ರಸಂಗದ ಮೊದಲಿಗೆ ಲಕ್ಷ್ಮಿಯ ಸ್ತುತಿ ಹೀಗಿದೆ–

ಸುರನರಾರ್ಚಿತೆ ನಿಖಿಳಸಚರಾ
ಚರಭರಿತೆ ಪಾಲಾಬ್ಧಿಸುತೆ ನಿಜ
ಶರಣಜನ ಸುಫಲಪ್ರದಾಯಕಿ ಲೋಕನಾಯಕಿಯೇ ।
ಪರಮಸೌಭಾಗ್ಯಾಧಿಕಾರಿಣಿ
ಕರುಣಿಸೆನ್ನಿಷ್ಟಾರ್ಥಸಿದ್ಧಿಯ
ಸ್ಮರಿಸುವೆನು ನಿನ್ನಂಘ್ರಿಯನು ಮಹಾಲಕ್ಷ್ಮಿಯೆನಗೊಲಿದು ॥

ಸಾಮಾನ್ಯವಾಗಿ ಪ್ರಸಂಗಗಳ ಆದಿಯಲ್ಲಿ ಲಕ್ಷ್ಮಿಯನ್ನು ಪ್ರತ್ಯೇಕ ಪದ್ಯದಲ್ಲಿ ಸ್ತುತಿಸುವುದಿಲ್ಲ. ವಾಸುದೇವ ಪ್ರಭುವಿನ ಕೃತಿಯ ಕೇಂದ್ರವು ಲಕ್ಷ್ಮೀ ಸ್ವಯಂವರವೆಂಬುದರಿಂದಲೇ ಈ ಸ್ತುತಿ ಬಂದಿದೆ.

ಪರಮ ಪಾಲಾಬ್ಧಿಯಲಿ ರಮೆಯವ
ತರಿಸಿ ವಿಶ್ವಂಭರನ ತನ್ನಯ
ವರನನೆಸಗಿದನಾನಂದ ಕಥೆಯನು । ವಿವರಿಸುವೆನು ॥

ಎಂದು ಪ್ರಸಂಗದ ಮೊದಲಿಗೂ

ಧರಣಿಪತಿ ಕೇಳಿದೆಯ ದೈತ್ಯರು
ಸರಿದರೈ ತಮ ತಮ್ಮ ನಗರಕೆ
ಶರಧಿಮಥನ ಸಂಪೂರ್ಣವಾಯ್ತೆಂ । ದೊರೆವೆ ನಿನಗೆ ॥
ಶ್ರೀಮಹಾಲಕ್ಷ್ಮೀ ಸ್ವಯಂವರ
ವೀ ಮನೋಹರ ಕಥಾಸುಧಾರಸ
ನೀ ಮುದದೆ ಪಾಲಿಸು ನಿರಂತರ । ಕ್ಷೇಮವಹುದು ॥

....

ಲಕ್ಷ್ಮೀ ಸ್ವಯಂವರವ ಸಜ್ಜನರೆಲ್ಲ ಕೇಳೀ ।
ಸುಕ್ಷೇಮದಿಂದಲಿ ಸುಶ್ರಿತ ಸುಖದಿ ಬಾಳೀ ॥

–ಎಂದು ಕೊನೆಗೂ ಬಂದಿರುವುದರಿಂದ ಕವಿಯು ಇದಕ್ಕೆ ಲಕ್ಷ್ಮೀ ಸ್ವಯಂವರವೆಂದೂ ಹೆಸರಿರಿಸಿದ್ದಾನೆನ್ನಬಹುದು.

ಮಟ್ಟಿ ವಾಸುದೇವ ಪ್ರಭುವು ಭಕ್ತನೂ ವರ್ಣನಾನಿಪುಣನೂ ಆದ ಕವಿಯೆಂಬುದು ಅವನ ಪ್ರಸಂಗದಲ್ಲಿ ಸ್ಪಷ್ಟವಾಗುತ್ತದೆ. ಸೊಗಸಾದ ಸ್ತುತಿರೂಪದ ಹಾಡುಗಳನ್ನು ಸಂದರ್ಭಕ್ಕನು–ಗುಣವಾಗಿ ಕವಿ ರಚಿಸಿದ್ದಾನೆ. ದೇವತೆಗಳು ಮಾಡುವ ವಿಷ್ಣುಸ್ತುತಿ (ಪಾಹಿ ಸಚ್ಚಿದಾನಂದ । ಜಯತು ಗೋವಿಂದ ಪಾಹಿ । ಪಾಹಿ ಪರಮಾನಂದ ಜಯ ಜಯ । ತ್ರಾಹಿ ತ್ರಾಹಿ ಗೋವಿಂದ ಜಯ ಜಯ). ಆದಿನಾರಾಯಣನ ವರ್ಣನೆ (ನೋಡಿರೋ ಆದಿನಾರಾಯಣನ । ನೀವು ನೋಡಿರೋ । ನೋಡಿರೋ ಪಾಲಾಬ್ಧಿಯಾಲಯದೀ । ದಯ । ಮಾಡಿ ವಾಸುಕಿಯ ವಿಷ್ಟರದಿ । ಆಹಾ । ಗಾಢದಿ ನಮ್ಮನು ಪೀಡಿಪ ಖಳರ ಹೋ । ಗಾಡುವೆನೆನುತಲೋರಾಡಿ ಮಂಡಿಸಿದವನ । ನೋಡಿರೋ). ನಾರಾಯಣ ಲಕ್ಷ್ಮೀದೇವಿಯರಿಗೆ ಶೋಭಾನೆ (ಶ್ರೀಮಹಾನಂದ ಮೂರುತಿಗೇ । ಸೋಮಾರ್ಕಾಮಿತ ಪ್ರಭೆಯುತಗೇ । ವಾಮದೇವಾಮರ ಸ್ತೋಮವಿನುತಗೆ । ಕೋಮಲಮೂರುತಿ ದಾಮೋದರಗೇ । ಕಾಮಜನಕ ಗುಣಧಾಮ ರಣಾಂಗಣಗೇ । ಭೀಮಗಾರತಿಯ ಬೆಳಗೀರೆ । ಶೋಭಾನೆ). ದೇವತೆಗಳು ಮಾಡುವ ವಿಷ್ಣು ಪ್ರಾರ್ಥನೆ (ಪಾಹಿ ಮುಕುಂದ ಮುರಾರಿ । ಜಯಪಾಹಿ ತ್ರಿಭುವನೋದ್ಧಾರಿ). ನಾರದನ ವಿಷ್ಣುಭಜನೆ (ನಾರಾಯಣ ಹರಿ ನಮೋ ನಮೋ । ಸುರ । ಪಾದವಿನುತ ನಮೋ ನಮೋ) – ಇತ್ಯಾದಿಗಳು ಕವಿಯ ಭಕ್ತಿ ನಿರ್ಭರತೆಯನ್ನು ನಿರೂಪಿಸುತ್ತವೆ.

ಸರಳವಾದ ನುಡಿಗಳಿಂದ ಸುಂದರವಾದ ಸುಲಲಿತವಾದ ಪದ್ಯಗಳನ್ನು ಹೆಣೆಯಬಲ್ಲ ಸಾಮರ್ಥ್ಯ ವಾಸುದೇವ ಪ್ರಭುವಿಗಿದೆ. ವರ್ಣನಾನಿಪುಣನಾದ ಆತನ ಕೆಲವು ವರ್ಣನ ಪರವಾದ ಪದ್ಯಗಳನ್ನು ಅವಲೋಕಿಸಬಹುದು:–

ದೇವಾಸುರರು ಮಂದರಶೈಲವನ್ನು ಕಿತ್ತು ಹೊರುವುದು–

ಕಿತ್ತರಾಗ । ಶೈಲವ । ಪೊತ್ತರಾಗ ।
ಹೊತ್ತರಾ ಮಂದರ ಸುರಾಸುರ । ಮೊತ್ತ ಭುಜ ಹೊಯ್ಯುತ್ತಲಾರ್ಭಟಿಸಿ
ಸುತ್ತ ಬಲವತ್ತಿತ್ತ ಸರಿಯಲೆ । ಮತ್ತ ಭಾಷೆಯ ಪೊತ್ತು ಕೊಳುತಲಿ ।
ಸುತ್ತಮುತ್ತಲು ಒತ್ತಿ ಪದಗಳ । ನೊತ್ತಿನಲಿ ಬಲು ಚಿತ್ತದಲಿ ಛಲ ।
ವೆತ್ತಿ ಗರುವದಲೆತ್ತಿ ನಡೆವಾ । ಚಿತ್ರವೇನದ ಚಿತ್ತರಿಸುವೆನು । ಕಿತ್ತರಾಗ ॥

ಸಮುದ್ರ ಮಥನದಿಂದುದ್ಭವಿಸಿದ ಅಪ್ಸರಸ್ತ್ರೀಸಮೂಹದ ನಾಟ್ಯ–

ರಾಗ ಮಾರವಿ; ಏಕತಾಳ

ಒದಗುತ್ತಾಡಿದರಾನಂದದಲಿ
ಮದನಕತಾರಿಯಂದದ । ಚದುರೆಯರೆಲ್ಲ ।
ಒದಗುತ್ತಾಡಿದರಂದು ॥
ಜಗವ ಮೋಹಿಸುವಾ । ಸುಗುಣೆಯರಾನನ
ಝುಗ ಝುಗಿಸುವ ಕಾಂತಿಯು ಬೆಳಗೇ ।
ಧಿಗಿಲೆನುತಲಿ ಕುಚ । ನಿಗುರಿ ನಿಗುರುತಿರೆ ।
ಲಗುವಿನ ಬಡನಡು ಬಳುಕಿ ಮಿಗೆ ।
ಸೊಗಸಿನ ತನು ಪರಿಮಳಕೆ ಭ್ರಮರತತಿ ।
ಯಗಲದೆ ಕೂಡ್ಯೈದಿತು ಭ್ರಮೆಗೆ ।
ಮುಗುಳಂಬನ ಕೇಳಿಯ ರಣರಂಗದಿ ।
ಬಗೆದೋರಲು ಹಿಂತೆಗೆಯಲಾರದಿಹ ।
ಮುಗುದೆಯರರ್ತಿಯಲೀ ॥ ಆಡಿದ
ರಗಣಿತ ಭಾವದಲಿ । ಹ–
ಸ್ತಗಳಭಿನಯ ತೋರುತಲೀ । ಚಲುವಿಕೆ
ನಗೆಮೊಗದೊಲವಿನಲಿ । ಕುಣಿದರು
ನಗುತ ಮೋಹಿಸುತ । – ಹಜ್ಜೆಗಳಿಡುತ
ತಟಕ್ಕೈ ಝುಂತರಿ ಕಿಟ ಕಿಟತಕ
ತದ್ದಿಂ ನಾನು ಧಿಮಿಧಿಮಿ ಕಿಟರೆನುತಲಿ ॥

ಲಕ್ಷ್ಮೀಸ್ವಯಂವರದ ಸಂದರ್ಭದಲ್ಲಿ ಆಕೆ ತಮ್ಮನ್ನೇ ವರಿಸಬೇಕೆಂದು ಪುರುಷ ಶ್ರೇಷ್ಠರು ಹರಕೆಹೊತ್ತುದಲ್ಲದೆ ತಮ್ಮನ್ನು ಈ ರೀತಿಯಲ್ಲಿ ಶೃಂಗರಿಸಿಕೊಂಡರಂತೆ–

ರಾಗ ಭೈರವಿ; ಆದಿತಾಳ

ಲಲನೆ ಶ್ರೀದೇವಿಯು ಕಂಡಾ ಘಳಿಗೆ ಭ್ರಮಿಸಲೆನುತ ।
ಕೆಲರು ವಸ್ತ್ರಾಭರಣದಿ ಶೃಂಗಾರವಾಗಿ ತಾವ್ ಮೆರವುತ್ತ ।
ಒಲಿದು ಪುಷ್ಪಮಾಲೆಯಿಕ್ಕಲೆನ್ನುತಲೆದೆಯ ನೆಗಹುತ ।
ನಲುಗಿಸಿ ಕಿವಿವಂಟಿಗಳನು ಕೆಲರು ಬಲ್ ಬಗೆದೋರುತ ॥
ತಿರುಹಿ ಮೀಸೆಯೆಳೆದು ಬೆರಳುಂಗುರಗಳನೆ ತೋರುತ ।
ಕೊರಳ ಕಂಠಿ ತೋಳಸರಿಗೆ ಪದಕ ತಾವೇ ನೋಡುತ ।

ಶಿರದೊಳಿಟ್ಟ ಮುಕುಟಯೆಡಕೆ ಕರದೊಳೋರೆಗೈವುತ್ತ ।
ಭರದಿ ದರ್ಪಣವನ್ನು ಬಾಯ್ದೆರೆದು ಹಲ್ಲ ಕಿರಿವುತ್ತ ॥
ಧಾರುಣಿ ಮಧ್ಯದಿ ತಾನೇ ಧೀರನೆಂದೋರ್ವನು ।
ಚಾರುತನೈಶ್ವರ್ಯಕ್ಕೆಣೆಯಾರಿಹರೆಂದೋರ್ವನು ।
ಭೂರಿನೃಪರೆಲ್ಲ ತನ್ನಾಜ್ಞಾಧಾರರೆನ್ನುತೋರ್ವನು ।
ಭೂರಿದೊರೆ ತಾನೆಂದೋರ್ವ ಅಹಂಕಾರದಿ ಮಂಡಿಸಿದನು ॥

ಮೋಹಿನೀ ರೂಪದಲ್ಲಿ ಬಂದ ನಾರಾಯಣನ ಸ್ತ್ರೀರೂಪ ವರ್ಣನೆ–

ರಾಗ ಕಾಂಬೋಧಿ; ಆದಿತಾಳ

ನಾರಿ ರತುನ ವಿ । ಹಾರಿ ಮದನಕ । ಠಾರಿ ಶೃಂಗಾರಿ ।
ವಾರೆನೋಟ ವ । ಯ್ಯಾರದೊಲಪು ಮದ । ವೇರಿಹ ರತಿರಣ । ಧೀರೆ ಸುಗುಣಮನೆ ॥
ಗಲುಕುವ ಕುಚಭಾರಕೆ ನಡು । ಬಳುಕುವ ಪೆರ್ನೊಸಲ ಗಲ್ಲವು ।
ಥಳಥಳಿಸುವ ವಲಪಿನ ಭಾವದಿ ಜಗ ।
ಒಲಿಸುವುದಾ ನವ । ಲಲಿತಾಧರ ನಯನದಂತಾ ।
ವಳಿ ಮೂಗು ಸೊಬಗಿನ । ಗಳಕಟಿ ಜಂಘೆಯ । ಸರ್ವಾಂಗದಿ ।
ಚಲುವಿಕೆಸತಿ ಘಲ । ಘಲರೆನುತಾಡುವ ॥
ನೋಡುತಾ । ದರ್ಪಣದಿ ಮೋಹನೆಯು ನೆಗೆ ।
ದಾಡುತಾ । ಉಗುರಲಿ ಕುರುಳನು ಸಮ ।
ಮಾಡು ತಾ । ನೂತನದಲಿ ನಲಿನಲಿ ।
ದಾಡುತಾ । ಅಡಿಯಿಡುತಲಡಿಯಿಡುತ ।
ಕೂಡೆ ಕುಶಲಗತಿಯ ತೋರಿಸಿ । ಗಾಢದಿ ಖಳತತಿಯ ಮೋಹಿಸಿ ।
ನೋಡಿ ಆಡಿ ಮರು । ಳ್ಮಾಡದೆ ಬಿಡೆನೆನು ।
ತಾಡಿ ಪಾಡಿ ಲೋ । ಲಾಡಿ ಬರುತಿಹ ॥ ನಾರಿ ॥

ಅನುಪ್ರಾಸಯುಕ್ತವಾದ ಇಂತಹ ಗೇಯರಚನೆಗಳಿಂದ, ವರ್ಣನೆಗಳಿಂದ ಪ್ರಸಂಗ ಸೊಬಗುವಡೆದಿದೆ.

ವಾಸುದೇವ ಪ್ರಭುವು ಲಕ್ಷ್ಮೀಸ್ವಯಂವರ ಸಂದರ್ಭವನ್ನಂತೂ ಕನ್ನಡ ಭಾಗವತವನ್ನು ನೇರವಾಗಿ ಅನುಸರಿಸಿಕೊಂಡು ಬರೆದಿದ್ದಾನಲ್ಲದೆ, ಇತರ ಅನೇಕ ಕವಿಗಳಂತೆ ಅಲ್ಲಿಂದಲೇ ಕೆಲವು ಷಟ್ಪದಿಗಳನ್ನು ತೆಗೆದು ಅಳವಡಿಸಿಕೊಂಡಿರುವುದು ಕಂಡುಬರುತ್ತದೆ. ಕೆಲವು ಉದಾಹರಣೆಗಳು : ಸಮುದ್ರ ಮಥನದಲ್ಲಿ ವಿಷವು ಹುಟ್ಟಿದಾಗ

ದೇವಾಸುರರು ಶಿವನನ್ನು ಪ್ರಾರ್ಥಿಸಲು ಶಿವನು ಆ ಕಡೆಗೆ ಮನಮಾಡುವ ಸಂದರ್ಭ
ಭಾಮಿನಿಷಟ್ಪದಿ–

ಇಂತು ಪೊಗಳುತ್ತಿರಲು ಗೌರೀ
ಕಾಂತನಾಲಿಸಿ ಸಕಲ ಜೀವರ [ಸುರವರ]
ಸಂತತಿಯ ಸಂಕ್ಲೇಶ ಪಾರಂಪರೆಯನೀಕ್ಷಿಸುತ ।
ಕಂತುಹರನತ್ಯಧಿಕ ಕರುಣಾ–
ಕ್ರಾಂತನಾದನು ಕೆಲದೊಳಿರ್ದಾ
ಕಾಂತೆಗಿದನಾಜ್ಞಾಪಿಸಿದನಾ ನೆರೆದ ಸಭೆಯೊಳಗೆ ॥
–ಕನ್ನಡ ಭಾಗವತ ೮–೭–೩೮

ಲಕ್ಷ್ಮೀಗೆ ಅಭಿಷೇಕ ಮಾಡುವ ಸಂದರ್ಭ –
ನಿರುತವಿದು ತಪ್ಪಲ್ಲ ಪರಮೇ
ಶ್ವರನ ನುಡಿಯದೆನುತ್ತ ತಂದರು
ಪರಮ ಮಾನಿನಿಗಾಭಿಷೇಚಾನೀಕ ವಸ್ತುಗಳ ।
ಸುರನದೀಪ್ರಮುಖಾಪಗಾದೇ
ವ್ಯರು ನಿಜಾಕೃತಿವಿಡಿದು ಚಾಮೀ
ಕರಕಲಶನಿಕರದಲಿ ತಂದರು ವಾರಿಗಳನೊಲಿದು ॥
–ಕನ್ನಡ ಭಾಗವತ ೮–೮–೧೮

ಈ ಪದ್ಯವು ಪ್ರಸಂಗದಲ್ಲಿ ಹೀಗೆ ಬದಲಾಗಿದೆ–
ದೊರೆ ಪರೀಕ್ಷಿತ ಕೇಳಿದ್ಯೆ ಪುರ
ಹರನ ನುಡಿ ತಪ್ಪಲ್ಲೆನುತದ್ವಯ
ನೆರವಿ ಸುಮ್ಮನಿರಲ್ಕೆ ಸುರನದಿ ಮುಖ್ಯ ದೇವಿಯರು ।
ಸಿರಿಗೆ ಅಭಿಷೇಕವನು ಮಾಳ್ಪಡೆ
ವರನಿಜಾಕೃತಿ ಧರಿಸಿ ಚಾಮೀ
ಕರದ ಕಲಶಂಗಳಲಿ ತಂದರು ನಿರ್ಮಲೋದಕವ ॥

ಲಕ್ಷ್ಮೀ ಉದ್ಭವದ ಸಂದರ್ಭದ ಪದ್ಯ–
ಮಂದರವ ಬೀಸಾಡಿ ಹಿಡಿಹಿಡಿ
ಮಂದಜಾಕ್ಷಿಯ ದೇವದಾನವ
ವೃಂದವನು ನಿಲಹೇಳು ನಿಲಹೇಳದಟರಬ್ಬರವ ।
ಇಂದುಮುಖಿಯನು ತೆಗೆಯಿಯೆನೆ ಗೋ

ಎಂದನಿತ್ತನು ಸೆರಗಸೊಯ್ಯನೆ
ತಂದನಬಲೆಯನೀ ತಡಿಗೆ ಸುರಕೋಟಿ ಕೈಮುಗಿಯೆ ॥
—ಕನ್ನಡ ಭಾಗವತ, ೮–೮–೧೫

ಈ ಪದ್ಯವು ಪ್ರಸಂಗದಲ್ಲಿ ಹೀಗೆ ಬದಲಾಗಿದೆ–
ಹಿಡಿರೊ ಈ ಸತಿಯ ಮಂದರವ ಬಿಸಾಡಿರೆಂ
ದೊಡನೆ ಸುಭಟರು ಬೇಗ ।
ನುಡಿಯಲು ಹರಿಯುತಾ ಸೆರಗನಿತ್ತಾಕೆಯ
ತಡಿಗಡರಿಸಿದನಾಗ ॥

ಮೋಹಿನಿಯ ಆಗಮನದ ವರ್ಣನೆ –
ಸುಳಿದಳೋ ಸತಿವಿಟರ ಹೃದಯವ
ತುಳಿದಳೋ ಖಳರಿಂಗೆ ವಶ್ಯವ
ತಳೆದಳೋ ಸುರವರ ಮನೋರಥ ಪೂರ್ಣಸಂಗರವ ।
ಹಿಡಿದಳೋ ಹಿಂಡಿದಳೊ ಹರಹರ
ಹೊಲಬುಗೆಡುತಿರ್ದುದು ಸಭಾಮಂ
ಡಲ ಸರೋಜಾನನೆಯ ರೂಪು ವಿಲಾಸವನು ಕಂಡು ॥
—ಕನ್ನಡ ಭಾಗವತ, ೮–೯–೨೮

—ಈ ಪದ್ಯವು ಪ್ರಸಂಗದಲ್ಲಿ ಅಲ್ಪಸ್ವಲ್ಪ ಬದಲಾವಣೆಗಳೊಡನೆ ಹೀಗಿದೆ–
ಸುಳಿದಳೋ ಸತಿ ವೀರ ಹೃದಯವ
ತುಳಿದಳೋ ವೀರರಿಗೆ ವ್ಯಸನವ
ತಳೆದಳೋ ಕಳೆದಳೊ ಮನೋರಥಪೂರ್ಣ ಸಾಗರವ ।
ಹಿಡಿದಳೋ ಹಿಂಡಿದಳೊ ಹರಹರ
ಹೊಲಬುಗೆಡುತಿರ್ದುದು ಸಭಾಮಂ
ಡಲ ಸರೋಜಾನನೆಯ ರೂಪವಿಲಾಸವನು ಕಂಡು ॥

ಲಕ್ಷ್ಮೀಸ್ವಯಂವರದ ಅನಂತರ ಮೂರು ಸಂಸ್ಕೃತ ಪದ್ಯಗಳನ್ನು ಶ್ಲೋಕಃ ಎಂದು ಬರೆಯಲಾಗಿದೆ–ಕ್ರಮವಾಗಿ – ಲಕ್ಷ್ಮೀ ಶ್ರೀಲಲಿತೇಕ್ಷಣೇ ನಿರುಪಮೇ ಶ್ರೀ ವೈಷ್ಣವೀ ನಿರ್ಮಲೇ; ಶ್ರೀವಿಷ್ಣುಃ ಪರಿಪೂರ್ಣ ಸದ್ಗುಣ ನಿಧಿಃ ಪೀತಾಂಬರಾಲಂಕೃತೋಃ; ಸಂಪದ್ದ್ವಾರ ವಿರಾಜಿತಃ ಶುಭಕರಃ ವಿದ್ಯಾಧಿರಾಜತ್ಸಭಾ–ಎಂದು ತೊಡಗುವ ಈ

ಮೂರು ಸಂಸ್ಕೃತ ಪದ್ಯಗಳು ಬಹುಶಃ ವಾಸುದೇವ ಪ್ರಭುವಿನ ರಚನೆಗಳಾಗಿರಲಾರವು; ಆತ ಬೇರೆಡೆಯಿಂದ ಇವುಗಳನ್ನು ಎತ್ತಿಕೊಂಡಿರಬೇಕು.

ಹಲವು ಪ್ರಸಂಗಗಳಲ್ಲಿರುವಂತೆ ಚಾರಕರೇ ಮೊದಲಾದ ವ್ಯಕ್ತಿಗಳು ಗ್ರಾಮ್ಯ ಭಾಷೆಯಾಡುವಂತೆ ವಾಸುದೇವ ಪ್ರಭುವು ಪದ್ಯಗಳನ್ನು ರಚಿಸಿದ್ದಾನೆ. ಅಮರಾವತಿಯನ್ನಾಳುತ್ತಿದ್ದ ರಾಕ್ಷಸರ ಬಳಿಗೆ ದೇವೇಂದ್ರಾದಿಗಳು ಬಂದಾಗ ದ್ವಾರಪಾಲಕ ಹೇಳುವ ಪದ್ಯ ಹೀಗಿದೆ–

ತಡಿ ತಡಿ ನಿಲ್ಮ್ಯಾಲ್ । ಕಡಿವೆ ನೋಡೆಮ್ಮೊಳ್ ।
ನುಡಿ ದಿಟವಾ ಮ್ಯಾಲ್ ನಡಿ ಕೇಳ್ಮ್ಯಾ ।
ಗಡಬಡಿಸಿದಡೆ ಮುಸುಡೊಡೆವೆ ಬಿಡೌಜ । ನೀ ಕೆಡಬೇಡ್ಮ್ಯಾ ॥

–ಇಂತಹ ನಾಲ್ಕು ಪದ್ಯಗಳಿವೆ. ಮುಂದೆ ಒಬ್ಬ ದ್ವಾರಪಾಲಕನ ಪದ್ಯವು ಉರ್ದುಮಿಶ್ರಿತವಾಗಿದೆ–

ಅಮ್ಹೊ ಖಾವಂದ ವೈರೋಚನಿ ಬಾದಶಾ ।
ತುಮ್ಹೊ ದರ್ವಾಜ ಹಂ ನೈ ಛೋಡೇಂಗೆ ।
ತುಮ್ಹೊ ದರ್ವಾಜ ಹಂ ನೈ ಛೋಡೇಂಗೆ ।
ಖಡ್ರೊ ಭೊಮ್ಹಾಡರ್ ನೈ । ಚಲ್ ಚಲ್ ಬೇಟೀ ಛೋಡ್ ॥

ವೈವಿಧ್ಯಕ್ಕಾಗಿ ಪ್ರಭುವು ಈ ರೀತಿಯ ರಚನೆಗಳನ್ನು ಮಾಡಿದ್ದಾನೆ. ಶರಧಿಮಥನ ಮಾಡಿದ ಸಂದರ್ಭವನ್ನು ಕೋಲಾಟದ ಪದ್ಯವನ್ನಾಗಿ ಬರೆದಿದ್ದಾನೆ–

ಶರಧಿಯ ಮಥಿಸಿದರು । ಸುಭಟರೆಲ್ಲ । ಶರಧಿಯ ಮಥಿಸಿದರು ।
ಆ ಮಹಾ ಮಥನದಿ । ಸೋಮನುದ್ಭವಿಸಲು ।
ವಾಮದೇವನು ಕಂಡು । ಪ್ರೇಮದಿಂದ ತಾನೊಯ್ದ । ಕೋಲುಕೋಲೆನ್ನಿರೆ॥
ಆತತುಕ್ಷಣ ಮತ್ತೆ । ನೂತನದಿ ಮಥಿಸಿ ।
ಖ್ಯಾತೆ ಲಕ್ಷ್ಮಿಯು ಜಗ । ನ್ಮಾತೆ ಮೆಯ್ದೋರಿದಳು । ಕೋಲು ಕೋಲೆನ್ನಿರೇ॥

ವಿಷ್ಣು ಲಕ್ಷ್ಮೀ ವಿವಾಹದ ಅನಂತರ ಅರಸಿನೆಣ್ಣೆ ಹಾಡು, ಶೋಭಾನೆಗಳನ್ನು ಬರೆದು ವಾಸುದೇವ ಪ್ರಭುವು ವೈವಿಧ್ಯಪೂರ್ಣವಾಗಿಸಿದ್ದಾನೆ.

ವಾಸುದೇವ ಪ್ರಭುವು ಕನ್ನಡದ ಹಲವು ಕಾವ್ಯಗಳನ್ನು ಓದಿದಂತಿದೆ. ಜೈಮಿನಿ

ಭಾರತದ ಪದ್ಯವೊಂದರ ನೇರ ಪ್ರಭಾವವು ಈ ಕೃತಿಯಲ್ಲಿರುವುದನ್ನು ಶ್ರೀ ಪು. ಶ್ರೀನಿವಾಸ ಭಟ್ಟರು ಎತ್ತಿ ತೋರಿಸಿರುತ್ತಾರೆ. ಅದು ಹೀಗಿದೆ–

ಕಲಕೀರವಾಣಿಯರ್ ಕಾಳಾಹಿವೇಣಿಯರ್
ಕಲಭಮದದಾನೆಯರ್ ಕಾಯಜನಿದಾನೆಯರ್
ಕಲಧೌತ ಗಾತ್ರೆಯರ್ ಕಂಜದಳ ನೇತ್ರೆಯರ್ ಕಳೆವೆತ್ತ ಕಾಮಿನಿಯರು ।
ಕಲಶಕುಚಯುಗಳೆಯರ್ ಕನಕಮಣಿನಿಗಳೆಯರ್
ಕಳಕಳಿಪ ವದನೆಯರ್ ಕುಂದಾಭರದನೆಯರ್
ಕಳೆದುಳಿದ ರನ್ನೆಯರ್ ಕಾಂತಿ ಸಂಪನ್ನೆಯರ್ ನಂದನಕೆ ನಡೆತಂದರು ॥
–ಜೈಮಿನಿ ಭಾರತ ೩೦–೩

ಈ ಪದ್ಯದ ನೇರ ಪ್ರಭಾವವುಳ್ಳ ಪ್ರಸಂಗದ ಪದ್ಯ ಹೀಗಿದೆ–
ಅಧಿಕ ಗುಣವಂತೆಯರ್ ಮೃದುವಚನ ಕಾಂತೆಯರ್
ಪದುಮದಳ ನೇತ್ರೆಯರ್ ಮುದದಿ ಸತ್ಪಾತ್ರೆಯರ್
ಮದನನ ಕಠಾರಿಯರ್ ಮುದದಿ ರಣಧೀರೆಯರ್
ಸುಧೆಯುದಧಿಯಾತ್ಮಜೆಯರು
ಪದಕಮಣಿಮಾಲೆಯರ್ ತ್ರಿದಶರನುಕೂಲೆಯರ್
ಮುದದಿ ಸೌಭಾಗ್ಯೆಯರ್ ನಿಧಿಗೆ ಅತಿ ಯೋಗ್ಯೆಯರ್
ಚದುರತನದಬಲೆಯರ್ ವಿಧುವದನ ಸುಫಲೆಯರ್ ವದಗಿದರ್ ದಡಕಾಗಲು॥

ಲಕ್ಷ್ಮೀಶನ ಜೈಮಿನಿ ಭಾರತದ ಈ ಮೇಲಿನ ಪದ್ಯದಲ್ಲಿ ಪಾದದ ಪ್ರಥಮಾಕ್ಷರವು ಹತ್ತು ಮಾತ್ರೆಗಳ ಘಟಕದ ಆದಿಯಲ್ಲಿ ಪುನರಾವೃತ್ತವಾಗಿದ್ದರೆ, ಪ್ರಸಂಗದಲ್ಲಿ ದ್ವಿತೀಯಾಕ್ಷರವು (ಪ್ರಾಸಾಕ್ಷರವು) ಹತ್ತು ಮಾತ್ರೆಗಳ ಘಟಕದಲ್ಲಿ ದ್ವಿತೀಯ ಸ್ಥಾನದಲ್ಲಿ ಪ್ರಾಸದಂತೆ ಪುನರಾವೃತ್ತವಾಗಿದೆ.

ಪು. ಶ್ರೀನಿವಾಸ ಭಟ್ಟರು "ನಮ್ಮ ಜಿಲ್ಲೆಯ ಮಹಾಕವಿಯೆನಿಸಿದ ಮತ್ತು ಯಕ್ಷಗಾನ ಪ್ರಸಂಗ ಬರೆಯುವ ಮೂಲಕ ಸಾಹಿತ್ಯದೀಕ್ಷೆ ವಹಿಸಿದ ಕವಿವರ ನಂದಳಿಕೆ ಮುದ್ದಣನು ಕೂಡ ಪ್ರಭುಗಳ ಪ್ರಸಂಗಗಳಿಂದ ಸ್ವಲ್ಪವಾದರೂ ಪ್ರಭಾವಿತನಾಗಿರಬಹುದೆಂದು ಊಹನೆಗೆ ಅವಕಾಶವಿದೆ" ಎಂದು ಹೇಳಿದ್ದಾರೆ. ಸಮುದ್ರ ಮಥನದ

ನೀ–ನಾರೆ ಸುಗುಣೆ ನೀ । ನಾರೆನುತ ದಯ । ದೋರೆ ನುಡಿಬಾರೆ ।
ವಾರಿಜಾಕ್ಷಿ ಮದ । ವಾರಣಗಮನೆ ನೀ । ನಾರೆಂದರುಹೆಮ್ಮೊಳು ॥

ಎಂಬ ಪದ್ಯವು ರತ್ನಾವತೀ ಕಲ್ಯಾಣದ
ನೀರೆ ಸುಗುಣೆ ದಯ । ದೋರುತ ಪೇಳ್ ನೀ । ನಾರೆನುತಲಿ ಚದುರೆ ।
ನೀರಜಾಕ್ಷಿ ಮದ । ವಾರಣ ನಡೆ ನಗೆ । ಬೀರುತ ನುಡಿ ಧೀರೆ ॥

–ಎಂಬ ಪದ್ಯಕ್ಕೂ ಸಮುದ್ರ ಮಥನದ "ನೋಡಿರೋ । ಆದಿ ನಾರಾಯಣನ ನೀವು ನೋಡಿರೋ" ಎಂಬ ಪದ್ಯವು ಕುಮಾರ ವಿಜಯದ "ನೋಡಿರೋ । ದಿಗಂಬರ ಧೂರ್ಜಟಿಯನು ಕೊಂ । ಡಾಡಿರೋ" ಎಂಬ ಪದ್ಯಕ್ಕೂ ಆಕರವೆಂದು ಶ್ರೀನಿವಾಸಭಟ್ಟರು ಹೇಳಿದ್ದಾರೆ.

ವಾಸುದೇವ ಪ್ರಭುವಿನ ಸಮುದ್ರ ಮಥನವು ಒಂದು ಉತ್ತಮ ಯಕ್ಷಗಾನ ಕೃತಿ. ಒಳ್ಳೆಯ ರಂಗಕೃತಿಯಾಗಿಯೂ ಒಳ್ಳೆಯ ಗೇಯ ಬಂಧಗಳಿಂದೊಡಗೂಡಿದ ವಾಚನಯೋಗ್ಯವಾದ ಕಾವ್ಯಕೃತಿಯಾಗಿಯೂ ಈ ಪ್ರಸಂಗಕ್ಕೆ ವಿಶಿಷ್ಟ ಸ್ಥಾನವಿದೆ. ಸುಲಭ ಶೈಲಿ, ಸರಳ ಅರ್ಥಗರ್ಭಿತ ವರ್ಣನೆಗಳು ಕ್ರಮಾಗತವಾದ ಕಥಾನಿರೂಪಣೆಗಳಿಂದ ಪ್ರಸಂಗವು ಮೆರುಗು ಪಡೆದಿದೆ.

೫. ರೇವತೀ ಕಲ್ಯಾಣ :

ಕವಿ : ವಾಮಂಜೂರು ಪರಮೇಶ್ವರಯ್ಯ (ಸು. ೧೮೪೦ – ಸು. ೧೯೦೦)

"ರೇವತೀ ಕಲ್ಯಾಣ"ದ ಕರ್ತೃ ವಾಮಂಜೂರು ಪರಮೇಶ್ವರಯ್ಯ. ತನ್ನ ಬಗ್ಗೆ ಪ್ರಸಂಗದ ಕೊನೆಯಲ್ಲಿ ಕವಿ ಹೇಳಿದ ಮಾತುಗಳು ಹೀಗಿವೆ–

ಚೆನ್ನಪಟ್ಟಣ ರಾಜಧಾನಿಯ
ಕನ್ನಡಾ ಜಿಲ್ಲೆಯೊಳು ಮಂಗ್ಳೂ
ರೆನ್ನುವ ತಾಲೂಕು ವಾಮಂ । ಜೂರೊಳಿರುವ ॥
ಧರಣಿಸುರನಹ ವಾಸುದೇವನ
ತರಳ ಪರಮೇಶ್ವರನು ರಚಿಸಿದ
ಚರಿತೆ ಭಕ್ತಿಲಿ ಹೇಳಿ ಕೇಳ್ವರ । ಕರುಣದಿಂದ ॥
ಮಂಗಲಾತ್ಮಕನೆನಿಪ ಕೃಷ್ಣನು–
ತ್ತುಂಗ ಸುಖಗಳನಿತ್ತು ರಕ್ಷಿಪ
ಹಿಂಗದಿದ ಮೆರೆಸಿದರಿಗೀವನು । ಮಂಗಳವನು ॥

ಕವಿಯು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ವಾಮಂಜೂರಿನವನೆಂದು ಇದರಿಂದ ಖಚಿತವಾಗಿ ತಿಳಿಯುತ್ತದೆ. ಈತನ ತಂದೆಯ ಹೆಸರು ವಾಸುದೇವ. (ವಾಸುದೇವಯ್ಯ ಎಂದಿದ್ದರಲೂ ಬಹುದು.) ಬ್ರಾಹ್ಮಣ

ವಂಶದವನು. ಈತನ ಪ್ರಸಂಗ ಕಳೆದ ಶತಮಾನದ ಕೊನೆಯಲ್ಲಿ ಅಚ್ಚಾಗಿದೆಯೆಂದು ಡಾ। ಶಿವರಾಮ ಕಾರಂತರು ಹೇಳಿರುತ್ತಾರೆ. ಆದುದರಿಂದ ಕವಿಯ ಕಾಲ ಸುಮಾರು ೧೮೪೦–೧೯೦೦ ಇರಲೂಬಹುದು.

ಕಳೆದ ಶತಮಾನದ ಕೊನೆಗೆ ಮುದ್ರಿತವಾದ ಪ್ರತಿ ನನ್ನ ಗಮನಕ್ಕೆ ಬಂದಿಲ್ಲ. ಉಡುಪಿಯ ಶ್ರೀ ಮನ್ಮಧ್ವ ಸಿದ್ಧಾಂತ ಗ್ರಂಥಾಲಯದವರು ೧೯೩೦ರಲ್ಲಿ ಇದನ್ನು ಮುದ್ರಿಸಿದ್ದರು. ಆ ಮುದ್ರಣದಲ್ಲಿ ಪ್ರಥಮ ಮುದ್ರಣ ಎಂದು ಹೇಳಲಾಗಿದೆ. ಕಳೆದ ಶತಮಾನದ ಮುದ್ರಣ ಎಲ್ಲಿ ಆದುದೋ ತಿಳಿಯದು. ಉಡುಪಿ ಮುದ್ರಣದಲ್ಲಿ "ಈ ಗ್ರಂಥವು ದಿವಂಗತರಾದ ವಾಮಂಜೂರು ಪರಮೇಶ್ವರಯ್ಯನವರಿಂದ ವಿರಚಿಸಲ್ಪಟ್ಟು ಕಡಂದಲೆ ಬಿ. ರಾಮರಾಯರಿಂದ ಸಂಗ್ರಹಿಸಲ್ಪಟ್ಟು ಪಾವಂಜೆ ಗುರುರಾಯರ ಉಡುಪಿ ಶ್ರೀಕೃಷ್ಣ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು, ಸ್ವಕೀಯ ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯದಿಂದ ಪ್ರಕಟಿಸಲ್ಪಟ್ಟಿತು. ಶಾ. ಶಕ. ೧೮೫೨" ಎಂಬ ಒಂದು ಪ್ರಕಾಶಕರ ಟಿಪ್ಪಣಿಯಿದೆ. ಇದನ್ನು ನೋಡಿದರೆ ಇದು ಹಸ್ತ ಪ್ರತಿಯಿಂದಲೇ ಮಾಡಿದ ಮೊದಲನೆಯ ಮುದ್ರಣದಂತಿದೆ. ಕಳೆದ ಶತಮಾನದ ಕೊನೆಯಲ್ಲಿ ಅಚ್ಚಾದುದು ಈ ಪ್ರಕಾಶಕರಿಗೆ ತಿಳಿದಂತಿಲ್ಲ.

ವಾಮಂಜೂರು ಪರಮೇಶ್ವರಯ್ಯನ ಬಗೆಗೆ ಹೆಚ್ಚಿನ ವಿಚಾರ ತಿಳಿಸಬಹುದಾದವರು ಇಂದು ಆ ಪ್ರದೇಶದಲ್ಲಿ ಇಲ್ಲ. ವಾಮಂಜೂರು ಸಮೀಪದವರೇ ಆದ ಹಿರಿಯ ವಿದ್ವಾಂಸ ಶ್ರೀ ಮಂದಾರ ಕೇಶವ ಭಟ್ಟರೂ ಪರಮೇಶ್ವರಯ್ಯರ ಬಗೆಗೆ ತಮಗೇನೂ ತಿಳಿಯದೆಂದೂ ತಿಳಿಸುವವರು, ಆ ಪ್ರದೇಶದಲ್ಲಿಲ್ಲವೆಂದೂ ಪತ್ರಬರೆದು ತಿಳಿಸಿರುತ್ತಾರೆ. ಈ ಪತ್ರದಲ್ಲಿ ಅವರು ಮುಂದುವರಿದು ಈ ರೀತಿ ಹೇಳಿದ್ದಾರೆ – "ಇನ್ನು ಇಲ್ಲಿಯ ಜನರು ಬಾಯ್ದೆರೆಯಾಗಿ ಹೇಳುವ ಪ್ರಕಾರ ಇಲ್ಲಿಯ ಅರಸನು ಇಲ್ಲಿ ವಿಷವುಣಿಸುವ ಪ್ರಯತ್ನಗಳಾಗುವುದನ್ನು ತಿಳಿದು ಇಲ್ಲಿಂದ ಮಂಜೇಶ್ವರ ಕುಂಬಳೆಯ ಮಧ್ಯೆ ಇಲ್ಲಿಯ ಹೆಸರುಳ್ಳ ವಾಮಂಜೂರು, ಅಮೃತೇಶ್ವರ ದೇವರು ಮುಂತಾದ ಊರು ದೇವರನ್ನು ಸ್ಥಾಪಿಸಿಕೊಂಡು ವಾಸಿಸುತ್ತಿದ್ದನೆಂದು ಹೇಳಿಕೆಯಿದೆ. ಈ ಹೇಳಿಕೆಯ ಕುರಿತು ನಾನೇನೂ ಹೇಳುವಂತಿಲ್ಲ. ಹಾಗಿದ್ದರೆ ಅಲ್ಲಿ ಕುಂಬಳೆ ಸಮೀಪ ಯಾರಾದರೂ ಇದ್ದರೋ ಏನೋ. ಇಲ್ಲಿ ಆ ಸಂಬಂಧ ವಿವರ ಸಿಗುವುದಿಲ್ಲ." ಒಟ್ಟಿನಲ್ಲಿ ಈ ಕವಿಯ ಬಗ್ಗೆ ಹೆಚ್ಚಿನ ವಿವರ ತಿಳಿಯಲಿಲ್ಲ. ಆದರೆ ಮಂಗ್ಳೂರು ತಾಲೂಕಿನ ವಾಮಂಜೂರೆಂದು ಕೃತಿಯಲ್ಲಿ ಹೇಳಿರುವುದರಿಂದ ಮಂಜೇಶ್ವರ ಸಮೀಪದ ವಾಮಂಜೂರಲ್ಲವೆಂಬುದು ಸ್ಪಷ್ಟ.

ವಾಮಂಜೂರು ಪರಮೇಶ್ವರಯ್ಯ ಬರೆದ ಕೃತಿಗಳಲ್ಲಿ ದೊರಕಿದುದು ರೇವತಿ ಕಲ್ಯಾಣವೊಂದೇ. ಇತರ ಕೃತಿಗಳು ಈತನಿಂದ ರಚಿತವಾಗಿವೆಯೇ ತಿಳಿಯದು. ಒಳ್ಳೆಯ ಪದರಚನೆಯ ಸಾಮರ್ಥ್ಯವುಳ್ಳ ಈ ಕವಿ ಸಾಕಷ್ಟು ದೀರ್ಘವಾಗಿ ಈ ಪ್ರಸಂಗವನ್ನು

ಬರೆದಿದ್ದು ಯಕ್ಷಗಾನದ ದೊಡ್ಡ ಪ್ರಸಂಗಗಳಲ್ಲಿ ಇದೂ ಒಂದಾಗಿದೆಯೆಂದು ಹೇಳಬಹುದು.

ಕವಿಯು ಪ್ರಸಂಗದ ಮೊದಲಿಗೆ ಗೋಕರ್ಣದ ಗಣಪತಿ, ಕೃಷ್ಣ, ಅಮೃತೇಶ್ವರ, ಶೃಂಗವೇರ ಪಟ್ಟಣ ನಿವಾಸಿ ಶಾರದೆಯರನ್ನು ಸ್ತುತಿಸಿದ್ದಾನೆ.

ಕಥಾ ವಿಚಾರ ; ಪ್ರಸಂಗವಿಮರ್ಶೆ :

ವಾಮಂಜೂರು ಪರಮೇಶ್ವರಯ್ಯನ "ರೇವತೀ ಕಲ್ಯಾಣ"ವು ಸಾಕಷ್ಟು ದೀರ್ಘವಾದ ಯಕ್ಷಗಾನ ಪ್ರಸಂಗ. ಬಲರಾಮ ಕೃಷ್ಣರ ಗುರುಕುಲವಾಸ, ಗುರುದಕ್ಷಿಣೆ, ಉದ್ಧವನ ಗೋಕುಲ ಸಂದರ್ಶನ, ಮಾಗಧ ಯುದ್ಧ, ಕಾಲಯವನ ಕಾಳಗ, ದ್ವಾರಕಾ ನಗರಗಮನ – ಇವು ಮೊದಲನೆಯ ಅಧ್ಯಾಯದಲ್ಲಿಯೂ ಹಂಸಡಿಬಿಕರು ಶಿವನಿಂದ ವರ ಪಡೆಯುವಿಕೆ, ಅವರಿಂದ ತಪಸ್ವಿಗಳಿಗೆ ಉಪಟಳ, ಹಂಸಡಿಬಿಕರೊಡನೆ ಯಾದವರ ಯುದ್ಧ, ಹಂಸಡಿಬಿಕರು ಯಮುನೆಗೆ ಬಿದ್ದು ಮಡಿಯುವುದು, ರೈವತ ನೃಪನ ಒಡ್ಡೋಲಗ, ರೇವತಿಯ ಸ್ಮರಬಾಧೆ, ರೇವತಿಯ ಪತಿ ಯಾರೆಂದು ತಿಳಿಯಲು ರೈವತನು ಬ್ರಹ್ಮನಲ್ಲಿಗೆ ಹೋಗುವುದು, ಬ್ರಹ್ಮನು ಬಲರಾಮನಿಗೆ ಕೊಡಲು ಹೇಳುವುದು, ರೈವತನು ದ್ವಾರಕೆಗೆ ಬಂದು ಒಪ್ಪಿಸಿ ಬಲರಾಮನಿಗೆ ಮದುವೆಮಾಡಿ ಕೊಡುವುದು. ಇವು ಎರಡನೆಯ ಅಧ್ಯಾಯದಲ್ಲಿಯೂ ಬಂದ ಕಥೆ. "ರೇವತಿ ಕಲ್ಯಾಣ"ವೆಂಬ ಪ್ರಸಂಗದಲ್ಲಿ ನಿಜವಾಗಿ ರೇವತೀ ಕಲ್ಯಾಣದ ಕಥೆ ಬರುವುದು ರೈವತನ ಒಡ್ಡೋಲಗದ ನಂತರವೇ. ಬಲರಾಮ ಕೃಷ್ಣರ ಮಹಿಮೆಯ ನಿರೂಪಣೆಗಾಗಿ ಹಿಂದಿನ ಕಥೆಗಳನ್ನೆಲ್ಲ ನಿರೂಪಿಸಿ ಈ ಪ್ರಸಂಗವು ದೀರ್ಘವಾಗಿದೆ.

ಈ ಪ್ರಸಂಗವು ಕನ್ನಡ ಭಾಗವತದ ದಶಮ ಸ್ಕಂಧದ ೪೧, ೪೨, ೪೩, ೪೭, ೪೮, ೫೩, ೫೪, ೫೫, ೫೬, ೫೭, ೫೮ನೆಯ ಸಂಧಿಗಳ ಕಥಾಭಾಗವನ್ನು ಆಧರಿಸಿದೆ. (ಸಂಸ್ಕೃತ ಭಾಗವತ ೧೦–೪೫, ೪೬, ೪೭, ೫೦, ೫೧, ೫೨ ಅಧ್ಯಾಯಗಳು) ಪರಮೇಶ್ವರಯ್ಯನಿಗೆ ಕನ್ನಡ ಭಾಗವತ, ಜೈಮಿನಿ ಭಾರತಗಳ ನಿಕಟ ಪರಿಚಯವಿದ್ದಂತೆ ತಿಳಿಯುತ್ತದೆ. ಕಥಾಭಾಗ ಕನ್ನಡ ಭಾಗವತವನ್ನು ಅನುಸರಿಸಿದೆ. ಪ್ರಸಂಗಕರ್ತನು ಸಾಕಷ್ಟು ವಿದ್ವಾಂಸನಾಗಿದ್ದು ಶಬ್ದಾಲಂಕಾರ–ಯುಕ್ತವಾದ ಪದ್ಯಗಳ ರಚನೆಯಲ್ಲಿ ಕೌಶಲ ತೋರಿರುತ್ತಾನೆ. ಯುದ್ಧ ವರ್ಣನೆ–

ಭೂರಮಣ ಕೇಳುದ್ಧರದ ಕೌತುಕವ ಸೈನಿಕವ
ವೀರರೆಚ್ಚಂಬುಗಳ ಚುಚ್ಚಿದುವು ಕೊಚ್ಚಿದುವು
ಕೂರಂಬಿನಿಂ ರುಂಡ ಹಾರಿದುವು ಚೀರಿದುವು ತೋರಿದುವು ಮರುತ ಪಥದಿ

ಮಾರಿಯೌತಣದಂತೆ ಕರುಳ್ಗಳಿಂ ಕೊರಳ್ಗಳಿಂ
ಧಾರೆಕಟ್ಟಿಳಿವುತಿಹ ರಕ್ತದಿಂ ವ್ಯಕ್ತದಿಂ
ಹೋರುತಿಹ ಮುಂಡದಿಂ ಖಂಡದಿಂ ರುಂಡದಿಂ ಶಂಡದಿಂ ಕಣವೆಸೆದುದು॥

ಗೋಮಂತಗಿರಿಯ ವರ್ಣನೆ–

ಹರಿಯಂತೆ ಹರನಂತೆ ದ್ರುಹಿಣನಂತಿಂದ್ರನಂ
ತರುಣಪೂಷಣನಂತೆ ರಥದಂತೆ ಸಗ್ಗದಂ
ತಿರೆ ಕಮಲ ಶಿವ ಹಂಸವರ ಸಹಸ್ರಾಕ್ಷ ಶಿಖಿಚಕ್ರಸುರಭೀಜಯದೊಳು।
ಶರಧಿಯಂತುದ್ವೃತ್ತವಾಳಯುತವಾಗಿರ್ದು
ತರಣಿಯೊಲ್ಪುಂಡರೀಕೋಲ್ಲಾಸಕರಮಾಗಿ
ಸುರನಗರಿಯಂದದಿಂದ್ರಾಣಿಯಮರೀವಾಸದಂತೆ ಗೋಮಂತನಗವು॥
ಮೆರೆವ ಪುನ್ನಾಗದಿಂ ನಾಗದಿಂ ನಾಗದಿಂ
ಪರಿವುತಿಹ ಪಾವಿನಿಂ ಪೂವಿನಿಂ ಮಾವಿನಿಂ
ಕರಮೆಸೆವ ಕೀರದಿಂ ತೀರದಿಂ ಸಾರದಿಂ ಬಂದುಂಬ ತುಂಬಿಯಿಂದ।
ಮೆರೆವ ಸೌರಂಭದಿಂ ರಂಭದಿಂ ಜಂಭದಿಂ
ಸುರುಚಿರದ ಭೃಂಗಿನಿಂ ಕೌಂಗಿನಿಂ ತೆಂಗಿನಿಂ
ತಿರುಗುತಿಹ ಕೋಕಿಯಿಂ ಕೇಕಿಯಿಂ ಭೀಕಿಯಿಂ ಗೋಮಂತ-ನಗಮೆಸೆದುದು॥

ಇಂತಹ ಹಲವು ಪದ್ಯಗಳು ಪ್ರಸಂಗದಲ್ಲಿವೆ. ಇಂತಹವೆಲ್ಲವೂ ವಾರ್ಧಕ ಷಟ್ಪದಿಗಳಾಗಿರುವುದು ಗಮನಾರ್ಹ. ಈ ವಾರ್ಧಕಗಳನ್ನೋದುವಾಗ ಲಕ್ಷ್ಮೀಶನ ಜೈಮಿನಿ ಭಾರತದ ನೆನಪಾಗದಿರದು. ರೇವತೀ ಕಲ್ಯಾಣದಲ್ಲಿರುವ ಛಂದೋವೈವಿಧ್ಯವೂ ಗಮನಾರ್ಹ. ತಾಳಬದ್ಧ ಮಟ್ಟುಗಳ ಮಧ್ಯದಲ್ಲಿ ಸಾಮಾನ್ಯವಾಗಿ ಹೆಚ್ಚಿನ ಪ್ರಸಂಗಗಳಲ್ಲಿ ವಾರ್ಧಕ, ಭಾಮಿನಿ, ಕಂದ, ವಚನ– ಇವು ಬರುತ್ತವೆ. ಈ ಪ್ರಸಂಗದಲ್ಲಿ ಶಾರ್ದೂಲ ವಿಕ್ರೀಡಿತ, ಮಾಲಿನೀ ವೃತ್ತ, ಶರ ಷಟ್ಪದಿ – ಇತ್ಯಾದಿಗಳೂ ಬಳಕೆಗೊಂಡಿವೆ.

ಪ್ರಸಂಗಕರ್ತನಿಗೆ ವಿದ್ವತ್ಪ್ರಿಯವಾಗುವಂತೆ ಪ್ರಯೋಗಮಾಡುವ ಇಚ್ಛೆಯಿದ್ದುದು ಈ ಪ್ರಯೋಗಗಳಿಂದ ವ್ಯಕ್ತವಾಗುತ್ತದೆ.

ಶಾರ್ದೂಲವಿಕ್ರೀಡಿತ

ಸೇನಾವಾರವ ಜೋಡಿಸುತ್ತ ಮಗಧಂ ಭೂಪಾಲರಂ ಕೂಡುತಾ
ನಾನಾ ವಾದ್ಯದನಿಸ್ವನಂಗಳೆಸೆಯಲ್ ತಾನೈದನುತ್ಸಾಹದಿಂ
ಆನಲ್ತೀರದೆ ಭೂಮಿ ತಗ್ಗಲಹಿಪಂ ಕುಗ್ಗಲ್ಕೆ ದಿಗ್ದಂತಿಗಳ್
ಏನೆಂದೆಂಬೆನು ರಕ್ತಕಾರುತಳುಕಲ್ಕಂಭೋಧಿ ತುಳ್ಕಾಡಿತೂ ॥

ಮಾಲಿನೀ ವೃತ್ತ –

೧) ಮಗಧನ ನುಡಿ ಕೇಳೀ ಭೂಪರಾನಂದ ತಾಳೀ
ನಗುತ ಗರುವವಾಂತೂ ಪೇಳಿದರ್ಕಾರ್ಯವಿಂತೂ
ಸೊಗಸಿತು ಮನಕಾಗಾ ನಿನ್ನ ವಾಕ್ಯಂಗಳೀಗಾ
ಬಗೆದುಕೊ ನೃಪವರ್ಯಾ ಪೇಳ್ವೆವಿಂದೆಮ್ಮ ಶೌರ್ಯಾ ॥

೨) ಚರರ ನುಡಿಯ ಕೇಳೀ ಕೃಷ್ಣ ಸಂತೋಷತಾಳೀ
ಕರುಣದೊಳವರನ್ನೂ ಬೇಗ ಬೀಳ್ಕೊಂಡು ತಾನೂ
ತ್ವರಿತದಿ ಬಲರಾಮಾನನ್ನು ಕಂಡಭ್ರಶ್ಯಾಮಾ
ಅರಿದೊರೆಗಳು ಬಂದಾ ವರ್ತಮಾನಂಗಳೆಂದಾ ॥

ಶರ ಷಟ್ಪದಿ

೧) ಹರಿಬಿಡೆ ಚಕ್ರವ
ಹರಿದಾಕ್ಷಣದಲಿ
ಹರಿಸೆ ಸೃಗಾಲನ ಕಂಡವನು ।
ಹರಿಬದ ಬಲತರ
ಹರಿಸುತ ಬೇಗದಿ
ಹರಿಬಲರಮ ಮೊರೆಹೋಗುತಿರಲು ॥

೨) ಓಡಲು ಕೆಲರು ಬಿ–
ಸಾಡುತಲಸ್ತ್ರವ
ಬೇಡಿದರಸುದಾನವನಳುತ ।
ಗಾಢದಿ ಕರಗಳ
ಜೋಡಿಸುತೆರಗಲು
ನೀಡಿದನಭಯವ ತಾ ನಗುತ ॥

ಪ್ರಸಂಗದಲ್ಲಿ ಹಲವುಯುದ್ಧ ಪ್ರಸಂಗಗಳಿದ್ದು ವೀರರಸದ ಪದಗಳನ್ನು ಸಾಕಷ್ಟು ಇದರಲ್ಲಿ ನೋಡಬಹುದು. ಅದರೊಂದಿಗೇ ಸರಳವಾದ ಹಾಡುಗಳನ್ನು ಈತ ಬರೆಯಬಲ್ಲನಾದರೂ ಪ್ರೌಢ ರಚನೆಯಲ್ಲಿಯೇ ಈತನಿಗೆ ಹೆಚ್ಚು ಇಷ್ಟವಿದ್ದಂತೆ ತೋರುತ್ತದೆ. ವರ್ಣನೆಯಲ್ಲಿ ಆಸಕ್ತಿ ಹೆಚ್ಚು, ಯುದ್ಧಸಂದರ್ಭದ ಒಂದು ಪದ ಹೀಗಿದೆ–

ಎಲವೋ ಗೋಪಾಲಕನೇ । ನೀನೆನ್ನೊಡ । ನೆಳವಿಗನೇನ್ನಹಸಿಗನೇ ।
ಕಳವಿನಿಳ್ಪಾಲ್ಮೊಸ । ಗಳಕದ್ದ ತೆರನಲ್ಲ । ಕಿಳಿದುಕೊಳ್ಳೆನುತೆಚ್ಚನು ॥
ಎಚ್ಚ ಬಾಣವ ತರಿದೂ । ನಗುತೆಂದ । ಲಚ್ಚುತ ಶರಸುರಿದೂ ।
ನುಚ್ಚು ಮಾಡಿಹೆ ನಿನ್ನ । ನಚ್ಚಿನ ಬಿಲ್ಲನೀ । ನೆಚ್ಚರಿಕಿರು ಮನದೀ ॥

ಈ ಪದದ ಪ್ರಾರಂಭವು "ಎಲವೋ ಸೂತನ ಮನಗೇ" ಎಂಬ ಕರ್ಣಪರ್ವದ ಪದವನ್ನು ನೆನಪಿಸುವಂತಿದೆ. ರೇವತಿಯ ವಿರಹದ ವರ್ಣನೆ ಹೀಗಿದೆ–

ರಾಗ ಸಾರಂಗ; ಅಷ್ಟತಾಳ

ಹ್ಯಾಗೆ ಸೈರಿಸುವೆ ನೀರೇ । ಈ ವಿರಹದ । ಬೇಗೆಯ ತಾಳಲಾರೇ ॥ ಪಲ್ಲ॥

ಚಿಕ್ಕತನದೊಳೆನ್ನನೂ । ಬಹುಮಾನಕೆ । ತಕ್ಕಂತೆ ನಡಸಿದನೂ ॥
ತಕ್ಕ ಯೌವನವಿದು । ಮಿಕ್ಕು ಮೀರುತ ಬರೆ ।
ಸಿಕ್ಕಿದೆ ಸ್ಮರನೆಂಬ । ಮೂರ್ಖನ ಕೈಯಲಿ ॥ ಹ್ಯಾಗೆ ॥

ತಿಗುರಿದ ಶ್ರೀಗಂಧವು । ಪುಣುಗು ಕಸ್ತೂ । ರಿಗಳು ಪನ್ನೀರೆಂಬಿವೂ ॥
ಪಗಲೊಳು ಸೂರ್ಯನ । ಡಗೆ ತಾಗಲುರಿವಂತೆ ।
ಮುಗುದೆ ಕೇಳ್ಮೆಯ್ಯನು । ಭುಗಿಲೆಂದು ಸುಡುವುವು ॥ ಹ್ಯಾಗೆ ॥

ಬಾಲರಿಲ್ಲದ ಸಿರಿಯೂ । ವಲ್ಲಭನನು । ಕೂಲವಿಲ್ಲದ ಸತಿಯೂ ॥
ಕೇಳು ಜ್ಯೋತಿಗಳಿಲ್ಲ । ದಾಲಯವಿವು ಮೂರು ।
ಬಾಲೆ ನಿಷ್ಫಲವೆಂದು । ಪೇಳವೆ ಶ್ರುತಿಗಳು ॥ ಹ್ಯಾಗೆ ॥

ಈ ಪ್ರಸಂಗದ ರಂಗ ಪ್ರಯೋಗಕ್ಕೆ ಇದರ ಹಲವು ಪದಗಳನ್ನು ಕಡಿತ ಮಾಡಲೇಬೇಕಾಗಬಹುದು. ಏಕೆಂದರೆ ವರ್ಣನಾತ್ಮಕವಾದ ಅನೇಕ ಪದ್ಯಗಳು ಅರ್ಥವಿವರಣೆಗೆ ಅನುಕೂಲವಾಗಿಲ್ಲ.

೬. ಭಸ್ಮಾಸುರ ಮೋಹಿನಿ :

ಕವಿ : ಕನ್ಯಾನ ವೆಂಕಟರಮಣ ಭಟ್ಟ (ಸು. ೧೮೯೦–ಸು. ೧೯೫೫)

ಕವಿಭಟ್ಟರೆಂದೇ ಪ್ರಸಿದ್ಧರಾಗಿದ್ದ ದಿ. ಕನ್ಯಾನ ವೆಂಕಟರಮಣ ಭಟ್ಟರು ಆಶುಕವಿಗಳಾಗಿದ್ದರು. ನಿಂತಲ್ಲಿ ಕುಳಿತಲ್ಲಿ ಬೇಕೆಂದಾಗ ಛಂದೋಬದ್ಧವಾದ ಹಾಡು ಹೇಳುತ್ತಿದ್ದವರು. ಇವರ ನೂರಾರು ಹಾಡುಗಳು ಶೋಭಾನೆಪದಗಳು ಸಂಗ್ರಹಿಸಿಟ್ಟುಕೊಳ್ಳುವವರಿಲ್ಲದೆ ನಷ್ಟವಾಗಿ ಹೋಗಿವೆ. ಅವರ 'ಭಸ್ಮಾಸುರ ಮೋಹಿನಿ' ಮತ್ತು 'ಬ್ರಹ್ಮಕಪಾಲ' ಎಂಬ ಯಕ್ಷಗಾನ ಪ್ರಸಂಗಗಳು ಬಹಳ ಜನಪ್ರಿಯವಾದುವು. ಪದ್ಮಪುರಾಣದೊಳಗಣ 'ಭಾಗವತ ಮಹಾತ್ಮೆ'ಯನ್ನೂ ಅವರು ಪ್ರಸಂಗರೂಪದಲ್ಲಿ ರಚಿಸಿರುತ್ತಾರೆ. ಪುರಾಣವೊಂದರ ಮಹಾತ್ಮೆಯನ್ನು ಹೇಳುವ ಇಂತಹ ಪ್ರಸಂಗಗಳು ಪ್ರಸಂಗ ಸಾಹಿತ್ಯದಲ್ಲಿ ಬೇರೆ ಇಲ್ಲವೆಂದು ತೋರುತ್ತದೆ.

ಧರ್ಮಸ್ಥಳ ಮೇಳವನ್ನು ದಿ. ಕುರಿಯ ವಿಠಲ ಶಾಸ್ತ್ರಿಗಳು ನಡೆಸುತ್ತಿದ್ದಾಗ ಸತತವಾಗಿ ಆರ್ಥಿಕನಷ್ಟವುಂಟಾಗಿತ್ತಂತೆ. ಆಗ ಶಾಸ್ತ್ರಿಗಳು ವೆಂಕಟರಮಣ ಭಟ್ಟರಿಗೆ ಬ್ರಹ್ಮಕಪಾಲದ ಕಥೆಯನ್ನಿತ್ತು ಪ್ರಸಂಗಮಾಡಲು ಹೇಳಿದರಂತೆ. ಒಂದು ಹಗಲು ಒಂದು ರಾತ್ರಿಯೊಳಗಾಗಿ ವೆಂಕಟರಮಣ ಭಟ್ಟರು ಪ್ರಸಂಗವನ್ನು ಶಾಸ್ತ್ರಿಗಳಿಗೆ ಹೇಳಿ ಬರೆಯಿಸಿದರಂತೆ. ಈ ಪ್ರಸಂಗದಲ್ಲಿ ಈಶ್ವರನಾಗಿ ಅಭಿನಯಿಸಿ ಶಾಸ್ತ್ರಿಗಳಿಗೆ ವಿಶೇಷ ಹೆಸರೂ ಆರ್ಥಿಕಸಂಪನ್ನತೆಯೂ ಕೂಡಿಬಂದುವಂತೆ. ಹಾಗೆಯೇ 'ಭಸ್ಮಾಸುರ ಮೋಹಿನಿ' ಪ್ರಸಂಗವೂ ಒಂದೇ ದಿನದ ರಚನೆಯಾಗಿದೆ. ಇವರ 'ವಿರೂಪಾಕ್ಷ ಕಾಳಗ'ವೆಂಬುದು ರಾಮಾಯಣದ ಕಥಾಭಾಗದ ರಚನೆ. 'ಸತ್ಯನಾರಾಯಣ ಚರಿತ್ರೆ' ಎಂಬುದು ಸತ್ಯನಾರಾಯಣ ವ್ರತಕಥೆಯ ಪ್ರಸಂಗರೂಪ. ಈ ಪ್ರಸಂಗವನ್ನು ತಲೆಂಗಳ ಈಶ್ವರ ಭಟ್ಟರೆಂಬವರ ವಿನಂತಿಯ ಮೇರೆಗೆ ಅವರ ಮನೆಯಲ್ಲಿಯೇ ಹೇಳಿ ಬರೆಯಿಸಿ ತಾಳಮದ್ದಳೆ ಮಾಡಿಸಿದ್ದರಂತೆ. ಇವರ ಕವಿತಾಶಕ್ತಿಯ ಬಗೆಗೆ ಪರಕಜೆ ಸುಬ್ರಾಯ ಭಟ್ಟರು ಹೀಗೆ ಹೇಳಿದ್ದಾರೆ– "ಕನ್ನಡ ಭಾಷೆಯಲ್ಲಿ ಕವಿತಾದೇವಿಯು ಇವರಿಗೆ ಎಷ್ಟೊಂದು ಒಲಿದಿರುವಳೆಂದರೆ, ಅಪೂರ್ವವಾದ ಒಂದು ಯಕ್ಷಗಾನ ಪ್ರಸಂಗವನ್ನೋ ಅಥವಾ ಒಂದೇ ವೃತ್ತದಲ್ಲಿ ಹೊಸದಾಗಿ ಒಂದು ಪದ್ಯಮಾಲಿಕೆಯನ್ನೋ ರಚಿಸಬೇಕೆಂದು ನಾವು ಇವರೊಡನೆ ಕೇಳಿಕೊಂಡರೆ ಸರಿ, 'ಈಗಲೇ ಬರೆದುಕೊಳ್ಳಿ' ಎಂದು ಹೇಳಿ ಕವನಕ್ಕೆ ಆರಂಭಿಸುವರು. ನಮ್ಮಿಂದ ಬರೆದುಕೊಳ್ಳಲೂ ಸಾಧ್ಯವಾಗದಷ್ಟು ನಿರರ್ಗಳವಾಗಿ ಸರಸವಾದ ಕಾವ್ಯಮಾಲಿಕೆಯು ಇವರ ಮುಖದಿಂದ ಹೊರಡುತ್ತಾ ಇರುವುದು."

ಭಾಗವತ ಮಹಾತ್ಮೆಯೆಂಬ ಪ್ರಸಂಗವನ್ನು ಅಳಸಿಂಗರಾಚಾರ್ಯರ ಭಾಗವತ ಅನುವಾದದ ಆಧಾರದಲ್ಲಿ ರಚಿಸಲಾಗಿದೆಯೆಂದೂ, ಈ ಭಾಗವನ್ನು ಮಳಿವು ಶಂಕರನಾರಾಯಣ ಭಟ್ಟರು ವೆಂಕಟರಮಣ ಭಟ್ಟರಿಗೆ ಓದಿ ಹೇಳಿದ ಮೇಲೆ ಅವರು ಪ್ರಸಂಗರೂಪದಲ್ಲಿ ಹೇಳಿ ಬರೆಯಿಸಿದರೆಂದೂ ಒಂದೂವರೆ ದಿನದಲ್ಲಿ ಈ

ಪ್ರಸಂಗರಚನೆಯಾಗಿದ್ದು ಮಳಿವು ಶಂಕರನಾರಾಯಣ ಭಟ್ಟರೇ ಅದನ್ನು ಬರೆದುಕೊಂಡವರೆಂದೂ ಅವರು ತಿಳಿಸಿರುತ್ತಾರೆ. ವೆಂಕಟರಮಣ ಭಟ್ಟರು ಶಾಲಾ ವಿದ್ಯಾಭ್ಯಾಸ ಹೆಚ್ಚೇನೂ ಮಾಡಲಿಲ್ಲವಂತೆ. ಒಂದು ಅಥವಾ ಎರಡು ವರ್ಷ ವಿದ್ಯಾಭ್ಯಾಸ ಮಾಡಿದ್ದರಂತೆ. ಯಾವುದೋ ಮೇಳದಲ್ಲಿ ಒಂದು ವರ್ಷ ಸಂಗೀತಗಾರರಾಗಿದ್ದರಂತೆ. ಅವರು ಬರೆದರೆ ಓದಲಸಾಧ್ಯವಾದುದರಿಂದ ಅವರು ಹೇಳಿಯೇ ಬರೆಸುತ್ತಿದ್ದರಂತೆ. 'ಸಂಕ್ಷಿಪ್ತ ಗುರು ಚರಿತ್ರೆ' (೧೯೫೧) ಎಂಬ ಷಟ್ಪದೀ ಕೃತಿಯನ್ನು ಮಳಿವು ಶಂಕರನಾರಾಯಣ ಭಟ್ಟರ ಅಪೇಕ್ಷೆಯ ಮೇರೆಗೆ ಇವರು ಹೇಳಿ ಬರೆಯಿಸಿದರಂತೆ. ಇಸ್ಪೀಟಾಟದ ಚಟದಿಂದಾಗಿ ಇವರು ಏನು ಆದಾಯ ಸಿಕ್ಕಿದರೂ ಕಳೆದುಕೊಳ್ಳುತ್ತಿದ್ದು ಜೀವಿಕೆಗಾಗಿ ಬಂಟ್ವಾಳ ತಾಲೂಕಿನ ಕನ್ಯಾನದಲ್ಲಿ ಬೋರ್ಡಿಂಗ್ ನಡೆಸುತ್ತಿದ್ದರಂತೆ.

ಪೈವಳಿಕೆ ಗ್ರಾಮದ ಚಿಪ್ಪಾರುಕಜೆ ಎಂಬಲ್ಲಿ ಜನಿಸಿದ ಕವಿಭಟ್ಟರು ಹವ್ಯಕ ಬ್ರಾಹ್ಮಣವರ್ಗದ 'ತೆಂಕಬೈಲು' ಮನೆತನಕ್ಕೆ ಸೇರಿದವರು. ಕೊನೆಗಾಲದಲ್ಲಿ ಇವರು ಕುಂದಾಪುರದ ಡಿ. ವಿ. ಹೊಳ್ಳರಲ್ಲಿ ಇದ್ದಂತೆ ತಿಳಿಯುತ್ತದೆ.

ಪ್ರಾಯಶಃ ಕನ್ಯಾನ ವೆಂಕಟರಮಣ ಭಟ್ಟರ "ಭಸ್ಮಾಸುರ ಮೋಹಿನಿ" ಪ್ರಸಂಗವು ಈ ವಸ್ತುವಿನ ಬಗೆಗೆ ರಚಿತವಾದ ಮೊದಲ ಕೃತಿ. ಭಾಗವತದಲ್ಲಿ ಬರುವ ವೃಕಾಸುರನ ಕಥೆಯೇ ಭಸ್ಮಾಸುರ ಮೋಹಿನಿ ಕಥೆಗೆ ಮೂಲವಾಗಿದೆ. ಆದರೆ ಉಪಲಬ್ಧವಿರುವ ಭಸ್ಮಾಸುರ ಮೋಹಿನಿ ಕಥೆಗಳು ಭಾಗವತದ ಕಥೆಗಿಂತ ಭಿನ್ನವಾಗಿವೆ. ಹೀಗೆ ತದ್ಭಿನ್ನವಾದ ಕಥೆಯ ಪ್ರಸಂಗಗಳಲ್ಲಿ ಇದುವೇ ಮೊದಲಿನದೆಂದು ಊಹಿಸುವಂತಿದೆ. ತಿಟ್ಟುಗಳ ಭೇದವಿಲ್ಲದೆ ಜನಪ್ರಿಯತೆಯನ್ನು ಪಡೆದ ಪ್ರಸಂಗವಿದು. ೧೭೯ಪದ್ಯಗಳ ಈ ಪ್ರಸಂಗವು ಕೂಡ ಸೀಮಿತ ಕಾಲಾವಧಿಯ ಪ್ರದರ್ಶನಕ್ಕೆ ಹೊಂದುವಂತಹದೇ ಆಗಿದೆ. ಪ್ರಸಂಗದ ಕಥಾವಸ್ತುವೇ ಆ ರೀತಿಯಿರುವುದರಿಂದ ದೀರ್ಘ ನಿರೂಪಣೆ, ಘಟನಾ ವೈವಿಧ್ಯಗಳಿಗೆ ಅವಕಾಶವಿಲ್ಲ.

ಕಥಾ ವಿಚಾರ ; ಪ್ರಸಂಗವಿಮರ್ಶೆ :

ಪ್ರಸ್ತುತ "ಭಸ್ಮಾಸುರ ಮೋಹಿನಿ" ಪ್ರಸಂಗಕೃತಿಯನ್ನು ಭಾಗವತದ ಪ್ರಸಂಗವೆಂದೇ ಪರಿಗಣಿಸಿದ್ದರೂ ಕನ್ಯಾನ ವೆಂಕಟರಮಣಭಟ್ಟರಿಗೆ ಇದಾವ ಮೂಲದ್ದೆಂಬ ಬಗೆಗೆ ಖಚಿತತೆಯಿರಲಿಲ್ಲ. ಪ್ರಸಂಗದಾದಿಯಲ್ಲಿ ಈ ಪದ್ಯವಿದೆ :

ರಾಗ ಸೌರಾಷ್ಟ್ರ ; ತ್ರಿವುಡೆತಾಳ

ಪುಣ್ಯವಾರಿಧಿ ಸೂತ ರವಿಲಾ । ವಣ್ಯ ಶೋಭಿತನಾಗಿ ವಿಮಲಾ ।
ರಣ್ಯದಲಿ ಬಹು ಮುನಿಗಳಿಗೆ ಕಾ । ರುಣ್ಯದಿಂದ ॥

ಮುಖ್ಯವಾಗಿಹ ಹಲವು ಕಥೆಗಳ । ಸೌಖ್ಯದಿಂ ವಿಸ್ತರಿಸುತಿರೆ ಜಡ ।
ದೈಕ್ಯದಿಂ ಬಿನ್ನವಿಸಿದರು ಮೃದು । ವಾಕ್ಯರಸದಿ ॥
ಲಾಲಿಸೆಲೆ ಮುನಿವರನೆ ಕಡು ಬಲ । ಶಾಲಿ ಭಸ್ಮಾಸುರನು ಜನಕ ಕ।
ಪಾಲಿಗಿತ್ತಿಹ ಕಷ್ಟ ಶ್ರೀವನ । ಮಾಲಿಯವನ ॥
ಕೊಂದನೆಂತೋ ತಿಳಿಯವ್ಯೆ ಮುದ । ದಿಂದ ವಿಸ್ತರಿಸೆಂಬ ಋಷಿಗಳ।
ವೃಂದಕರುಹಿದ ಸೂತ ಪರಮಾ । ನಂದದಿಂದ ॥

ಗಿರಿಜೆ ತಂದಿತ್ತ ಭಸ್ಮದಲ್ಲಿ ಹೊಲಸು ಕಲ್ಲೊಂದಿತ್ತೆಂದೂ ಅದರಿಂದ ಭಸ್ಮಾಸುರನ ಉತ್ಪತ್ತಿಯಾಯಿತೆಂದೂ ಎಲ್ಲ ಭಸ್ಮಾಸುರ ಮೋಹಿನಿ ಪ್ರಸಂಗಗಳಿಗೆ ಮೊದಲಾಗಿ ಇಲ್ಲಿ ಸೂಚಿತವಾಗಿದೆ. (ಬಲಿಪರ ಪ್ರಸಂಗದಲ್ಲಿ ಅದನ್ನು ಲೋಪ್ಯವೆನ್ನಲಾಗಿದೆ.) ಶಿವನ ಸೇವೆಯಲ್ಲಿದ್ದ ಭಸ್ಮಾಸುರನು ಮರದ ಮೇಲೆ ಕ್ರೀಡಿಸುತ್ತಿದ್ದ ಗಿಳಿಗಳನ್ನು ನೋಡಿದ್ದರಿಂದ ಕಾಮಾತುರನಾಗಿ ಪರಿವರ್ತಿತನಾದನೆಂಬ ನಿರೂಪಣೆ ಉಚಿತವಾಗಿದೆ. ಇದು ಇತರ ಕೃತಿಗಳಲ್ಲಿಲ್ಲ. ಶಿವಪಾರ್ವತಿಯರು ವಿಹಾರಮಾಡುವುದನ್ನು ಮರೆಯಿಂದ ಭಸ್ಮಾಸುರನು ನೋಡಿ ಪಾರ್ವತಿಯ ಅಂಗಸೌಂದರ್ಯವನ್ನು ಆಸ್ವಾದಿಸುತ್ತಿದ್ದಾಗ ಕೆಮ್ಮುಬಂದು ಶಿವನಿಗೆ ಈತನ ಇರವು ತಿಳಿದು ಶಿವನಿಂದ ಭಂಗಿತನಾದನೆಂಬುದೂ ಉಳಿದ ಪ್ರಸಂಗಗಳಲ್ಲಿಲ್ಲದ ಕಲ್ಪನೆ. ಮೋಹಿನಿ ನಾಟ್ಯಕ್ಕೆ ಸರಿಯಾಗಿ ಭಸ್ಮಾಸುರನು ಅನುಕರಣೆ ಮಾಡದಿರಲು ವಿಷ್ಣುವಿನ ಮಾಯೆಯಿಂದ ಭಂಗಿಸೇದುವ ವೈರಾಗಿಗಳು ಬಂದು ಅದನ್ನು ಸೇದಿ ಭಸ್ಮಾಸುರನ ಮನಸ್ಸು ವಿಚಲಿತವಾಗಿ ಮೋಹಿನಿಯನ್ನು ಅನುಸರಿಸಿ ಕುಣಿದು ತನ್ನ ತಲೆಯ ಮೇಲೆಯೇ ಕೈಯನ್ನಿಟ್ಟು ಭಸ್ಮವಾದನೆಂದು ಪ್ರಸಂಗದ ನಿರೂಪಣೆಯಿದೆ. ಈ ನಿರೂಪಣೆಯನ್ನು ಬಲಿಪರು ಮತ್ತು ಕಿರಿಯ ಬಲಿಪರು ಬಿಟ್ಟಿದ್ದಾರೆ. ಈ ಕಥಾಭಾಗವು ಪೌರಾಣಿಕವಲ್ಲವೆಂಬ ಕಾರಣದಿಂದಲೇ ಅವರು ಬಿಟ್ಟುಬಿಟ್ಟಿರುವರೆಂಬುದು ಸ್ಪಷ್ಟ.

ಕನ್ನಾಪ ವೆಂಕಟರಮಣ ಭಟ್ಟರ ಪದ್ಯರಚನೆ ಸೊಗಸಾಗಿದ್ದು ಭಾಷೆ ಛಂದಸ್ಸುಗಳ ಮೇಲೆ ಸರಿಯಾದ ಹಿಡಿತವಿರುವುದು ಈ ಪದ್ಯಗಳಲ್ಲಿ ಸ್ಪಷ್ಟವಾಗುತ್ತದೆ. ಭಸ್ಮಾಸುರನು ಶಿವೆಗೆ ಮರುಳಾಗುವ ಭಾಗದ ನಿರೂಪಣೆ ಹೀಗಿದೆ–

ರಾಗ ಕಲ್ಯಾಣಿ: ಆದಿತಾಳ

ಕಂಡನು । ಭಸ್ಮಾಸುರನು ಭವಾನಿಯ । ಕಂಡನು ॥ ಪ ॥

ಕಂಡನು ಶೃಂಗಾರದೊಲವ । ಶ್ವೇತ । ಪುಂಡರೀಕಾಕ್ಷಿಯ ಮುಖವ । ಭ್ರಮೆ
ಗೊಂಡನು ತಾಳ್ದು ಸಂತಸವ । ಆಹ । ಕುಂಡಲವೇಣಿ ಕೋಮಲಪಾಣಿ
ಶುಕವಾಣಿ ।

ಪುಂಡಾನೆಯಾನೆ ಸಮಾನೆಯ ಸೊಬಗನೆ । ಕಂಡನು ॥
ಮಲ್ಲಿಗೆ ಮರುಗ ಮಂದಾರ । ಹಾರ । ಜಲ್ಲಿಯ ಕೊರಳ ಶೃಂಗಾರ । ಅದ
।
ರಲ್ಲಿ ತುಂಬಿಗಳ ಝೇಂಕಾರ । ಗೌರಿ । ಯಲ್ಲಿ ರಾಜಿಸುವ ವಿಸ್ಮಯದ ವಿಲಾಸವ ।
ನಲ್ಲಿಗಲ್ಲಿಗೆ ಪೊಗಳುತ್ತ ಚಂಚಲಿಸುತ್ತ । ಕಂಡನು ॥

ರಾಗ ಖಮಾಚು; ಅಷ್ಟತಾಳ

ಶುಭ್ರಕಪಾಲೆ ಬಾಲೆಯ ನೋಡಿ । ಚಿತ್ತ ವಿಭ್ರಮಿಸುವುದು ಸಂತಸಗೂಡಿ ॥ ಪ ॥
ಮುದ್ದು ಮೋಹನ್ನೆ ಮೋಹವ ತೋರ್ದು । ಇಲ್ಲಿ । ಗೆದ್ದು ಬಂದಿಹಳು ಸಂಭ್ರಮ ಬೀರ್ದು ।
ತಿದ್ದುವಳಬಲೆ ಕೂದಲ ಗೀರ್ದು । ಪ್ರೇಮ । ಬಿದ್ದುದು ತನಗೆ ವಿರಹವೇರ್ದು॥
ಮುಗುಳು ನಗೆಯ ನಿಂದಿಸುವಂಥ । ಒಳ್ಳೆ । ನಗುವಿನ ಛಾಯೊಳಗಿಹ ದಂತ ।
ಸುಗುಣೆಗೊಂಬುವ ಶೋಭೆ ಬಲವಂತ । ಕಾಂಬ । ದೃಗು ಕುಚೆಗಣೆಗಾಣೆ ಸಿದ್ಧಾಂತ ॥

ಮೋಹಿನಿಯ ವರ್ಣನೆಯ "ಕುಂಭಕುಚಾಂಗಿಯು ಯಾರೀಕೆಯು ಜಲ । ಜಾಂಬಕಿ ಗುಣಮಣಿಯು" ಎಂಬ ಪದ್ಯವೂ "ಜಾಣೆ ಶಿರೋಮಣಿ । ಬಾಬಾ ಮೋಹಿನಿ । ಕಾಣೆನು ನಿನಗೆಣೆ ನಾರಿಯುರ" – ಎಂಬ ಪದ್ಯವೂ ಶೃಂಗಾರಪೂರ್ಣವಾಗಿದೆ.

ಯುದ್ಧ ಸಂದರ್ಭವಿಲ್ಲದ ಪ್ರಸಂಗಗಳಲ್ಲಿ 'ಭಸ್ಮಾಸುರ ಮೋಹಿನಿ'ಯೂ ಒಂದು. ಜನಪ್ರಿಯತೆಯ ದೃಷ್ಟಿಯಿಂದ ಈ ಪ್ರಸಂಗಕ್ಕೆ ಮುಖ್ಯ ಸ್ಥಾನವಿದೆ. ಅನೇಕ ಮೇಳಗಳು ಈ ಪ್ರಸಂಗವನ್ನು ರಂಗಕ್ಕೆ ತಂದಿವೆ.

೭. ಇಂದ್ರವಿಜಯ :

ಕವಿ : ಚೋರಾಡಿ ವೆಂಕಟರಮಣ ಭಟ್ಟ (ಸು. ೧೮೬೦ – ಸು. ೧೯೩೬)

ಶಿವರಾಮ ಕಾರಂತರು 'ಚೋರಾಡಿ ವೆಂಕಟರಮಣಯ್ಯ' ಎಂದು ಹೆಸರು ಬರೆದು "ಇವರು ಕುಂದಾಪುರ ತಾಲೂಕು ಹಾಲಾಡಿಯವರು. 'ಕ್ಷೀರಪುರವರನ ಕರುಣದಲಿ' ಜಾಂಬವತಿ ಕಲ್ಯಾಣ ಮತ್ತು ಸತ್ಯಭಾಮ ಪರಿಣಯಗಳನ್ನು ಬರೆದಿರುತ್ತಾರೆ.

ಅವರು ಬರೆದಿರುವ ಅಂಶುಮತಿ ಕಲ್ಯಾಣ ಅಚ್ಚಾಗಿದೆ; ರಂಗಸ್ಥಳಕ್ಕೂ ಬಂದಿದೆ. 'ವೃತ್ರಾಸುರನ ಕಾಳಗ'ವೆಂಬುದನ್ನೂ ಅವರು ಬರೆದಿದ್ದಾರೆ" ಎಂದು ಪರಿಚಯ ಕೊಟ್ಟಿದ್ದಾರೆ.

ಈ ಕವಿಯ ಹೆಸರು ಬೋರಾಡಿ ವೆಂಕಟರಮಣಯ್ಯನೆಂದು ಅಲ್ಲ; ಬೋರಾಡಿ ವೆಂಕಟರಮಣ ಭಟ್ಟ ಎಂದಾಗಬೇಕು. ಬೋರಾಡಿ ಎಂಬುದು ಕುಂದಾಪುರ ತಾಲೂಕಿನ ಹಾಲಾಡಿಗೆ ಸಮೀಪದ ಒಂದು ಊರು. ಈತನ 'ಇಂದ್ರವಿಜಯ' ಎಂಬ ಪ್ರಕಟಿತ ಪ್ರಸಂಗವನ್ನೇ ಶಿವರಾಮ ಕಾರಂತರು 'ವೃತ್ರಾಸುರನ ಕಾಳಗ' ಎಂದುದಿರಬೇಕು. 'ಇಂದ್ರವಿಜಯ'ವೆಂಬ ಪ್ರಸಂಗವು ವೃತ್ರಾಸುರನ ಕಾಳಗ ಕಥೆಯನ್ನೇ ಹೊಂದಿಕೊಂಡಿರುವ ಪ್ರಸಂಗವಾಗಿದೆ. ಮಾತ್ರವಲ್ಲ–

ವರಮಹಾಭಾಗವತ ಕಥನದೊಳಗೊರೆವ
ಸುರಪ ವೃತ್ರಾಸುರನ ಕದನಕೌತುಕವ ॥
ಕರಿವದನನೊಲಿದೆನಗೆ ಪ್ರೇರಿಸಿದ ತೆರದಿ
ಹರಿಕಥಾತುರರಿಗುಸುರುವೆನು ಕನ್ನಡದಿ ॥

–ಎಂದು ಇಂದ್ರವಿಜಯದಲ್ಲಿ ಪ್ರಸಂಗದ ಆದಿಯಲ್ಲಿ ಹೇಳಿಕೊಂಡಿರುವುದರಿಂದ ಇದುವೇ 'ವೃತ್ರಾಸುರನ ಕಾಳಗ'ವೆಂದು ತಿಳಿಯಬೇಕು. ಇವರ 'ಜಾಂಬವತೀ ಕಲ್ಯಾಣ ಮತ್ತು ಸತ್ಯಭಾಮಾ ಪರಿಣಯ' ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯದಿಂದ ೧೯೫೩ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಿತವಾಗಿದೆ.

'ಇಂದ್ರವಿಜಯ' ಪ್ರಸಂಗದ ಹೊರಪುಟದಲ್ಲಿ ಬರೆದವರ ಮತ್ತು ಪ್ರಕಾಶಕರ ವಿವರವನ್ನು ಈ ರೀತಿಯಲ್ಲಿ ಕೊಡಲಾಗಿದೆ – "ಶ್ರೀಮನ್ಮಹಾಭಾಗವತದೊಳಗಣ 'ಇಂದ್ರವಿಜಯ'ವೆಂಬ ಈ ಪ್ರಬಂಧವನ್ನು ಉಡುಪಿ ತಾಲೂಕು ಕೆಲನಾಡು ಮಾಗಣೆ ಬೋರಾಡಿ ಗ್ರಾಮದ ಅಣ್ಣಪ್ಪ ಭಟ್ಟರ ಕೊಮಾರ್‍ರು ವೆಂಕಟರಮಣ ಭಟ್ಟರಿಂದ ಕನ್ನಡ ಯಕ್ಷಗಾನ ಪ್ರಸಂಗವಾಗಿ ರಚಿಸಲ್ಪಟ್ಟು ಬ್ರಂ । ಶ್ರೀ । ತಟ್ಟುವಟ್ಟು ಶೃಂಗ ಭಟ್ಟರಿಂದ ಪರಿಶೋಧಿಸಲ್ಪಟ್ಟಿತು. ಇದರನ್ನು ಸದರಿ ವೆಂಕಟರಮಣ ಭಟ್ಟರಿಗೋಸ್ಕರ ಬೆಂಗಳೂರಲ್ಲಿರುವ ಮೈಸೂರು ಬುಕ್‌ಡಿಪೋ ಮುದ್ರಾಯಂತ್ರದಲ್ಲಿ ಬಿ. ಸುಬ್ಬಯ್ಯ ಅಂಡ್ ಸನ್ಸ್‌ಯವರಿಂದ ಛಾಪಾಮಾಡಲ್ಪಟ್ಟಿತು. ೧೯೭೬". ಕವಿಯ ಹೆಸರು ವೆಂಕಟರಮಣ ಭಟ್ಟ ಎಂದೂ ಅಂದು ಉಡುಪಿ ತಾಲೂಕಿಗೆ ಸೇರಿದ್ದ ಬೋರಾಡಿ ಕವಿಯ ಊರೆಂದೂ ತಂದೆಯ ಹೆಸರು ಅಣ್ಣಪ್ಪ ಭಟ್ಟ ಎಂದೂ ತಿಳಿಯುತ್ತದೆ. 'ಸದರಿ ವೆಂಕಟರಮಣ ಭಟ್ಟರಿಗೋಸ್ಕರ' ಎಂದು ಹೇಳಿರುವುದರಿಂದ ಕವಿಯ ಜೀವಿತ ಕಾಲದಲ್ಲೇ ಇದು (೧೯೭೬ರಲ್ಲಿ) ಮುದ್ರಿತವಾಗಿರುವುದು ಸ್ಪಷ್ಟ. ಶಿವರಾಮ ಕಾರಂತರು ಇಪ್ಪತ್ತನೆಯ 'ಶತಮಾನದ ಉದಯ' ಎಂದು ಬರೆದು ಅದರ ಕೆಳಗೆ ಬೋರಾಡಿ

ವೆಂಕಟರಮಣಾಯ್ಯ ಎಂಬ ಹೆಸರು ಕೊಟ್ಟಿರುವುದರಿಂದ ಈ ಕವಿ ಈ ಶತಮಾನದ ಆದಿ ಭಾಗದಲ್ಲಿದ್ದುದು ಅವರಿಗೆ ತಿಳಿದುಬಂದಿರಬೇಕು. ಸು. ೧೮೬೦ ರಿಂದ ೧೯೩೬ ಈ ಕವಿಯ ಕಾಲವೆಂದು ತಿಳಿಯುತ್ತದೆ. ೧೯೩೬ರ ವರೆಗೆ ಇವರು ಜೀವಿಸಿದ್ದರೆಂದು ಪ್ರೊ. ಶ್ರೀಧರ ಉಪ್ಪೂರರು ತಿಳಿಸಿರುತ್ತಾರೆ. (ಈ ಮೇಲೆ ವಿದ್ವಾಂಸರೆಂದು ಉಲ್ಲೇಖಿಸಲ್ಪಟ್ಟಿರುವ ತಟ್ಟುವಟ್ಟು ಶೃಂಗ ಭಟ್ಟ ಎಂಬವರು ಪ್ರಸಂಗರಚನೆ ಮಾಡಿರುವರೇ ಎಂಬ ವಿಷಯ ತಿಳಿಯದು.)

'ಜಾಂಬವತೀ ಕಲ್ಯಾಣ ಮತ್ತು ಸತ್ಯಭಾಮಾ ಪರಿಣಯ'ದಲ್ಲಿ ಮೊದಲಿನ ಶಾರ್ದೂಲ ವಿಕ್ರೀಡಿತ ವೃತ್ತದಲ್ಲಿ 'ದುಗ್ಧಾಪುರೇಶಂ ಭಜೇ' ಎಂದು ವಿಷ್ಣುವನ್ನು ವಂದಿಸಿದಲ್ಲಿ ಹಾಲುಗಡಲಿನಲ್ಲಿರುವ ವಿಷ್ಣುವೆಂದೂ ಹಾಲಾಡಿಯ ವಿಷ್ಣುವೆಂದೂ ತಿಳಿಯುವಂತೆ ಶ್ಲೇಷೆಯಿಂದ ಈತನು ಬರೆದಿರುತ್ತಾನೆ. ಹಾಲಾಡಿಯಲ್ಲಿ ಶ್ರೀ ನರಸಿಂಹ ದೇವಾಲಯವಿದೆ. ನರಸಿಂಹನೇ ಕವಿಯ ದುಗ್ಧಾಪುರೇಶ. ಗಣಪತಿ, ಶಿವ, ಪಾರ್ವತಿ, ಶಾರದೆ, ದೇವತೆಗಳು, ಹನುಮಂತ, ವೇದವ್ಯಾಸ ಇವರನ್ನೆಲ್ಲ ನೆನೆದು ಶ್ರೀಕೃಷ್ಣನನ್ನು ಹೀಗೊಂದು ಚಿತ್ರಕವಿತೆಯಿಂದ ಸ್ತುತಿಸಿದ್ದಾನೆ–

ವಲ್ಮಿಕದಿ ಆವಾಸಗೈದನ
ಬಲ್ಮೆಯಿಂದಾಭರಣ ಧರಿಸಿದ
ಸಾಲ್ಮೊಗದ ಮಹದೇವನರಸಿಯ ಪಿತನ ಪಕ್ಷವನು ।
ಪಲ್ಮೊರೆದು ತರಿದವನ ಸುತನಿಗೆ
ನಲ್ಮೆಯಿಂ ಸಾರಥಿಯ ಗೈದನ
ಒಲ್ಮೆಯಿಂದಲಿ ಪೇಳ್ವೆನೀ ಕಥೆ ಯಕ್ಷಗಾನದಲಿ ॥

ವಲ್ಮೀಕದಲ್ಲಿ ಆವಾಸಗೈದವನು ಸರ್ಪ; ಸರ್ಪವನ್ನು ಆಭರಣವಾಗಿ ಧರಿಸಿದ ಸಾಲ್ಮೊಗದ ದೇವ ಶಿವ; ಅವನ ಅರಸಿ, ಪಾರ್ವತಿ; ಅವಳ ಪಿತ ಪರ್ವತ; ಪರ್ವತದ ಪಕ್ಷ ಅಥವಾ ರೆಕ್ಕೆಯನ್ನು ಪಲ್ಮೊರೆದು ತರಿದವನು ಇಂದ್ರ; ಇಂದ್ರನ ಸುತ ಅರ್ಜುನ; ಅರ್ಜುನನಿಗೆ ಸಾರಥ್ಯಗೈದವನು ಶ್ರೀಕೃಷ್ಣ –ಹೀಗೆ ಪರಿಹಾರ ಮಾಡಿಕೊಳ್ಳಬೇಕು. ಇದು 'ಪಾರಿಹಾರಿಕೀ' ಎಂಬ ಚಿತ್ರಕವಿತೆ.

ಇಂದ್ರವಿಜಯದಲ್ಲಿ ಶಿವ, ಗಣಪತಿ, ವಿಷ್ಣು, ಲಕ್ಷ್ಮೀದೇವಿ, ಸೂರ್ಯ, ಪಾರ್ವತಿ, ಸರಸ್ವತಿಯರ ಸ್ತುತಿಗಳು ದೀರ್ಘವಾಗಿದೆ. ಸೂರ್ಯನನ್ನು ಸ್ತುತಿಸಿರುವುದು ವಿಶೇಷವಾಗಿದೆ. ಪಾರ್ವತೀದೇವಿಯ ಸ್ತುತಿಯು ಅಕ್ಷರ ಪುನರಾವೃತ್ತಿಯಿಂದ ಕೂಡಿ ಸೊಗಸಾಗಿದೆ. ಹೀಗೆ ಈ ಕವಿಗೆ ಶಬ್ದಾಲಂಕಾರಗಳಲ್ಲಿ ವಿಶೇಷ ಪ್ರೀತಿಯಿತ್ತೆಂಬುದು ಸ್ಪಷ್ಟವಾಗುತ್ತದೆ. ಒಳ್ಳೆಯ ಕವಿತಾಶಕ್ತಿಯಿರುವ ಕವಿ ಈತನೆಂಬುದು ಪ್ರಸಂಗಾವಲೋಕನದಿಂದ ತಿಳಿಯುತ್ತದೆ. ಕವಿಯ ಜೀವನ ವಿವರಗಳು ತಿಳಿಯವು.

ಕಥಾವಿಚಾರ; ಪ್ರಸಂಗವಿಮರ್ಶೆ

ಚೋರಾಡಿ ವೆಂಕಟರಮಣ ಭಟ್ಟರ "ಇಂದ್ರವಿಜಯ"ವು ಸಾಕಷ್ಟು ದೀರ್ಘವಾದ ಪ್ರಸಂಗ. ಭಾಗವತದ ಷಷ್ಠ ಸ್ಕಂಧದ (ಸಂಸ್ಕೃತ ಭಾಗವತ ೬-೭ ರಿಂದ ೧೩; ಕನ್ನಡ ಭಾಗವತ ೬-೭ ರಿಂದ ೧೨) ಕಥೆಯನ್ನುಳ್ಳ ಈ ಪ್ರಸಂಗವು ಭಾಗವತ ಮೂಲವನ್ನೇ ಅನುಸರಿಸಿದೆ. ವಿಶ್ವರೂಪ ಸಂಹಾರ, ವೃತ್ರೋತ್ಪತ್ತಿ, ದೇವಾಸುರ ಯುದ್ಧ, ದಧೀಚಿಯ ಎಲುಬಿನಿಂದ ವಜ್ರಾಯುಧ ತಯಾರಿಕೆ, ವೃತ್ರ ಸಂಹಾರ, ವೃತ್ರ ಹತ್ಯಾದೋಷ ಭಯದಿಂದ ಇಂದ್ರ ಅಡಗಿದ್ದು, ನಹುಷನಿಗೆ ಇಂದ್ರಪಟ್ಟಾಭಿಷೇಕ, ನಹುಷನಿಂದ ಶಚಿಯ ಬಯಕೆ, ಅಶ್ವಮೇಧಯಾಗದಿಂದ ಇಂದ್ರಪಾಪ ಪರಿಹಾರ, ನಹುಷನಿಗೆ ಅಗಸ್ತ್ಯ ಶಾಪ, ಇಂದ್ರನ ಪುನರಾಗಮನ – ಇಷ್ಟು ವೈವಿಧ್ಯಪೂರ್ಣ ಘಟನೆಗಳು ಈ ಪ್ರಸಂಗದಲ್ಲಿ ಸೇರಿಕೊಂಡಿವೆ.

ಭಾಗವತದಲ್ಲಿ ನಹುಷನ ಕಥೆಯವರೆಗಿನ ವಿಷಯಗಳು ವಿಸ್ತಾರವಾಗಿ ಬಂದಿದ್ದು ನಹುಷನ ಕಥೆ ತೀರ ಸಂಕ್ಷಿಪ್ತವಾಗಿ ಸೂಚಿತವಾಗಿದೆ. ಪ್ರಸಂಗದಲ್ಲಿ ಮಹಾಭಾರತದಲ್ಲಿ ಬಂದ ನಹುಷನ ಕಥೆಯನ್ನು ಅನುಸರಿಸಿಕೊಂಡು ವಿಸ್ತಾರವಾಗಿ ನಿರೂಪಿಸಲಾಗಿದೆ. ಇಂದ್ರನಿಗೆ ವಿಶ್ವರೂಪನ ಮೇಲೆ ದೊರೆತ ವಿಜಯ, ವೃತ್ರನ ಮೇಲೆ ದೊರೆತ ವಿಜಯ ಮತ್ತು ಅಶ್ವಮೇಧದಿಂದ ವೃತ್ರಹತ್ಯಾಪಾಪದ ಮೇಲೆ ದೊರೆತ ವಿಜಯ ಮತ್ತು ಇಂದ್ರಪತ್ನಿಯಾದ ಶಚಿಗೆ ನಹುಷನ ಮೇಲೆ ದೊರೆತ ವಿಜಯ – ಹೀಗೆ ಇಂದ್ರನ ವಿಜಯಗಳನ್ನು ಇದು ನಿರೂಪಿಸುವುದರಿಂದ 'ಇಂದ್ರವಿಜಯ'ವೆಂಬ ಹೆಸರು ಉಚಿತವಾಗಿದೆ. ಇಂದ್ರನ ಒಡ್ಡೋಲಗದಿಂದ ಪ್ರಸಂಗ ತೊಡಗಿ ಇಂದ್ರನ ಓಲಗದಿಂದಲೇ ಅಂತ್ಯವಾಗುತ್ತದೆ. ಈ ಪ್ರಸಂಗಕ್ಕೆ 'ಅಮರೇಂದ್ರ ವಿಜಯ' ಎಂಬ ಹೆಸರೂ ಇರುವಂತೆ ಪ್ರಸಂಗದಿಂದ ತಿಳಿದುಬರುತ್ತದೆ. ಪ್ರಸಂಗದ ಕೊನೆಗೆ "ಈ ತೆರದ ಅಮರೇಂದ್ರ ವಿಜಯಾಖ್ಯಾತವಹ ಚರಿತವನು....." ಎಂದು ಮುಂತಾಗಿ ಹೇಳಲಾಗಿದೆ.

ವೃತ್ರನು ದೇವತೆಗಳ ಮೇಲೆ ಯುದ್ಧಕ್ಕಾಗಿ ಯೋಚಿಸಿದಾಗ ಒಬ್ಬ ಮುಪ್ಪಿನ ಖಳನು ಅದರಿಂದಾಗುವ ಅಪಾಯಗಳನ್ನು ಹೇಳಿದನಂತೆ. ಮೂಲದಲ್ಲಿಲ್ಲದೆ ಪ್ರಸಂಗಕರ್ತೃವೇ ರೂಪಿಸಿಕೊಂಡ ಈ ಪ್ರಸಂಗಭಾಗ ಹೀಗಿದೆ–

ಕೇಳಿರೊ । ಮಾತ । ಕೇಳಿರೊ ॥ ಪ ॥

ಕೇಳಿರೊ ಮಾತ ದೈತ್ಯಾಧಿಪರೆಲ್ಲ । ಕಾಳಗಕೆನುತ ಪೋಗುವುದು ಲೇಸಲ್ಲ ॥ ಅನು ಪ. ॥

ಪೂರ್ವದೊಳಗೆ ಬಲು ರಾಕ್ಷಸೇಶ್ವರರು । ಪರ್ವತಾರಿಯ ಕೂಡೆ ಜಗಳಗೈದವರು ।

ತರ್ವಾಯೊಳಳಿದುಪೋಗಿಹರು ಕೆಲವರು । ಗರ್ವವುಳಿದು ಪಲಾಯನವ ಗೈದಿಹರು ।

ಭುಜದ ಬಲುಹು ಭಟರಿಂಗಿರುವೊಲು । ಕುಜನಕುಠಾರಿ ಅಚ್ಯುತನ ಕೃಪೆಯೊಳು ।

ನಿಜದೊಳವರಿಗೇನು ತೊಡಕುಗಳ್ಬರಲು । ವಿಜಯಗೊಳಿಸುತ ಸಾಕುವನು ನಾಕದೊಳು ॥

ರಾಕ್ಷಸರಿಗೆ ಹಿರಿಯರು ಬುದ್ಧಿಹೇಳುವ ಈ ರೀತಿಯ ಚಿತ್ರಣಗಳು ಪ್ರಸಂಗಸಾಹಿತ್ಯದಲ್ಲಿ ಕಡಿಮೆ. ಚೋರಾಡಿಯವರ ಪ್ರಸಂಗದಲ್ಲಿ ಯುದ್ಧಸಂದರ್ಭಗಳು, ಯುದ್ಧವರ್ಣನೆಗಳು ಚೆನ್ನಾಗಿ ಬಂದಿವೆ. ಪ್ರಸಿದ್ಧ ಪ್ರಸಂಗಗಳ ಮಾದರಿಯ ಹಲವು ಪದ್ಯರಚನೆಗಳು ಪ್ರಸಂಗದಲ್ಲಿವೆ. ಹಳೆಯ ಪ್ರಸಂಗಗಳನ್ನೂ ಷಟ್ಪದಿ ಕಾವ್ಯಗಳನ್ನೂ ಚೋರಾಡಿಯವರು ಚೆನ್ನಾಗಿ ಅಭ್ಯಾಸಮಾಡಿರುವುದು ಅವರ ಪ್ರಸಂಗವನ್ನು ನೋಡಿದಾಗ ತಿಳಿಯುತ್ತದೆ. ಯಕ್ಷಗಾನ ಶೈಲಿಯ ಭಾಷಾಪ್ರಯೋಗ ಪದ್ಯರಚನೆಗಳು ಚೋರಾಡಿಯವರಿಗೆ ಚೆನ್ನಾಗಿ ಅವಗತವಾಗಿರುವುದರಿಂದ ಇಲ್ಲಿಯ ಪದ್ಯಗಳು ಯಕ್ಷಗಾನೋಚಿತವಾಗಿ ಸಂಭಾಷಣ ಯೋಗ್ಯವಾಗಿ, ಅರ್ಥವಿವರಣೆಗನುಕೂಲವಾಗಿ ಬಂದಿವೆ.

ಪ್ರಸಂಗದಲ್ಲಿ ಶೃಂಗಾರಕ್ಕೆ ಅವಕಾಶ ಕಡಮೆಯಾದರೂ ಸಂದರ್ಭವನ್ನು ಸೃಷ್ಟಿಸಿಕೊಳ್ಳಲಾಗಿದೆ. ದೇವಲೋಕವನ್ನು ಸೂರೆಗೈದ ರಾಕ್ಷಸರು ಅಪ್ಸರ ಸ್ತ್ರೀಯರನ್ನು ಮೋಹಿಸಿ ಬಯಸಿದರೆಂಬ ಸಂದರ್ಭವನ್ನು ಕಲ್ಪಿಸಿಕೊಂಡು ಶೃಂಗಾರ ಪೂರ್ಣವಾದ ಪದ್ಯಗಳನ್ನು ಹೆಣೆಯಲಾಗಿದೆ.

ರಾಗ ಸೌರಾಷ್ಟ್ರ; ತ್ರಿವುಡೆತಾಳ

ಭೂಪತಿಯೆ ಚಿತ್ತೈಸು ನಗರವ । ನೀ ಪರಿಯ ಸೂರೆಯಲಿ ದೈತ್ಯರು ।
ಮಾಪುಗೊಂಡಲ್ಲಿರುವರನು ಮಿಗೆ । ಕೋಪದಿಂದ ॥
ದಂಡಿಸುತ ಬೆರಸಿದರು ಪುರದೊಳು । ಚಂಡವಿಕ್ರಮರಾಗಿ ನಲಿಯುತ ।
ಗುಂಡು ಕುಚದಬಲೆಯರನೀಕ್ಷಿಸಿ । ಪುಂಡುಗೊಳುತಾ ॥
ನೀರೆ ಬಾ ಬಾರೆಂದು ಮೋಹಿಸಿ । ಚಾರು ಕುಚವನು ಪಿಡಿದು ಬಲ್ಪಿಲಿ ।
ಮಾರಜಭ್ರಮೆಯಿಂದಲೊಯ್ದರು । ಜಾರ ಖಳರು ॥
ಬಳಿಕ ಪೂರ್ವಶಿರಂಭೆಯರು ಯಿಹ । ನಿಳಯವೆಡೆಗೈತಂದರವದಿರ ।
ಚಲುವಿಕೆಯನೀಕ್ಷಿಸುತಲೆಂದರು । ಖಳರು ನಲಿದು ॥

ರಾಗ ಕಾಪಿ ; ಅಷ್ಟತಾಳ

ಇತ್ತ ನೋಡಿರೊ ಇಲ್ಲಿ ನಿತ್ತಿಹ ಹೆಣ್ಣ ।
ಪುತ್ತಳಿ ಬೊಂಬೆಯಿಕ್ಕಿಹಳೆನ್ನೊಳ್ಕಣ್ಣ ॥ ಪ ॥

ಎನ್ನ ಚಲುವಿಗೆ ಜೋಡಹುದಿವಳ್ಬಣ್ಣ । ಮುನ್ನ ಹಾರೈಸಿಕೊಂಡಿಹಳು ಕೇಳಣ್ಣ ।
ಮಿಣ್ಣಗೆ ಬಂದು ನೋಡುವುದೇನ್ನೀ ಬರಿದೆ । ಕಣ್ಣ ಕೀಳಿಸುವೆನತ್ತೈದು ನೀನಿರದೆ ॥
ಅವಳ ಚಲುವು ಸುಡಲಿತ್ತಲು ನೋಡು । ಧವಳ ವರ್ಣದ ಬಾಲೆಯಿವಳೆನ್ನ ಜೋಡು ।
ಇವಳ ಸಂಗದಲಿ ಸೇರ್ವದು ಮುಕ್ತಿನಾಡು । ಭುವನ ಮೂರರೊಳಿಲ್ಲೀ ಚೆಲುವಿನ ಗೂಡು ॥
ಕಡುಜವ್ವನೆಯ ಸುದ್ದಿ ನಿನಗ್ಯಾಕಯ್ಯ । ನಡೆಯಲಾರದ ಗಡ್ಡ ಬಿಳುಪಾದ ಮುದಿಯ ।
ಹುಡುಗನಾಗಿಹೆ ಯೆನ್ನ ಬಯಸಿಕೊಂಡಿರುವ । ಹುಡುಗಿಯ ಬಿಡೆನೆಂದು ಯೆಳೆದೊಯ್ದನೊರ್ವ ॥

ಈ ರೀತಿಯಲ್ಲಿ ರಾಕ್ಷಸರ ಶೃಂಗಾರಗಳು ಮುಂದುವರಿಯುತ್ತವೆ. ಪ್ರಸಂಗದಲ್ಲಿ ವೈವಿಧ್ಯಪೂರ್ಣವಾದ ಘಟನೆಗಳಿಗೆ ಬೇಕಾಗಿ ಇಂತಹ ಸಂದರ್ಭಗಳನ್ನು ಸೃಷ್ಟಿಮಾಡಿಕೊಳ್ಳಲಾಗಿದೆ. ರಾಕ್ಷಸ ಸ್ವಭಾವಕ್ಕನುಗುಣವಾಗಿ ವಾಚ್ಯ ಶೃಂಗಾರವೇ ಬಂದಿರುವುದನ್ನೂ ಗಮನಿಸಬಹುದಾಗಿದೆ.

ಲಕ್ಷ್ಮೀಶನ ಜೈಮಿನಿ ಭಾರತವನ್ನು ಚೋರಾಡಿಯವರು ಓದಿದ್ದು ಅಲ್ಲಿಂದ ಪ್ರಭಾವಿತರಾಗಿದ್ದಾರೆಂದು ಗುರುತಿಸುವಂತಿದೆ. ರಾಕ್ಷಸರ ಮೇಲೆ ದೇವತೆಗಳ ದಾಳಿಯನ್ನು ವರ್ಣಿಸಿದ ವಾರ್ಧಕ ಪದ್ಯವೊಂದು ಹೀಗಿದೆ–

> ಗಾಢದಿಂದದಟನೊಳಗಾಪುರದ ಗೋಪುರದ
> ಬೀಡಿನೊಳಗಿರುವಸುರ ವೀರರಂ ಶೂರರಂ
> ಜೋಡು ಜೋಡಲಗ ತೆಗೆದೆಚ್ಚುತ್ತ ಕೊಚ್ಚುತ್ತಲೀಡಿರಿದು ಬೊಬ್ಬಿಡುತಲಿ !
> ಪಾಡುಪಂಥವ ಬಿಟ್ಟು ಎರಗಿದರ ಮರುಗಿದರ
> ನೋಡಿಸದೆ ಕರುಣದಿಂದೊಡಗೊಂಡು ಬಲುಹಿಂಡು
> ಗೂಡಿರಲ್ಕದ ಕೆಲನೋರ್ಡುತಂ ಓಡುತಂ ದನುಜೇಶಗಿಂತೆಂದರು ॥

–ಇಲ್ಲಿ ಲಕ್ಷ್ಮೀಶನ ಶಬ್ದ ವೈಖರಿಯ ಅನುಸರಣೆಯನ್ನು ಕಾಣಬಹುದಾಗಿದೆ.

ರಂಗಪ್ರಯೋಗಕ್ಕೂ ತಾಳಮದ್ದಳೆಗೂ ಚೆನ್ನಾಗಿ ಹೊಂದಿಕೊಳ್ಳಬಹುದಾದ ಒಂದು ಒಳ್ಳೆಯ ಪ್ರಸಂಗ ಇಂದ್ರವಿಜಯ. ಆದರೆ ಇದು ಹೆಚ್ಚು ಜನಪ್ರಿಯವಾಗಿದ್ದ ಬಗೆಗೆ ಹಿರಿಯ ಭಾಗವತರಿಂದಲೂ ಹಿರಿಯ ತಲೆಮಾರಿನವರಿಂದಲೂ ಮಾಹಿತಿಯೇನೂ ದೊರೆತಿಲ್ಲ. ಈ ಪ್ರಸಂಗವನ್ನು 'ವೃತ್ರಾಸುರ ಕಾಳಗ' ಎಂದು ಶಿವರಾಮ ಕಾರಂತರು ಉಲ್ಲೇಖಿಸಿರುತ್ತಾರೆ. ಆದರೆ ಕೇವಲ ವೃತ್ರಾಸುರ ಸಂಹಾರದ ಕಥೆ ಮಾತ್ರವಲ್ಲದೆ ಹೆಚ್ಚಿನ ಕಥೆಯಿರುವ ಈ ಪ್ರಸಂಗಕ್ಕೆ 'ಇಂದ್ರವಿಜಯ' ಎಂಬ ಹೆಸರೇ ಹೆಚ್ಚು ಸೂಕ್ತವಾಗಿದೆ. ವೃತ್ರಾಸುರನ ಕಥೆಯು ಭಾಗವತದ ಒಂದು ಪ್ರಾತಿನಿಧಿಕ ಕಥೆಯೂ ಆಗಿದ್ದು ಪ್ರಸಂಗವೂ ಸೊಗಸಾಗಿರುವುದರಿಂದ ಈ ಪ್ರಸಂಗಕ್ಕೆ ಒಂದು ರೀತಿಯ ಪ್ರಾತಿನಿಧಿಕ ಪ್ರಸಂಗದ ಸ್ಥಾನವನ್ನು ಕೊಡಬಹುದಾಗಿದೆ.

೮. ಸತ್ಯಹರಿಶ್ಚಂದ್ರ :

ಕವಿ : ನಾರಾಯಣ ನಾಗಪ್ಪ ಜೋಶಿ (ಸು. ೧೯೧೫ – ಸು. ೧೯೮೫)

ಉತ್ತರ ಕನ್ನಡ ಜಿಲ್ಲೆಯ ಸೋಂದಾ ಸಮೀಪದ ಬಾಳೂರ ಕೊಪ್ಪದ ನಾಗಪ್ಪ ಜೋಯಿಸರ ಮಗನಾದ ನಾರಾಯಣ ನಾಗಪ್ಪ ಜೋಶಿಯವರು ವೃತ್ತಿಯಲ್ಲಿ ಉಪಾಧ್ಯಾಯರಾಗಿದ್ದು ಪ್ರವೃತ್ತಿಯಲ್ಲಿ ಯಕ್ಷಗಾನ ಕಲಾವಿದರಾಗಿದ್ದವರು. ಯಕ್ಷಗಾನ ಕೂಟಗಳಲ್ಲಿ ಅರ್ಥಗಾರಿಕೆಯಿಂದ ನಾರಾಯಣ ನಾಗಪ್ಪ ಜೋಶಿಯವರು ಪ್ರಸಿದ್ಧರಾಗಿದ್ದರು. 'ಸತ್ಯ ಹರಿಶ್ಚಂದ್ರ'ವೆಂಬುದು ಇವರ ಸ್ವತಂತ್ರ ಯಕ್ಷಗಾನ ಕೃತಿ. 'ಯಕ್ಷಗಾನ ದಾನಶೂರ ಕರ್ಣ' ಎಂಬ ಪುಸ್ತಕವನ್ನೂ ಇವರು ಪ್ರಕಾಶಿಸಿರುತ್ತಾರೆ. ಆದರೆ ಇದು ಇವರ ಸ್ವತಂತ್ರ ಕೃತಿಯಲ್ಲ. ಉತ್ತರ ಕನ್ನಡದಲ್ಲಿ ಪ್ರಸಿದ್ಧವಾಗಿದ್ದ 'ಕರ್ಣಪರ್ವ–ಸಭಾಹಿತ ಪ್ರತಿ'ಯನ್ನು ಇವರು ಮುದ್ರಣ ಮಾಡಿಸಿರುವುದಾಗಿದೆ.

'ಸತ್ಯ ಹರಿಶ್ಚಂದ್ರ' ಪ್ರಸಂಗದ ಕೊನೆಗೆ ಇವರು ತನ್ನ ಬಗ್ಗೆ ಹೇಳಿಕೊಂಡ ಮಾತುಗಳು ಹೀಗಿವೆ–

ಸ್ವರ್ಣವಲ್ಲಿಯ ಪುಣ್ಯಕ್ಷೇತ್ರದ । ಸನ್ನುತನು ಸರ್ವಾತ್ಮ ನರಹರಿ ।
ಚಿನ್ಮಯನು ಸರ್ವಜ್ಞಪೂಜಿತ । ನಿನ್ನು ತೋರ್ದಾ ।
ದಾರಿಯೊಳು ಚರಿಸುತಲಿ ಚರಿತೆಯು । ದಾರಮತಿಗಳ ಕರದೊಳಿರಿಸಿಹೆ ।
ನಾರಣಪ್ಪನ ಬೆಪ್ಪನೆಣಿಸದೆ । ಸಾರವರಿತು ।
ಮೆರೆಸಿರೆನ್ನೀ ಚರಿತೆಯೆಂಬೆನು । ಮರುಳು ಕೊರತೆಗಳಿರಲಿಕೆನ್ನವು ।
ಸರಸ ಸತ್ಯಗಳೆಲ್ಲ ಚಿದ್ಘನ । ಕರುಣೆ ಖಚಿತಾ ।
ಈಗಲೂ ಸುಕ್ಷೇತ್ರ ಸ್ವಾದಿ ವಿ । ಭಾಗದೊಳು ಬಾಳೂರ ಕೊಪ್ಪದ ।

ನಾಗ ಜೋಯಿಸ ಪುತ್ರನಾಗಿಹ । ನಾಗಶಯನ ।
ಆದಿಪುರುಷನ ನಾಮ ಕನ್ನಡ । ದಾದಿಯೋದಿನ ಬೋಧ ಶಿಕ್ಷಕ ।
ಸಾಧಿಸಿದ ದಾರಿದ್ರ್ಯವತುಲವ । ಹಾದಿ ಚರಿಸಿ ।
ದರಿದ್ರ ನಾರಾಯಣನು ಬರೆದಿಹ । ಮರುಳು ಬರೆಹವಿದೆಂದು ತಿಳಿಯದೆ ।
ತೆರೆದು ಓದುತಲೊಂದು ಕಂಬನಿ । ಸುರಿಸೆ ಧನ್ಯಾ ॥

ನಾರಾಯಣ ನಾಗಪ್ಪ ಜೋಶಿಯವರು ಐತಿಹಾಸಿಕ ವಸ್ತುವನ್ನು ತೆಗೆದುಕೊಂಡು 'ಶಿವಾಜಿ ಚರಿತ್ರೆ'ಯನ್ನೂ, ದೇವುಡು ನರಸಿಂಹ ಶಾಸ್ತ್ರಿಗಳ 'ಮಹಾಕ್ಷತ್ರಿಯ' ಎಂಬ ಕಾದಂಬರಿಯನ್ನಾಧರಿಸಿ 'ಮಹಾಕ್ಷತ್ರಿಯ' ಎಂಬ ಪ್ರಸಂಗವನ್ನೂ ಬರೆದಿದ್ದಾರೆ. ನಾರಾಯಣ ನಾಗಪ್ಪ ಜೋಶಿಯವರ ಬರವಣಿಗೆ ಸರಳ ಮತ್ತು ನೇರವಾಗಿದೆ. ಅರ್ಥಗಾಂಭೀರ್ಯ ಸಾಧಾರಣಮಟ್ಟದ್ದೇ ಆಗಿದೆ. ರಾಘವಾಂಕನ ಕಾವ್ಯವನ್ನು ಓದಿಕೊಂಡುದು ಸ್ಪಷ್ಟವಾಗಿ ತಿಳಿಯುವಂತಿದೆ. ಯಕ್ಷಗಾನ ಪ್ರಸಂಗಗಳ ಅಧ್ಯಯನ ಇವರಿಗೆ ಚೆನ್ನಾಗಿರುವುದು ಪ್ರಸಂಗರಚನೆಯಲ್ಲಿ ವ್ಯಕ್ತವಾಗಿದೆ.

ಕಥಾವಿಷಯ; ಪ್ರಸಂಗವಿಮರ್ಶೆ :

ನಾರಾಯಣ ನಾಗಪ್ಪ ಜೋಶಿಯವರ "ಸತ್ಯಹರಿಶ್ಚಂದ್ರ" ಪ್ರಸಂಗವು ರಾಘವಾಂಕನ ಹರಿಶ್ಚಂದ್ರ ಕಾವ್ಯವನ್ನೇ ಅನುಸರಿಸಿರುವುದಾದರೂ ಹರಿಶ್ಚಂದ್ರನ ಒಡ್ಡೋಲಗದಿಂದ ತೊಡಗುತ್ತದೆ. ಅನಂತರ ಇಂದ್ರಸಭೆಯ ವಸಿಷ್ಠ–ವಿಶ್ವಾಮಿತ್ರ ಸಂವಾದ ಭಾಗವಿದೆ. ವಿಶ್ವಾಮಿತ್ರ ಸೃಷ್ಟಿಸಿದ ಮಾಯದಬಲೆಯರಿಗೆ ಮಾಧವಿ ಮಾಲತಿಯೆಂದು ಹೆಸರು ಕೊಡಲಾಗಿದೆ. ರಾಜನೊಡನೆ ಅವರ ಸಂವಾದ ಭಾಗ ಸಂಕ್ಷಿಪ್ತವಾಗಿದ್ದು ಹರಿಶ್ಚಂದ್ರ ಕಾವ್ಯದಲ್ಲಿ ಬರುವ ಕಾವ್ಯಸೌಂದರ್ಯವಿಲ್ಲಿಲ್ಲ. ಮೊದಲಿಗೆ ಶ್ವೇತಛತ್ರವನ್ನು ಕೇಳುವ ಪ್ರಸಂಗವಿಲ್ಲ. ಮೊದಲಿಗೇ –

ಹರುಷವಾಯಿತು ಧರಣಿಪತಿಯಿನ್ನು । ನಮ್ಮೀರ್ವರೊಪ್ಪುತ ।
ಪರಸಿ ಕರುಣಿಸು ರಾಜ್ಞಿ ಪದವನ್ನು ॥

– ಎಂದು ಕೇಳುತ್ತಾರೆ. ಅದಕ್ಕೆ ಉತ್ತರದಲ್ಲಿ ಹರಿಶ್ಚಂದ್ರಕಾವ್ಯದ ಒಂದು ಮಾತನ್ನು ಎತ್ತಿಕೊಳ್ಳಲಾಗಿದೆ–

ನಾರಿಯರೊರೆವುದೇನು । ಭಾಸ್ಕರಕುಲ ಧಾರಿಣೀಶ್ವರನು ನಾನು ।
ಕ್ಷೀರದಿ ಹನಿಯಾಮ್ರ । ಸೇರಿ ಕೆಡಿಪತೆರ । ಸೇರೆನಂತ್ಯಜರ್ನಿಮ್ಮನು ॥

"ಕೊಡವಾಲ ಕೆಡಿಸುವಡಾವ್ರುವೆನಿತಾಗಬೇಕು" ಎಂಬ ಮಾತನ್ನಿಲ್ಲಿ ಪರಿವರ್ತಿಸಿಕೊಳ್ಳಲಾಗಿದೆ. ಹರಿಶ್ಚಂದ್ರನು ವಿಶ್ವಾಮಿತ್ರನಿಗೆ ರಾಜ್ಯಸರ್ವಸ್ವವನ್ನು ಒಪ್ಪಿಸಿಕೊಡುವ ಭಾಗವನ್ನು ಸಂವಾದರೂಪದಲ್ಲಿ ಅಳವಡಿಸಲಾಗಿದೆ. ವೀರಬಾಹುಕನು "ಸಂಬಳಿಗೋಲ ಮುದ್ರೆಗೊಟ್ಟಂ ವನಧಿ ಮುದ್ರಿತ ಧರಾಧಿಪತಿಗೆ" ಎಂದು ಹರಿಶ್ಚಂದ್ರಕಾವ್ಯದಲ್ಲಿರುವುದನ್ನು "ಒಡನೀವೆ ಮುದ್ರೆಯೆಂದು । ಸಂಬಳದ ಬಡಿಗೆಯಿದ ಧರಿಸು ಬಂದು" ಎಂದು ಬದಲಾಯಿಸಿಕೊಳ್ಳಲಾಗಿದೆ. ಆದರೂ ಹರಿಶ್ಚಂದ್ರಕಾವ್ಯದ ಮಾತುಗಳನ್ನೇ ತೆಗೆದುಕೊಂಡು ಇಲ್ಲಿ ಯಕ್ಷಗಾನಕ್ಕೆ ಪರಿವರ್ತಿಸಿಕೊಂಡುದು ಕಡಿಮೆಯೇ ಸರಿ. ಶಿವನು ಪ್ರತ್ಯಕ್ಷನಾದ ಮೇಲೆ ಸರ್ವದೇವತೆಗಳೂ ತೋರಿದರೆಂದೂ ಇದೆ. ಶಿವನ ಅನುಗ್ರಹದಿಂದ ಹರಿಶ್ಚಂದ್ರ ರಾಜ್ಯವಾಳಿದನೆಂಬಲ್ಲಿಗೆ ಕಥೆ ಮುಗಿಯುತ್ತದೆ.

ನಾರಾಯಣ ನಾಗಪ್ಪ ಜೋಶಿಯವರ ಪದರಚನೆಗಳು ಬಹಳ ಸೊಗಸಾದುವು ಎನ್ನುವಂತಿಲ್ಲ. ಭಾಷಾಸೌಂದರ್ಯದ ಕಡೆಗೆ ಪ್ರಸಂಗಕರ್ತರ ಗಮನ ಕಡಮೆಯಾದುದರಿಂದ ಪ್ರಸಂಗದ ಒಟ್ಟು ಚೆಲುವು ಸೊಗಸುಗಾರಿಕೆ ಸಾಧಿತವಾಗಿಲ್ಲ. ಸರಳತೆ ಸಾಧಿತವಾಗಿದೆ. ಓದುವ ದೃಷ್ಟಿಯಿಂದ ಅಥವಾ ತಾಳಮದ್ದಳೆಯ ದೃಷ್ಟಿಯಿಂದ ಪ್ರಸಂಗ ಬಹಳ ಪರಿಣಾಮಕಾರಿ ಎಂಬಂತಿಲ್ಲ.

ಭಾಗವತದಲ್ಲಿ ಹರಿಶ್ಚಂದ್ರನ ಬಗೆಗಿನ ಎಲ್ಲ ವಿವರಗಳು ದೊರಕುವುದಿಲ್ಲವಾದರೂ ಪ್ರಸಂಗಕರ್ತರು ಈ ಕಥೆಯನ್ನು ಭಾಗವತದ್ದೆಂದೇ ಪರಿಗಣಿಸಿದ್ದಾರೆ. ಈ ಪ್ರಸಂಗವು ರಂಗಕ್ಕೆ ಬಂದಿದೆ. ಜಾನಕೈ ತಿಮ್ಮಪ್ಪ ಹೆಗಡೆಯವರು ಬರೆದ ಇನ್ನೊಂದು ಹರಿಶ್ಚಂದ್ರ ಪ್ರಸಂಗವು ರಂಗಕ್ಕೆ ಬಂದಿದೆ. ಇದೇ ವಸ್ತುವನ್ನುಳ್ಳ ಮತ್ತೊಂದು ಪ್ರಸಂಗವೂ ಇದೆ.

೯. ಮದಾಲಸೆ ಕಲ್ಯಾಣ :

ಕವಿ : ಮೈರ್ಪಾಡಿ ವೆಂಕಟರಮಣಯ್ಯ (ಸು. ೧೮೬೦–ಸು. ೧೯೪೦)

ಮೈರ್ಪಾಡಿ ವೆಂಕಟರಮಣಯ್ಯನವರ "ಪ್ರಹ್ಲಾದ ಚರಿತ್ರೆ"ಯ ಕೊನೆಗೆ ಈ ಪದ್ಯಗಳಿವೆ–

ಪೃಥ್ವಿಯೊಳು ವರ ಮಯ್ಯವಟಿಯೊಳ । ಗರ್ತಿಯಲಿ ನೆಲಸಿರ್ದ ವಿಶ್ವಾ ।
ಮಿತ್ರ ಗೋತ್ರಜ ದ್ವಿಜ ತಿಮ್ಮಯ್ಯನ । ಪುತ್ರ ವೆಂಕಟರಮಣನು । ಹರಿಯದಯದಿ॥
ಪೇಳಿಸಿದ ತೆರದಿಂದ ರಚಿಸಿದ । ಶ್ರೀ ಲಲಾಮನ ಚರಿತವಿದರನು ।
ಹಾಳು ಕವಿತೆಯಿದೆಂದು ಬೈಯದೆ । ಕೇಳಿದವರತಿ ಕರುಣದಿ । ಧರಣಿಯೊಳಗೆ॥

ಮೆರೆಸಲವರನು ನಿರತ ವೆಂಕಟ । ಗಿರಿಯೊಡೆಯ ಶ್ರೀ ವೆಂಕಟೇಶನು ।
ಪೊರೆಯಲೆನುತಲಿ ಬೇಡಿಕೊಳ್ಳುವೆ । ಹರಿಯನನುದಿನ ದೈನ್ಯದಿ । ಹರುಷದಿಂದ॥

ಮಯ್ಯವಟಿಯೆಂಬುದು ಮೈಪಾರ್ಡಿ ಎಂಬುದರ ರೂಪಾಂತರ. ತಿಮ್ಮಯ್ಯನೆಂದು ತಂದೆಯ ಹೆಸರೆಂದೂ ವೆಂಕಟರಮಣನೆಂದು ತನ್ನ ಹೆಸರೆಂದೂ ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆ. ಇವರ "ಶೂರಪದ್ಮಾಸುರ ಕಾಳಗ, ಶೂರಪದ್ಮಾಸುರ ವಧೆ" ಪ್ರಸಂಗದ ಕೊನೆಗೆ–

ಪೃಥ್ವಿಯೊಳು ಪಣಂಬೂರೊಳಿರುತಿಹ । ಧಾತ್ರಿಪುರ ತಿಮ್ಮಯ್ಯನೆಂಬನ ।
ಪುತ್ರ ವೆಂಕಟರಮಣ ಸಂತಸವೆತ್ತು ಹರಿಯು ।
ಕೇಳಿಸಿದ ತೆರದಿಂದಲಿದರನು । ಪೇಳಿದೆನು......

– ಎಂದು ಮುಂತಾಗಿ ಹೇಳಿದ್ದಾರೆ. ಇವರದೇ ಆದ ಮದಾಲಸೆ ಕಲ್ಯಾಣದ ಕೊನೆಗೆ ಈ ಪದ್ಯವಿದೆ–

ಮಯ್ಯವಟಿಯೊಳಗಿರುವ ವರತಿ । ಮ್ಮಯ್ಯನಾತ್ಮಜನಾದ ವೆಂಕ ।
ಣ್ಣಯ್ಯನಿದ ವಿರಚಿಸಿದ ಮನುಮಥ । ನಯ್ಯನೊಲಿದು ।
ನುಡಿಸಿದಂದದೊಳು........................

– ಹೀಗಿರುವುದರಿಂದ ವೆಂಕಣ್ಣಯ್ಯ ಎಂಬ ಹೆಸರೂ ಇವರಿಗಿತ್ತೆನ್ನಬಹುದು. ಡಾ। ಶಿವರಾಮ ಕಾರಂತರು ಮಯ್ಯವಟಿ ವೆಂಕಟ ಎಂಬ ಹೆಸರನ್ನು ಬಳಸಿದ್ದಾರೆ. ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯದ ಪ್ರಹ್ಲಾದ ಚರಿತ್ರೆಯ ಕೊನೆಗೆ "ಮೈಪಾರ್ಡಿ ವೆಂಕಟರಮಣಯ್ಯನವರಿಂದ ವಿರಚಿಸಲ್ಪಟ್ಟ" ಎಂದಿರುವುದರಿಂದ ಈ ಹೆಸರನ್ನೇ ಅಧಿಕೃತವೆಂದಿಟ್ಟುಕೊಳ್ಳಬಹುದು. ವೆಂಕಟರಮಣಯ್ಯ ಎಂಬ ಹೆಸರನ್ನೇ "ಶೂರಪದ್ಮಾಸುರ ಕಾಳಗ – ಶೂರಪದ್ಮಾಸುರ ವಧೆ"ಯನ್ನು ಸಂಪಾದಿಸಿದ ಸುರತ್ಕಲ್ ಕೆ. ವೆಂಕಟರಾಯಾಚಾರ್ಯರು ಸ್ವೀಕರಿಸಿದ್ದಾರೆ. ತಂದೆಯ ಹೆಸರನ್ನು ಮಾತ್ರ ತಿಮ್ಮಪ್ಪಯ್ಯ ಎಂದು ವೆಂಕಟರಾಚಾರ್ಯರು ಹೇಳಿರುತ್ತಾರೆ.

ಮೈಪಾರ್ಡಿ ವೆಂಕಟರಮಣಯ್ಯನವರು ಕುಂಬಳೆಸೀಮೆಯ ಮಾಯಿಪ್ಪಾಡಿ ಅರಸರ ಅರಮನೆಯಲ್ಲಿ ಕರಣಿಕ ವೃತ್ತಿಯಲ್ಲಿದ್ದರೆಂದು ವಿದ್ವಾನ್ ವೆಂಕಟರಾಜ ಪುಣಿಂಚತ್ತಾಯರು ತಿಳಿಸಿರುತ್ತಾರೆ. ಇವರು ತಮ್ಮ ಎಲ್ಲ ಕೃತಿಗಳನ್ನು ಮಾಯಿಪ್ಪಾಡಿಯಲ್ಲಿದ್ದು ಬರೆದರು. ತನ್ನ ಹುಟ್ಟೂರಾದ ಮೈಪಾರ್ಡಿ (ಮೈರಪಾಡಿ<ಮಯ್ಯರಪಾಡಿ) ಮತ್ತು ಉದ್ಯೋಗಿಯಾಗಿದ್ದ ಮಾಯಿಪ್ಪಾಡಿ–ಈ ಎರಡೂ

ಹೆಸರುಗಳು ತನ್ನ ಹೆಸರಿನೊಡನೆ ಬರುವಂತೆ ಊರಿನ ಹೆಸರನ್ನು 'ಮಯ್ಯವಟಿ' ಎಂದು ಪರಿವರ್ತಿಸಿಕೊಂಡಿದ್ದಾರೆ. "ಇವರು ಮಾಯಿಪ್ಪಾಡಿ ಅರಸರ ಮನೆಯಲ್ಲಿ ಅಟ್ಲಾರ್ ಆಗಿದ್ದರು-ಕೊನೆಯ ಹರೆಯದಲ್ಲಿ ಸ್ವಗ್ರಾಮದಲ್ಲಿಯೇ ನೆಲೆಸಿದ್ದರು." ಎಂದು ಸುರತ್ಕಲ್ ಕೆ. ವೆಂಕಟರಾಯಾಚಾರ್ಯರು 'ಶೂರಪದ್ಮಾಸುರ ಕಾಳಗ-ಶೂರಪದ್ಮಾಸುರ ವಧೆ' ಪ್ರಸಂಗದ ಕವಿಪರಿಚಯದಲ್ಲಿ ತಿಳಿಸಿದ್ದಾರೆ. ಕಳೆದ ಶತಮಾನದ ಕೊನೆಯ ಭಾಗದಲ್ಲೂ ಈ ಶತಮಾನದ ಆದಿಯಲ್ಲೂ ಜೀವಿಸಿದ್ದಂತೆ ತಿಳಿಯುತ್ತದೆ. ಸು. ೧೮೬೦-೧೯೪೦ರಲ್ಲಿ ಕವಿ ಜೀವಿಸಿದ್ದಂತೆ ಪು. ಶ್ರೀನಿವಾಸ ಭಟ್ಟರು ಬರೆದಿದ್ದಾರೆ. ತಮ್ಮ ಪ್ರಸಂಗಗಳಲ್ಲಿ ಗಣಪತಿ, ಶಾರದೆ, ಕೃಷ್ಣ, ಶಿವ ಮೊದಲಾದ ದೇವರನ್ನು ಸ್ತುತಿಸಿದ್ದಾರೆ. ಪ್ರಸಂಗಗಳ ಕೊನೆಗೆ ಉರಗಗಿರಿಯೊಡೆಯ ಶ್ರೀನಿವಾಸ ಅಥವಾ ಪನ್ನಗ ಗಿರಿನಿವಾಸ- ಎಂದು ವೆಂಕಟರಮಣನನ್ನೂ ಸ್ತುತಿಸಿದ್ದಾರೆ.

"ಈ ವೆಂಕಟನು ಬೇರೆ ಏನೇನು ಬರೆದಿರುವನೆಂದು ತಿಳಿಯದು" ಎಂದು ಕಾರಂತರು ಹೇಳಿರುವರಾದರೂ ಈತನು ಪ್ರಹ್ಲಾದ ಚರಿತ್ರೆಯಲ್ಲದೆ ಬೇರೆ ಮೂರು ಯಕ್ಷಗಾನ ಪ್ರಸಂಗಗಳನ್ನೂ ಐದು ಇತರ ಕೃತಿಗಳನ್ನೂ ಬರೆದಿರುವುದು ತಿಳಿಯುತ್ತದೆ. ಇವುಗಳಲ್ಲಿ ಮದಾಲಸೆ ಕಲ್ಯಾಣವು ಶ್ರೀಮದ್ಭಾಗವತದ ಪ್ರಸಂಗವಾಗಿದೆ. ಈ ಕೃತಿಗಳಲ್ಲಿ ಕೆಲವು ಅಪ್ರಕಟಿತವೆಂದು ಸುರತ್ಕಲ್ ಕೆ. ವೆಂಕಟರಾಯಾಚಾರ್ಯರು ಮುಖತಃ ತಿಳಿಸಿರುತ್ತಾರೆ. ಇವನ "ಚಂದ್ರಹಾಸ ಚರಿತ್ರೆ" ಎಂಬೊಂದು ಯಕ್ಷಗಾನ ಕೃತಿ ಅಮುದ್ರಿತವಾಗಿದ್ದು ಇದರ ಒಂದೇ ಒಂದು ಹಸ್ತಪ್ರತಿಯು ವಿದ್ವಾನ್ ವೆಂಕಟರಾಜ ಪುಣಿಂಚತ್ತಾಯರಲ್ಲಿ ಇತ್ತೆಂದೂ ಅದನ್ನು ಅವರು ಪ್ರಾಚೀನಗ್ರಂಥ ಸಂಗ್ರಾಹಕರೂ ಸಂಶೋಧಕರೂ ಕನ್ನಡ ಪ್ರಾಧ್ಯಾಪಕರೂ ಆದ ಹಿರಿಯ ವಿದ್ವಾಂಸರೊಬ್ಬರಿಗೆ ಕೊಟ್ಟಿದ್ದು ಅದು ಅವರಿಂದ ವಾಹನದಲ್ಲಿ ಪ್ರಯಾಣಕಾಲದಲ್ಲಿ ಕಳೆದುಹೋಗಿದೆಯೆಂದೂ ತಿಳಿದುಬರುತ್ತದೆ. ಆದುದರಿಂದ ಆ ಪ್ರಸಂಗವು ಬಹುಶಃ ನಾಶವಾಗಿ ಹೋದಹಾಗೆಯೇ ಎನ್ನಬೇಕಾಗಿದೆ.

ಅಟ್ಲಾರು ತಿಮ್ಮಯ್ಯ ಎಂಬುದು ಇವರ ತಂದೆಯ ಹೆಸರೆಂದೂ, ಕುಂಬಳೆಯಲ್ಲಿ ಇವರು ೩೫-೪೦ ವರ್ಷಗಳ ಕಾಲ ಇದ್ದರೆಂದೂ ೭೦ ವಯಸ್ಸು ದಾಟಿದ ಮೇಲೆ ಮೈಪಾಡಿಗೆ ಬಂದು ಬಡತನದ ಜೀವನ ಮಾಡಿದರೂ ಸದಾ ಓದುವ ಹವ್ಯಾಸವನ್ನಿರಿಸಿಕೊಂಡಿದ್ದರೆಂದೂ ಆಟದಲ್ಲಿ ವೇಷಹಾಕಿದ್ದೂ ಉಂಟೆಂದೂ ಇವರಿಗೆ ಮಕ್ಕಳಿಲ್ಲದುದರಿಂದ ಹೆಂಡತಿಯ ಸಂಬಂಧಿಕರಾದ ದುರ್ಗ ವೆಂಕಟಾಚಲಯ್ಯ ಎಂಬವರಿಗೆ ಕೊನೆಕಾಲದಲ್ಲಿ ಆಸ್ತಿಯನ್ನು ಕೊಟ್ಟರೆಂದೂ ನಿವೃತ್ತ ಅಧ್ಯಾಪಕ ದಿ। ಸುರತ್ಕಲ್ ಎಂ. ವಾಸುದೇವ ರಾವ್ ಅವರು ತಿಳಿಸಿರುತ್ತಾರೆ. ಒಂದು ಕಾಲದಲ್ಲಿ ಸ್ವತಃ ಮೇಳಕಟ್ಟಿ ಆಟಗಳಲ್ಲಿ ಭಾಗವಹಿಸಿರುವರೆಂದೂ ಅವರು ತಿಳಿಸಿರುತ್ತಾರೆ.

ಮೈಪಾಡಿ ವೆಂಕಟರಮಣಯ್ಯನವರ ಬಗೆಗೆ ವೆಂಕಟರಾಜ ಪುಣಿಂಚತ್ತಾಯರು

"ಕುಂಬಳೆ ಸೀಮೆಯಲ್ಲಿ ಪ್ರಸಿದ್ಧನಾದ ಯಕ್ಷಗಾನ ಕವಿ ಶ್ರೀ ಮಾಯಿಪ್ಪಾಡಿ ವೆಂಕಟರಮಣಯ್ಯ" ಎಂಬ ಲೇಖನವನ್ನು ಪ್ರಕಟಿಸಿದಾಗ ಇವರ ವಿಷಯದ ಚರ್ಚೆಯಾಯಿತು. ಶಿವರಾಮ ಕಾರಂತರೂ ಸುರತ್ಕಲ್ ಕೆ. ವೆಂಕಟರಾಯಾಚಾರ್ಯರೂ ಪುಣಿಂಚತ್ತಾಯರ ಕೆಲವು ಮಾತುಗಳನ್ನು ಖಂಡಿಸಿದರು. ಪುಣಿಂಚತ್ತಾಯರು ಪ್ರತಿ ಲೇಖನ ಬರೆದರು. ಈ ಲೇಖನಗಳಲ್ಲಿ ಪುಣಿಂಚತ್ತಾಯರು ವೆಂಕಟರಮಣಯ್ಯನ ಹೆಸರನ್ನು ವೆಂಕಟ ಎಂದು ಬದಲಾಯಿಕೊಂಡುದನ್ನು (ಏಕೆಂದರೆ ಕವಿಯು ತನ್ನ ಹೆಸರನ್ನು ವೆಂಕಟರಮಣ ಎಂದು ಸ್ಪಷ್ಟವಾಗಿ ಹೇಳಿದ್ದಾನೆ.) ಆಕ್ಷೇಪಿಸಿದ್ದರು. ಆದರೂ ಕಾರಂತರು ತಮ್ಮ ಯಕ್ಷಗಾನ ಬಯಲಾಟ (೧೯೬೩) ಮತ್ತು ಯಕ್ಷಗಾನ (೧೯೭೪) ಕೃತಿಗಳಲ್ಲಿ "ಮಯ್ಯವಟಿ ವೆಂಕಟ" ಎಂದೇ ಬರೆದಿದ್ದಾರೆ. ಮೈರ್ಪಾಡಿಯವರು ಬರೆದ ಹಲವು ಕೃತಿಗಳ ವಿವರಗಳು ಪೂರ್ವೋಕ್ತ ಲೇಖನಗಳಲ್ಲಿ ಬಂದಿದ್ದರೂ ೧೯೬೩ರಲ್ಲಿ ಪ್ರಕಟಗೊಂಡ "ಯಕ್ಷಗಾನ ಬಯಲಾಟ"ದಲ್ಲಿ 'ಈ ವೆಂಕಟನು ಬೇರೆ ಏನೇನು ಬರೆದಿರುವನೆಂಬುದು ತಿಳಿಯದು' ಎಂದು ಕಾರಂತರು ಬರೆದುದು ಆಶ್ಚರ್ಯಕರವಾಗಿದೆ.

"ಅನೇಕ ಕೃತಿಗಳ ಪಠನದಿಂದಾಗಿ ಈ ಕೃತಿಗಳ ರಚನೆಗೆ ತೊಡಗಿದರೆಂದು ಹೇಳಬಹುದು. ಆಯಾ ಕೃತಿಗಳ ಮೌಲಿಕ ಗ್ರಂಥಗಳನ್ನು ಅಭ್ಯಾಸಮಾಡಿದ ಇವರು ಅಲ್ಲಲ್ಲಿ ಸ್ವಪ್ರತಿಭೆಯನ್ನು ಬಳಸಿದ್ದಾರೆ" ಎಂದು ಸುರತ್ಕಲ್ ಕೆ. ವೆಂಕಟರಾಯಾಚಾರ್ಯರು ಹೇಳಿದ್ದಾರೆ. ಜನಪ್ರಿಯವಾದ ಒಂದೆರಡು ಪ್ರಸಂಗಗಳಿಂದಲೇ ಗಮನಾರ್ಹರಾದ ಕವಿಗಳಿವರೆಂಬುದರಲ್ಲಿ ಸಂದೇಹವಿಲ್ಲ.

ಕಥಾ ವಿಚಾರ; ಪ್ರಸಂಗವಿಮರ್ಶೆ

ಮೈರ್ಪಾಡಿ ವೆಂಕಟರಮಣಯ್ಯನವರ ಮದಾಲಸೆ ಕಲ್ಯಾಣವು ಕನ್ನಡ ಭಾಗವತದ ನವಮಸ್ಕಂಧದ ಕಥಾಭಾಗವನ್ನುಳ್ಳುದು. ಕನ್ನಡ ಭಾಗವತ ೯–೧೬ ಮತ್ತು ೧೭ ಈ ಎರಡು ಸಂಧಿಗಳಲ್ಲಿ ಮದಾಲಸೆಯ ವಿವಾಹ, ಮತ್ತು ಒಮ್ಮೆ ಕಳೆದುಕೊಂಡ ಮದಾಲಸೆಯನ್ನು ಋತಧ್ವಜನು ಪುನಃ ಪಡೆಯುವ ಕಥೆಯಿದೆ. ಇದಲ್ಲದೆ ಕನ್ನಡ ಭಾಗವತದ ೧೦–೧೮ ಮತ್ತು ೧೦–೧೯ನೇ ಅಧ್ಯಾಯಗಳಲ್ಲಿ ಮದಾಲಸೆಯು ತನ್ನ ಮಕ್ಕಳಿಗೆ ತತ್ತ್ವೋಪದೇಶಮಾಡಿದ್ದು ಮತ್ತು ಮದಾಲಸೆ ಯೋಗನಿಷ್ಠಳಾದ ಕಥೆಗಳಿವೆ. ಆದರೆ ಸಂಸ್ಕೃತ ಭಾಗವತದಲ್ಲಿ ಮದಾಲಸೆಯ ಕಥೆ ಹೀಗೆ ದೀರ್ಘವಾಗಿರುವುದು ಕಂಡುಬರುವುದಿಲ್ಲ. ಅಲ್ಲಿ ಋತಧ್ವಜನ ಹೆಸರು ಮಾತ್ರ ಉಲ್ಲೇಖಿತವಾಗಿದೆ.

ದಿವೋದಾಸೋ ದ್ಯುಮಾಂಸ್ತಸ್ಮಾತ್ ಪ್ರತರ್ದನ ಇತಿ ಸ್ಮೃತಃ ।
ಸ ಏವ ಶತ್ರುಜಿದ್‌ವತ್ಸ ಋತಧ್ವಜ ಇತೀರಿತಃ ।
ತಥಾ ಕುವಲಯಾಶ್ವೇತಿ ಪ್ರೋಕ್ತೋಽಲರ್ಕಾದಯಸ್ತತಃ ॥ ......
—ಸಂಸ್ಕೃತ ಭಾಗವತ ೧೦-೧೭-೬

ಕನ್ನಡ ಭಾಗವತದಲ್ಲಿ ಈ ಋತಧ್ವಜ ಅಥವಾ ಕುವಲಯಾಶ್ವ ಮತ್ತು ಮದಾಲಸೆಯರ ಕಥೆ ಸಾಕಷ್ಟು ವಿಸ್ತಾರವಾಗಿ ಬಂದಿದೆ. ಕುವಲಯಾಶ್ವ ಮದಾಲಸೆಯರ ಕಥೆಯು ಮಾರ್ಕಂಡೇಯ ಪುರಾಣ, ಹರಿವಂಶ, ಮಹಾಭಾರತಗಳಲ್ಲಿ ಸಾಕಷ್ಟು ವಿಸ್ತಾರವಾಗಿ ಬಂದಿರುವುದು ತಿಳಿಯುತ್ತದೆ. ಕನ್ನಡ ಭಾಗವತಕಾರನು ಈ ಮೂಲಗಳಿಂದ ತೆಗೆದುಕೊಂಡು ಈ ಕಥಾಭಾಗವನ್ನು ಸೇರಿಸಿಕೊಂಡಿರಲೂಬಹುದು.

ಮದಾಲಸೆ ಕಲ್ಯಾಣವು ಯಕ್ಷಗಾನಕ್ಕೆ ಬೇಕಾದಂತಹ ಸೊಗಸಾದ ಘಟನಾಸರಣಿಗಳಿಂದ ಕೂಡಿದ ಒಂದು ಕಥೆ. ಪ್ರಸಂಗಕರ್ತರು ಕನ್ನಡ ಭಾಗವತದ ಕಥೆಯನ್ನು ಅಷ್ಟಿಷ್ಟು ಯಕ್ಷಗಾನೋಚಿತವಾಗಿ ಬದಲಾವಣೆಮಾಡಿಕೊಂಡು ಸೊಗಸಾದ ರಚನೆ ಮಾಡಿದ್ದಾರೆ. ಶತ್ರುಜಿತನಿಗೆ ಋತಧ್ವಜನೆಂಬ ಮಗನುದಿಸುವುದು, ಗಾಲವನು ಅಶ್ವವನ್ನು ತಂದು ಪಾತಾಳಕೇತುವನ್ನು ವಧಿಸಲು ಋತಧ್ವಜನನ್ನು ಕರೆದೊಯ್ಯುವುದು, ಪಾತಾಳಕೇತುವನ್ನು ಕೊಂದು ಆತ ಬಂಧಿಸಿದ್ದ ವಿಶ್ವಾವಸುಪುತ್ರಿ ಮದಾಲಸೆಯನ್ನು ಮದುವೆಯಾಗುವುದು, ಪಾತಾಳಕೇತುವಿನ ತಮ್ಮನು ಮುನಿವೇಷದಿಂದ ಬಂದು ಕುವಲಯಾಶ್ವನು ಸತ್ತನೆಂದು ಸುಳ್ಳುಹೇಳಲು ಮದಾಲಸೆ ಮಡಿಯುವುದು, ಉರಗರ ಸಹಾಯದಿಂದ ಆಕೆ ಬದುಕಿಬಂದು ಕುವಲಯಾಶ್ವನು ಆಕೆಯನ್ನು ಪುನಃ ಸೇರುವುದು – ಇದಿಷ್ಟು ಮುಖ್ಯ ಕಥಾಭಾಗ. ಯುದ್ಧ ಮತ್ತು ಶೃಂಗಾರ ಸಂದರ್ಭಗಳು ಮುಖ್ಯವಾಗಿರುವ ಈ ಕಥೆಯಲ್ಲಿ ಇಂತಹ ಎಲ್ಲ ಸಂದರ್ಭಗಳನ್ನೂ ಯಶಸ್ವಿಯಾಗಿ ನಿರ್ವಹಿಸಲಾಗಿದೆ.

ಪ್ರಸಂಗಕರ್ತರು ಶಂಬರಾಸುರ ಕಾಳಗವನ್ನು ಸಮೀಕ್ಷಿಸಿದ್ದು ಅದರಿಂದ ಪ್ರಭಾವಿತರಾಗಿರುವುದು ಈ ಪ್ರಸಂಗದಿಂದ ತಿಳಿದುಬರುತ್ತದೆ. ಶಂಬರಾಸುರ ಕಾಳಗದಲ್ಲಿ ರುಕ್ಮಿಣಿಯು ಗರ್ಭಿಣಿಯಾದಾಗ ಸಖಿ ಮತ್ತು ರುಕ್ಮಿಣಿಯ ಸಂಭಾಷಣೆಯ ಭಾಗವಿದೆ.

ಚನ್ನಾರ ಚಲುವೆ ಕೇಳ್ ನಿನ್ನಂಗ ವೇಷದ । ಚಿಹ್ನೆ ಬೇರಾಗಿಹುದೇನು ।

–ಎಂದು ತೊಡಗುವ ಪದ್ಯದ ಪ್ರಭಾವದಿಂದ ರಾಣಿ–ಸಖಿ ಸಂವಾದರೂಪದ ಈ ಕೆಳಗಿನ ಪದ್ಯ ಬಂದಿದೆಯೆಂದರೆ ತಪ್ಪಾಗದು.

ರಾಗ ಸಂವಾದ; ಅಷ್ಟತಾಳ

ಸಖಿ – ಅಮ್ಮ ನಿನ್ನಂಗ ಛಾಯೇ । ಬೇರಾಗಿಹ । ಮರ್ಮವನುಸುರು ತಾಯೆ ।
ಹಮ್ಮೈಸುತ್ತಲೇಳುತ್ತಲಿರುವುದನೆನ್ನೊಳ । ಗೊಮ್ಮೆ ನೀನುಸುರು ಪ್ರಿಯೆ ॥

ರಾಣಿ – ಛಾಯಾ ಭೇದಂಗಳಿಲ್ಲ । ನಿನ್ನಯ ಬರಿ । ಮಾಯದ ಮಾತಿದೆಲ್ಲ ।
ಕಾಯದಿ ಸುಖವಿಲ್ಲದಿರೆ ಕುಳಿತೇಳ್ವೆ ನಾ । ತೋಯಜಮುಖಿ ಸುಳ್ಳಲ್ಲ ॥

ಸಖಿ – ಲಲನೆ ನಿನ್ನಯ ಮುಖವು । ಬಹುಪರಿಯಿಂದ । ಹೊಳೆವುದೇನಾಶ್ಚರ್ಯವು ।
ನಳಿನಾಕ್ಷಿ ವಂಚಿಸದುಸುರುಸುರಿನ್ನದ । ರೊಳವನು ಕರುಣದೊಳು ॥

ರಾಣಿ – ಚಕ್ಕಂದವಾಡದಿರು । ಮೂಗಿನೊಳಿಟ್ಟ । ಚೊಕ್ಕಮಾಣಿಕಗದಿರು ।
ಮುಕ್ಕಳಿಸುತ ಮೊದಲಿನ ಪ್ರಭೆ ಮುಖದ ಮೇ । ಲಿಕ್ಕಿತು ನವರುಚಿಯು ॥

ಸಖಿ – ಸರಸಿಜ ಮುಗುಳಂದದಿಂ । ತೋರುವ ಕುಚ । ವೆರಡರ ಮೇಲ್ಭಾಗದಿ ।
ಸ್ಮರನರಗಿನ ಮುದ್ರೆಯೊತ್ತಿದಂದದಿ ತೋರ್ಪ । ಪರಿಯೇನು ಪೇಳ್ಮುದದಿ॥

ರಾಣಿ – ತಿಳಿ ಕಜ್ಜಳವ ನೇತ್ರಕೆ । ತಿಬುರುತಿರೆ । ಥಳಿಲವೆ ಕುಚದಗ್ರಕೆ ।
ಸಲೆ ಬಿಂದು ಬಿದ್ದು ಕಪ್ಪಾದ ಕಾರಣದಿಂದ । ಮೊಲೆತುದಿ ಕಪ್ಪಾದುದು॥

– ಈ ರೀತಿ ಹತ್ತು ಪದ್ಯಗಳಿವೆ. ಈ ಪದ್ಯಗಳಲ್ಲಿ ಶಂಬರಾಸುರ ಕಾಳಗದಿಂದ ಭಾವನೆಯನ್ನೂ ಅಲ್ಲಿಯ ಮಾತುಗಳನ್ನೂ ತೆಗೆದುಕೊಳ್ಳಲಾಗಿದೆ. ಅಲ್ಲಿಗಿಂತ ಇಲ್ಲಿಯ ಸಂಭಾಷಣೆ ವಿಸ್ತಾರವಾಗಿದೆ. ಗಾಲವನು ಬಂದು ಋತಧ್ವಜನನ್ನು ಯಜ್ಞರಕ್ಷಣೆಗಾಗಿ ಕಳುಹಿಸಿಕೊಡಬೇಕೆಂದು ಕೇಳುವ ಭಾಗವು ರಾಮಾಯಣದಲ್ಲಿ ವಿಶ್ವಾಮಿತ್ರನು ಬಂದು ದಶರಥನೊಡನೆ ರಾಮನನ್ನು ಕಳುಹಿಸಿಕೊಡಲು ಕೇಳುವ ಸನ್ನಿವೇಶವನ್ನು ನೆನಪಿಸುತ್ತದೆ. ಪ್ರಸಿದ್ಧ ಪ್ರಸಂಗಗಳ ಪದ್ಯಗಳ ಅನುಸರಣೆಯಿಂದ ಒಳ್ಳೆಯ ಪದ್ಯಗಳನ್ನು ಪ್ರಸಂಗಕರ್ತರು ನಿರ್ಮಿಸಿರುವುದಕ್ಕೆ ಉದಾಹರಣೆಗಳಿವೆ. 'ಕೋಮಲಾಂಗಿ ಕೇಳೆ । ಮದಗಜಗಾಮಿನಿ ಪಾಂಚಾಲೆ' ಎಂಬ ಕೃಷ್ಣಸಂಧಾನ ಪ್ರಸಂಗದ ಮಾದರಿಯಲ್ಲಿರುವ ಈ ರಚನೆ ಸೊಗಸಾಗಿದೆ.

ರಾಗ ಸುರುಟ; ಏಕತಾಳ

ಮಾನಿನಿಮಣಿ ಕೇಳೆ । ಮನುಮಥ । ನಾನೆ ಸುಗುಣಶೀಲೆ ।
ದಾನವನ್ಯೆತರಲಂಜೆನು ಸರ್ವಥ । ಏಣಾಕ್ಷಿಯೆ ಮತ್ತ್ರಾಣಪರೀಕ್ಷಿಸು ॥ ೧ ॥
ಒಲಿಸುವೆ ನಿನ್ನುವನು । ತನ್ನಯ । ನಿಳಯಕೆ ಬಳಿಕಾನು ।

ತಳುವದೆ ಕೊಂಡೊಯ್ದಿಳುಹುವೆ ತಡೆದರೆ । ಖಳನಸುಗೊಂಬೆನು ಕಳವಳಗೊಳದಿರು
॥೨॥

ಕುಂಭಿನಿಪತಿಸುತನು । ಹೀಗೆಂ । ದಂಬುಜವದನೆಯನು ।
ಸಂಭ್ರಮದಿಂದೊಡಬಡಿಸುತ ಮಿಗೆ ತಾ । ನಂಬುಗೆ ಕೊಟ್ಟನು ತುಂಬಿದ ಹರುಷದಿ
॥ ೩ ॥

ಹಾಗೆಯೇ ಪಾರ್ತಿಸುಬ್ಬನ "ಪಂಚವಟಿ" ಪ್ರಸಂಗದಲ್ಲಿ ಬರುವ "ಎಲ್ಲಿಗೆ ಒಯ್ವೆಯೊ ಸೀತೆಯ । ಬಿಡು ಕಳ್ಳರಕ್ಕಸ ಜಗನ್ಮಾತೆಯ" ಎಂಬ ಪದ್ಯದ ಮಾದರಿಯಲ್ಲಿ ಈ ಪದ್ಯವಿದೆ–

ರಾಗ ನಾದನಾಮಕ್ರಿಯೆ; ಅಷ್ಟತಾಳ

ಎಲ್ಲಿಗೆ ಒಯ್ವೆಯೊ ನಾರಿಯ । ಬಿಡು । ಕಳ್ಳನೆ ಬೇಗ ಶೃಂಗಾರೆಯ ।
ಒಳ್ಳಿತೆ ನಿನಗಿಂತು ಬುದ್ಧಿಯು । ತರ । ವಲ್ಲ ಬಂದಪುದಪಕೀರ್ತಿಯು ॥

ಈ ರೀತಿಯ ಆರು ಪದ್ಯಗಳಿವೆ. ಹೀಗೆ ಮೈಪಾರ್ಡಿ ವೆಂಕಟರಮಣಯ್ಯನವರು ಹಲವು ಪ್ರಸಿದ್ಧ ಪ್ರಸಂಗಕೃತಿಗಳ ಮಾದರಿಯನ್ನು ಈ ಪ್ರಸಂಗರಚನೆಯಲ್ಲಿ ಅನುಸರಿಸಿಕೊಂಡಿರುವುದು ಸ್ಪಷ್ಟವಾಗುತ್ತದೆ. ಯಕ್ಷಗಾನೀಯ ಶೈಲಿಯ ಒಳ್ಳೆಯ ಪದ್ಯರಚನೆಯ ಶಕ್ತಿ ಇವರಿಗಿದೆ. ಆದುದರಿಂದ ಪ್ರಸಂಗವು ಓದುವ ಪ್ರಸಂಗವಾಗಿಯೂ ಚೆನ್ನಾಗಿದೆ. ಹೆಚ್ಚಿನ ಪ್ರಸಂಗಗಳಲ್ಲಿರುವ ದೇವದಾನವ ಯುದ್ಧ, ಇಂದ್ರನ ಆಗಮನಾದಿಗಳು ಈ ಪ್ರಸಂಗದೊಳಗಿಲ್ಲದಿರುವುದೊಂದು ವಿಶೇಷವಾಗಿದೆ. ಸರಳ ನೇರ ಕಥಾವಿವರವುಳ್ಳ ಒಳ್ಳೆಯ ಪ್ರಸಂಗವಿದು.[೧]

*****

೧. ಈ ಮೇಲಿನ ಪ್ರಸಂಗವಿಶ್ಲೇಷಣೆಗಳ ಕೆಲವು ಭಾಗಗಳನ್ನು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲಾದ ನನ್ನ ಪ್ರೌಢಪ್ರಬಂಧವಾದ 'ಭಾಗವತದ ಯಕ್ಷಗಾನ ಪ್ರಸಂಗಗಳು' ಎಂಬುದರಿಂದ ಆಯ್ದುಕೊಳ್ಳಲಾಗಿದೆ.

ಯಕ್ಷಗಾನ ಸಾಹಿತ್ಯದಲ್ಲಿ ಒಂದೇ ವಸ್ತುವನ್ನು ಆರಿಸಿಕೊಂಡು ಹಲವರು ಪ್ರಸಂಗರಚನೆ ಮಾಡಿರುವುದು ಕಂಡುಬರುತ್ತದೆ. ಕೆಲವು ಕಥೆಗಳ ೫–೬ ಪ್ರಸಂಗಗಳೂ ಉಪಲಬ್ಧವಿವೆ. ಇವುಗಳಲ್ಲಿ ಕೆಲವು ರಂಗದ ಮೇಲೆ ಬಂದಿವೆ. ಕೆಲವು ಬಂದಿಲ್ಲ. ಕೆಲವು ಮುದ್ರಿತವಾಗಿವೆ. ಇನ್ನು ಕೆಲವು ಮುದ್ರಿತವಾಗದಿರಬಹುದು. ಇಂತಹ ಪ್ರಸಂಗಗಳಲ್ಲಿ ಒಂದು ಬಡಗುತಿಟ್ಟಿನಲ್ಲಿಯೂ ಇನ್ನೊಂದು ತೆಂಕುತಿಟ್ಟಿನಲ್ಲಿಯೂ ಪ್ರಸಿದ್ಧವಾಗಿರುವ ಸಂದರ್ಭಗಳುಂಟು. ಈ ಸಂಪುಟದಲ್ಲಿರುವ 'ವೃತ್ರಾಸುರಕಾಳಗ' ಮತ್ತು 'ಇಂದ್ರವಿಜಯ' ಪ್ರಸಂಗಗಳು ಒಂದೇ ವಸ್ತುವನ್ನು ಹೊಂದಿದ ಪ್ರಸಂಗಗಳಾಗಿವೆ. ಎರಡೂ ಪ್ರಸಂಗಗಳು ವಿಭಿನ್ನ ರೀತಿಯಲ್ಲಿ ನಿರ್ವಹಿಸಲ್ಪಟ್ಟಿರುವುದರಿಂದ ಎರಡೂ ಪ್ರಸಂಗಗಳನ್ನು ಇಲ್ಲಿ ಸಂಕಲಿಸಿಕೊಳ್ಳಲಾಗಿದೆ. ವೃತ್ರಾಸುರನ ಕಾಳಗವು ಎರಡು ಸಂಧಿಗಳಲ್ಲಿ ಇದ್ದು ಮೊದಲನೆಯ ಸಂಧಿ ಪೂರ್ತಿಯಾಗಿ ವೃತ್ರಾಸುರನ ಪೂರ್ವಕಥೆಯೇ ಆಗಿರುವ ಚಿತ್ರಕೇತು ಆಖ್ಯಾನದ ಪ್ರಸಂಗರೂಪವಾಗಿದೆ. ಇಂದ್ರವಿಜಯದಲ್ಲಿ ಚಿತ್ರಕೇತು ಆಖ್ಯಾನವು ಉಲ್ಲೇಖಮಾತ್ರವಾಗಿ ಕಂಡುಬರುತ್ತದೆ ಹೊರತು ಕಥಾವಿವರಗಳು ಇರುವುದಿಲ್ಲ. ಈ ಎರಡು ಪ್ರಸಂಗಗಳಲ್ಲಿಯೂ ಬರುವ ನಹುಷ – ಶಚೀ ಪ್ರಸಂಗವೂ ವಿಭಿನ್ನವಾಗಿ ನಿರೂಪಿತವಾಗಿರುವುದನ್ನು ಕಾಣಬಹುದು.

*****

ಯಕ್ಷಗಾನ ಪ್ರಸಂಗಗಳ ರಂಗಪ್ರಯೋಗ ಮತ್ತು ರಂಗದಲ್ಲಿ ಪ್ರಸಂಗದ ಯಶಸ್ಸಿನ ಬಗೆಗೆ ಬೇರೆಯೇ ವಿಮರ್ಶೆ ನಡೆಯಬೇಕಾಗಿದೆ. ಅದನ್ನು ರಂಗವಿಮರ್ಶೆ ಎನ್ನಬಹುದು. ಪ್ರಸಂಗಗಳ ಸರಿಯಾದ ರಂಗವಿಮರ್ಶೆ ಯಕ್ಷಗಾನ ಕ್ಷೇತ್ರದಲ್ಲಿ ನಡೆದಿಲ್ಲ ; ನಡೆಯುವ ಆವಶ್ಯಕತೆಯಿದೆ. ಈ ಸಂಪುಟದಲ್ಲಿ ಸಂಕಲಿತವಾದ ಪ್ರಸಂಗಗಳಲ್ಲಿ ಹೆಚ್ಚಿನವನ್ನು ರಂಗದ ಮೇಲೆ ತರಬಹುದಾಗಿದೆ. ಆದರೆ ಯಾವೆಲ್ಲ ಪ್ರಸಂಗಗಳು ಎಷ್ಟರಮಟ್ಟಿಗೆ ರಂಗದಲ್ಲಿ ಯಶಸ್ವಿಯಾಗಿವೆ ಎಂಬ ಬಗೆಗೆ ಖಚಿತ ಮಾಹಿತಿಗಳಿಲ್ಲ. ಸಮುದ್ರಮಥನವೊಂದು ಜನಪ್ರಿಯ ಪ್ರಸಂಗವಾಗಿಯೂ ಪ್ರಚಲಿತ ಪ್ರಸಂಗವಾಗಿಯೂ ಇರುವುದು ತಿಳಿಯುತ್ತದೆ. ಭಸ್ಮಾಸುರ ಮೋಹಿನಿಯೆಂಬುದು ಹೊಸಕಾಲದ ಪ್ರಸಂಗವಾದರೂ ಸಾಕಷ್ಟು ಪ್ರದರ್ಶನಗಳನ್ನು ಕಂಡಿದೆ. ರೇವತಿಕಲ್ಯಾಣವು ದೀರ್ಘಪ್ರಸಂಗವಾಗಿದ್ದು ರಂಗದ ಮೇಲೆ ಬಂದಿರುವ ಬಗೆಗೆ ಮಾಹಿತಿಗಳಿಲ್ಲ. ಧ್ರುವಚರಿತ್ರೆಯ ಮೊದಲನೆಯ ಸಂಧಿಯ ರಂಗಪ್ರಯೋಗ ಸಾಕಷ್ಟು ಕಷ್ಟಸಾಧ್ಯವಾದುದು. ಏಕೆಂದರೆ ಸಮರ್ಥರಾದ ಬಾಲನಟರ ಆವಶ್ಯಕತೆ ಅದರಲ್ಲಿದೆ. ಅಂಬರೀಷಚರಿತ್ರೆ ಕಿರಿದಾದ ಪ್ರಸಂಗವಾಗಿದ್ದು ಹೊಸಕಾಲದ ಸೀಮಿತ ಅವಧಿಯ ರಂಗಪ್ರಯೋಗಕ್ಕೆ ಹೊಂದುವಂತಿದೆ.

ಸಾಹಿತ್ಯ ದೃಷ್ಟಿಯಿಂದ ಈ ಎಲ್ಲ ಪ್ರಸಂಗಕೃತಿಗಳು ಬಹಳ ಉತ್ತಮವೆಂದು

ಹೇಳಲಾಗದಿದ್ದರೂ ಕಥಾನಿರೂಪಣೆ, ಸಂಭಾಷಣೆ, ಘಟನೆಗಳ ಹೊಂದಾಣಿಕೆ ಇತ್ಯಾದಿ ದೃಷ್ಟಿಗಳಿಂದ ಇವು ಚೆನ್ನಾಗಿವೆ. ಪ್ರಸಂಗಕರ್ತರು ಆಕರವಾಗಿ ಪ್ರಸಿದ್ಧ ಗ್ರಂಥಗಳನ್ನು ಇರಿಸಿಕೊಂಡಿದ್ದಾರೆ. ಇಲ್ಲಿ ಆಯ್ದುಕೊಂಡ ಪ್ರಸಂಗಗಳಿಗೆಲ್ಲ ನಿತ್ಯಾತ್ಮಶುಕಯೋಗಿಯ ಕನ್ನಡ ಭಾಗವತವೇ ಆಕರವಾದರೂ ಪ್ರಸಂಗಗಳಲ್ಲಿ ಜೈಮಿನಿ ಭಾರತ, ಹರಿಶ್ಚಂದ್ರ ಕಾವ್ಯ, ಗದುಗುಭಾರತಗಳ ಪ್ರಭಾವವು ಇರುವುದನ್ನು ಗಮನಿಸಬಹುದು. (ಹರಿಶ್ಚಂದ್ರ ಚರಿತ್ರೆ ಪ್ರಸಂಗದಲ್ಲಿ ಹರಿಶ್ಚಂದ್ರ ಕಾವ್ಯದ ಅನುಸರಣೆ ಇದೆ. ಆದರೆ ಹೆಚ್ಚಿನ ಪ್ರಸಂಗಕವಿಗಳು ಜೈಮಿನಿಭಾರತವನ್ನು ಅಧ್ಯಯನ ಮಾಡಿದಂತೆ ಹರಿಶ್ಚಂದ್ರ ಕಾವ್ಯವನ್ನು ಅಧ್ಯಯನ ಮಾಡಿದ್ದು ತಿಳಿದುಬರುವುದಿಲ್ಲ.) ಪ್ರಸಂಗಕವಿಗಳು ಕನ್ನಡದ ಪ್ರಸಿದ್ಧ ಚಂಪೂಕೃತಿಗಳನ್ನು ಅಧ್ಯಯನ ಮಾಡಿದ್ದು ತಿಳಿದುಬರುವುದಿಲ್ಲ. (ಮುದ್ದಣ, ಜತ್ತಿ ಈಶ್ವರ ಭಾಗವತ ಮೊದಲಾದವರು ಷಡಕ್ಷರ ಕವಿಯ ರಾಜಶೇಖರ ವಿಳಾಸ, ಶಬರಶಂಕರ ವಿಳಾಸ ಮೊದಲಾದುವನ್ನು ಅಧ್ಯಯನ ಮಾಡಿದಂತೆ ತಿಳಿಯುತ್ತದಾದರೂ ಹೆಚ್ಚಿನ ಪ್ರಸಂಗ ಕವಿಗಳಿಗೆ ಕನ್ನಡದ ಷಟ್ಪದಿ ಕಾವ್ಯಗಳೇ ಅಧ್ಯಯನ ವಸ್ತುಗಳಾಗಿದ್ದವು.)

*****

ಸಂಪಾದನೆಯ ಬಗೆಗೆ :

ಈ ಕೃತಿಗಳಲ್ಲಿ ಯಾವುದೂ ಹಸ್ತಪ್ರತಿಯಿಂದ ನೇರವಾಗಿ ಸಂಪಾದಿತವಾದುದಲ್ಲ. ಈಗಾಗಲೇ ಒಂದು ಬಾರಿಯಾಗಲಿ ಹಲವು ಬಾರಿಯಾಗಲಿ ಮುದ್ರಿತವಾದ ಪ್ರಸಂಗಗಳನ್ನು ಇರಿಸಿಕೊಂಡು ಅವಶ್ಯವಿದ್ದಲ್ಲಿ ಮಾತ್ರ ಸಂಪಾದಕೀಯ ತಿದ್ದುಪಡಿಗಳನ್ನು ಮಾಡಿಕೊಂಡು ಪ್ರಸಂಗಗಳನ್ನು ಇಲ್ಲಿ ಸಂಕಲಿಸಲಾಗಿದೆ.

ಉಡುಪಿಯ ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯದ ಮೂಲಕ ದಿ. ಪಾವಂಜೆ ಗುರುರಾಯರು ಹಲವು ಯಕ್ಷಗಾನ ಪ್ರಸಂಗಗಳನ್ನು ಪ್ರಕಟಿಸಿದ್ದು ಆ ಪ್ರತಿಗಳು ಪ್ರಾಯಃ ಉಳಿದ ಕಡೆಗಳ ಮುದ್ರಣಗಳಿಂದ ಹೆಚ್ಚು ಪರಿಷ್ಕೃತವಾಗಿವೆ. (ಈ ಉಡುಪಿ ಪ್ರಕಾಶನದ ಪ್ರಸಂಗಗಳಲ್ಲಿ ಕೆಲವರಲ್ಲಿ ಪ್ರಕಾಶಕರು ಪಾವಂಜೆ ಗುರುರಾಯರೆಂದೂ ಕಲವರಲ್ಲಿ ಶ್ರೀ ಕೃಷ್ಣಮುದ್ರಣಾಲಯವೆಂದೂ, ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯವೆಂದೂ ವಿಭಿನ್ನವಾಗಿ ಉಲ್ಲೇಖಿಸಿದ್ದುಂಟು.) ಪಾವಂಜೆಯವರು ಹಸ್ತಪ್ರತಿಗಳ ಪರಿಶೀಲನೆ, ಪರಿಷ್ಕರಣ ಮತ್ತು ಕರಡಚ್ಚುಗಳ ಪರಿಶೀಲನೆಗೆ ವಿದ್ವಾಂಸರನ್ನು ನಿಯೋಜಿಸಿ ಪ್ರಸಂಗಪ್ರತಿಗಳು ಆದಷ್ಟು ಶುದ್ಧವಾಗಿ ಮುದ್ರಿತವಾಗುವಂತೆ ಯತ್ನಿಸುತ್ತಿದ್ದರು. (ಕಡಂದಲೆ ಬಿ. ರಾಮರಾಯರು ಪಾವಂಜೆಯವರ ಪ್ರಸಂಗ ಪ್ರಕಟನೆಗಳಲ್ಲಿ ಹೆಚ್ಚಿನವುಗಳ ಪರಿಶೋಧಕರು. ಕೆಲವು ಪ್ರಸಂಗಗಳನ್ನು ಕೋಟೆ ಅಥವಾ ಮಟ್ಟಿ ಸುಬ್ಬರಾಯರು ಪರಿಶೀಲಿಸಿರುವಂತೆಯೂ ತಿಳಿದುಬರುತ್ತದೆ.) ಕ್ರಿ.ಶ. ೧೯ನೆಯ ಶತಮಾನದ

ಕೊನೆಯಲ್ಲಿಯೂ ೨೦ನೆಯ ಶತಮಾನದ ಆದಿಯಲ್ಲಿಯೂ ಬೆಂಗಳೂರಿನ ಪ್ರಕಾಶಕರು ಹಲವು ಯಕ್ಷಗಾನ ಪ್ರಸಂಗಗಳನ್ನು ಪ್ರಕಟಿಸಿದ್ದುಂಟು. ಆದರೆ ಹೆಚ್ಚಾಗಿ ಈ ಮುದ್ರಿತ ಪ್ರತಿಗಳು ಪರಿಶೋಧಿತ ಪ್ರತಿಗಳಾಗಿರದೆ ಕಚ್ಚಾ ಬಾಜಾರು ಪ್ರತಿಗಳಾಗಿವೆ. ಹಸ್ತಪ್ರತಿಗಳಲ್ಲಿರುವ ಬರವಣಿಗೆಯ ಸ್ಖಾಲಿತ್ಯಗಳು ಮತ್ತು ಅಶುದ್ಧರೂಪಗಳು ಇವುಗಳಲ್ಲಿ ಹಾಗೆಯೇ ಉಳಿದುಕೊಂಡಿರುವುದು ಮೇಲ್ನೋಟಕ್ಕೆ ತಿಳಿಯುತ್ತದೆ. ಈ ಕಾರಣದಿಂದ ಉಡುಪಿ ಮುದ್ರಣದ ಪಾವಂಜೆ ಪ್ರಕಟಣೆಗಳು ಹೆಚ್ಚು ಶುದ್ಧ ಪ್ರತಿಗಳೆಂದು ತಿಳಿಯಬೇಕಾಗುತ್ತದೆ. (ಪರಿಶೀಲಕರು ಮಾಡಿರಬಹುದಾದ ಪ್ರಕ್ಷೇಪಗಳು ಮತ್ತು ಪಾಠಗಳ ತಿದ್ದುಪಡಿಗಳ ಬಗೆಗೆ ಬೇರೆಯೇ ಅಧ್ಯಯನ ಅವಶ್ಯ. ಅದಕ್ಕೂ ಉದಾಹರಣೆಗಳಿವೆ.)

ಹೀಗಿರುವುದರಿಂದ ಈ ಪ್ರಸಂಗ ಸಂಪುಟಗಳ ಸಂಪಾದನೆಯ ಬಗೆಗಿನ ಪೂರ್ವಭಾವಿ ಸಮಾಲೋಚನೆಯಲ್ಲಿ ಆದಷ್ಟು ಶುದ್ಧವಾಗಿ ಮುದ್ರಿತವಾದ ಪ್ರತಿಗಳನ್ನು ಈ ಸಂಕಲನದ ಸಂಪಾದನಕಾರ್ಯದಲ್ಲಿ ಆಧಾರವಾಗಿರಿಸಿಕೊಂಡಿರುವುದೆಂದು ತೀರ್ಮಾನಿಸಲಾಯಿತು. ಪ್ರಸ್ತುತ ಸಂಪುಟದಲ್ಲಿರುವ ಒಂಬತ್ತು ಪ್ರಸಂಗಗಳನ್ನೂ ಮುದ್ರಿತ ಪ್ರತಿಗಳ ಆಧಾರದಿಂದಲೇ ಸಂಕಲಿಸಲಾಗಿದ್ದು ಆ ಮುದ್ರಣಗಳ ವಿವರಗಳು ಈ ಕೆಳಗಿನಂತಿವೆ.

೧. ಅಂಬರೀಷ ಚರಿತ್ರೆ–ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ–ಪ್ರಥಮ ಮುದ್ರಣ– ೧೯೨೮
೨. ಧ್ರುವಚರಿತ್ರೆ –ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ – ಪ್ರಥಮ ಮುದ್ರಣ –೧೯೫೧
೩. ವೃತ್ರಾಸುರನ ಕಾಳಗ–ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ–ಪ್ರಥಮ ಮುದ್ರಣ–೧೯೪೨
೪. ಸಮುದ್ರಮಥನ–ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ– ಪ್ರಥಮ ಮುದ್ರಣ –೧೯೨೫
೫. ರೇವತಿ ಕಲ್ಯಾಣ– ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ– ಪ್ರಥಮ ಮುದ್ರಣ–೧೯೩೦
೬ ಭಸ್ಮಾಸುರ ಮೋಹಿನಿ–ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ–ನಾಲ್ಕನೇಮುದ್ರಣ–೧೯೬೪
೭ ಇಂದ್ರವಿಜಯ–ಮೈಸೂರು ಬುಕ್ ಡಿಪ್ರೋ, ಬೆಂಗಳೂರು–ಪ್ರಥಮ ಮುದ್ರಣ– ೧೮೯೬
೮. ಹರಿಶ್ಚಂದ್ರ ಚರಿತ್ರೆ – ಜಿ. ಡಿ. ಕುಲಕರ್ಣಿ, ಶಿರಸಿ – ಪ್ರಥಮ ಮುದ್ರಣ – ?
೯. ಮದಾಲಸೆ ಕಲ್ಯಾಣ–ಶ್ರೀ ಮನ್ಮಧ್ವಸಿದ್ಧಾಂತ ಗ್ರಂಥಾಲಯ–ಪ್ರಥಮ ಮುದ್ರಣ–೧೯೩೫

ಯಕ್ಷಗಾನ ಪ್ರಸಂಗಗಳ ಮುದ್ರಣದಲ್ಲಿ ಪದ್ಯಗಳನ್ನು ಛಂದಸ್ಸಿಗೆ ಅನುಗುಣವಾಗಿ ವಿಂಗಡಿಸಿ ಮುದ್ರಿಸುವ ಪದ್ಧತಿ ಹಿಂದೆ ಇದ್ದಿರಲಿಲ್ಲ. ಬೆಂಗಳೂರು ಮುದ್ರಣವಾಗಲಿ, ಉಡುಪಿ ಮುದ್ರಣವಾಗಲಿ ಪದ್ಯಗಳನ್ನು ಮುಂದುವರಿಸಿಕೊಂಡು ಬರೆಯುವ, ಸಾಲುಗಳನ್ನು ವಿಂಗಡಣೆ ಮಾಡದೆ ಬರೆಯುವ ಪದ್ಧತಿಯಲ್ಲೇ ಮುದ್ರಿತವಾಗಿರುವುದು ಕಂಡುಬರುತ್ತದೆ. ಬೇರೆಬೇರೆ ಬಗೆಯ ಪದ್ಯಗಳನ್ನು ಬೇರೆಬೇರೆಯ ಖಂಡಗಳನ್ನಾಗಿ ಮಾಡಿ ಆ ಖಂಡಗಳ ಮೊದಲಿಗೆ ಆಯಾ ಛಂದಸ್ಸಿನ ಅಥವಾ ರಾಗತಾಳಗಳ

ಉಲ್ಲೇಖವನ್ನು ಮಾಡುವುದು ಸಾಮಾನ್ಯ ಕ್ರಮವಾಗಿ ಕಂಡುಬರುತ್ತದೆ. ಆಯಾ ಖಂಡಗಳೊಳಗೆ ಪದ್ಯಸಂಖ್ಯೆಗಳನ್ನು ಮುಂದುವರಿಕೆಯ ಕ್ರಮದಲ್ಲಿದ್ದಾಗ ಪ್ರಸಂಗದ ಕೊನೆಗೆ ಪ್ರಸಂಗದ ಒಟ್ಟು ಪದ್ಯಗಳ ಸಂಖ್ಯೆಯನ್ನು ಹಾಕುವ ಪದ್ಧತಿ ಕೆಲವು ಹಸ್ತಪ್ರತಿಗಳಲ್ಲೂ ಕೆಲವು ಮುದ್ರಿತಪ್ರತಿಗಳಲ್ಲೂ ಇದೆ. (ಹಳೆಯ ಮುದ್ರಿತ ಪ್ರತಿಗಳಲ್ಲಿ ಜತ್ತಿ ಈಶ್ವರ ಭಾಗವತರ ಪ್ರಸಂಗ ಮುದ್ರಣಗಳಲ್ಲಿ ಮಾತ್ರ ಕಂದ, ಭಾಮಿನಿ, ವಾರ್ಧಕಗಳನ್ನು ಛಂದಸ್ಸಿಗೆ ಅನುಗುಣವಾಗಿ ವಿಂಗಡಿಸಿ ಮುದ್ರಿಸಿದುದನ್ನು ಗಮನಿಸಬಹುದು. ತಾಳದ ಪದ್ಯಗಳನ್ನು ಅವರೂ ವಿಂಗಡಿಸಿ ಮುದ್ರಿಸಿಲ್ಲ.)

ಪ್ರಸ್ತುತ ಸಂಕಲನದಲ್ಲಿ ಪ್ರಸಂಗದ ಪದ್ಯಗಳನ್ನು ಸಾಮಾನ್ಯವಾಗಿ ಛಂದಸ್ಸಿಗೆ ಅನುಗುಣವಾಗಿ ವಿಂಗಡಿಸಿದರೆ ಕನ್ನಡ ಸಾಹಿತ್ಯದಲ್ಲಿ ಪ್ರಸಿದ್ಧವಾಗಿರುವ ಕಂದ, ವೃತ್ತ, ಭಾಮಿನಿ ಷಟ್ಪದಿ, ವಾರ್ಧಕ ಷಟ್ಪದಿ, ಶರ ಷಟ್ಪದಿ, ಸಾಂಗತ್ಯ ಇವುಗಳನ್ನು ಈ ಪದ್ಯಬಂಧಗಳ ಛಂದೋರೂಪಕ್ಕನುಗುಣವಾಗಿಯೇ ಮುದ್ರಿಸಿದೆ. ತಾಳದ ಪದ್ಯಗಳಲ್ಲಿ ಕೆಲವು ಹ್ರಸ್ವ ಪಾದಗಳ ಬಂಧಗಳಾಗಿದ್ದು ಅಂತಹವುಗಳನ್ನು ಎರಡೆರಡು ಪಾದಗಳನ್ನು ಒಟ್ಟು ಸೇರಿಸಿ ಮುದ್ರಿಸಲಾಗಿದೆ. ಆದರೆ ಪಾದಗಳನ್ನು ವಿಂಗಡಿಸುವ ಗೆರೆಗಳನ್ನು ಆಯಾ ಸ್ಥಳಗಳಲ್ಲಿ ಹಾಕಲಾಗಿದೆ. ಬೇರೆ ಬೇರೆ ಜಾತಿಯ ಪದ್ಯಬಂಧಗಳನ್ನು ಬೇರೆ ಬೇರೆ ಖಂಡಗಳಲ್ಲಿ ಕೊಟ್ಟಿದ್ದು ಅವುಗಳೊಳಗೆ ಆಯಾ ಖಂಡದ ಪದ್ಯಸಂಖ್ಯೆಗಳನ್ನು ನಮೂದಿಸಿದೆ. ಹಾಗೆಯೇ ಅದುವರೆಗಿನ ಪದ್ಯಗಳ ಒಟ್ಟು ಸಂಖ್ಯೆಯನ್ನು ಆಯಾ ಖಂಡಗಳ ಕೊನೆಗೆ ನಮೂದಿಸಿದೆ.

ಪ್ರಸಂಗಕರ್ತರು ಹಲವು ಪದ್ಯಗಳಲ್ಲಿ ಗ್ರಾಮ್ಯವೆನ್ನುವ ರೀತಿಯ ಭಾಷಾಪ್ರಯೋಗಗಳನ್ನೂ ಮಾಡಿದ್ದು ಅವುಗಳನ್ನು ತಿದ್ದುಪಡಿಮಾಡಿಲ್ಲ. ಅವು ಮೂಲಕವಿಗಳ ಪ್ರಯೋಗವೈಶಿಷ್ಟ್ಯಗಳಾಗಿವೆ. ಆದರೆ ಲಿಪಿಕಾರರ ಬರವಣಿಗೆಯ ವೈಚಿತ್ರ್ಯಗಳೆನ್ನಬಹುದಾದ ಹಲವು ರೂಪಗಳನ್ನು ತಿದ್ದಿ ಸರಿಪಡಿಸಿಕೊಂಡಿದೆ. ಉದಾ: ಮರದು, ವಂದು, ವದರಿದನು, ಶಳದು, ಧೊರೆ, ಖಿಡಿಗೆದರು, ಪಂಗ್ತಿ, ಸಂಘಟಿಶೀತು, ಭಹಳ, ಶಣಸು, ಧುರುಳ, ಯಲ್ಲಿ, ವಪ್ಪಿ ಇತ್ಯಾದಿ ರೂಪಗಳನ್ನು ಮರೆದು, ಒಂದು, ಒದರಿದನು, ಸೆಳೆದು, ದೊರೆ, ಕಿಡಿಗೆದರು, ಪಂಕ್ತಿ, ಸಂಘಟಿಸಿತು, ಬಹಳ, ದುರುಳ, ಎಲ್ಲಿ, ಒಪ್ಪಿ – ಎಂದು ಮುಂತಾಗಿ ಪರಿಷ್ಕರಿಸಿಕೊಳ್ಳಲಾಗಿದೆ. ಹಾಡುವ ವಿಧಾನವನ್ನನುಸರಿಸಿ ದೀರ್ಘಗಳನ್ನು ಬರೆದುದನ್ನು ತಿದ್ದಿ ಸರಿಪಡಿಸಿಕೊಳ್ಳಲಾಗಿದೆ. ಉದಾ: 'ಕಾಳಾಗದಲಿ ನೀನು । ಜಯಿಸೂವೆನೆಂಬೂದ । ಆಲೋಚಸಲಿಕಾಸಾದ್ಯಾ ಈಶಗೇ ವೇದ್ಯಾ!' ಇದನ್ನು 'ಕಾಳಗದಲಿ ನೀನು । ಜಯಿಸುವೆನೆಂಬುದ । ಆಲೋಚಿಸಲಿಕಸಾಧ್ಯ । ಈಶಗೆ ವೇದ್ಯ' ಎಂದು ಪರಿಷ್ಕರಿಸಿಕೊಳ್ಳಲಾಗಿದೆ. ಬೆಂಗಳೂರಿನ ಮುದ್ರಣವಾದ 'ಇಂದ್ರವಿಜಯ'ದಲ್ಲಿ ಇಂತಹ ಹಲವು ಬರವಣಿಗೆಯ ವೈಚಿತ್ರ್ಯಗಳು ಕಂಡುಬರುತ್ತಿದ್ದು ಅವುಗಳನ್ನು ಪರಿಷ್ಕರಿಸಿಕೊಳ್ಳಲಾಗಿದೆ. ಉಡುಪಿಯ ಮುದ್ರಣದ

ಪ್ರಸಂಗಗಳಲ್ಲಿ ಇಂತಹ ಬರವಣಿಗೆಯ ವೈಚಿತ್ರ್ಯಗಳನ್ನು ಸರಿಪಡಿಸಿ ಶುದ್ಧಪ್ರತಿಯಾಗಿ ಮಾಡಿಕೊಳ್ಳಲಾಗಿದೆ.

ಈ ಪ್ರಸಂಗಸಂಪುಟದಲ್ಲಿ ಶಾಸ್ತ್ರೀಯ ಸಂಪಾದನೆಗಿಂತಲೂ ಸಂಕಲನದ ಕಾರ್ಯ ಹೆಚ್ಚಿನದು. ಯಕ್ಷಗಾನ ಪ್ರಸಂಗಸಾಹಿತ್ಯವನ್ನು ಹಳೆಯ ಹಲವು ಹಸ್ತಪ್ರತಿಗಳನ್ನು ಇರಿಸಿಕೊಂಡು ಸಂಪಾದಿಸಬೇಕಾದ ಆವಶ್ಯಕತೆಯಿದೆ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಗೊಂಡ, ಕುಕ್ಕಿಲ ಕೃಷ್ಣ ಭಟ್ಟ ಸಂಪಾದಿತ 'ಪಾರ್ತಿಸುಬ್ಬನ ಯಕ್ಷಗಾನಗಳು' ಎಂಬುದು ಮಾತ್ರ ಪ್ರಸ್ತುತ ಕಾಲದಲ್ಲಿ ಪ್ರಸಂಗಗಳ ಸಂಪಾದನೆಗೆ ಮಾದರಿಯಾಗಿ ನಿಂತಿರುವ ಕೃತಿಯಾಗಿದೆ.

ಯಕ್ಷಗಾನ ಕವಿಗಳಿಗೆ (ಪ್ರಸಂಗಕರ್ತರಿಗೆ) ನಮ್ಮ ಕವಿಚರಿತೆಯಲ್ಲಿ ಮತ್ತು ಪ್ರಸಂಗಸಾಹಿತ್ಯಕ್ಕೆ ನಮ್ಮ ಸಾಹಿತ್ಯಚರಿತ್ರೆಯಲ್ಲಿ ಯೋಗ್ಯ ಸ್ಥಾನವನ್ನು ನೀಡಿರುವುದು ಕಂಡುಬರುವುದಿಲ್ಲ. ಎಲ್ಲೋ ಒಂದೆರಡು ಪದ್ಯಗಳು ಅಥವಾ ಕವಿಯೆಂಬ ಉಲ್ಲೇಖವಿರುವವರನ್ನು ದಾಖಲಿಸುವ ಸಾಹಿತ್ಯಚರಿತ್ರಗ್ರಂಥಗಳಲ್ಲಿ ಪೌರಾಣಿಕ ಹಿನ್ನೆಲೆಯ ಕೃತಿಗಳನ್ನು ಆಶುಕಾವ್ಯಗಳ ರೂಪದಲ್ಲಿ ಸೃಷ್ಟಿಸಿ ಅವುಗಳನ್ನು ಸಾಹಿತ್ಯಕೃತಿಗಳಾಗಿ ನಿರೂಪಿಸಿದ ಪ್ರಸಂಗಕರ್ತರಿಗೆ ಯೋಗ್ಯಸ್ಥಾನ ದೊರಕುವುದು ಆವಶ್ಯಕ ವಿಚಾರವಾಗಿದೆ.

ಯಕ್ಷಗಾನ ಪ್ರಸಂಗಗಳು ಹಲವು ಸಂಪುಟಗಳಲ್ಲಿ ಪ್ರಕಟಗೊಳ್ಳುವ ಯೋಜನೆ ಪೂರ್ಣವಾದಾಗ ಯಕ್ಷಗಾನ ಕ್ಷೇತ್ರದ ವೈವಿಧ್ಯಪೂರ್ಣ ಪ್ರಸಂಗಗಳೆಲ್ಲ ಒಟ್ಟು ಸೇರಿದಂತಾಗುವುದು. ಮುಖ್ಯ ಮತ್ತು ಪ್ರಾತಿನಿಧಿಕ ಪ್ರಸಂಗಗಳೊಡನೆ ಅಷ್ಟು ಪ್ರಸಿದ್ಧವಲ್ಲದ ಪ್ರಸಂಗಗಳೂ ಇಲ್ಲಿ ಒಟ್ಟು ಸೇರಿ ಒಟ್ಟು ಈ ಕ್ಷೇತ್ರದ ಸಮೃದ್ಧಿ ಕರ್ನಾಟಕಕ್ಕೆ ತೋರಿಬರಲಿದೆ. ಇಂತಹ ಯೋಜನೆಯೊಂದರಲ್ಲಿ ಒಂದು ಸಂಪುಟವನ್ನು ಸಂಪಾದಿಸುವ ಹೊಣೆಯನ್ನು ವಹಿಸಿದ್ದಕ್ಕಾಗಿ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯಕ್ಕೆ ಕೃತಜ್ಞತೆಗಳು ಸಲ್ಲುತ್ತವೆ. ಈ ಕಾರ್ಯಕ್ಕೆ ಉತ್ತೇಜನ ನೀಡಿದ ಹಿರಿಯ ಯಕ್ಷಗಾನ ಕಲಾವಿದ ಶ್ರೀ ಕೆರೆಮನೆ ಶಂಭು ಹೆಗಡೆಯವರಿಗೂ, ಜಾನಪದ ವಿದ್ವಾಂಸರಾದ ಮತ್ತು ಮಿತ್ರರಾದ ಡಾ. ಕೆ. ಚಿನ್ನಪ್ಪ ಗೌಡರಿಗೂ ವಂದನೆ ಸಲ್ಲಿಸಬಯಸುತ್ತೇನೆ.

ಪಾದೇಕಲ್ಲು ವಿಷ್ಣು ಭಟ್ಟ

■

ವಿಷಯಾನುಕ್ರಮ

ಶ್ರೀಮದ್ಭಾಗವತಮಹಾಪುರಾಣದೊಳಗಣ

ಯಕ್ಷಗಾನ ಇಂದ್ರವಿಜಯ

ಕವಿ

ಚೋರಾಡಿ ವೆಂಕಟರಮಣ ಭಟ್ಟ

ಪಾತ್ರವರ್ಗ

ದೇವೇಂದ್ರ

ಶಚಿ

ಬೃಹಸ್ಪತಿ

ಬ್ರಹ್ಮ

ವಿಶ್ವರೂಪಾಚಾರ್ಯ

ತ್ವಷ್ಟೃ

ವೃತ್ರಾಸುರ

ವಿಷ್ಣು

ದಧೀಚಿ

ವಿಶ್ವಕರ್ಮ

ಹತ್ಯಾಪಾಪ

ನಹುಷ

ಸಪ್ತರ್ಷಿಗಳು.

ಅಗಸ್ತ್ಯ

ದೇವತೆಗಳು, ಚಾರಕರು, ರಾಕ್ಷಸರು, ಅಪ್ಸರಸ್ತ್ರೀಯರು ಇತ್ಯಾದಿ.

ಶ್ರೀಮದ್ಭಾಗವತಮಹಾಪುರಾಣದೊಳಗಣ
ಯಕ್ಷಗಾನ ಇಂದ್ರವಿಜಯ

ಶಾರ್ದೂಲವಿಕ್ರೀಡಿತ ವೃತ್ತ

ಶ್ರೀಗಂಗಾಧರಮಂಬುಜಾಸನನುತಂ ಆದಿತ್ಯಕೋಟಿಪ್ರಭಂ ।
ವಾಗೀಶಾದ್ಯಮರೌಘವಂದಿತಪದಂ ವಂದೇ ದಯಾಸಾಗರಂ ।
ನಾಗೇಂದ್ರಾಭರಣಂ ಝುಷಧ್ವಜಹರಂ ವ್ಯಾಘ್ರಾಂಬರಾಲಂಕೃತಂ ।
ರೋಗಾರಣ್ಯಹುತಾಶನಂ ಶುಭಕರಂ ಧ್ಯಾಯಾಮಿ ಚಿತ್ತೇ ಸದಾ ॥
॥ ೧ ॥ [೧]

ರಾಗ ನಾಟಿ ಝಂಪೆತಾಳ

ಜಯಜಯತು ಶಿವಜಾತ । ಜಯತು ಗುಣಗಣಭರಿತ ।
ಜಯತು ದಿನಮಣಿತೇಜ। ಜಯತು ಗಣರಾಜ ॥ ಜಯತು ॥
॥ ೧ ॥

ದೋಷತಿಮಿರದಿನೇಶ । ಚಾರುಮಂಗಲವೇಷ ।
ಲೇಸ ಪಾಲಿಸು ಸತತ । ಮೂಷಕವರೂಥ ॥ ॥ ೨ ॥

ಧೂರ್ತಾನ್ವಯವಿನಾಶ । ವಂದೇ ತ್ರಿಜಗದೀಶ ।
ತೀರ್ಥಾಖ್ಯಾದ್ರಿನಿವಾಸ । ರತ್ನಮಣಿಭೂಷ ॥ ॥ ೩ ॥ [೪]

ವಾರ್ಧಕ

ಶ್ರೀರಮಾದೇವಿಚಿತ್ತಾಬ್ಜಮಾರ್ತಾಂಡನಂ ।
ದಾರಿದ್ರ್ಯದುಃಖೌಘಶೈಲವಜ್ರಾಯುಧಂ ।
ಚಾರುಸದ್ಭಕ್ತರಿಷ್ಟಾರ್ಥಸಿದ್ಧಿಪ್ರದಂ ದುರಿತೇಭಪಂಚಾನನಂ ॥

ಭೂರಿವಿಘ್ನಾಂಬುಧಿಕರೀರಜಂ ಶುಭಕರಂ ।
ಘೋರಭವರೋಗ ಕಾಂತಾರದಾವಾನಲಂ ।
ಕ್ರೂರದೈತ್ಯಾನ್ವಯಸರೀಸೃಪಖಗೇಂದ್ರನಂ ಶ್ರೀಮಹಾವಿಷ್ಣುಂ ಭಜೇ ॥
॥ ೧ ॥ [೫]

ರಾಗ ಸೌರಾಷ್ಟ್ರ ಅಷ್ಟತಾಳ

ನಂಬಿದೆ ನಿನ್ನ ಪದಾಂಬುಜಯುಗಳವ । ಲಕ್ಷ್ಮೀದೇವಿ । ಬಲು ।
ಸಂಭ್ರಮದೊಳಗೆನ್ನ ಕೃತಿಗೆ ಮಂಗಲವೀಯೆ । ಲಕ್ಷ್ಮೀದೇವಿ ॥
॥ ೧ ॥

ತಪ್ಪು ಬಾರದ ಹಾಗೆ ಒಪ್ಪಿಟ್ಟು ಸಲಹೆನ್ನ । ಲಕ್ಷ್ಮೀ ಪಾಹಿ ।
ಸರ್ಪಶಾಯಿಯ ರಾಣಿ ವರದೆ ಕಲ್ಯಾಣಿ ಶ್ರೀ । ಲಕ್ಷ್ಮೀದೇವಿ ॥
॥ ೨ ॥

ದಾಸರೊಡತಿಯೆ ಕೃ । ಪಾಸರೋವರೆಯೆ ಶ್ರೀ । ಲಕ್ಷ್ಮೀದೇವಿ । ಚಾರು।
ಲೇಸು ಭಾಗ್ಯವನೀಯೆ । ಭೂಸುರಾರ್ಚಿತೆ ಮಹಾ । ಲಕ್ಷ್ಮೀದೇವಿ ॥
॥ ೩ ॥ [೮]

ಭಾಮಿನಿ

ಅಂಬರದಿ ರಥವೇರಿ ಯಾಮಿನಿ ।
ಯಂ ಭರದಿ ಹೋಮಿಸುತ ತ್ರಿಜಗವ ।
ಸಂಭ್ರಮದಿ ಬೆಳಗುವ ಪ್ರಭಾಕರನಾಗಿ ಜಗಜಗಿಸಿ ।
ಕುಂಬಿರುವ ಕೋಣಪಾಶಿಯಧರವ ।
ಚುಂಬಿಸುವ ಸುಜ್ಞಾನಮೂರ್ತಿಯೆ ।
ನಂಬಿದೆನು ಸನ್ಮತಿಯ ಜಗದಂಬಕನೆ ದಯಮಾಡು ॥ ॥ ೧ ॥ [೯]

ರಾಗ ಬೇಗಡೆ ಏಕತಾಳ

ವಂದಿಸುವೆ ಬಲ । ಬಂದು ನಾನಿನ್ನ ಮಹಿಷಮರ್ದಿನಿ ।
ಚಂದದಿಂ ಕೃಪೆ । ಯಿಂದ ಸಲಹೆನ್ನ ॥ ಪಲ್ಲ ॥

ಇಂದುವದನೆ ಮ । ದಾಂಧಸೂದನೆ । ವಂದಿತರ ಮನ । ದಂದವೀವಳೆ।
ವಂದಿಸುವೆ ಆ । ನಂದವಿಗ್ರಹೆ । ಕುಂದರದನೆ ಸು । ಚಂದನಪ್ರಿಯೆ ॥
ಅನುಪಲ್ಲವಿ ॥

ಕಂಬುಕಂಠಿ ಹೇ । ರಂಬಜನನಿ ಪ । ದಾಂಬುಜವ ನೆನೆವೆ ॥ ಶೋಭಿಪ।
ರಂಬೆಪುತ್ಥಳಿ । ಬೊಂಬೆ ನೀ ಶರ । ಣೆಂಬವರ ಪೊರೆವೆ ॥ ನಿನಗೆಣೆ ।
ಯೆಂಬ ದೇವತೆ । ಕುಂಭಿನಿಯೊಳಿ । ಲ್ಲೆಂಬುದಿದು ದಿಟವೇ ॥ ಹೇ ಜಗ।
ದಂಬೆ ಶ್ರೀ ಮೂ । ಕಾಂಬೆ ಭೂತಕ । ದಂಬೆಯಾಗಿರುವೆ ॥ ನಿನ್ನನು ।
ನಂಬಿದೆನು ಬೇ । ಕೆಂಬ ಭಾಗ್ಯಗ । ಳಂ ಬರಿಸು ದಿ । ವ್ಯಾಂಬುಜಾಂಬಕಿ।
ಶುಂಭಮರ್ದಿನಿ । ಶುಂಭನಾಶಿನಿ । ಇಂಬುಗೊಡು ಬಲ । ಗೊಂಬೆ
ನಿನ್ನನು ॥ ॥ ೧ ॥

ದೋಷರಹಿತೆ ಯ । ತೀಶವಂದ್ಯೆ ಗಿ । ರೀಶನಂದನೆಯೆ ॥ ಮಣಿಗಣ ।
ಭೂಷೆ ಸುಮನೋಲ್ಲಾಸೆ ಸುಲಲಿತ । ಭಾಷೆ ಗುಣಮಣಿಯೆ ॥ ತ್ರಿದಶಾ।
ಧೀಶರುಗಳಭಿ । ಲಾಷೆ ಕರುಣಿಯೆ । ಸ್ತ್ರೀಶಿಖಾಮಣಿಯೆ ॥ ಜಯ
ಜಯ।
ವ್ಯಾಸವಿನುತೆ ಪ । ರೇಶೆ ವಿಘ್ನವಿ । ನಾಶಕಾರಿಣಿಯೆ ॥ ಮೂಜಗ ।
ದೀಶೆಯಿನಸಂ । ಕಾಶೆ ಕವಿಜನ । ಪೋಷೆ ಮಾಯಾ । ವೇಷಧಾರಿಣಿ ।
ಭಾಸುರಾಂಗಿ ವಿ। ಲಾಸದಿಂ ಕರು । ಣಿಸು ಕರುಣಿಪೀ ।
ಯೂಷದೊಲವನು॥ ॥ ೨ ॥

ಧಾರುಣೀಯೊಳು । ನೀರೊವರವೆಂ । ಬೂರಿನೊಳು ನೆಲಸಿ । ಪಾದವ।
ಸೇರಿದರನು ವಿ । ಚಾರಿಸುವೆ ಹೇ । ಮಾರಹರನರಸಿ ॥ ಆಜ್ಞೆಯ ।
ಮೀರಿದರ ಸಂ । ಹಾರಗೈವೆ ಕ । ಠಾರಿಯನು ಧರಿಸಿ ॥ ಸಂಗರ ।
ಧೀರೆ ಶರಧಿಗಂ । ಭೀರೆ ಸಲಹು ಕೃ । ಪಾರಸವನಿರಿಸಿ ॥ ನೀ ಹೊರ ।
ತಾರು ಕರುಣವ । ಬೀರುತೆನ್ನ ವಿ । ಚಾರಿಸುವ ದಾ । ತಾರರುಂಟೆ ನೀ।
ದೋರು ಸುಮತಿಯ । ದಾರಿಯನ್ನು ಕು । ಮಾರಜನನಿ ಮ ।
ಯೂರವಾಹಿನಿ ॥ ॥ ೩ ॥ [೧೨]

ವಾರ್ಧಕ

ಅಂಬುಜೋದ್ಭವನ ಪಟ್ಟದರಾಣಿ ಫಣಿವೇಣಿ ।
ಅಂಬುಜಾಂಬಕಿ ಸುವೀಣಾಪಾಣಿ ಶುಕವಾಣಿ ।
ನಂಬಿ ನಿನ್ನಡಿಯುಗಳಮಂ ಭಜಿಪ ಶರಣಜನಸಂರಕ್ಷಣಿ ನಿದಾನಿ ॥
ನಂಬಲಾರದ ಡಂಭಕರಿಗೊಲಿಯದವಳೆ ನಿ ।
ನ್ನಂ ಭಜಿಪೆನನವರತ ಕಂಬುಕಂಠಿನಿ ಶರಣ ।
ನೆಂಬ ಮಮತೆಯೊಳೆನ್ನ ಜಿಹ್ವೆಯೊಳ್ನೆಲಸು ಗುಣಶ್ರೇಣಿ ಕಲ್ಯಾಣಿ ವಾಣಿ॥
॥ ೧ ॥ [೧೩]

ದ್ವಿಪದಿ

ಈ ತೆರದಿ ಗುರುಗಣೇಶಾದ್ಯರನು ನೆನೆದು ।
ಮಾತೆಪಿತರಡಿಗೆ ಸಂಪ್ರೀತಿಯಲಿ ಮಣಿದು ॥ ॥ ೧ ॥

ಉಷ್ಣಕಿರಣಾದ್ಯಖಿಲಗ್ರಹರನುರೆ ಭಜಿಸಿ ।
ಜಿಷ್ಣುಮುಖ್ಯಾಮರಸಮೂಹವನು ನುತಿಸಿ ॥ ॥ ೨ ॥

ವ್ಯಾಸವಾಸಿಷ್ಠಶೌನಕರ ಬಲಬಂದು ।
ಲೇಸಿನಿಂ ಶುಕಯೋಗಿಯಡಿಗೆ ನಮೊಯೆಂದು ॥ ॥ ೩ ॥

ವರಮಹಾಭಾಗವತಕಥನದೊಳಗೊರೆವ ।
ಸುರಪವೃತ್ರಾಸುರರ ಕದನಕೌತುಕವ ॥ ॥ ೪ ॥

ಕರಿವದನನೊಲಿದೆನಗೆ ಪ್ರೇರಿಸಿದ ತೆರದಿ ।
ಹರಿಕಥಾತುರರಿಗುಸುರುವೆನು ಕನ್ನಡದಿ ॥ ॥ ೫ ॥

ಅಪ್ರಯೋಜನವಾದ ನುಡಿಯಿರಲು ತಿಳಿದು ।
ಸುಪ್ರಸಿದ್ಧರು ಮುದದಿ ತಿದ್ದಿ ಮೆರೆಸುವುದು ॥ ॥ ೬ ॥

ವ್ಯಾಕರಣ ಕಾವ್ಯ ಪದಪ್ರಾಸಗಳನರಿಯೆ ।
ಜೋಕೆಯಿಂದೊಲಿದು ಮಂಗಲವೀಯೊ ಹರಿಯೆ ॥ ॥ ೭ ॥ [೨೦]

ವಚನ

ಈ ಪ್ರಕಾರದಿಂ ಗುರುದೇವತಾಪ್ರಾರ್ಥನೆಯಂ ಮಾಡಿ ಸತ್ಕಥಾಪ್ರಬಂಧಮಂ ಪೇಳ್ವೆನದೆಂತೆನೆ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಸೋಮಕುಲಸಂಜಾತನಾಗಿಹ । ಭೂಮಿಪಾಲ ಪರೀಕ್ಷಿತಂಗತಿ ।
ಪ್ರೇಮದಿಂ ಶುಕನೆಂಬ ಯೋಗಿಲ । ಲಾಮನೊಲಿದು ॥ ॥ ೧ ॥

ಅಕ್ಷಯದ ನಿಗಮಾಗಮಂಗಳಿ । ಗಕ್ಷಯಹ ಭಾಗವತಕಥೆಯನು ।
ಪ್ರೇಕ್ಷದಿಂ ಮೊದಲ್ಗೊಂಡು ಪೇಳ್ದಿರ । ಲಾ ಕ್ಷಿಪತಿಪನು ॥ ॥ ೨ ॥

ಹರಿಕಥಾಮೃತವನ್ನು ಭುಂಜಿಸಿ । ಹರುಷಪುಳಕಿತನಾಗಿ ಪುನರಪಿ ।
ವರಮುನೀಂದ್ರನ ಚರಣಕೆರಗು । ತ್ತೊರೆದನಾಗ ॥ ॥ ೩ ॥

ಮುನಿಕುಲೋತ್ತಮ ಲಾಲಿಸೇತಕೆ । ಅನಿಮಿಷರು ತ್ವಷ್ಟ್ರಜಗೆ ಗುರುತನ ।
ವನು ಎಸಗಿ ಹಿತವಿರದೆ ಆತನೊ । ಳ್ಮುನಿದರ್‍ಯಾಕೈ ॥ ॥ ೪ ॥

ಬಿತ್ತರಿಸು ಕಾರುಣ್ಯದಿಂದಾ । ವೃತ್ರನೆಂಬವನೆಂತು ಪುಟ್ಟಿದ ।
ಮತ್ಸರಿಸಿದನದ್ಯಾಕೆ ಗೀರ್ವಾ । ಣೋತ್ತಮರಲಿ ॥ ॥ ೫ ॥

ಎಂತು ಕುಲಿಶಾಯುಧವ ಮಾಡಿದ । ರಂತು ರಣದಲಿ ದೈತ್ಯವರ್ಯನು ।
ಪಂಥದಿಂ ವಧಿಸಿದರು ಪೌರುಷ । ವಾಂತಮರರು ॥ ॥ ೬ ॥

ಕರುಣಿ ನೀ ವಿಸ್ತರಿಸು ನಹುಷನ । ಚರಿತಸಹಿತೆಂದೆನುತ ಮಣಿಯಲು ।
ಪರಮತಾಪಸರರಸ ತಳ್ಕಿಸು । ತೊರೆದನಾಗ ॥ ॥ ೭ ॥ [೨೭]

ವಾರ್ಧಕ

ಅರಸ ಕೇಳೊಂದಿನದಿ ಪವನಶಿಖಿಯಮನಿರುತಿ ।
ವರುಣವಾಯುಕುಬೇರಖೇಚರಕಿನ್ನರಯಕ್ಷ ।

ಪರಿಪರಿಯಸಿದ್ಧವಿದ್ಯಾಧರರು ಖೇಚರರು ಗಾಂಧರ್ವರುಗಳು ಸಹಿತ ॥
ಹರುಷದಿಂದಂಬರದಿ ರಾಜಿಸುತ್ತಿಹವುಷ್ಣ ।
ಕಿರಣಗಿಮ್ಮಡಿಯೆನಲ್ ಭರಿತಸೌಭಾಗ್ಯದಿಂ ।
ಹರಿಪೀಠವೇರಿ ಇಂದ್ರಾಣಿಸಹಿತಮರೇಂದ್ರನೋಲಗಂಗೊಟ್ಟಿರ್ದನು ॥
॥ ೧ ॥ [೨೮]

ಭಾಮಿನಿ

ಆ ಸಭಾಸ್ಥಳಕಾಗಿ ಗೀಷ್ಪತಿ ।
ತೋಷವನು ಸೂಸುತ್ತಲೊಯ್ಯನೆ ।
ತಾ ಸರಿದು ಬಂದಿದಿರು ನಿಲಲೀಕ್ಷಿಸುತ ಸುಮನಸರು ॥
ರಾಶಿಮದಗರ್ವದೊಳಗೀ ವಾ ।
ಗೀಶನನು ಮನ್ನಿಸದೆ ಕುಳ್ಳಿರೆ ।
ನಾಸಿಕದಿ ಬೆರಳಿಟ್ಟು ಯೋಚಿಸುತಿರ್ದ ಮನದೊಳಗೆ ॥ ॥ ೧ ॥ [೨೯]

ರಾಗ ಶಂಕರಾಭರಣ ಮಟ್ಟೆತಾಳ

ಏನಿದಮರಪುರದ ಚೋದ್ಯ । ವೇನಿದೇನಿದು ।
ಮೌನವ್ರತವ ತಾಳ್ದರಿಂದಿದೇನಿದೇನಿದು ।
ಶಾನೆ ಸಿರಿಮದಾಂಧರಾದರೇನಿದೇನಿದು ।
ಕಾನನವ ಪೊಕ್ಕಂತೆ ಆದುದೇನಿದೇನಿದು ॥ ॥ ೧ ॥

ಕೆಡುಕನೆಸಗಲಾನು ಬಹೆನೆ ಏನಿದೇನಿದು ।
ನುಡಿಸದಾದರೆನ್ನನ್ಯಾತಕೇನಿದೇನಿದು ।
ಕಡುಮಹಾತ್ಮರೆಡೆಗೆ ಬರಲು ಏನಿದೇನಿದು ।
ಬಡವರನ್ನು ನುಡಿಸದಿಹರೆ ಏನಿದೇನಿದು ॥ ॥ ೨ ॥

ಸುಮ್ಮಗಿನಿತುಗೆಯ್ಯಲಿವರ ಏನಿದೇನಿದು ।
ಹೆಮ್ಮೆ ಹಿಂಡದಿಹರೆ ಖಳರಿದೇನಿದೇನಿದು ।
ನಮ್ಮವರೆನುತ್ತ ಬಂದರೇನಿದೇನಿದು ।
ಗುಮ್ಮನಂತೆ ಕುಳಿತರಲ್ಲ ಏನಿದೇನಿದು ॥ ॥ ೩ ॥ [೩೨]

ಭಾಮಿನಿ

ಹರಹರಾ ಅವಮಾನ ತನಗೀ ।
ಪರಿಯೊಳಾಯಿತೆ ಕೇಳಿ ಮನುಮುನಿ ।
ವರರು ನಗರೇ ತಿಳಿದು ಶುಕ್ರಾಚಾರ್ಯ ನಗದಿಹನೇ ॥
ತರಿಸಿದಿರೆ ಹಾನಿಯನು ನಿರ್ಜರ ।
ಗುರುವೆನುವ ಬಹುಮಾನಕಿವದಿರ ।
ಸಿರಿಯು ಸುಡಲೆಂದೆನುತಲಲ್ಲಿರದೆದ್ದು ಹೊರವಂಟ ॥ ॥ ೧ ॥ [೩೩]

ರಾಗ ಸಾಂಗತ್ಯ ರೂಪಕತಾಳ

ಇನಿತು ಗೀಷ್ಪತಿಯು ಸೀವರಿಸುತಾಲಯಕ್ಕೈದಿ ।
ಮುನಿಸಿನಿಂದಸ್ತವಾಗಿರಲು ॥
ಅನಿಮಿಷೇಶನ ಸಭೆಯೊಳು ಗಜಬಜಿಸಿತು ।
ಮುನಿದನಿಂತೆನುತ ತಮ್ಮೊಳಗೆ ॥ ॥ ೧ ॥

ಬಣಗುಗಳಾದೆವಕಟ ತಾವಿಂದಿನಲಿ ಧಿ ।
ಷಣನ ಚಿತ್ತವನುರೆ ಕೆಡಿಸಿ ।
ಕ್ಷಣಸುಖವೆಮಗಪ್ಪುದುಂಟೆ ಮುಂದಿದಕಿನ್ನೇ ।
ನಣೆಯೆಂದು ಶಕ್ರ ಚಿಂತಿಸಿದ ॥ ॥ ೨ ॥ [೩೫]

ಭಾಮಿನಿ

ಆಗಲಿದಕೊಂದ್ಯುಕ್ತಿಗೈವೆನು ।
ಬೇಗದಲಿ ತಾ ಪೋಗಿ ಕರುಣಾ ।
ಸಾಗರನ ಪದದಲ್ಲಿ ಬೀಳುವೆನೆನುತ ಶತಮಖನು ॥
ಭಾಗಧೇಯವಗೊಂಡು ಗುರುಗೃಹ ।
ಕಾಗಿ ಬಂದೀಕ್ಷಿಸಲಗೋಚರ ।
ನಾಗಿರಲತಿಭಯದೊಳರಸುತ್ತಿರ್ದರಲ್ಲಲ್ಲಿ ॥ ॥ ೧ ॥ [೩೬]

ರಾಗ ಸೌರಾಷ್ಟ್ರ ತ್ರಿವುಡೆತಾಳ

ಅತ್ತಲಾ ರಾಕ್ಷಸರು ಈ ಪರಿ । ವರ್ತಮಾನವ ತಿಳಿದು ಭಾರ್ಗವ ।
ಗತ್ಯಧಿಕಸಂಭ್ರಮದೊಳೆಂದರು । ನ್ಮತ್ತರಾಗಿ ॥ ॥ ೧ ॥

ಚಿತ್ತವಿಸು ಗುರುವರ್ಯ ಅನಿಮಿಷ । ಮೊತ್ತದಲಿ ಗೀಷ್ಪತಿಯು ಮುನಿಯುತ।
ಲೆತ್ತ ಪೋದನೊ ಎನುತ ತಾವರ । ಸುತ್ತಲಿಹರು ॥ ॥ ೨ ॥

ಈ ಸಮಯದಲಿ ಪೋಗಿ ಆ ನಾ । ಕೇಶರನು ಬಡಿದಟ್ಟಿ ಪುರವನು ।
ಕೈಸೆರೆಯ ಪಿಡಿದರೆಯು ನಮಗತಿ । ಲೇಸು ನೋಡೈ ॥ ॥ ೩ ॥

ಸಹಸವನು ನೋಡೆನಲು ಭಾರ್ಗವ । ನಹುದೆನುತ್ತಾಜ್ಞೆಯನು ಕರುಣಿಸೆ।
ಕುಹಕಿಗಳ ತಿಂತಿಣಿಯು ರೋಷದಿ । ಗಹಗಹಿಸುತ ॥ ॥ ೪ ॥

ಮಗುಳೆ ಚಾರಕನೊಡನೆ ಪೇಳ್ದರು । ಜಗಳಕೈತಹರಂತೆ ರಾಕ್ಷಸ ।
ರುಗಳೆನುತ ಪೇಳೆಲವೊ ನಿರ್ಜರ । ರಿಗೆ ಜಗದಲಿ ॥ ॥ ೫ ॥ [೪೧]

ಭಾಮಿನಿ

ಅಳುಕದವರಿಗೆ ನೀನು ತಿಳುಹಿಸಿ ।
ಗಲಬಲಿಸದೈತಹುದೆನಲ್ಕಾ ।
ಖಳನು ಮಾರ್ಗದಿ ಬರುತ ಯೋಚಿಸುತಿರ್ದನೆಂತವರ ॥
ನಿಲಯದೊಳು ಸಾರುವೆನು ಭುಜಗಾ ।
ವಳಿಯೊಳಿಲಿ ಪೊಕ್ಕಂತೆ ತಾನೆನು ।
ತಳಲಿ ಬರೆ ದ್ವಾರದಲಿ ತಡೆದಿಂತೆಂದರಾರ್ಭಟಿಸಿ ॥ ॥ ೧ ॥ [೪೨]

ರಾಗ ನವರೋಜು ಏಕತಾಳ

ಆರ್ನೀ ನಿನ್ನವರಾರ್ನಿನ್ನಟ್ಟಿದ । ರಾರ್ನೀ ನಿಲು ಕಜ್ಜೈತೀಗ್ಯಾ೯ ।
ದೂರ್ನಿಲ್ಲೆಲೆ ಕವ್ಯದಾರ್ನೀ ಬಂದುದು । ಸೂರ್ನೀದಾನದೊಳೆಮಗೀಗ್ಯಾ೯॥
॥ ೧ ॥

ಕಣ್ಣ ಬಿಡುತ ಬಲ್ ಬಣ್ಣವ ದೋರುತ । ಮಣ್ಣಿಗೆ ಬರುವಂದವಿದೇನ್ಕಾ ।
ನಿನ್ನಯ ಕಾರ್ಯಗಳನ್ನು ಬೇಗೊರೆಬಿಡು । ಗಣ್ಣರೀಕ್ಷಿಸಲುಳಿಸರು ನೋಡ್ಕಾ ॥
॥ ೨ ॥

ಚದುರತನದಿ ಬಲುವುದವನು ದೋರುತ । ಸದನವ ಪೊಗುವುಜ್ಜುಗವೇನ್ಕಾ ।
ಮುದದಿಂದೆಮ್ಮೊಳು ಕದನವ ಗೈಯ್ಯಲು । ಬದಿಯೆಲುಬನು ಮುರಿವೆವು ನೋಡ್ಕಾ ॥ ॥ ೩ ॥ [೪೫]

ಭಾಮಿನಿ

ಭೂತಳಾಧಿಪ ಲಾಲಿಸೀ ಪರಿ ।
ಕಾತರಿಸಿ ತಡೆಯಲ್ಕೆ ರಾಕ್ಷಸ ।
ದೂತನವದಿರ ಬಡಿದು ದ್ವಾರವ ನುಗ್ಗಿ ಒಳಪೊಕ್ಕು ॥
ಶಾತಕುಂಭದ ಗೋಪುರಂಗಳ ।
ವೀಥಿ ವೀಥಿಯ ನಿಳಯದ್ವಾರವ ।
ಭೀತಿಯಲಿ ಕಳೆದೈದಿ ಬೆಸಸಿದನಮರರೋಲಗದಿ ॥ ॥ ೧ ॥ [೪೬]

ರಾಗ ಯರಕಲಕಾಂಭೋಜಿ ಅಷ್ಟತಾಳ

ಕೇಳು ಗೀರ್ವಾಣರಾಯ । ಬಿನ್ನಪವನ್ನು । ಪೇಳುವದೆಲ್ಲ ಜೀಯಾ
॥ ಪಲ್ಲ ॥

ನಾಳೆ ನಿಮ್ಮಯ ಪುರಕೆ । ದೈತ್ಯೇಶರು । ದಾಳಿಡುವರಾಹವಕೇ ।
ಕಾಳಗದಲಿ ನೀನು । ಜಯಸುವೆನೆಂಬುದ । ಆಲೋಚಿಸಲಿಕಸಾಧ್ಯ । ಈಶಗೆ ವೇದ್ಯ ॥ ೧ ॥

ಈ ಮಹಾನಗರವನು । ನಮ್ಮವರಿಗೆ । ಸಾಮದಿಂದಿತ್ತು ನೀನು ।
ಪ್ರೇಮದಿಂ ದಿತಿಜರ । ಮರೆಗೊಂಡಿರಲು ಮುಂದೆ । ಕ್ಷೇಮವಪ್ಪುದು ನಿನಗೆ ॥ ॥ ೨ ॥ [೪೭]

ಭಾಮಿನಿ

ಇಂತೆನುತವನುಸುರಿ ಜವದೊಳು ।
ಹಿಂತಿರುಗಿ ಪುರಕೈದಲಿತ್ತಲು ।
ಚಿಂತಿಸುತ್ತಮರೇಂದ್ರನಿದಕೇಗೈವೆನಿಂದೆನುತ ॥
ಅಂತಕಾದಿ ಸಮಸ್ತನಿರ್ಜರ ।
ತಿಂತಿಣಿಯು ಸಹಿತೈದಿ ಬೊಮ್ಮನ ।
ಮುಂತೆ ಗೋಳಿಟ್ಟೊರಲುತುಸುರಿದರಧಿಕಭಕುತಿಯಲಿ ॥ ॥ ೧ ॥ [೪೯]

ರಾಗ ರೂಪಕತಾಳ

ಜಯತು ವಾಣಿಪ್ರಾಣರಮಣನೇ । ಪರಾಕು ।
ಜಯತು ಸತ್ಯಸಂಧ ಸುಗುಣನೇ ॥ ಪಲ್ಲ ॥

ಜಯತು ನಾರದಾದಿವಂದ್ಯನೇ । ಪಾವನ್ನ । ಜಯತು ಚಾರುವೇದವೇದ್ಯನೇ॥
ಜಯತು ಕಮಲಜಾತದೇವ । ಜಯತು ಹೇ ಮಹಾನುಭಾವ ।
ದಯವದೋರುತಿಂದು ನಮ್ಮ । ಭಯವ ಮಾಣಿಸಯ್ಯ ಬೊಮ್ಮ ॥
॥ ೧ ॥

ನಮ್ಮ ಓಲಗಕ್ಕೆ ಒಂದಿನ । ವಾಗೀಶ । ಗಮ್ಮನೈತರಲ್ ನಾವಾತನ ॥
ಹೆಮ್ಮೆಯಿಂದ ನುಡಿಸದಿರಲು । ನಮ್ಮೊಳಾತ ಬಹುಖತಿಯೊಳು ।
ಧಮ್ಮನಂತರ್ಧಾನನಾದ । ನಮ್ಮ ಕೊರಳ ಕೊಯಿದು ಪೋದ ॥
॥ ೨ ॥

ಅಸುರಾಧಿಪರ ವಿಸರವೀ ಮಹಾ । ನಾಕವ । ಮುಸುಕೆ ಬಹರಾಲಿಸು ಪಿತಾಮಹ ॥
ಅಸಮಸಹಸದಿಂದ ಧುರವ । ಎಸಗುವಂದ ವರವ ಗುರುವ ।
ಒಸಗೆಯರಿಯದಾದೆವೀಗ । ಉಸುರಲೇನಿದೆಮ್ಮ ಯೋಗ ॥
॥ ೩ ॥

ಮರೆಯಹೊಕ್ಕೆವಯ್ಯ ಬೇಗದಿ । ನಮ್ಮನು । ಪೊರೆಯಬೇಕು ಕರುಣವಾರಿಧಿ॥
ಕೊರತೆಯೆಂಬ ಕೂಪದೊಳಗೆ । ಮರೆತು ಬಿದ್ದೆವೆಮ್ಮ ಬಳಿಗೆ ।
ಭರದೊಳಭಯಕರವ ನೀಡಿ । ಹರಿಸು ಮೇಲೆ ಮುದವಗೂಡಿ ॥
॥ ೪ ॥ [೫೩]

ರಾಗ ಕೇದಾರಗೌಳ ಅಷ್ಟತಾಳ

ಎನಲಾ ಮಾತನು ಕೇಳಿ । ಮನದಿ ಬೆಚ್ಚುತಲಾ । ವನಜಪೀಠನು ನಗುತ।
ಬಿನುಗರ್‍ರೈ ನೀವ್ ಧಿಷ । ಣನ ಲೆಕ್ಕಿಸದಿಹ । ಘನವೀರವಿನಿತಿದೇನು ॥
॥ ೧ ॥

ಹಿಂದೆ ಈ ರೀತಿಯೊಳ್ । ಮಂದಮತಿಯೊಳತ್ರಿ । ಕಂದನ ಲೆಕ್ಕಿಸದೆ ।
ಬಂದ ಬವಣೆಯ । ನೊಂದಾದರು ತಿಳಿಯದಿ । ದ್ವಂದವೇನುಸುರಲಿನ್ನು॥
॥ ೨ ॥

ತೋರುವೆನೊಂದು । ಮಾರ್ಗವ ಕೇಳಿ ತ್ವಷ್ಟ್ರುಕು । ಮಾರಗೆ ಗುರುತನವ॥
ಭೋರನೆ ರಚಿಸಲು । ಗೆಲಲುಬಹುದಸುರರ । ಭೂರಿಸಂದೋಹವನು ॥
॥ ೩ ॥

ಸತ್ಯವಿದೆನಲು ನಿರ್ಜರರು । ಕೇಳುತತಿ । ಭಕ್ತಿಯೊಳಜನಡಿಗೆ ।
ಕುತ್ತಿಗೆಯನು ಬಾಗುತ್ಯೆದಿ । ತ್ವಷ್ಟ್ರುಜನೊಳು । ಬಿತ್ತರಿಸಿದರ್ಮಗುಳೆ ॥
॥ ೪ ॥ [೫೭]

ರಾಗ ಸಾಂಗತ್ಯ ರೂಪಕತಾಳ

ಎಲೆ ವಿಶ್ವರೂಪ ನಿನ್ನಡಿಗೆ ಸಾಷ್ಟಾಂಗದಿ ।
ತಲೆಯ ಬಾಗುವೆವು ನಮ್ಮುವನು ।
ಬಲುಕೃಪೆಯಿಂದ ರಕ್ಷಿಸಬೇಕೆಂದೆನೆ ಕೇಳಿ ।
ತಲೆಯದೂಗುತ್ತಲಿಂತೆಂದ ॥ ॥ ೧ ॥

ಚೆನ್ನಾಯ್ತು ಕಾರ್ಯ ಹಿರಿಯರಾಗಿ ನೀವಿಂದು ।
ಎನ್ನಡಿಗೊಲಿದು ಬಾಗುವುದು ।

ಎನ್ನ ಬಾಳುವೆಗೆ ಸಲ್ಲದು ನಿಮ್ಮ ಗಮನವೇ ।
ನೆನ್ನಲ್ಲಿಗಪರೂಪವೆನಲು ॥ ॥ ೨ ॥

ಹಿರಿಯರೆಂದೆನುತಲಗ್ಗಳಿಸಲ್ಕಾತಕೆ ಬುದ್ಧಿ ।
ಯರಿತನೆ ಹಿರಿಯನೆಂದಿಹುದು ।
ಪರಿಪೂರ್ಣಮಮತೆಯಿಂದಿರಲೆಮ್ಮೊಳೊಲಿದು ನೀ ।
ಗುರುತನವನು ಕೈಕೊಳ್ಳುವುದು ॥ ॥ ೩ ॥ [೬೦]

ಭಾಮಿನಿ

ತ್ರಿದಶರಿಂತುಸುರುತ್ತ ನಿಂದಿರೆ ।
ಪದುಳಿಗನು ತಾನಾಗಿ ನುಡಿದನು ।
ಬೆದರದಿರಿ ಕೈಕೊಂಡೆ ನಿಮ್ಮನುಮತಿಯನೆಂದೆನುತ ।
ಮುದದಿ ನಿರ್ಜರಪತಿಗೆ ಪೇಳ್ದನು ।
ವಿಧವಿಧದಮಂತ್ರಾಸ್ತ್ರವನು ಪೇ ।
ಳಿದನು ಮಿಗೆ ನಾರಾಯಣಾಷ್ಟಕವಚವನು ನಯದಿ ॥ ॥ ೧ ॥ [೬೧]

ರಾಗ ಕಾಂಭೋಜಿ ಝಂಪೆತಾಳ

ಇಂತುಕೃಷ್ಣಜನಿತ ಮಂತ್ರಾಸ್ತ್ರಗಳಲಿ । ಖಳ । ತಿಂತಿಣಿಯ ಸದೆಬಡಿದು ರಣದಿ ।
ಸಂತಸದೊಳಿರಿಸೌಖ್ಯ । ವಾಂತನಿಮಿಷಾದ್ಯರಿರೆ । ಮುಂತಾದ ಚೋದ್ಯವೇನೆಂಬೆ ॥
॥ ೧ ॥

ಕೃಷ್ಣಸುತನತಿಮೋಹಸಗೈದು । ಮಾತುರ್ಬಳಗ । ದೊಟ್ಟಿನಲಿ ಮೋಹಗಳನಿಟ್ಟು ।
ಜ್ಯೇಷ್ಠತನದಿಂದ ಹವಿರ್ಭಾಗವನು ದೈತ್ಯರಿಗೆ । ಕೊಟ್ಟು ಪದುಳಿಗನಾಗುತಿರಲು ॥
॥ ೨ ॥

ಇತ್ತ ಹವಿರ್ಭಾಗ ಅಮರರಿಗಿಲ್ಲದಾಗಲೀ । ಕೃತ್ರಿಮದ ಪರಿಯ ಮನದೊಳಗೆ ।
ಗೊತ್ತಾಗದಿರೆ ಸುಮನ । ಸೋತ್ತಮನು ದಿಟವೆಂಬ । ವಾರ್ತೆಯನು ತಿಳಿದು ಕಡುಮುಳಿದು ॥
ಆಹಹ ನಮ್ಮವನೀಶನೆಂದು ವಿಧಿಯೊರೆದವೋಲ್ । ಸಹಜದಿಂ ಮಾನಿಸಿದರಿವನು ।
ಕುಹಕಿರಾಕ್ಷಸರ ವಂಶಸ್ಥನಾಗಿಹನೆಂದು । ಗಹಗಹಿಸುತೆಂದನವನೊಡನೆ ॥
॥ ೩ ॥ [೬೪]

ರಾಗ ಸೌರಾಷ್ಟ್ರ ತ್ರಿವುಡೆತಾಳ

ಎಲವೊ ವಿಶ್ವರೂಪಾಖ್ಯ ನಿನ್ನಯ । ಕುಲದ ನೆಲೆಯೆಮಗರುಹದೀಪರಿ ।
ಬಲುಕಪಟವಿದ್ಯದಲಿ ಮೋಸವ । ಗೊಳಿಸಿದೆಯಲ್ಲೈ ॥ ॥ ೧ ॥

ಎನುವದೇನ್ವಿಶ್ವಾಸಘಾತಕ । ವನು ಬಗೆದ ಮತಿಗೇಡಿ ನಿನ್ನನು ।
ತಿನಿಸುವೆನು ಭಂಗಿಸುತ ಶಾಕಿನಿ । ಗಣಕೆ ನೋಡೈ ॥ ॥ ೨ ॥

ನುಡಿದು ಫಲವೇನೆನುತ ಖಡುಗವ । ಝಡಿದು ಮುಂದಲೆಯನ್ನು ರೋಷದಿ ।
ಕಡಿವಡಿದು ಘುಡುಘುಡಿಸಿ ಕಡುಹಲಿ । ಕೆಡೆದನಂದು ॥ ॥ ೩ ॥

ಗುರುಹತಿಯು ಬೆಂಬಿಡದಿರಲ್ಕದ । ಧರೆಗೆ ಸಲಿಲಕೆ ವಧುಗಳಿಗೆ ವರ ।
ತರುಕುಲಂಗಳಿಗೀವೆನೆನುತಾ । ದುರಿತವನ್ನು ॥ ॥ ೪ ॥

ಬಳಿಕನಾಲ್ಕಿಸ್ಸೆಗ್ಗೈವುತವರಿಂ । ಗಳವಡಿಸಿ ಬಯಸಿದ ಮನೋರಥ ।
ಗಳನು ಕರುಣಿಸುತಿತ್ತಲನಿಮಿಷತಿಲಕನಿರಲು ॥ ॥ ೫ ॥ [೧೯]

ವಾರ್ಧಕ

ನಾಗಪುರದರಸ ಕೇಳತ್ತಲಾ ತ್ವಷ್ಟೃ ಹರು ।
ಷಾಗಮದೊಳಾಲಯದಿ ಸೌಖ್ಯದಿಂದಿರುತಿರ ।
ಲ್ಕಾಗಳೀ ವಾರ್ತೆಯಲ್ಲಲ್ಲಿ ಪಸರಿಸುತಿರಲ್ಕದನರಿತು ಶೋಕದಿಂದ ।
ಕೂಗಿ ಹೊರಳಾಡುತಣುಗನ ಮನದೊಳೆಣಿಸುತ್ತ ।
ಹೇಗೆ ಬಾಳುವೆನೆಂದು ತನ್ನಸುವ ಧರಣಿಯೊ ।
ಳ್ನೀಗುತೇಳುತ್ತ ಹಾ ಹಾ ಕಂದ ಹಾಯೆಂದಳಲ್ದು ಮಗುಳಿಂತೆಂದನು ॥
॥ ೧ ॥ [20]

ಭಾಮಿನಿ

ಇದಕೆ ತಕ್ಕುದನೆಸಗಿ ಲೇಖರ ।
ಮದವ ಹಿಂಡುವೆನೆನುತಲಾಕ್ಷಣ ।

ವಿದಿತದಲಿ ಮಖಿಗೈದು ಮೆಚ್ಚಿಸೆ ಹವ್ಯವಾಹನನು ।
ಇದಕೊ ನಿನ್ನಯ ಕೋಪವಹ್ನಿಗೆ ।
ಮುದವನೀವೆನೆನುತ್ತ ಕೊಟ್ಟನು ।
ಪದುಳದಿಂ ರಿಪುಕಾಲಭೈರವನೆನಿಪ ದಾನವನ ॥ ॥ ೧ ॥ [೭೧]

ರಾಗ ಕಾಂಭೋಜಿ ಝಂಪೆತಾಳ

ಕೇಳು ಮಹಿಪಾಲ ಹುತವಹನನಿಂತಿತ್ತಡಗೆ । ತೋಳ ನೆಗಹುತ ತ್ವಷ್ಟ್ರ ಮುದದಿ।
ಬಾಳು ಬಾಳೆಂದೆನುತ ಪರಸುತಿರಲಾಗ ಖಳ । ಘಾಳಿಡುತ್ತೆದ್ದನಬ್ಬರಿಸಿ ॥
॥ ೧ ॥

ಅಬ್ಬರಿಸುತಸುರನೊಂದಡಿಯಿಡಲ್ ಚಕ್ರಿಪನು । ಜಬ್ಬಾದನುದರ ತಲ್ಲಣಿಸಿ।
ಉಬ್ಬಸಗಳೇರಿ ಕಚ್ಛಪನು ಕಂಗೆಡಲರ್ಕ । ಮಬ್ಬಾದನೀ ಮಹಾದ್ಭುತಕೆ ॥
॥ ೨ ॥

ಘೂಳನತಿಗಂಭೀರದಿಂದಲಾರ್ಭಟಿಸಲೀ । ರೇಳುಲೋಕವು ಭ್ರಾಂತಿಪಡಲು।
ಕಾಳರಕ್ಕಸರು ಹರುಷದಿ ಮೊಳಗಿಸಿದರು ಬಲು । ತಾಳಮದ್ದಳೆಯ ರಭಸದೊಳು।
॥ ೩ ॥

ತ್ವಷ್ಟೃವತಿ ಸಂತಸಾರ್ಣವದಿ ಮುಳುಗುತ ನುಡಿದ । ಕೆಟ್ಟರಿಂದಮರಪಾಲಕರು।
ಇಷ್ಟು ಸಾಹಸದ ಮಗನೆನಗಾದ ಮೇಲೀತ । ಕುಟ್ಟಿಕೊಲ್ಲದೆ ಬಿಡನಮರರಾ।
॥ ೪ ॥

ಇಂಗಿತವ ಶಿವನು ಕೈಗೂಡಿಸಿದನೆನಗೆಂದು । ಮುಂಗಡೆಯೊಳಿರ್ಪವನ ನೋಡಿ।
ಸಂಗಿಸದಿರಲಿ ಅಗಣಿತಾಯುಧದಿ ಮೃತಿಯೆನುತ । ಮಂಗಳಾಕ್ಷತೆಯ ಶಿರಕಿತ್ತ।
॥ ೫ ॥

ಇಂತು ವರವಿತ್ತು ಶಸ್ತ್ರಾಯುಧವನಿತ್ತು ಖಳ । ತಿಂತಿಣಿಯ ಪಟ್ಟವನು ರಚಿಸಿ।
ಸಂತಸದಿ ವೃತ್ರನೆಂದೆನುತೆ ಪೆಸರಿಟ್ಟುಮವ । ನಂ ತೆಗೆದು ಪೀಠವೇರಿಸಿದ।
॥ ೬ ॥

ಮಗನೆ ಕೇಳೈ ಯೆನಗೆ ಶಕ್ರಾದ್ಯಮರರೆಲ್ಲ । ಹಗೆಯರಾಗಿಹರವರ ನೀನು।
ಜಗಳದೊಳಗಾ ಬಣಗುಗಳ ಬಡಿದು ಬಾರೆನುತ । ಝಗಝಗಿಪ
ಕವಚತೊಡಿಸಿದನು ॥ ೭ ॥

ಪಾತಕವನೆಣಿಸದವರೆನ್ನಾತ್ಮಜನನೊಯ್ದು । ಘಾತಕವಗೈದಿರ್ಪರಂದು ।
ಸೂತಕವು ಮಾಣದ್ಯೆ ಸಂಗರದಿ ಶಾಕಿನಿಯ । ಭೂತಕವದಿರ ಬಲಿಯನಿಕ್ಕು॥
॥ ೮ ॥

ಎಂದೆನುತ ತ್ವಷ್ಟೃ ಪದುಳಿಸುತ ವೃತ್ರನ ಸಹಸ । ದಂದವನು ಪೊಗಪೊಗಳುತಿರಲು ।
ಚಂದದಿಂ ದಿನದಿನಕೆ ಬೆಳವುತಿರ್ದನು ತೋಷ । ದಿಂದ ವೃತ್ರಾಸುರನು ಮುದದಿ ॥
॥ ೯ ॥ [೮೦]

ಭಾಮಿನಿ

ಇಳೆಯರಸ ಕೇಳ್ಬಳಿಕಲಸುರನು ।
ಕೆಲವುದಿನಕಳಿದಾಗಲೊಂದಿನ ।
ಖಳಸಭಾಮಂಡಲದಿ ಪೀಠವನೇರಿ ವಿಭವದಲಿ ॥
ಕುಳಿತು ಯೋಚಿಸಿದನು ಸುರೇಂದ್ರನ ।
ಕೊಳುಗುಳದಿ ಸೋಲಿಪುದೆ ಘನವೆಂ ।
ದ್ಹೊಳೆವ ಮೀಸೆಯ ತಿರುವುತುಸುರಿದನಧಿಕ ಹರುಷದಲಿ ॥
॥ ೧ ॥ [೮೧]

ರಾಗ ಸೌರಾಷ್ಟ್ರ ತ್ರಿವುಡೆತಾಳ

ಚಿತ್ತವಿಸಿರಯ್ಯಸುರಪತಿಗಳು । ಉತ್ತಮದ ಬಲು ರಾಜಕಾರ್ಯವ ।
ಬಿತ್ತರಿಪೆನಾವೀಸಿರಿಪೌರುಷ । ವೆತ್ತು ದಿಟದಿ ॥ ॥ ೧ ॥

ಕೊಳುಗುಳದಿ ನಾವಿಂದು ನಿರ್ಜರ । ತಿಲಕನೊಳು ಪೌರುಷದಿ ವಿಜಯವ।
ಗಳಿಸಿದರೆ ನಮ್ಮದಟಗಿದು ಮಂ । ಗಲವು ನೋಡಿ ॥ ॥ ೨ ॥

ಎನುತ ಗದ್ದುಗೆಯಿಳಿದು ಶಸ್ತ್ರಾ । ಸನಶರಾಯುಧವನ್ನು ಧರಿಸುತ ।
ಘನಪರಾಕ್ರಮಿ ಜಡಿವುತವನಿಯ । ಧ್ವನಿಗೆದರಿದಾ ॥ ॥ ೩ ॥ [೮೪]

ಭಾಮಿನಿ

ಏಳಿರೈ ಬಲ್ಗೈಯ ರಾಕ್ಷಸ ।
ರಾಳುಗಳು ಬೇಗದಲಿ ಸಮರಾ ।
ಭೀಳ ದೈತ್ಯಾಧಿಪರು ಸಾಹಸದೇಳಿಗರು ಭರದಿ ।
ಏಳಿರೈ ಬಲ್ದುಡುಕಿ ಸಂಗರ ।
ಕೇಳಿಗೆನಲಾರ್ಭಟಿಸುತಸುರರ ।
ಪಾಳಯವು ಹೂಂಕರಿಸುತೆದ್ದುದು ಕೈದುವನೆ ತುಡುಕಿ ॥ ॥ ೧ ॥ [೮೫]

ಕಂದ

ದರ್ಪದೊಳೀಪರಿಯಿಂದಸು ।
ರರ್ಪಂಥವ ಪಿಡಿದೇಳ್ವುದನೀಕ್ಷಿಸುತಾ ಸಮಯದೊಳಂ ।
ಮುಪ್ಪಿನ ಖಳನೋರ್ವಂ ಮುಂ ।
ದಪ್ಪುದನರಿತಿಂತೆಂದಂ ಮತ್ತವರೊಳ್ ॥ ॥ ೧ ॥ [೮೬]

ರಾಗ ಸಾವೇರಿ ಅಷ್ಟತಾಳ

ಕೇಳಿರೊ । ಮಾತಾ । ಕೇಳಿರೋ ॥ ಪಲ್ಲ ॥

ಕೇಳಿರೊ ಮಾತ ದೈತ್ಯಾಧಿಪರೆಲ್ಲ ।
ಕಾಳಗಕೆನುತೆ ಪೋಗುವದು ಲೇಸಲ್ಲಾ ॥ ಅನುಪಲ್ಲ ॥
ಪೂರ್ವದೊಳಗೆ ಬಲುರಾಕ್ಷಸರು ।
ಪರ್ವತಾರಿಯ ಕೂಡೆ ಜಗಳಗೈದರು ।
ತರ್ವಾಯೊಳಳಿದು ಪೋಗಿಹರು ಕೆಲವರು ।
ಗರ್ವವುಳಿದು ಪಲಾಯನವ ಗೈದಿಹರು ॥ ॥ ೧ ॥

ಭುಜದ ಬಲುಹು ಭಟರಿಂಗಿರುವೊಲು ।
ಕುಜನಕುಠಾರಿ ಅಚ್ಯುತನ ಕೃಪೆಯೊಳು ।

ನಿಜದೊಳವರಿಗೇನು ತೊಡಕುಗಳ್ಬಗಲು ।
ವಿಜಯಗೊಳಿಸುತ ಸಾಕುವನು ನಾಕದೊಳು ॥ ॥ ೨ ॥

ಸರ್ಪಲೋಕದೊಳಿಲಿ ದೊರೆಯಾಗಲಹುದೆ ।
ಪೇರ್ಪಶುಗಳೊಳ್ವ್ಯಾಘ್ರಕುಲವು ಸೋಲುವುದೆ ॥
ಕರ್ಪೂರವಿಕ್ಕಲಗ್ನಿಯು ನಂದುವುದೆ ।
ತೋರ್ಪರೆಂತಖಿಳ ಲೇಖರೊಳು ನೀವ್ ಬರಿದೆ ॥ ॥ ೩ ॥ [೮೯]

ವಾರ್ಧಕ

ಬಂಜೆಮಾತೆಂದರಿಯಬೇಡಿರೈ ಅಮೃತಮಂ ।
ನಂಜು ಚುಂಬಿಪುದುಂಟೆ ದಾಳಿಟ್ಟು ನೀವಮರ ।
ರಂ ಜಯಿಸುವದಟಗರೆ ಸಾಕೆನಲ್ಕಸುರರದನಾಲಿಸದೆ ರೋಷದಿಂದ ।
ಸಿಂಜಿನಿಯನುರೆ ಝಡಿದು ಝೇನಾದಗೆಯ್ಯೆ ದಿ ।
ಕ್ಕುಂಜರಂ ಬೆರಗಾಗೆ ಚತುರಂಗದೊಡನೆ ವೃ ।
ತ್ರಂ ಜಂಭರಿಪು ಪುರವ ನಾಲ್ದೆಸೆಯೊಳಸುರರಿಂ ಕವಿಸಿದನದೇನೆಂಬೆನು॥
॥ ೧ ॥ [೯೦]

ರಾಗ ಭೈರವಿ ಏಕತಾಳ

ಮಾನವೇಂದ್ರನೆ ಕೇ । ಳ್ದಾನವಪತಿಗಳ ।
ಸೇನೆಯು ಕಲ್ಪಾಂ । ಬೋನಿಧಿಯಂದದಿ ।
ಆ ನಗರವನುಂ । ಮಾನದಿ ಕವಿದುವ ।
ಕಾನನವನ್ನುರೆ । ಹಾನಿಯಗೈವರ । ದೇನನೆಂಬೆ ॥ ॥ ೧ ॥

ತೋಟಗಾರರು ಬ । ಲ್ಧಾಟಿನೊಳಗೆ ಮದ ।
ಮೀಟಿಹ ಕರಿಯೊಳ್ಕ । ವಾಟವ ನುಗ್ಗುತ ।
ಈಟಿ ಸಬಳ ಬಿ । ಲ್ಲಾಟದಸುರರ್ಬಲು ।
ಗೋಟೆಯ ಪೊಕ್ಕರೆ । ಲೂಟಿಯಗೈದರ । ದೇನನೆಂಬೆ ॥ ॥ ೨ ॥

ಸೂರೆಯೊಳಮರರ । ಕೇರಿಯ ಬೆದರಿಸಿ ।
ಚಾರುತಟಾಕದ । ನೀರನು ಕದಡುತ ।

ತೋರಕುಚೆದವ । ಯ್ಯಾರೆಯರನು ಮದ ।
ವೇರಿ ತುಡುಕುತಿರೆ । ಹೋರಲಿಕಾಕ್ಷಣ । ವೀರರು ಒದಗಿದ । ರೇನನೆಂಬೆ॥
॥ ೩ ॥ [೯೩]

ಭಾಮಿನಿ

ಕ್ಷೋಣಿಪತಿ ಕೇಳ್ ಭಟರು ಬಲುಸು ।
ತ್ರಾಣದಲಿ ಕೈದುವನು ಧರಿಸುತ ।
ಹಾಣಹಾಣಿಯೊಳೊದಗಿ ಹೋರಾಡುತ ವಿಜಯಸಿರಿಯ ।
ಕಾಣದತಿಭೀತಿಯಲಿ ಮರಳುತ ।
ವಾಣಿಭದ್ರನಿಗರುಹೆ ಕೋಪದಿ ।
ಬಾಣವೃಷ್ಟಿಯ ಸೂಸುತಿದಿರಾದನು ಮದಾಂಧರಿಗೆ ॥ ॥ ೧ ॥ [೯೪]

ರಾಗ ಮಾರವಿ ಏಕತಾಳ

ಕೆರಳುತಲಿಂತೀ ಸರಳಿನ ಸಾರದಿ । ದುರುಳರ ಕೊರಳರಿದು ।
ಉರುಳಾಡಿಸುತಿರೆ ವೃತ್ರನು ಮಿಗೆ ಭೋ । ರ್ಗರೆವುತಲಿಂತೆಂದ ॥
॥ ೧ ॥

ಆರೆಲೊ ಬಲಬಲ್ ವೀರನು ಸಲೆ ಬಿ । ಲ್ಲಾರರೊಳದಟನೆಲ್ಲೈ ।
ಹೋರಾಟವು ತರವಲ್ಲೆಲೆ ಜತನದಿ । ದಾರಿಯ ಬಿಡು ನಮಗೆ ॥
॥ ೨ ॥

ದಾರಿಯ ತೋರುವೆ ನೋಡೆಲೊ ಮಿತ್ರಜ । ನೂರಿಗೆ ಸುಲಭದೊಳು ।
ಕೂರಲಗಿನ ಪರಿವಾರವ ಕೊಡುವೆನು । ಭೋರನೆ ಗಮಿಸುವಡೆ ॥
॥ ೩ ॥

ಸುಮ್ಮನೆ ಹೆಮ್ಮೆಯ ಮಾತಿಲಿ ಫಲವೇನ್ । ಗಮ್ಮನೆ ಮಾರ್ಗವನು ।
ನೀಂ ಮರುಳಾಗದೆ ಬಿಡು ಸಾರಿದೆನೆನ । ಲುಮ್ಮಳಿಸುತ ನುಡಿದ ॥
॥ ೪ ॥ [೯೫]

ಭೋಗಷಟ್ಪದಿ

ಅರರೆ ದನುಜ ನಿಲ್ಲಿದೊಂದು ।
ಶರದಿ ನಿನ್ನ ಶಿರವ ತರಿದು ।
ಭರದಿ ಭೂತನಿಕರಕುಣಿಸಿ । ಹರುಷಬಡಿಸುವೆ ।
ಬರಿಸು ಬಹಳ ಬಲವನೆಂದು ।
ಸುರಿಯಲಸ್ತ್ರಸಾರವನ್ನು ।
ಉರಿಯನುಗುಳಿ ದನುಜ ಧನುವ । ತಿರಿದು ಕೆಡೆದನು ॥ ॥ ೧ ॥

ಕಾರ್ಮುಕವನು ತರಿಯೆ ಕರದಿ ।
ಪೆರ್ಮುಸಲವ ಧರಿಸುತೆರಗೆ ।
ಮಾರ್ಮಲೇವುತದನು ತರಿದ । ಕೂರ್ಮೆಯಿಂದಲಿ ॥
ವರ್ಮವಧಿಕನಾಗಿ ದು ।
ಷ್ಕರ್ಮಿ ತೊಲಗೆನುತ್ತಲಖಿಳ ।
ನಿರ್ಮಲಾಯುಧಗಳನೆರಗ । ಲೊಮ್ಮೆ ಮುರಿದನು ॥ ॥ ೨ ॥

ಅಸಮಬಲನು ಬಳಿಕ ಕೂ ।
ರಸಿಯ ತಿರುಹುತೆರಗಲಾಗ ।
ಕುಸುಬಿ ಸೆಳೆದನವನು ದೈತ್ಯ । ವಿಸರಪಾಲನು ॥
ಮಸಗಿ ರೋಷದಿಂದ ದ ।
ಳ್ಳಸೆವ ಶೂಲವನ್ನು ಬಿಡಲು ।
ನಸುನಗುತ ಭಕ್ಷಿಸಿದ । ನಿಶಿಯಚರನದ ॥ ॥ ೩ ॥

ಪಂಥವೇರಿ ಮಗುಳೆ ಮ ।
ಹಾಂತ ಭುಜವನೊದರಿಸುತ್ತ ।
ಅಂತ್ಯಕಾಲದಭವನದಟ । ನಾಂತು ತಿವಿದನು ।
ಇಂತು ತಿವಿದ ಭರಕೆ ದನುಜ ।
ನಿಂತು ಚೇತರೀಸುತಮರ ।
ತಿಂತಿಣೀಯು ಮನದಿ ಬೆದರು । ವಂತೆ ಹೊಯ್ದನು ॥ ॥ ೪ ॥

ಕಂಡುಕೋಪಶಿಖಿಯು ಮಸಗಿ ।
ಗೆಂಡಸೂಸುತೊದೆಯೆ ಪದದಿ ।
ಚಂಡಸಹಸಿ ಮರಳಿ ತಿವಿದ । ದಂಡೆಯಿಂದಲಿ ॥

ಗುಂಡುಕಲ್ಲಳಿಂದಲಿಟ್ಟು ।
ಪುಂಡುದನುಜ ಕೆಡೆಯೆನಲ್ಕೆ ।
ದಿಂಡತನದಿ ಮುನಿದು ಶಕ್ತಿ । ಗೊಂಡು ಬಡಿದನು ॥ ॥ ೫ ॥ [೧೦೩]

ಭಾಮಿನಿ

ಎಲೆ ಸುಧಾಂಶುಕುಲೋದ್ಭವನೆ ಕೇ ।
ಳಲಘುವಿಕ್ರಮನಿಂತು ಶಕ್ತಿಯ ।
ನೊಲೆದು ಬಿಡಲೊರಗಿದನು ವೀರರ ದೇವ ಮೂರ್ಛೆಯಲಿ ॥
ಹಲುಬಿ ಪಲ್ಗಿರುವುತ್ತಲಿನ್ನೇನ್ ।
ಹಲಬೆನುತ ಮಿಕ್ಕವರು ಶಕ್ರನ ।
ವಲಪಿನೊಡ್ಡೋಲಗದಿ ತಲೆವಾಗುತ್ತಲುಸುರಿದರು ॥ ॥ ೧ ॥ [೧೦೪]

ರಾಗ ಬೇಗಡೆ ತ್ರಿವುಡೆತಾಳ

ಸ್ವರ್ಗಪಾಲಕ ಲಾಲಿಸೈ ನುಡಿಯ । ನಾವೆಂಬುದೇನೆ ॥
ಮೂರ್ಗ ಬಂದಿಹ ತೊಡಕುಗಳ ಜೀಯ ॥ ಪಲ್ಲ ॥

ಬೇರ್ಗಡಿದ ಕುಜದಂತೆ ದೇಹವು । ಮೂರ್ಗಡೆಗೆ ಬಾಗುತಿದೆ ಭಯದಲಿ।
ನೀರ್ಗಳಸಿ ಬಾಯಾರಿಶಭಯದ । ಮಾರ್ಗವನು ತೋರಂಜಿಸದೆ ನೀ ॥
ಅನುಪಲ್ಲವಿ ॥

ದುರ್ಮತಿಗಳಾದ ದೈತ್ಯರು ದಾಳಿಯಿಟ್ಟು ತಮ್ಮ । ವರ್ಮವ ಸಾಧಿಸಿ ಬಹರು ।
ಭೋರ್ಮೊರೆದು ಕಾಲಾಂತಕನವೊಲ್ । ಧರ್ಮಗೇಡಿಗಳೀರ್ಪರವರಿದಿ ।
ರಾರ್ಮಲೆತು ಸಂಗ್ರಾಮಗೈವರೊ । ನೀರ್ಮನೆಯ ದಾತಾರ ಬಲ್ಲನು ॥
॥ ೧ ॥

ವಾರಣಾದಿ ರಥಾಶ್ವಗಳಗೂಡಿ । ಪುರದ್ವಾರದಲ್ಲಿಹ । ತೋರಣವನು ಕಿತ್ತು ಚೂರ್ಮಾಡಿ।

ಕಾರಣವದೇನೋ ತಟಾಕದ । ನೀರೊಣಗಿಸಿ ಮುದದಿ ಮದಸಂ ।
ಪೂರಣೆಯರನು ಪಿಡಿದೆಳವ ವಿ । ಸ್ತೀರಣವನೇನೆಂದು ನುಡಿಯಲಿ ॥
॥ ೨ ॥

ಭ್ರುಕುಟಿಯನು ಗಂಟಿಕ್ಕಿ ಹೂಂಕರಿಸಿ । ಕೋಪಿಸಿ ಬೇಗ । ಶಕಟಸ್ಯಂದನವೇರಿ ಬಿಲ್ ಧರಿಸಿ ।
ಪ್ರಕಟದಿಂ ಧುರವೆಸಗಲೆಮ್ಮಯ । ಮಕುಟವನು ನುಚ್ಚೆಸಗಲವರಿಗೆ ।
ಅಕಟಕಟ ಸಾಕೆಂದು ವಂದಿಸ । ಲಿಕೆ ಕಟಾಕ್ಷದಿ ಬಿಟ್ಟರೆಮ್ಮನು ॥
॥ ೩ ॥

ಜಾಣತನದಿಂ ಪ್ರಾಣವನು ಸಲಹಿ । ತದನಂತರದೊಳಾ । ವಾಣಿಭೆದ್ರಾಖ್ಯನಿಗೆ ಇದ ತಿಳುಹಿ ।
ಕಾಣಿಸಿದೆವಾ ದೈತ್ಯರನು ಮವ । ಹಾಣಹಾಣಿಯೊಳೊದಗಿ ಸೆಣಸಲು ।
ತ್ರಾಣಗುಂದಿಸಿ ಸೋಲಿಸಿದರ್ನಿ । ನ್ನಾಣೆ ನಿಶ್ಚಯದೋರಿಸ್ಯೆ ದಯ ॥
॥ ೪ ॥ [೧೦೮]

ಭಾಮಿನಿ

ಇನ್ನು ತಡವೇನೆಲೆ ಸುರೋತ್ತಮ ।
ಸನ್ನಹವ ಮಾಡೈ ರಣಾಗ್ರಕೆ ।
ಮುನ್ನವೊಡಗೂಡಶ್ವ ರಥಕರಿವಾರ ಪರಿಕರವ ।
ಉನ್ನತದೊಳೇಳಿಸುತ ಡಂಗುರ ।
ವನ್ನು ಸಾರಿಸು ಭಟರ ನಿಳಯಕೆ ।
ಪನ್ನತಿಕೆಯಿಂ ಭೇರಿದುಂದುಭಿಗಳನು ಭೋರ್ಗುಡಿಸು ॥
॥ ೧ ॥ [೧೦೯]

ರಾಗ ಕಾಂಭೋಜಿ ಝಂಪೆತಾಳ

ಎಂದು ಸಾಷ್ಟಾಂಗದಿಂದೆರಗಿ ನಡುಗುವ ದೂತ । ವೃಂದವನು ಕಂಡು ವಾಸವನು ।
ಚಂದದಿಂದಭಯನುಡಿಯಿಂದವರ ಸಂತೈಸು । ತಂದನೆಡಬಲವನೀಕ್ಷಿಸುತ ॥
॥ ೧ ॥

ಕೇಳಿದಿರೆ ಭಟರು ಮತ್ತುರಕಸುರಪಾಲಕರು । ದಾಳಿಟ್ಟಿರುವರು ಗಡಮೀಗ।
ತೋಳಬಿಂಕವ ತೋರುವುತ್ಸಾಹಸಿಗಳೊದಗು । ಕೇಳಿರೈ ಪಾಳಯವಗೊಂಡು॥
॥ ೨ ॥

ಹೊಯ್ಸಿರೋ ಡಂಗುರವ ನಾಲ್ಕುಬೀದಿಗಳ ಪೂ । ರೈಸಿರೋ ನಿಮಿಷಮಾತ್ರದಲಿ ।
ಜೈಸಿರೋ ಪರಬಲವ ಹಿಡಿಹಿಡಿದು ಗೋಣುಗಳ । ಕೊಯ್ಸಿರೊ ದನುಜಪಾಲಕರ ॥ ೩ ॥

ಎಂದು ಬಿಲ್ವಿಡಿದಮರ ವೃಂದವನು ಜತೆಗೊಳಿಸಿ ।
ಹೊಂದೇರಡರ್ದುವಾಸವನು ।
ದುಂದುಭಿಯ ಭೇರಿಕಹಳಾದ್ಯಖಿಳಘೋಷದಿಂ ।
ಸಂದಣಿಯೊಳೆಸೆದನೇನೆಂಬೆ ॥ ॥ ೪ ॥ [೧೧೩]

ರಾಗ ಸೌರಾಷ್ಟ್ರ ತ್ರಿವುಡೆತಾಳ

ಇಂತಿದನು ನೋಡುತ್ತ ಖೇಚರ । ತಿಂತಿಣಿಯು ಸಹ ಹೇಮರಥನತಿ ।
ಪಂಥದಿಂ ಪೊರಮಟ್ಟ ಕಾರ್ಮುಕ । ವಂ ತುಡುಕುತ ॥ ॥ ೧ ॥

ಕೂರಲಗನುರೆ ಮಸೆವುತದಟನ । ಕೂರಸಿಯ ಝಳಪಿಸುತಲಾಕ್ಷಣ ।
ಕ್ರೂರಸೇನನು ಪೊದಗೆ । ಮೊಳಗಿತು । ಘೋರವಗಳು ॥ ॥ ೨ ॥

ಭಲೆ ಶಭಾಸೆಂದಗ್ಗಳಿಸುತಿಹ । ಬಲಶರಧಿಯೊಡಗೊಂಡು ಗಾಢದಿ ।
ಬಿಲುಶರವಗೊಂಡೇರ್ದ ರಥವನು । ಕುಲಿಶಕೇತಾ ॥ ॥ ೩ ॥

ಈಟ ಬಿಲ್ಲುಂಶವನು ಧರಿಸುತ । ತೋಟಿಯೆತ್ತಣದೆನುತಲೊದಗಿದರ್ ।
ನೋಟಕತಿಬಿರಿಸಾಗಿ ಶತ್ರೀ । ಸ್ಕೋಟ ಸುರರು ॥ ॥ ೪ ॥ [೧೧೭]

ಭಾಮಿನಿ

ಅಬ್ಜವಂಶೋದ್ಭವನೆ ಕೇಳ್ಕೈ ।
ಯಬ್ಜನಾಭನ ನೆನೆದು ಶಕ್ರನು ।

ಅಬ್ಜಬಾಂಧವನಂತೆ ಸೇನಾಮಂಡಲದೊಳೆಸೆದು ॥
ಅಬ್ಜನಾದವ ನಿಂದಿಪೋಲ್ ಧ್ವನಿ ।
ಮಬ್ಜರಿವ ಕಾರ್ಮುಕದಿಗರೆಯಲು ।
ಅಬ್ಜಜಾಂಡದ ಭಿತ್ತಿ ಬಿರಿದುದು ಭೀಕರದ ರವಕೆ ॥ ॥ ೧ ॥ [೧೧೮]

ವಾರ್ಧಕ

ಪೇಳಲೇನೆಲೆ ನೃಪತಿಯಮರರಾಟೋಪಮಂ ।
ವ್ಯಾಳಾಧಿಪಂಗರಿದು ವರ್ಣಿಸಲ್ಕತಿರೌದ್ರ ।
ದಾಳುಗಳ್ಕೋಪಾಗ್ನಿಯಾಂತು ಮುಂಭಾಗದೊಳ್ಸೆಣಸಲನುವಾಗುತಿರಲು ॥
ಮೇಳವಿಸುತಾಗ ರಾಕ್ಷಸರಾಳ್ಗಳತಿಕನ ।
ಲ್ದೇಳಿಗೆಯ ಸಾಹಸದೊಳಗಣಿತಾಯುಧಗೊಂಡು ।
ಘಾಳಿಡುತ್ತೊಡನೆ ಚತುರಂಗದೊಳ್ಕೈವೀಸುತೆದ್ದರದನೇನೆಂಬೆನು ॥
॥ ೧ ॥ [೧೧೯]

ಭಾಮಿನಿ

ಕುಮತಿಶಂಭರ ಶಕುನಿಶರಜಿತು ।
ಸಮಿತಿ ವೃಷಭನಪರ್ವನಂಬರ ।
ಪ್ರಮತಿ ಹಯಶಿರ ವಿಪ್ರಜಿತಿಪುಲೋಮಶತಪರ್ವ ॥
ಅಮಿತಬಲ ಹೇತಿಪ್ರಹೇತಿಗ ।
ಳಮರವೈರಿಸುಮಾಲಿಮುಖ್ಯ ।
ಪ್ರಮುಖರೆದ್ದರು ಕೋಟಿ ಸಂಖ್ಯೆಯ ದಾನವೇಶ್ವರರು ॥
॥ ೧ ॥ [೧೨೦]

ರಾಗ ಶಂಕರಾಭರಣ ಮಟ್ಟೆತಾಳ

ದಡಿಗರೇಳುತಿಂತು ಪ । ಲ್ಗಡಿದು ನಲಿವುತ ।
ಕಡಿಕಡಿರೊ ನಿರ್ಜರೇಂದ್ರ । ರೊಡಲನೆನ್ನುತ ।
ಬಡಿಬಡಿರೋ ಬಲುತರಾಸ್ತ್ರ । ಗಡಣವೆನ್ನುತ ।
ಲೊಡನೆ ಹೂಂಕರಿಸಿ ಮೀಸೆ । ಕುಡಿಯ ತಿದ್ದುತ ॥ ॥ ೧ ॥

ಮೇಘವದನನೆತ್ತ ಪೋದನಿಲ್ಲಿ ಕರೆಯಿರೊ ।
ಬೇಗದಿಂದಲವನ ಮೋರೆ । ಬೀಗನಿಳಿಸಿರೊ ॥
ಗೂಗೆಯಂತೆ ನಿಂತು ನೋಳ್ಪ । ನೀಗ ನೋಡಿರೈ ।
ಮೂಗರೇನಿವರಿಗಾದ । ರೋಗವೇನಿರೈ ॥ ॥ ೨ ॥

ಮಿಂಚಿನಲಗನೆಚ್ಚುತಮರ । ಸಂಚಯವನು ।
ಪಂಚಪಾಡಮಾಡಿಸಲಿಸಿ ವಾಂಛಿತಗಳನು ।
ಕೊಂಚ ಕೆಣಕಿ ಬಿಡಲುಬಾರದೆಂದು ದೈತ್ಯರು ।
ಪಂಚವಕ್ತ್ರನಂತೆ ಗರ್ಜಿಸಿದರವದಿರು ॥ ॥ ೩ ॥

ಇಂತು ಗಜರುತಿರ್ಪ ದೈತ್ಯವ್ರಜವ ನೋಡುತ ।
ಪಂಥವೇರಿ ಕರಿರಥಾಶ್ವ ನಿವಹಗೂಡುತ ॥
ಹೊಂತಕಾರಿಗಳು ಶರೌಘವನ್ನು ತೊಡುತಲಿ ।
ನಿಂತರಾಗಸುರಪನಾಜ್ಞೆಯಂತೆ ಮುದದಲಿ ॥ ॥ ೪ ॥ [೧೨೪]

ರಾಗ ಭೈರವಿ ತ್ರಿವುಡೆತಾಳ

ಆಯಿತಾಗ । ಕೊಳುಗಳ । ವಾಯಿತಾಗ ॥ ಪಲ್ಲ ॥

ಏನನೆಂಬೆನು ರಣದ ಪರಿಯನು । ದಾನವರು ಸುರರೊಡನೆ ಹಳಚುತ।
ಕಾಣಿಸಲು ಸರಳುಗಳ ಮಳೆಯನು । ಕಾಣುತಲಿ ಸುಮನಸರು ನಿಮಿಷದಿ।
ಕೇಣವಿಲ್ಲದೆ ಹಾನಿಗೈವುತ । ದಾನವರ ಪಡೆಗಳನು ಶಸ್ತ್ರವಿ ।
ತಾನದಲಿ ಮುಸುಕಿದರು ಶೌರ್‍ಯದೊ । ಳಾತಿಯಿತಾಗ ॥ ॥ ೧ ॥

ಆ ಮಹಾಮರರೆಸೆದ ಶರವನು । ಯಾಮಿನೀಚರರದನು ತರಿವುತ ।
ಭೀಮವಿಕ್ರಮರಸ್ತ್ರಶಸ್ತ್ರದಿ । ತೋಮರಾಯುಧಮುಸಲಮುದ್ಗರ ।
ನೇಮವಿಲ್ಲದೆ ಎಸೆವುತಿರಲದ । ಹೋಮಿಸಿದರೊಂದೇ ಕ್ಷಣಾರ್ಧದಿ ।
ಶ್ರೀಮುರಾರಿಯ ಶರಣರದಟಿನೊ । ಳಾಯಿತಾಗ ॥ ॥ ೨ ॥

ಮತ್ತೆ ಖಳರತ್ತಿತ್ತಗಲದ್ಯೆ । ವತ್ತು ಲಕ್ಷವು ಮೊತ್ತ ಜತೆಗೂ ।
ಡುತ್ತ ನಿರ್ಜರ । ಮೊತ್ತಕಿದಿರಾಗುತ್ತ ಸುತ್ತಲು ।

ಮುತ್ತುತಲಿ ಛಲಭಿತ್ತಿಗರು ಹೊ । ಯ್ಯುತ್ತ ಶಕ್ತಿಯ ಕಿತ್ತು ಪಡೆವ ।
ತೊತ್ತಿನಲಿ ಬೀಳುತ್ತಲಿತ್ತಿತ್ತಂಡ ಸಮರದೊ ॥ ಳಾಯಿತಾಗ ॥
॥ ३ ॥ [೧೨೭]

ವಾರ್ಧಕ

ತರಿತರಿದು ಕೆಡೆದ ಕಾಲಾಳ್ಗಳಿಂ ತೋಳ್ಗಳಿಂ ।
ಮುರಿಮುರಿದು ಬಿದ್ದ ಕೈಕಾಲ್ಗಳಿಂ ಸಾಲ್ಗಳಿಂ ।
ತರತರದಿ ಕವಿದ ಉರಿಕೋಲ್ಗಳಿಂ ಧೂಳ್ಗಳಿಂ ಬಿರಿದುರದ ಕರಿಗೊರಳಿನಿಂ॥
ಮೆರೆಮೆರೆದು ನಲಿವ ರಣಭೂತದಿಂ ಪ್ರೇತದಿಂ ।
ಭರಭರದಿ ನಭಕಡರ್ವ ರುಂಡದಿಂ ಖಂಡದಿಂ ।
ಸುರಿಸುರಿವ ಅರುಣಾಂಬುಮಯದಿಂದ ಶರದಿಂದ ಭಯದಿಂದ ಕಣ
ಮೆರೆದುದು ॥ ೧॥ [೧೨೮]

ರಾಗ ಕೇದಾರಗೌಳ ಝಂಪೆತಾಳ

ಇಂತುಭಯ ತಿಂತಿಣಿಗಳು । ನಿಂತು ಬಲು । ಪಂಥಗಳನಾಂತ್ಹೆಣಗಲು ।
ಸಂತವಿಸಿ ವೃತ್ರನಂದು । ರಿಪುಭಟರ । ನುಂ ತರಿವುತಿರ್ದ ನಿಂದು ॥
॥ ೧ ॥

ಒದಗಿದದಟನನು ಕಂಡು । ಹೇಮರಥ । ಮುದದಿ ಧನುಶರವಗೊಂಡು।
ವಿಧವಿಧದಿ ಶರವೆಚ್ಚುತ । ಮಾರಾಂತು । ಮದಮುಖನೊಳೆಂದ ನಗುತ॥
॥ ೨ ॥

ಆರೆಲೋ ವೀರದನುಜ । ನಮ್ಮೊಡನೆ । ಹೋರುವದಟಗನು ಸಹಜ ।
ಆರಾಜ್ಞೆಯಿಂದ ನೀನು । ಸದೆದೆಯೊ । ಭೂರಿಪರಿವಾರಗಳನು ॥
॥ ३ ॥

ಯುದ್ಧದಲಿ ನಿಂತರಿಗಳ । ತರಿವುದೇ । ಪದ್ಧತಿಯು ವೀರರ್ಕಳ ।
ಬುದ್ಧಿವಂತನು ನೀನು ಭಳಿರೆ । ಇದಿರಾಗು । ಬದ್ಧ ಶೌರ್ಯಂಗಳು ಇರೆ ॥
॥ ೪ ॥

ಒಂದಲಗಿನಿಂದ ನಿನ್ನ । ಉರವ ಬಗಿ । ವಂದಗಳನಿಂದು ನಮ್ಮ ।
ಮುಂದೆ ನೀ ನಿಂದು ನೋಡು । ವಿಕ್ರಮಗ । ಳಿಂದ ಸಂಗರವ ಮಾಡು ॥
॥ ೫ ॥

ಎನುತ ಬಲುದನುಜ ಬಲವ । ತರಿತರಿದು । ಅನುಗೊಳಿಸಿದನು ವಿಲಯವ।
ಕಿನಿಸಾಂತಿರಲ್ಕೆ ವೃತ್ರ । ಭಳಿರೆಂದು । ವಿನಯದಿಂದೆಂದ ನಗುತ ॥
॥ ೬ ॥ [೧೩೪]

ರಾಗ ಕಾಂಭೋಜಿ ಝಂಪೆತಾಳ

ಆರೆಲವೊ ಖಚರ ನೀ । ನೀ ರೀತಿಯಲಿ ನಮ್ಮ । ಭೂರಿಬಲವನು ಸೂರೆಗೈದು ।
ಪಾರಗಾಣಿಸಿದೆನೆಂಬಗ್ಗಳಿಕೆಯನು ತೋರು । ತೋರೆನುತೆಚ್ಚನಸ್ತ್ರವನು ॥
॥ ೧ ॥

ಎಸೆದಲಗನುರೆ ಕಡಿದು । ನಸುನಗುತಲೆಂದನೆಲೆ । ಅಸುರ ಕೇಳಾರಾದಡೇನು॥
ಎಸೆವ ಪೊಸಮಸೆ ವಿಶಿಖದಲಿ ಯುದ್ಧಗೈದು ಪರಿ । ಕಿಸಬಹುದು ನಮ್ಮ ಒಸಗೆಯನು ॥ ೨ ॥

ಮಾತಿನಲಿ ಜಾಣರ್ನೀವೆಂಬುದಾನರಿತಿಹೆನು । ನೀತಿಯಲ್ಲೆನ್ನ ಸಂಗರವು॥
ಕಾತರಿಸದೈದು ನಿನ್ನಯ ಸದನಕೆನಗೆ ಪುರು । ಹೂತನೆಲ್ಲಿಹ ತೋರು ಜವದಿ ॥ ॥ ೩ ॥

ಕರದೊಳೆಳೆಗರುವನೆತ್ತಲು । ಹೆಳವನಾಗಿ ಮದ । ಕರಿಯು ಜೋಲಿಪೆನೆಂಬುದೇನು ।
ಧುರದಿ ಎಮ್ಮೊಳಗುಳಿದ ಮೇಲೆ ನೀ ಸಹಸದಲಿ । ಸುರಪತಿಯ ಕಣಕಬಹುದ್ಯೆಸೆ॥
॥ ೪ ॥

ಮದಕರಿಯೊಳೆಣೆಯಹಡೆ । ಮದಗಜವೆಹೊರತು ಬಲು । ಮುದಿವೃಷಭನಿದಿರಾದಡಹುದೇ ॥
ಕದನ ನಿನ್ನಿಂದಪ್ಪುದಲ್ಲ ಶಕ್ರನಿಗೆನ್ನ । ಇದಿರು ಬರಹೇಳು ಬೇಗೆನಲು ॥
॥ ೫ ॥ [೧೩೯]

ರಾಗ ಭೈರವಿ ಏಕತಾಳ

ಇನಿತಧಟಿರೆ ನಿನ್ನೊಳಗೇ । ಈ । ಕಣೆಯನು ಪರಿಕಿಸು ಬ್ಯಾಗೆ ।
ಎನುತಲಿ ತೆಗೆದೆಸೆಯಲ್ಕೆ ಖಂ । ಡನೆಗೈದನು ನಿಮಿಷಕ್ಕೆ ॥ ॥ ೧ ॥

ಕಂಡದ್ರಿಯ ಬಾಣವನು । ಕೋ । ದಂಡಕಿಟ್ಟೆಚ್ಚಲ್ಕದನು ।
ಚಂಡ ಸಹಿಸಿ ಕುಲಿಶದೊಳು । ಅದ । ಖಂಡಿಸಿ ಕೆಡೆದ ಘಾತಿಯೊಳು ॥
॥ ೨ ॥

ಉರಗಾಸ್ತ್ರವ ತೆಗದೆಸೆಯೆ । ಖಳ । ಗರುಡಾಸ್ತ್ರದೊಳದ ತರಿಯೆ ।
ವರವಹ್ನಿಯ ಶರವಿಡಲು । ಅದ । ವರುಣಾಸ್ತ್ರದಿ ನಂದಿಸಲು ॥
॥ ೩ ॥ [೧೪೨]

ರಾಗ ಶಂಕರಾಭರಣ ಮಟ್ಟೆತಾಳ

ಪೂತು ಮಝರೆ ಭಾಪು ದನುಜನಾಥ ಕೇಳೆಲ ।
ಭೂತಳಾದೊಳಧಿಕ ದಿಟ್ಟ ಶೌರ್ಯನಹೆ ಭಲ ॥
ಭೀತಿಯುಳಿದು ಪರಿಕಿಸೀಗ ಪೊಸತು ಶರವನು ।
ಆತುಕೊಳ್ಳೆನುತ್ತ ಬಲ್ಪಿನಿಂದಲೆಚ್ಚನು ॥ ॥ ೧ ॥

ಬಿರುಸಿನಿಂದ ಉರಿಯನುಗುಳಿ ಬರುವ ಶರವನು ।
ತರಿದು ಕರದೊಳೊಂದು ಶಕ್ತಿ ಧರಿಸುತೆಂದನು ॥
ಮರುಳು ಖಚರ ಕೇಳು ಕೆಲಕೆ ಸಾರ್ನಿನೆಂದಿರೆ ।
ಬರಿದೆ ಗದ್ದಲಿಸುವೆ ಸತ್ತ್ವ ಪರಿಕಿಸಾದರೆ ॥ ॥ ೨ ॥

ಎಲ್ಲಿ ನಿನ್ನ ಬಲವು ಗೆಣೆಯರಿಲ್ಲಿ ಬರಿಸಿಕೊ ।
ಸುಳ್ಳಿದಲ್ಲ ದಳದಪತಿಯನಿಲ್ಲಿ ಕರೆಸಿಕೊ ॥
ಸೊಲ್ಲಿಸುತ್ತೀ ತೆರದಿ ಖಳನು ಶಕ್ತಿ ನೆಗಹುತ ।
ಗುಲ್ಲಿನಿಂದಲಿಟ್ಟ ಖಚರನಳ್ಳೆಗಣೆವುತ ॥ ॥ ೩ ॥ [೧೪೫]

ಭಾಮಿನಿ

ಶಕ್ತಿಯಲಿ ಖಳನಿಂತು ಭೋರ್ಗುಡಿ ।
ಸುತ್ತಲೆರಗಲ್ಕಾಗ ಬಾಯೊಳು ।
ರಕ್ತವನು ಕಾರುತ್ತ ಕಣದಲಿ ಖೇಚರೋತ್ತಮನು ॥
ಅತ್ತು ಮೂರ್ಛೆಯೊಳಿರಲಿಕದ ಕಾ ।
ಣುತ್ತ ಖತಿಯಲಿ ಕ್ರೂರಸೇನನು ।
ಅಸ್ತ್ರವನು ಸೂಸುತ್ತ ಮಾರಾಂತೆಂದ ದೈತ್ಯನೊಳು ॥ ॥ ೧ ॥ [೧೪೬]

ರಾಗ ತುಜಾವಂತು ಮಟ್ಟೆತಾಳ

ಭಾಪುರೇ ಮದಾಂಧವೀರನೇ । ಚಾಪವಿಡಿದು ಸಮರಕಿದಿರು ನಿಲ್ಲು ಗಮ್ಮನೇ
॥ ಪಲ್ಲ ॥

ಶಾನೆ ಬಲವ ಗೆಲ್ವ ಗರ್ವದಿ । ಬಳಿಕ ನೀನು । ಹೇಮರಥನ ಸದೆದ ಗಮನದಿ ।
ಕಾಮಿಸುತ್ತ ಹಿಗ್ಗದಿದಿರಿ.। ಗಾನು ಬೇಗ ತೊಲಗಬಿಡೆನು ।
ಹೀನಬಲನೆ ನಿಮಿಷಕರ್ಕ । ಸೂನುಪುರದಿ ನಿನ್ನನಿಡುವ ।
ಜಾಣತನವ ನೋಡು ಬೇಗ ॥ ಭಾಪುರೇ ॥ ॥ ೧ ॥

ಏಳು ಹಯನ ಪಡೆವರ್‍ಯಾರೆಲಾ । ತೃಷೆಗೆ ಮತ್ತೆ ।
ಹಾಲಹಲವನುಂಬರ್‍ಯಾರೆಲಾ।
ನೀಲಗೊರಳನಕ್ಷಿಯುಷ್ಣ । ದಾಳಿಯುಳಿದನಾವನಮರ ।
ಪಾಲರೊಡನೆ ತರುಬಿಯುಳಿದ । ಖೂಳರುಂಟೆ ತೊಲಗು ತೊಲಗು ॥ ಭಾಪುರೇ॥
॥ ೨ ॥

ಆದಡೆಲವೊ ದೈತ್ಯ ಲಾಲಿಸು । ಸಮರದೊಳಗೆ । ಕಾದುವವದಟನೆನಗೆ ತೋರಿಸು ।
ಭೇದಿಸೆನ್ನ ಶರವನೆಂದು । ಕ್ರೋಧದಿಂದ ಪೂಡಿ ಕಣೆಯ ।
ಸೇದಿ ಕರ್ಣಕೆತ್ತಿ ಬಿಡಲು । ಮೋದದಿಂದ ಕಡಿಯೆ ಚೂರ್ಣ ।
ವಾದುದಲಗು ಬಳಿಕ ನುಡಿದ ॥ ಭಾಪುರೇ ॥ ॥ ೩ ॥ [೧೪೯]

ರಾಗ ಸೌರಾಷ್ಟ್ರ ತ್ರಿವುಡೆತಾಳ

ತೀರಿತೇ ನಿನ್ನಗ್ಗಳಿಕೆ ಧುರ । ಧೀರಗಂಧರ್ವನೆ ಮಹೋನ್ನತ ।
ವೀರನಾಗಿರೆ ಗಳಹಿ ಫಲವೇ । ನೀ ರೀತಿಯಲಿ ॥ ॥ ೧ ॥

ಅಪರಿಮಿತ ಖಗಜಾಲದಲಿ ಕೈ । ಚಪಲವನು ತೋರುವುದು ವೀರರ ।
ಸುಪರಾಕ್ರಮದೇಳಿಗೆಗೆ ಬಲ್ । ಸುಫಲ ನೋಡೈ ॥ ॥ ೨ ॥

ಅತಿಬಲಾಢ್ಯ ನೀನಾಗಲೀ ಗದೆ । ಹತಿಯ ತಡಕೊಳ್ಳೆನುತ ವೃತ್ರನು ।
ಅತಿಶಯದೊಳೆರಗಲ್ಕೆ ತರಿದನು । ಖತಿಯೊಳಂದು ॥ ॥ ೩ ॥

ತುಂಟ ಖಳ ನೀ ತೊಲಗೆನಲು ಬಲು । ತಂಟೆಗೆಯ್ದುಮ್ಮಳಿಸಿ ಬರ್ಪೆಯ।
ಗಂಟಲರಿವೆ ನೋಡೆಂದು ತರುಬಿದ । ನೆಂಟು ಶರದಿ ॥ ॥ ೪ ॥

ಬಿರುಸಿನಿಂ ಬಹ ಮಾರ್ಗಣೆಯನುರೆ । ತರಿದು ತಾಮಸಿಚರನು ಮುಷ್ಟಿಯೊ।
ಳೊರಗೆನುತ ತಿವಿಯಲ್ಕೆ ಬಿದ್ದನು । ಮರೆದು ತನುವ ॥ ॥ ೫ ॥ [೧೫೪]

ಭಾಮಿನಿ

ಏನನೆಂಬೆನು ದೊರೆಯೆ ವೀರರ ।
ಜಾಣನಿಂತೊರಗಲ್ಕೆ ಖತಿಯಲಿ ।
ದಾನವಂಗಿದಿರಾಗುತಂಜದರಧಿಕವಿಕ್ರಮರು ॥
ಆನನದ ಕಂದಿನಲಿ ಶಕ್ರ ದು ।
ಮ್ಮಾನದಿಂದಿರೆ ವಜ್ರಕೇತನು ।
ತಾ ನಿರೀಕ್ಷಿಸುತಾಗ ಬಿಲ್ವಿಡಿದೆಂದನೊಲವಿನಲಿ ॥ ॥ ೧ ॥ [೧೫೫]

ರಾಗ ಕೇದಾರಗೌಳ ಝಂಪೆತಾಳ

ಸಂತಸದಿ ಲಾಲಿಸಯ್ಯಾ । ಮನಸಿನೊಳು । ಚಿಂತಿಸುವುದ್ಯಾಕೆ ಜೀಯಾ॥
ನೀಂ ತಳುವದಾಜ್ಞೆ ನೀಡೈ । ಕರ್ಬುರರ । ತಿಂತಿಣಿಯ ಎಸುವೆ ನೋಡೈ॥
॥ ೧ ॥

ಹೇನಹತಿಪುದಕ್ಕೆ ದಿವ್ಯ । ಬಾಣವ್ರಾತಕೆ ।
ಜಾಣತನವ ನೋಡು ನಿಲ್ಲು । ನಿಲ್ಲು ಸಮರಕೆ ॥ ॥ ೩ ॥

ಹುಡುಗ ನೀನೆಂದೆನುತ ಕಯ್ಯ । ತಡೆವರೆನ್ನೊಳು ।
ಕಡುಹ ತೋರಿ ಮಿಡುಕಿ ಬರ್ಪೆ । ಭಾಪು ಭಳಿರೆಲೋ ।
ದೃಢದ ಸತ್ತ್ವವಿರಲು ಎನ್ನೊ । ಳೊದಗೆನುತ್ತಲಿ ।
ಘುಡುಘುಡಿಸಿ ಬಡಿದ ಮುಷ್ಟಿ । ಕಡುಹಿನಿಂದಲಿ ॥ ॥ ೪ ॥ [೧೭೨]

ಭಾಮಿನಿ

ಎಲೆ ಕ್ಷಪಾಕರಕುಲಜ ಕೇಳ್ನಿಜ ।
ಶಿಲೆಗೆ ಸಿಡಿಲಪ್ಪಳಿಸಿದಂದದಿ ।
ಖಲನು ತಿವಿಯಲ್ಕಾಗ ಧೊಪ್ಪನೆವುರುಳಿ ಮೂರ್ಛೆಯಲಿ ॥
ಬುಳುಬುಳಿಪ ನೆತ್ತರದಿ ಮಲಗಿರೆ ।
ಬಳವಿಗೆಯ ಸಂತಸದಿ ಖಳನಿರೆ ।
ತಿಳಿದು ರೋಷಭ್ರುಕುಟಿಬದ್ಧದಿ ಶಕ್ರನಿದಿರಾದ ॥ ॥ ೧ ॥ [೧೭೩]

ರಾಗ ಕಾಂಭೋಜಿ ಅಷ್ಟತಾಳ

ಎಲವೊ ಯಾಮಿನಿಚರ ಕೇಳಿತ್ತ । ನಿನ್ನ ।
ಬಲುಮೆಯನೆನಗೆ ತೋರಿಸದೆತ್ತಾ ।
ಘಳಿಲನೈದುವೆ ನಿಲ್ಲು ಸಮರಕೆ । ಪಿಂತೆ । ॥ ೧ ॥
ಬಲವಿದ್ದಡೊದಗಿಸೀ ಸಮಯಕೆ ॥

ಭಳಿರೆ ಬಿಡೌಜ ನಿನ್ನದಟನು । ಸುಡು ।
ಬಲುಮೆಯಿಂದಲಿ ಎನ್ನಗ್ರಜನನ್ನು ।
ಅಳವಿಯೊಳಗೆ ತರಿದಂದವ । ತೋರು । ॥ ೨ ॥
ಅಳುಕದೆನ್ನೊಳು ನೋಳ್ಪೆ ಚಂದವ ॥

ಕ್ರೂರಮತಿಯೆ ಸತ್ತ್ವವಿರೆ ತೋರು । ಇಂಥ ।
ಪಾರುಪತ್ಯಗಳ ಕೊಟ್ಟವರ್ಯಾರು ।
ತೀರಿಸುವೆನು ನೋಡೊಂದಂಬಲಿ । ನೀನು । ॥ ೩ ॥
ವಾರೆಯಾಗದಿರೆನ್ನ ಇದಿರಲ್ಲಿ ॥

ಗೋತ್ರರಿಪುವೆ ನೀ ಕೇಳಾದಡೆ । ಸೇನೆ ।
ಗೋತ್ರದೊಳ್ ಬಿದ್ದುದ ನೋಡದೆ ।
ಗಾತ್ರವ ಕಳಚಲಿಕೀಸದೆ । ನಿನ್ನ ।
ಗೋತ್ರವ ಸಲಹು ನಾ ಸಾರಿದೆ ॥ ॥ ೪ ॥

ಹರನು ಬಂದಡ್ಡೈಸಲಿಂದಿಲಿ । ಮುರ ।
ಹರನೆ ಮಾರಾಂತಡೀ ಹವದಲಿ ।
ದುರುಳ ಕೇಳ್ನಿನ್ನ ಹರಣವನ್ನು । ತೆಗೆ ।
ದುರುಹುವಂದವ ನೋಡಬಹುದಿನ್ನು ॥ ॥ ೫ ॥

ಗೌರೀಶಗಿದಿರಾಹೆನೆಂಬಂಥ । ಬಲು ।
ಗೌರವ ಸಾಕು ಸೈರಿಸು ಭ್ರಾಂತ ।
ಶೌರಿಯವಿರಲು ತೋರಿಸು ನೀನು । ಬಾಯ ।
ಪೌರಾಣದಿಂ ಬಹ ಫಲವೇನು ॥ ॥ ೬ ॥

ಎನುತುಸುರುತಲಿ ಗೀರ್ವಾಣನ । ಶರಾ ।
ಸನವ ತೊಡಿಸಿ ನಿಶಾಟನು ತನ್ನ ।
ಘನಪರಾಕ್ರಮದಿ ಶಕ್ತಿಯಗೊಂಡು । ಧಿಣಿ ।
ಧಿಣಿಲೆನುತೆರಗಿದ ಖತಿಗೊಂಡು ॥ ॥ ೭ ॥ [೧೮೦]

ವಾರ್ಧಕ

ವಿಧುಕುಲಾರ್ಣವ ವಿಧುವೆ ಲಾಲಿಸೈ ಕಡುಮುಳಿದು ।
ಮದಮುಖನು ತಿರುಹುತೆರಗಿದ ಶಕ್ತಿಘಾತದಿಂ ।
ದುದುರಿತಿಳೆಗನಿಮಿಷನ ಕರದ ಬಿಲ್ಬತ್ತಳಿಕೆ ಕವಚ ಮುಂತಾಗಿ ಬಳಿಕ ॥
ಉದುರಿತೇನೆಂಬೆ ಉಡುಗಿ ಕರದೊಳ್ ಮಸ್ತ ।
ಕದಿ ವಿಧೂಬಿಂಬದಂತೆಸೆವ ಮಣಿಕಿರೀಟದ ಹರಳ್ ।
ಕೆರಳಿ ತನುಕಂಪಿಸುತ ತನಿರಕ್ತ ಝೋಂಪಿಸಲ್ ಮೆಯ್‌ಮರೆದು
ಪವಡಿಸಿದನು ॥ ॥ ೧ ॥ [೧೮೧]

ಹಸಿದ ಹುಲಿಗುಂಪಿನಂತೆ । ನಿಂದಿರ್ಪ । ಅಸಮಬಲರುಗಳ ಮುಂತೆ ।
ಹಸುಳೆ ನೀನೆಂತು ರಣಕೆ । ನಿಂತು ಶರ । ವೆಸೆವೆಯ್ಯೆ ಸಹಸ ಸಾಕೆ ।
॥ ೨ ॥

ದುಷ್ಟ ಮೃಗವೆಷ್ಟು ಇರಲೂ । ಹರಿಯ ಕಡು । ದಿಟ್ಟತನಕಿದಿರೆ ಹೇಳು ।
ತಟ್ಟನೀ ಖಳರ ಹವಕೆ । ಎನ್ನುವನು । ಬಿಟ್ಟು ನೋಡ್ಯೆ ಪರಾಕೆ ॥
॥ ೩ ॥

ವೀರ ಕೇಳಧಿಕಬಲರು । ಸೋತಿಹರು । ಕ್ರೂರಸೇನಾದ್ಯಖಿಳರು ।
ಘೋರರಿಪುಮೋಹರದೊಳು । ನೀ ಸೆಣಸ । ಲಾರೆಯ್ಯೆ ವತ್ಸ ಕೇಳು ।
॥ ೪ ॥

ಅಖಿಳ ಸುಮದಲರನುಂಡು । ಸತತ ಬಲು । ಸುಖದೊಳಿರ್ಪಳಿಯ ಹಿಂಡು ।
ಸಕಲಸವಿಯಂತೆ ಉಣಲು । ಸಂಪಿಗೆಯ ಮಕರಂದ ಲೇಸೆ ಹೇಳು ।
॥ ೫ ॥

ಅಪ್ಪಳಿಸಿ ಅರಿಬಲವನು । ರಣಹದ್ದಿ । ಗೊಪ್ಪಿಸುವೆನವರೊಡಲನು ॥
ದೆಪ್ಪನಂತಿಹ ವೃತ್ರನಾ । ಸಂಹರಿಸಿ । ಬಪ್ಪ ಘನವೆನಗೆತ್ತಣ ॥ ॥ ೬ ॥

ಎನುತ ಹೊಂದೇರನೇರಿ । ರಕ್ಕಸರ । ಮನಕೆ ಬಲುಭಯವ ಬೀರಿ ।
ಘನತರದಿ ಬಾಣಗಳನೆಸೆದು । ವೃತ್ರನೆಂ । ಬನ ಮುಸುಕುತೆಂದ ಮುಳಿದು ।
॥ ೭ ॥[೧೬೨]

ಭಾಮಿನಿ

ನಿಲ್ಲೆಲವೊ ಕ್ರವ್ಯಾದ ನಮ್ಮಿದಿ ।
ರಲ್ಲಿ ತೋಟಿಯನೆಸಗಿ ಬಳಿಕೀ ।
ಬಲ್ಲಿಕೆಯನು ತೋರಬಹುದೆಂದೆನುತ ರೋಷದಲಿ ॥
ಬಿಲ್ಲ ಝೇಂಕೃತಿಗೆಯ್ಯೆ ಭಟರೆದೆ ।
ತಲ್ಲಣಿಸಿ ಧಿಗಿಲೆನಲು ವೃತ್ರನು ।
ದಳ್ಳುರಿಯ ದಾಡೆಯಲಿ ಸುರಿಸುತ್ತೆಂದ ಮಾರಾಂತು ॥ ॥ ೧ ॥ [೧೬೩]

ರಾಗ ಘಂಟಾರವ ಅಷ್ಟತಾಳ

ಭಾಪುರೇ ನಿಲ್ಲು ನಿಲ್ಲು ಸಂಗರಕೀಗ । ಪೋಪುದೆತ್ತಣವೆನ್ನ ಶರಗಳ ।
ಮಾಪುಗೊಳ್ಳೆನಲೆಂದನು ॥ ॥ ೧ ॥

ಫಡಫಡೆಮ್ಮಯ ಸೇನೆಗಳನು ಗೆಲ್ದ । ಕಡುಹನೆನ್ನೊಳು ತೋರೆನುತ್ತಲಿ ।
ಕಡುಪರಾಕ್ರಮಿ ಮುಸುಕಿದ ॥ ॥ ೨ ॥

ವೀರರೆಲ್ಲರಂಜಿರ್ಪರೆನ್ನಳವಿಯೊಳ್ । ಪೋರ ನಿನ್ನಿಂದಪ್ಪುದೇನ್ ಕೆಲ ।
ಸಾರು ಸಾರೈ ಸುಮ್ಮನೆ ॥ ॥ ೩ ॥

ಬಲಯುತರನ್ನು ಗೆಲ್ದ ಗರ್ವವನೀಗ । ಇಳುಹುವೆನು ನೋಡಾದಡೊಂದೇ।
ಅಲಗಿನೊಳಗೆಂದೆಚ್ಚನು ॥ ॥ ೪ ॥

ಅಲ್ಪ ಮಾತಿನಿಂದೆಳೆ ಪೆಣ್ಗಳಿದಿರಿನೊಳ್ । ಬಲ್ಪಿನಿಂದಗ್ಗಳಿಸಿದೋಲ್ಮತಿ ।
ದಪ್ಪಬೇಡೆನ್ನಿದಿರೊಳು ॥ ॥ ೫ ॥ [೧೬೮]

ರಾಗ ಶಂಕರಾಭರಣ ಮಟ್ಟೆತಾಳ

ಎಲವೊ ದೈತ್ಯ ಎನ್ನೊಳಿನಿಂತು । ಸಲುಗೆಯೇನೆಲಾ ।
ತಲೆಗೆ ಪಿತ್ತವಡರಿದಂತೆ । ಗಳಹಬೇಡೆಲಾ ॥
ಬಲುಮೆಯು ಬೇಡೀಗಳೆನ್ನ । ಅಳವಿ ನೋಡೆಲಾ ।
ಬಲಿಯಗೊಡುವೆ ನಿನ್ನ ಭೂತ । ಗಳಿಗೆ ನಿಲ್ಲೆಲಾ ॥ ॥ ೧ ॥

ಯಾತಕೆಲವೊ ಹುಡುಗ ಬರಿದೆ । ಹೆಮ್ಮೆಯಾಡುವೆ ।
ನೀತಿಯಲ್ಲ ನಿನಗೆ ತೃಣವ । ಪರಿದು ಸಾರುವೆ ॥
ಜಾತಿಗಾರರಿರ್ದರೊಡನೆ । ಕರೆಸಿಕೊಳ್ಳೆಲಾ ।
ದಾತನೆಲ್ಲಿ ಪೋದ ಧುರಕೆ । ಬರಿಸು ಬೇಗೆಲಾ ॥ ॥ ೨ ॥

ಏನಲಾ ದುರಾತ್ಮ ನಿನಗೆ । ನಾನು ಸಾಲದೆ ।
ಆ ಮಹಾಬಿಡೌಜನನ್ನು । ಬರಿಸಿಕೊಂಬುದೆ ॥

ಭಾಮಿನಿ

ನಿಟ್ಟಿಸುತ್ತೀಪರಿಯನಮರರು ।
ಹೊಟ್ಟೆಯನು ಹೊಯ್ಕೊಳುತ ಚೆಲ್ಲಲು ।
ಕೆಟ್ಟುದಿಂದಿನ ಕೆಲಸವೆನುತೋಡಿತು ನಭಸ್ತೋಮ ॥
ಬಟ್ಟೆಯರಿಯದೆ ಕೆಲರು ಹೆಮ್ಮರ ।
ನೊಟ್ಟೆಯನು ಪೊಗೆ ಶಿವನು ತರ್ಜನಿ ।
ಬೆಟ್ಟ ನಾಸದೊಳಿಟ್ಟು ತೊಲೆದಾಡಿದನು ಮಸ್ತಕವ ॥ ॥ ೧ ॥ [೧೮೨]

ವಾರ್ಧಕ

ಧುರದಿ ನಿರ್ಜರರ ಬಡಿವುತಲಿಂತು ನಲವಾಂತು ।
ಭರಿತಸಂತೋಷದಿಂದಣೆಯುತ್ತ ಕುಣಿಯುತ್ತ ।
ಅರಿಗಳಿನ್ನೆಮಗಿಲ್ಲವೆಂದರಿದು ಮಿಗುವರಿದು ಶಂಬರಾದಿಗಳು ಮುದದಿ ॥
ಮೊರೆದು ಘರ್ಜಿಸಿ ಮಹಾರೋಷದಿಂ ತೋಷದಿಂ ।
ಸುರಗಿ ಬಿಲ್ಬಾಣಾದಿ ಶಸ್ತ್ರಗಳ ಅಸ್ತ್ರಗಳ ।
ಧರಿಸಿ ನಿರ್ಜರಪುರಕೆ ದಾಳಿಟ್ಟು ಸಾಲಿಟ್ಟು ಪೊಕ್ಕರದನೇನೆಂಬೆನು ॥
॥ ೧ ॥ [೧೮೩]

ರಾಗ ಸೌರಾಷ್ಟ್ರ ತ್ರಿವುಡೆತಾಳ

ಭೂಪತಿಯೆ ಚಿತ್ತೈಸು ನಗರವ । ನೀಪರಿಯ ಸೂರೆಯಲಿ ದೈತ್ಯರು ।
ಮಾಪುಗೊಂಡಲ್ಲಿರುವವರನು ಮಿಗೆ । ಕೋಪದಿಂದ ॥ ॥ ೧ ॥

ದಂಡಿಸುತ ಬೆರಸಿದರು ಪುರದೊಳು । ಚಂಡವಿಕ್ರಮರಾಗಿ ನಲಿವುತ ।
ಗುಂಡುಕುಚದಬಲೆಯರನೀಕ್ಷಿಸಿ । ಪುಂಡುಗೊಳುತ ॥ ॥ ೨ ॥

ನೀರೆ ಬಾ ಬಾರೆಂದು ಮೋಹಿಸಿ । ಚಾರುಕುಚವನು ಪಿಡಿದು ಬಲ್ಪಿಲಿ ।
ಮಾರಜಭ್ರಮೆಯಿಂದಲೊಯ್ದರು । ಜಾರಖಳರು ॥ ॥ ೩ ॥

ಬಳಿಕ ಊರ್ವಶಿರಂಭೆಯರು ಇಹ । ನಿಳಯದೆಡೆಗೈತಂದುಮವದಿರ ।
ಚಲುವಿಕೆಯನೀಕ್ಷಿಸುತಲೆಂದರು । ಖಳರು ನಲಿದು ॥ ॥ ೪ ॥ [೧೮೭]

ರಾಗ ಕಾಪಿ ಅಷ್ಟತಾಳ

ಇತ್ತ ನೋಡಿರೊ ಇಲ್ಲಿ ನಿತ್ತಿಹ ಹೆಣ್ಣ ।
ಪುತ್ತಳಿ ಬೊಂಬೆ ಇಕ್ಕಿಹಳೆನ್ನೊಳ್ಕಣ್ಣ ॥ ॥ ಪಲ್ಲ ॥

ಎನ್ನ ಚೆಲುವಿಗೆ ಜೋಡಹುದಿವಳ್ ಬಣ್ಣ ।
ಮುನ್ನ ಹಾರೈಸಿಕೊಂಡಿಹಳು ಕೇಳಣ್ಣ ।
ಮಿಣ್ಣಗೆ ಬಂದು ನೋಡುವದೇನ್ ಬರಿದೆ ।
ಕಣ್ಣ ಕೀಳಿಸುವೆನತ್ತ್ಯೆದು ನಿಸಿರದೆ ॥ ॥ ೧ ॥

ಅವಳ ಚೆಲುವು ಸುಡಲಿತ್ತಲು ನೋಡು ।
ಧವಳ ವರ್ಣದ ಬಾಲೆಯಿವಳೆನ್ನ ಜೋಡು ।
ಇವಳ ಸಂಗದಲಿ ಸೇರ್ವುದು ಮುಕ್ತಿನಾಡು ।
ಭುವನಮೂರರೊಳಿಲ್ಲೀ ಚೆಲುವಿನ ಗೂಡು ॥ ॥ ೨ ॥

ಕಡುಜವ್ವನೆಯ ಸುದ್ದಿ ನಿನಗ್ಯಾಕಯ್ಯ ।
ನಡೆಯಲಾರದ ಗಡ್ಡ ಬೆಳುಪಾದ ಮುದಿಯ ।
ಹುಡುಗನಾಗಿಹೆ ಎನ್ನ ಬಯಸಿಕೊಂಡಿರುವ ।
ಹುಡುಗಿಯ ಬಿಡೆನೆಂದು ಎಳೆದೊಯ್ದನೊರ್ವ ॥ ॥ ೩ ॥ [೧೯೦]

ಭಾಮಿನಿ

ಕಂತುವಿನ ಬಾಧೆಯಲಿ ರಾಕ್ಷಸ ।
ರಿಂತು ಸಿಲುಕುತ್ತಾಗಲಲ್ಲಿಹ ।
ಕಾಂತೆಯರನುರೆ ನೋಡಿ ವಿರಹಾಗ್ನಿಯಲಿ ಬಸವಳಿದು ॥
ಸಂತವಿಸಲಾರದೆಯು ಸ್ತ್ರೀಯರ ।
ನುಂ ತುಡುಕಿ ಮೋಹಿಸಿದರೋರ್ವನು ।
ಭ್ರಾಂತಿನಿಂದೂರ್ವಶಿಯೊಳೆಂದನು ಮಾರನುರುಬೆಯಲಿ ॥
॥ ೧ ॥ [೧೯೧]

ರಾಗ ಸುರುಟಿ ರೂಪಕ

ಕರುಣದೋರೆ ತರುಣಿಮಣಿಯೆ । ಸ್ಮರಣೆಗೈವೆನು ।
ಅರುಣಾಧರೆ ಆದರಣೆಯಿಂದಾ । ಭರಣವೀವೆನು ॥ ಪಲ್ಲ ॥

ರತಿನಿಭಾಂಗಿ ಸತಿಯೆ ನಿನ್ನ । ಕೃತಿಗೆ ಮೆಚ್ಚಿದೆ ।
ಸತತವಾ ಜತೆಯೊಳಿರುವ । ಮತವು ಹೆಚ್ಚಿದೆ ॥ ಕರುಣದೋರೆ ॥
॥ ೧ ॥

ಧರೆಯೊಳೆನ್ನ ತೆರದ ಪುರುಷರಿರುವರೇನೆಲೆ ।
ತರುಣಿಯರು ಬೈದರವರೆನ್ನ ಪತಿಗೆ ಕೇಳಲೆ ॥ ಕರುಣದೋರೆ ॥
॥ ೨ ॥

ಸ್ಮರನು ಗಿರನು ಎನಲು ಎನ್ನ ಸರಿಕರಾಪರೇ ।
ತರುಣಿ ನೀನೆ ಸರಿಯು ಎನ್ನ ಎರಕವಾಪರೆ ॥ ಕರುಣದೋರೆ ॥
॥ ೩ ॥ [೧೯೪]

ವಾರ್ಧಕ

ದ್ವಿಜರಾಜಕುಲತಿಲಕ ಲಾಲಿಸೀ ತೆರದಿ ಪಂ ।
ಕಜಮುಖಿಯರೊಡನಾಡುತೊಡನಪ್ಪಿ ಮತಿದಪ್ಪಿ ।
ನಿಜಭೋಗಮಂ ಪಡೆದು ನಲಿವುತ್ತವೊಲಿವುತ್ತಲಮರಪುರದೊಳಗಿರ್ಪರ॥
ಭುಜಬಲಾತ್ಕಾರದಿಂ ದಂಡಿಸುವ ಕಂಡಿಸುವ ।
ಕುಜನರಟ್ಟುಳಿಗೆಯಾ ಪುರದ ಸ್ತ್ರೀಪುರುಷರುರೆ ।
ಗಜಬಜಿಸುತಿರಲು ನಾರೀನಿವಹ ಒಂದೆಸೆಯೊಳತಿಭಯದೊಳಿಂತೆಂದುದು॥
॥ ೧ ॥ [೧೯೫]

ರಾಗ ನವರೋಜು ಆದಿತಾಳ

ಲಾಲಿಸಿ ಕೇಳಲೆ ತಂಗಿ । ಭಯ । ತಾಳದಿರು ಲಲಿತಾಂಗಿ ।
ಹಾಳಾಯಿತು ಸುರಪಾಲರ ಸಿರಿಯನು ।
ಪೇಳುವದೇನೀ ಖಳ । ರಾಳುವದಾಯಿತು ॥ ॥ ೧ ॥

ಅಂತಿರಲಾನುಡಿಯಕ್ಕಾ । ಎನ । ಗಾಂತುದ ಕೇಳ್ದೆಯ ದುಃಖ ।
ಎಂತುಸುರುವೆ ಬಲ । ವಂತ ಖಳರು ಎ ।
ನ್ನಂ ತುಡುಕುತ ಭಯ । ವಂ ತೋರಿಸಿದುದ ॥ ॥ ೨ ॥

ಗರುವದ ಮಾತನು ನುಡಿದು । ಎನ್ನ । ಗುರುಕುಚವನ್ನುರೆ ಪಿಡಿದು ।
ಪರಿಪರಿಯಲಿ ಸ್ಮರ । ನುರುಬೆಯೊಳೆನ್ನನು ।
ಬೆರಸಿ ಬೆಂಬೊತ್ತಿದ । ದುರುಳನಿಂದೋರ್ವನು ॥ ॥ ೩ ॥

ಜೀವಿಸಿಕೊಳುವದು ಹ್ಯಾಂಗೆ । ಈಗ । ಈ ವಿಪರೀತಗಳಾಗೆ ।
ಆವೆಡೆಯೊಳಗಿಂ । ನಾವಿರುವುದು ದೈ ।
ತ್ಯಾವಳಿ ಬಿಡದಲೆ । ಹಾ ವಿಧಿಯೆಂದರು ॥ ॥ ೪ ॥ [೧೯೯]

ಭಾಮಿನಿ

ವಸುಧೆಪಾಲಕ ಕೇಳು ಪುರವನು ।
ಅಸುರರಿಂತೊಶಗೊಳ್ಳಲಿತ್ತಲು ।
ಅಸಮನಿದ್ರಾವ್ಯಸನ ತಿಳಿದೇಳ್ವಂತೆ ಸುಮನಸರು ॥
ಉಸುರು ಗುರುಗುರಿಸುತ್ತ ಮೆಲ್ಲನೆ ।
ಮುಸುಡ ನೇವರಿಸುತ್ತಲಲುಗಿಸಿ ।
ಹಸನದಿಂ ಕಣ್ದೆರವುತೆದ್ದುದು ಅನಿಮಿಷವ್ರಾತ ॥ ॥ ೧ ॥ [೨೦೦]

ರಾಗ ಕೇದಾರಗೌಳ ಅಷ್ಟತಾಳ

ಇಂತು ಮೂರ್ಛೆಯ ತಿಳಿದೆದ್ದು ಮೆಲ್ಲನೆ ಸುರ । ಕಾಂತರೆಲ್ಲರು ಮನದಿ॥
ಅಂತರಿಸದ ದುಗುಡದಲಿರಲಾ ಶಚಿ । ಕಾಂತ ಚಿಂತಿಸುತೆಂದನು ॥
॥ ೧ ॥

ಎದ್ದಿರೆ ಸಕಲನಿರ್ಜರರು ಮುಂತಾದವ । ರೆದ್ದಿರೆ ಮುದವಗೊಂಡು ॥
ಬದ್ಧವೈರಿಗಳೆಚ್ಚಂಬಿನ ಗಾಯಕೌಷಧಿ । ಯುದ್ದಿರೊ ಬೇಗದಲಿ ॥
॥ ೨ ॥

ಹರಹರ ಸರ್ವಲೋಕದಲಿ ನಿರ್ಜರರೆಂಬ । ಬಿರುದನಾಂತೀವರೆಗೆ ॥
ಅರಿಗಳಿಗಿಂಬುಗೊಡದೆ ನಾಕಪುರವನು । ಹರುಷದಿ ಸಲಹಿದೆವು ॥
॥ ೩ ॥

ಸುರಪುರವೆಂಬ ಪೆಸರನಡಗಿಸುತಲಿ । ದುರುಳರು ವಿಕ್ರಮದಿ ॥
ಪುರವ ತಮ್ಮೊಶಗೊಂಡರಕಟಕಟೆಮಗಿಂದೀ । ಪರಿಯೂ ಸಂಘಟಿಸಿತಲ್ಲ॥
॥ ೪ ॥

ಧುರದ ಕಣದೊಳಿಂತು ಹೊರಳಿದರೆಮ್ಮನು । ನೆರೆ ನುಡಿಸುವರಿಹರೆ ॥
ಕೊರತೆಗೊಳ್ಳದೆ ಸರ್ವರೇಳಿ ಪದ್ಮಜನೊಳು । ಅರಿಕೆಗೆಯ್ಯುವ ಮಗುಳೆ ॥
॥ ೫ ॥

ಕರುಣಿಗಳರಸನಾಗಿಹನಾತ ನಮ್ಮನು । ಪೊರೆಯದಿರನು ದಿಟದಿ ॥
ಅರೆಕ್ಷಣ ತಡವ ಮಾಡದಿರಿ ನೀವೆನಲತಿ । ಹರುಷದಿ ಪೊರಮಟ್ಟರು ॥
॥ ೬ ॥ [೨೦೬]

ಭಾಮಿನಿ

ಶಚಿಯರಸನೊಡನಿಂತು ನಿರ್ಜರ ।
ನಿಚಯವತಿ ಹರುಷದಲಿ ಭಕುತಿಯ ।
ರಚನೆಯನು ತೋರುತ್ತ ಕರಯುಗ್ಮವನು ನೆರೆ ಪೊತ್ತು ॥
ಖಚರಕಿನ್ನರಯಕ್ಷರುರೆ ಸವಿ ।
ವಚನದಲಿ ಪೊಗಳುತ್ತ ಬೊಮ್ಮನು ।
ರಚಿಸಿರುವ ಓಲಗದಿ ಮಣಿಯಲು ಕರುಣಿಯಿಂತೆಂದ ॥ ॥ ೧ ॥ [೨೦೭]

ರಾಗ ಸೌರಾಷ್ಟ್ರ ಅಷ್ಟತಾಳ

ಹೋ ಹೋ ಸೈರಿಸಿರೊ ಬಳಲಬ್ಯಾಡಿ । ಯೇಳಿರಯ್ಯ ॥ ನಿಮ್ಮ ।
ಸಹಾಯಕನು ತಾನಾಗಿರಲು ದುಗುಡವೇನಿ । ದೇಳಿರಯ್ಯ ॥ ॥ ೧ ॥

ತನುವಿನೊಳಗೆ ಬಲುಶೋಣಿತ ಸುರಿಯುವ । ದೇನಿರಯ್ಯ ॥ ಬಹು ।
ದಣಿದು ಬಂದವರಂತೆ ಕಣ್ಗೆಸೆವುತ್ತಿದೆ । ಯೇನಿರಯ್ಯ ॥ ॥ ೨ ॥

ವಂಚಿಸಿದವರ್‍ಯಾರು ರಣದಲಿ ನಿಮ್ಮನು । ಪೇಳಿರಯ್ಯ ॥ ಈಗ ।
ಕೊಂಚ ತಲ್ಲಣಿಸದೆನ್ನೊಡನೆ ಬಂದಾಪತ್ತಾ ॥ ಪೇಳಿರಯ್ಯ ॥
॥ ೩ ॥ [೨೧೦]

ಭಾಮಿನಿ

ಸಾಕು ದುಃಖಿಸಬೇಡಿ ಮನಸಿನ ।
ವ್ಯಾಕುಲವ ಬಿನ್ನವಿಸಿ ನಿಮ್ಮನು ।
ಸಾಕುತಿಹ ದಾತಾರನಲ್ಲವೆ ತಾನು ಜಗವರಿಯೆ ॥
ನೂಕಿರೋ ಸಂಶಯವನೆಂದೆನೆ ।
ಲೇಖರತಿ ಸದ್ಭಕತಿಯಿಂದಲಿ ।
ಕೋಕನದವಿಷ್ಟರನಿಗೆರಗುತ್ತೆಂದರೊಗ್ಗಿನಲಿ ॥ ॥ ೧ ॥ [೨೧೧]

ರಾಗ ಸಾರಂಗ ತ್ರಿವುಡೆತಾಳ

ಲಾಲಿಸಂಬುರುಹಜಾತ । ಕೃಪೆಯೊಳೆಮ್ಮ । ಪಾಲಿಸಸಥರಾದಾತ ॥ ಪಲ್ಲ॥

ಲಾಲಿಸೈ ಕರುಣಾಳು ತವಕರು । ಣಾಲಯದೊಳೀವರೆಗೆ ಸೌಖ್ಯದಿ ।
ಲೀಲೆಯಿಂದಿಹೆವಿನ್ನು ಮುಂದಕೆ । ಕಾಲಹರಣಕ್ಕೆತ್ನ ಗಾಣೆವು ॥ ಅನುಪಲ್ಲ॥

ದುರುಳ ವೃತ್ರಾಸುರನು । ಕುಮತಿಯನ್ನು ।
ನೆರವೇರಿಸುತಲಾತನು । ನಮ್ಮಯ ಚಾರು ।
ಪುರಕೆ ದಾಳಿಯನಿಟ್ಟನು । ಬಲುಸೈನಿಕವನು ।
ವೆರಸಿ ಧುರಗೈಯಲು ಮದಾಂಧರು । ಭರಿತವಿಕ್ರಮದಿಂದಲೆಮ್ಮನು ।
ನೊರಜಿನಂತಪ್ಪಳಿಸಿ ಕೆಡಹುತ । ಪುರವ ತಮ್ಮೊಶಗೈದರಿಂದಿಲಿ ॥
॥ ೧ ॥

ಬಾಳಲೀಸರು ದೈತ್ಯರು । ನಮ್ಮನು ತಿರು ।
ಕೂಳಿಗಳೆನಿಸಿದರು । ಹೊಲಬುಗಳ ।
ಪೇಳಿ ರಕ್ಷಿಪ ದಾತರು । ಇನ್ನಾರಿರುವರು ।

ಜಲಜಭವ ನೀನಲ್ಲದೆಯು ಮ । ತ್ತುಲಕೆ ದಾತಾರರನು ಕಾಣೆವು ।
ಅಳಿಸು ಉಳಿಸುವ ಭಾರ ತವ ಚಿತ್ । ಜಲಜಕೊಪ್ಪಿಹುದೈ ಮಹಾತ್ಮನೆ ॥ ।
। ೨ ॥ [೨೧೩]

ಭಾಮಿನಿ

ಪಾಂಡುವಂಶೋದ್ಭವನೆ ಕೇಳ್ಸುರ ।
ತಂಡವಿಂತೆರಗುತಿರೆ ಕಾಣುತ ।
ಪುಂಡರೀಕಜನಧಿಕಕಾರುಣ್ಯದಲಿ ಕಿಂಕರರ ॥
ಮಂಡೆಯನು ಮಗುಳೆತ್ತುತಲಿ ಮುದ ।
ಗೊಂಡು ನುಡಿದನು ಮಜ್ಜನಕನಡಿ ।
ಕಂಡರುಹುವೆ ಎನ್ನಿಂದಲಪ್ಪುದಿದಲ್ಲವೆಂದೊರೆದ ॥ ॥ ೧ ॥ [೨೧೪]

ರಾಗ ಮಧ್ಯಮಾವತಿ ತ್ರಿವುಡೆತಾಳ

ಬಳಲದಿರಿ ಮಕ್ಕಳಿರ ಸೈರಿಸಿ । ಕೊಳ್ಳಿರೋ ಬೇಗ । ನಿಮ್ಮಯ ।
ಬಳಗವನು ನೆಲೆಗೊಳಿಸಿ ಸಲಹುವ । ನಳಿನನಾಭ ॥ ॥ ೧ ॥

ಚಾರುಗುಣಗಂಭೀರನಿಹನಾ । ಕ್ಷೀರಾಬ್ಧಿಯಲಿ । ಭುವನೋ ।
ದ್ಧಾರಕನು ತಾನಾಗಿ ಗೋಪ್ಯದಿ । ತೋರುತಿಹನು ॥ ॥ ೨ ॥

ಜವದೊಳೈದೀತವಕನವನೊಳು । ವಿವರಗೊಳಿಸಿ । ತತ್ಪಾ ।
ದವನು ನಂಬಿದಡೆಮ್ಮ ಬಿಡ ಮಾ । ಧವನು ಮುದದಿ ॥ ॥ ೩ ॥

ಬೇಗದಲಿ ಪಾಲಾಂಬುಧಿಯ ತಡಿ । ಗಾಗಿ ಸರಿದು । ಬಲು ದಯ
ಸಾಗರನ ಪದವನ್ನು ತಪಿಸುವ । ಪೋಗಿ ಭರದಿ ॥ ॥ ೪ ॥ [೨೧೮]

ದ್ವಿಪದಿ

ವಿಧುಕುಲೋದ್ಭವ ಕೇಳು ಪದುಮಸಂಭವನು ।
ತ್ರಿದಶಗಡಣವು ಸಹಿತ ಮುದದೊಳೈದಿದನು ॥ ॥ ೧ ॥

ಕ್ಷೀರಸಾಗರದೆಡೆಯೊಳ್ನಿಂದು ವಿನಯದಲಿ ।
ಮಾರಮಣನಂಘ್ರಿಯನು ಸೆನವ ತವಕದಲಿ ॥ ॥ ೨ ॥

ಮಿಂದು ಶುಚಿಯಾಗಿ ಗೋವಿಂದ ಹರಿಯೆನುತ ।
ನಿಂದು ನುತಿಸುತ್ತಿರ್ದರಖಿಳರನವರತ ॥ ॥ ೩ ॥ [೨೨೧]

ರಾಗ ಸಾಂಗತ್ಯ ತ್ರಿವುಡೆತಾಳ

ಜನಪ ಕೇಳಿತ್ತಲು ಜನಾರ್ದನ । ಮನದೊಳರಿವುತಲಾಗ ಭಕ್ತರ ।
ದಣುವಪರಿಹರಿಸುವೆನು ತಾನೆಂ । ದೆನುತ ಮುದದಿ ॥ ॥ ೧ ॥

ತುಂಬುರಾದ್ಯರು ಕಾಣದಿರುತಿಹ । ಸಂಭ್ರಮದ ವಿಗ್ರಹವ ತೋರುವೆ ।
ನೆಂಬ ಮಮತೆಯೊಳೆಸದನಾ ಕ್ಷೀ । ರಾಂಬುಧಿಯಲಿ ॥ ॥ ೨ ॥ [೨೨೩]

ಭಾಮಿನಿ

ಚಾರುನಯನದ ಸುಪ್ರಸನ್ನ ಮು ।
ಖಾರವಿಂದದ ಸಂಹತಾಂಗದ ।
ಚಾರುಬಿಂಬಾಧರ ಕಪೋಲದ ದಂತಪಂಕ್ತಿಗಳ ॥
ಚಾರುರತ್ನ ಕಿರೀಟಕುಂಡಲ ।
ಹಾರಮಣಿಕೇಯೂರಕಂಕಣ ।
ಚಾರುಮೂರ್ತಿಯನಂದು ಮೆಯ್ದೋರಿದನು ಸುರಕುಲಕೆ ॥ ॥ ೧ ॥

ಎಂಟು ದೆಸೆಯಲಿ ನಾರದಾದ್ಯರು ।
ಗಂಟಲನು ಬಾಗುತಿರೆ ಶೇಷನ ।
ಮಂಟಪದಿ ಜಗದೊಡತಿ ಸಹ ಮಂಡಿಸುತ ವಿನಯದಲಿ ॥
ಬಂಟರೆನಲೇನ್ ಘನವೊ ಭಾಸ್ಕರ ।
ಗೆಂಟುಮಡಿ ತೇಜದಲಿ ಶ್ರೀ ವೈ ।
ಕುಂಠವೇಯೆನಲೆಸದನಸುರಾರಾತಿ ಭಕುತರಿಗೆ ॥ ॥ ೨ ॥

ಕಾಣುತಜಸಹಿತಖಿಳವಿಬುಧಶ್ರೇಣಿ
ಜಯಜಯ ಜಯತು ಲಕ್ಷ್ಮೀ ।
ಪ್ರಾಣನಾಥನೆ ಜಯತು ಜಯತೆಂದಧಿಕ ಭಕುತಿಯಲಿ ॥
ಕ್ಷೋಣಿಯಲಿ ಮೆಯ್ಯಿಕ್ಕಿ ಮುಕುಳಿತ ।
ಪಾಣಿಪಂಕಜರಾಗಿ ಗದ್ಗದ ।
ವಾಣಿಗಳು ತಾವಾಗಿ ಸಂಸ್ತುತಿ ಮಾಡಿದರು ಹರಿಯ ॥ ॥ ೩ ॥ [೨೨೬]

ರಾಗ ಶಂಕರಾಭರಣ ಅಷ್ಟತಾಳ

ಪಾಲಿಸೋ । ಪದ್ಮನಾಭ ಶ್ರೀಗೋವಿಂದ । ಪಾಲಿಸೋ ॥ ಪಲ್ಲ ॥

ಪಾಲಿಸು ಪರಮಾತ್ಮ ದೇವ । ಭಕ್ತ । ಮೇಳಕೆ ಪರಮಸಂಜೀವ । ವನ।
ಮಾಲಾಂಕಿತಕಂಬುಗ್ರೀವ । ಮಹಾ । ಲೀಲೆಯೊಳಗೆ ಸಾಧು ।
ಜಾಲವನುರೆ ಪರಿ । ಪಾಲಿಪ ಮಹಿಮ ಶ್ರೀ । ನೀಲಮೇಘಶ್ಯಾಮ ॥
॥ ೧ ॥

ನೀ ದಯದೋರು ಮುರಾರಿ । ವಿನೋ । ದಾದಿ ಮಧುಕೈಟಭಾರಿ । ನಮ್ಮ ।
ಆಧರಿಸಸುರಕುಠಾರಿ । ಭೋ । ವೇದವೇದ್ಯನೆ ಕರು ।
ಣೋದಯದಿಂದ ಪ । ರಾಧವ ಕ್ಷಮಿಸು ಶ್ರೀ । ಆದಿನಾರಾಯಣ ॥
॥ ೨ ॥

ಕರುಣಿಸು ದಶವಿಧರೂಪ । ನಿನ್ನ । ಸ್ಮರಣೆಗೈವರಿಗುಂಟೆ ಪಾಪ । ಪರಿ ।
ಹರವಾಯಿತೆಂದು ಸಂತಾಪ । ಮನೋ । ಹರ ಚಾರುಕರುಣಸಾ ।
ಗರ ಜಗದ್ಭರಿತ ಸ । ಚ್ಚರಿತ ಪರಾಕು ಶ್ರೀ । ಹರಿಯೆ ನಮೋ ನಮೊ ॥
ಪಾಲಿಸೊ ॥ ೩ ॥[೨೨೯]

ಭಾಮಿನಿ

ಆರು ಗತಿ ಬೇರೆಮಗೆ ಕರುಣಾ ।
ವಾರಿಧಿಯೆ ನೀನಲ್ಲದಿನ್ನು ವಿ ।
ಚಾರಿಸುವ ದಾತಾರರುಂಟೇ ದೇವ ತವಪದವ ॥

ಸೇರಿದಾನಾಥರನು ರಕ್ಷಿಪ ।
ಭಾರ ನಿನದಗಿಹುದಲೇ ದಯ ।
ಸಾರ ಚಿನ್ಮಯಮೂರ್ತಿ ಶರಣಾಗೆಂದುದಮರಗಣ ॥ ॥ ೧ ॥ [೨೩೦]

ರಾಗ ಮಧ್ಯಮಾವತಿ ತ್ರಿವುಡೆತಾಳ

ಎಂದು ಸ್ತುತಿಗೈವ ದಿವಿಜರ । ವೃಂದವನ್ನು । ಈಕ್ಷಿಸಿ ।
ಮಂದರಾಚಲಧರನಾಡಿದನು । ಇಂದಿರೆಯೊಳು ॥ ॥ ೧ ॥

ಸುಲಲಿತಾಂಗಿ ನೋಡೆನ್ನ ಪದಯುಗ । ಸಲಿಲಜವನೂ । ನೋಡಿ ವ್ಯಾ
ಕುಲತೆಯ ನೀಡಾಡಬಂದಿಹ ಬಲುಭಕುತರ ॥ ॥ ೨ ॥

ಪಾದವನು ಮೇಲ್ಗೈದು ಬಹಳ ಸ । ಮಾಧಿಯಿಂದ । ಲೀರ್ವರು ।
ಮೇದಿನಿಯನುರೆ ಬಿಟ್ಟು ತಪವನು । ಸಾಧಿಸುವರು ॥ ॥ ೩ ॥

ನೋಡಿ ಸರ್ವಥ ಸೈರಿಸೆನು ದಯ । ಮಾಡಿ ಮುದದೀ । ಇವರಿರ ।
ಗಾಢದಿಂ ರಕ್ಷಿಸುವ ಯತ್ನವ । ನೋಡೆ ನೀನೀಗ ॥ ॥ ೪ ॥ [೨೩೪]

ಭಾಮಿನಿ

ದೀನರರನು ನಾ ಬಿಡಲು ಭಕ್ತಾ ।
ಧೀನನೆನ್ನುವ ಬಿರುದು ಲೋಕದಿ ।
ಹಾನಿಯಾಗದೆ ಮಾಣದೆಂದಚ್ಯುತನು ಚಿಂತಿಸುತ ॥
ತಾನಿರಲು ಜಗನ್ಮಾತೆ ನುಡಿದಳಿ ।
ದೇನರಸ ನಿನ್ನಖಿಳಮಾಯೆಯ ।
ತಾನರಿಯದಜ್ಞಾನಿಯೇ ಎಂದೊರೆದಳೊಲವಿನಲಿ ॥ ॥ ೧ ॥ [೨೩೫]

ರಾಗ ಆದಿತಾಳ

ಕರೆದು ನುಡಿಸು ಭಕುತರಾ । ಏ ಕಾಂತಾ । ಕರೆದು ನುಡಿಸು ಭಕುತರಾ
॥ ಪಲ್ಲ ॥

ಕೈಯ್ಯೊಳಭಯವಪಾಲಿಸೂ । ಅವರ । ಹುಯ್ಯಲಾ ನೀ ಲಾಲಿಸು ।
ಅಯ್ಯ ನಮೋ ಎನು । ತೊಯ್ಯನೆ ಕಮಲಜ ।
ಮೈಯ್ಯನು ಬಾಗುವ । ನೀ ಅತಿಕರುಣದಿ ॥ ಕರೆದು ನುಡಿಸು ॥
॥ ೧ ॥

ನೊಂದು ಮನದಿ ಲೇಖರೂ । ನಿನ್ನನು । ಒಂದೆಮನದಿ ನುತಿಪರು ।
ಇಂದ್ರ ಮುಖ್ಯರಾ । ನಂದಗೊಳಿಸುತ ।
ಬಂಧು ನೀನಲ್ಲವೆ । ಇಂದೊಲಿದಿವರನು । ಕರೆದು ॥ ॥ ೨ ॥

ನಿನ್ನ ನಂಬಿದ ದಾಸರಾ । ಇನ್ನಾರು । ಮನ್ನಿಸುವರಾ ಲೇಖರಾ ।
ಮುನ್ನ ಪಾಲಿಸೀ । ಸನ್ನುತರನು ಮತಿ ।
ಯಂ ನೆರವೇರಿಸು । ಸನ್ಮುನಿವಿನುತ ನೀ । ಕರೆದು ॥ ॥ ೩ ॥ [೨೩೮]

ಭಾಮಿನಿ

ಭೂರಮಣ ಕೇಳ್ಳೈ ಸುಧಾಬ್ಧಿಜೆ ।
ಚಾರು ನುಡಿಯಿಂತುಸುರೆ ತ್ರಿಜಗದ ।
ಧಾರಿ ನಾರಾಯಣನು ದೇವಿಯ ತೆಗೆದು ಮುದ್ದಿಸುತ ॥
ಭೂರಿ ನಿಗಮಾದಿಗಳುಘೇಯೆನೆ ।
ಚಾರುಭೃತ್ಯಸಮೂಹಕಬ್ರ ಗ ।
ಭೀರಸೂಕ್ತಿಗಳಿಂದ ಕರುಣಾರ್ಣವ ನಿರೂಪಿಸಿದ ॥ ॥ ೧ ॥ [೨೩೯]

ರಾಗ ಕಾಂಭೋಜಿ ಝಂಪೆ

ಅಂಜದಿರು ಮಗನೇ ನೀ । ವಂಜದಿರಿ ಮಕ್ಕಳಿರ ।
ಅಂಜುವಿರದ್ಯಾಕೆ ತಾನಿರಲು ॥
ಸಂಜೀವನದ ಮಣಿಯು । ರಂಜಿಸುತ ಕರದೊಳಿರೆ ।
ಅಂಜುವರೆ ಮೃತಿಗೆ ಬಲ್ಲವರು ॥ ॥ ೧ ॥

ಎಂದಿಗಾದರು ಎನ್ನ ಮರೆಹೊಕ್ಕಿರುವ ಶರಣ ।
ವೃಂದವನು ಪೊರೆಯದಾನಿಹೆನೇ ॥
ಇಂದು ನಿಮಗೇನ್ ಭವಣೆಯು ಬಂದುದುಸುರಿನೀ ।
ವೆಂದನರವಿಂದದಳನಯನ ॥ ॥ ೨ ॥

ಬೆಚ್ಚದಿರಿ ಶುಕನ ಪಂಜರದಿ ರಕ್ಷಿಪ ತೆರದಿ ।
ಮುಚ್ಚಿಕೊಂಡಿರುವೆನನವರತಾ ॥
ಪೆಚ್ಚು ಕರುಣಾಮೃತದ ಪಂಜರದಿ ನಿಮ್ಮವನು ।
ಉಚ್ಚರಿಸಿ ಮನದಿರವನೀಗ ॥ ॥ ೩ ॥

ರಾಕ್ಷಸರೊ ಮಾನವರೊ ಪನ್ನಗರೊ ನಿಮ್ಮವನು ।
ಶಿಕ್ಷಿಸುವರಾರ್ಪೇಳಿರವರಾ ॥
ಈ ಕ್ಷಣದಿ ಕೊಲುವಂದವುಸುರಿ ಶಿಕ್ಷಿಪೆನೆನಲು ।
ಪಕ್ಷಿವಾಹನಗೆಂದನಜನು ॥ ॥ ೪ ॥ [೨೪೩]

ರಾಗ ಬಿಲಹರಿ ಅಷ್ಟತಾಳ

ಲಾಲಿಸು ಕರುಣಾವಾರಿಧಿ ನಿತ್ಯಾನಂದಾ ।
ಮೂಲೋಕದೊಡೆಯ ಶ್ರೀಲೋಲ ಗೋವಿಂದ ॥ ಪಲ್ಲ ॥

ಜಡನಾಭನೆ ಕೇಳ್ ನಿನ್ನಯ ಕರುಣವನು ।
ಪಡದವರಿಗೆ ಬೇರೆ ತೊಡಕುಗಳೇನು ।
ಸಡಗರದಿಂದ ನಿನ್ನಯ ಕೃಪೆಯೊಳಗೆ ।
ಕಡುಸುಖವಾಗಿರ್ಪುದನಿಮಿಷಾದ್ಯರಿಗೆ ॥ ॥ ೧ ॥

ಹರಿಯೆ ಕೇಳಿವರ ದುಗುಡವ ನೀನಿಂದು ।
ವರಚಿತ್ರಕೇತುಯೆಂಬವನು ತಾನಂದು ।
ಸರಿದು ಕೈಲಾಸಭವನನ ನಿಂದಿಸಲು ।
ಗಿರಿಜೆ ಕೋಪಿಸುತ ಸೀವರಿಸಿ ಶಪಿಸಲು ॥ ॥ ೨ ॥

ದನುಜರೂಪವ ಪಡೆದತಿಗರ್ವದೊಳಗೆ ।
ಅನಿಮಿಷಾದ್ಯರನಂಜಿಸಿದ ಯುದ್ಧದೊಳಗೆ ।
ಮನಸಿನೊಳಗೆ ನೊಂದುಕೊಳುತಲಖಿಳರೂ ।
ವಿನಯದಿಂದ್ಯೆತಂದೆನ್ನೊಡನೆ ಪೇಳಿದರು ॥ ॥ ೩ ॥

ತಕ್ಕವುಪಾಯವರಿಯದೆ ನಿನ್ನಡಿಯ ।
ಕಕ್ಕುಲಿತೆಯೊಳ್ಭಜಿಸಿದೆವು ಕೇಳೊಡೆಯಾ ।

ಮಿಕ್ಕ ಮಾತುಗಳೇನಾತನ ಗೆಲ್ವ ಪರಿಯ ।
ರಕ್ಕಸಾರಿಯೆ ಪೇಳಿ ಪೊರೆಯಬೇಕಯ್ಯ ॥ ॥ ೪ ॥ [೨೪೭]

ಭಾಮಿನಿ

ಪುಂಡರೀಕಾಸನನು ಹರಿಗು ।
ದ್ದಂಡದಿಂದಿಂತೆನುತಲೆರಗಲು ।
ತಂಡತಂಡದೊಳಡ್ಡಗೆಡೆದುದು ವಿಬುಧಸಂದೋಹ ॥
ಕಂಡು ಕಾರುಣ್ಯದಲಿ ತ್ರಿದಶರ ।
ಮಂಡೆಯನು ನೆಗಹುತಲಿ ತೋಷವ ।
ಗೊಂಡು ಮಿಗೆ ಮಾರ್ತಾಂಡತೇಜಃಪುಂಜನುಸುರಿದನು ॥ ॥ ೧ ॥ [೨೪೮]

ರಾಗ ನವರೋಜು ಆದಿತಾಳ

ಕೇಳಿ ನಿರ್ಜರರೆಲ್ಲ । ನಾ । ಪೇಳುವೆ ನಿಮ್ಮೊಳು ಸೊಲ್ಲ ।
ಕಾಳಗದಲಿ ಆತನ ಸೋಲಿಸಲಿಕೀ ।
ರೇಳು ಲೋಕವುವೊಂದಾಗಲಸಾಧ್ಯವು ॥ ॥ ೧ ॥

ನೀಚನ ಸೋಲಿಸುವದಕೆ । ದ । ಧೀಚಿಯೆಂಬನ ಗೃಹಕೇ ।
ನಾಚದೆ ಆಶ್ವಿನಿದೇವರು ಸಹಪೋಗಿ ।
ಯಾಚಕರಂದದಿ ಬೇಡಿ ದೇಹವನು ॥ ॥ ೨ ॥

ಕರುಣಿಸಿ ನೀಡುವನವನು । ಅದ । ತರಿವುತ ಬೆನ್ನೆಲುಬುವನು ।
ವರ ಆಯುಧವನು । ವಿರಚಿಸಿ ನೀವದ ।
ಧರಿಸಲರಿಯ ಶಿರ । ವರಿಯಬಹುದು ದಿಟ ॥ ॥ ೩ ॥ [೨೫೧]

ಭಾಮಿನಿ

ನಾಚದಿರಿ ನೀವಿಂದು ಕಾರ್ಯಕೆ ।
ಯಾಚಿಸುವರ್‍ಯೆ ಪರರನೆಲ್ಲರು ।
ಯಾಚಿಸಿಹೆ ನಾ ಹಿಂದೆ ಬಲಿಯನು ಕಾರ್ಯಕೋಸುಗವೆ ॥
ಯೋಚಿಸುತ ಕುಳ್ಳಿರಲು ರಣದಲಿ ।

ನೀಚರನು ಗೆಲಲರಿಯದೆನುತ ವಿ ।
ರಿಂಚಿಮುಖ್ಯರ ಸಂತವಿಸುತಡಗಿದನು ಮುರವೈರಿ ॥ ॥ ೧ ॥ [೨೫೨]

ರಾಗ ಸೌರಾಷ್ಟ್ರ ತ್ರಿವುಡೆತಾಳ

ಇಂತು ಮುರರಿಪು ಮಾಯವಾಗಲು । ನಿಂತಿರುವ ಕಮಲಾಸನಾದ್ಯರು ॥
ಅಂತರಾತ್ಮನ ಕಾಣದಿರೆ ಭ್ರಮೆ । ಯಾಂತು ಮನದಿ ॥ ॥ ೧ ॥

ಅತ್ತಲಿತ್ತಲು ನೋಡಿದರೆ ಪುರು । ಷೋತ್ತಮನ ಮೂರುತಿಯ ಕಾಣದೆ॥
ಕುತ್ತಿಗೆಯ ಬಾಗಿದರು ಶರಧಿಗೆ । ಭಕ್ತಿಯಿಂದ ॥ ॥ ೨ ॥

ಹರುಷದಿಂದೋಲಾಡುತೆಲ್ಲರು । ಹರಿನಿರೂಪವ ಪೊತ್ತು ಶಿರದೊಳು ॥
ಪೊರಟರೊಂದೇ ಮತದಿ ನಿರ್ಜರ । ವರರು ಜವದಿ ॥ ॥ ೩ ॥ [೨೫೫]

ಭಾಮಿನಿ

ಗೆದ್ದರೀ ಸುರರಿಂದು ದುರುಳನು ।
ಹೊದ್ದಿದನು ಯಮಪುರಕೆನುತ್ತಲಿ ।
ಸಾರ್ದ ತನ್ನಯ ಪುರಕೆ ಕಮಲಜನಿತ್ತಲನಿಮಿಷರು ॥
ಎದ್ದರಾ ಕ್ಷಣದೊಳಗೆ ತಮ್ಮಯ ।
ವೈದ್ಯರನು ಒಡಗೊಂಡು ಬೇಗದಿ ।
ಹೊದ್ದಿದರು ನಡೆತಂದು ಸನ್ಮುನಿಮಾನ್ಯನಾಶ್ರಮಕೆ ॥ ॥ ೧ ॥ [೨೫೬]

ರಾಗ ಮಧುಮಾಧವಿ ಆದಿತಾಳ

ನೃಪಲಲಾಮನೆ ಕೇಳೀಕ್ಷಿಸುತಲಾ ಮುನಿಯು ।
ಉಪಚರಿಸುತ್ತಲಾಸನವಿತ್ತು ಮುದದಿ ॥
ತಾ ಪದುಳಿಗನಾಗುತವರ ಪಾದವನು ।
ಧೂಪದೀಪದೊಳರ್ಚಿಸುತ್ತ ಪೇಳಿದನು ॥ ॥ ೧ ॥

ಲಾಲಿಸಿರಮರಪಾಲಕರಿಂದು ಎನ್ನ ।
ಮೇಲಾಯಿತೆ ಕರುಣವೇನಪರೂಪಗಮನ ॥
ಬಲುತರ ತಪವನಾಚರಿಸಿಕೊಂಡಿರಲು ।
ಒಲಿಸಲಸಾಧ್ಯವೇಳೇಳು ಜನ್ಮದೊಳು ॥ ॥ ೨ ॥

ಫಳಿಲನೆನಗೆ ನೀವಿಂದೊಲಿದುದರಿಂದ ।
ಕುಲವೇ ಉದ್ಧಾರ ಹೊಂದಿಹುದೆನ್ನದೆಂದ ॥ ॥ ೩ ॥ [೨೫೯]

ರಾಗ ಸಾಂಗತ್ಯ ರೂಪಕತಾಳ

ಚೆನ್ನಾಯಿತೆನ್ನ ದಾಳುವೆ ನಿಮ್ಮಾಗಮನದಿ ।
ಧನ್ಯನಾದೆನು ನಿಜವಿಂದು ।
ಛಿನ್ನವಾಯಿತು ಭವಭವದ ಕಲ್ಮಷವೆಲ್ಲ ।
ಹಣ್ಣಿತೆನಗೆ ಶುಭೋದಯವು ॥ ॥ ೧ ॥

ಗಜವರೂಥಾದಿಗಳಿಂದೆನ್ನ ನಿಳಯಕ್ಕೆ ।
ದಿಜಯಮಾಡಿದ ಕಜ್ಜವೇನು ।
ಭಜಿಶನಾಗಿಹೆ ನಿಮ್ಮ ಚರಣಸರೋಜದ ।
ನಿಜವ ನಿರೂಪಿಸಿರೆನಗೆ ॥ ॥ ೨ ॥

ಎನಲೆಂದರೆಲೆ ಮುನಿತಿಲಕ ನೀ ಕರುಣಿಯೆಂ ।
ದೆನುವುದರಿತು ನಿನ್ನ ತನುವ ।
ವಿನಯದಿಂದಲಿ ಯಾಚಿಸುವಡೆ ಬಂದಿಹೆವೀಗ ।
ಕೆನಲುಸುರಿದನು ತನ್ನೊಳಗೆ ॥ ॥ ೩ ॥ [೨೬೨]

ರಾಗ ಕಾಪಿ ಅಷ್ಟತಾಳ

ಅಹಹ ಇನ್ನೇನುಸುರುವೆನು । ಬಲು ।
ಮಹಾತ್ಮರು ಪೇಳ್ದ ಚಾರುವಾಕ್ಯವನು ॥ ಪಲ್ಲ ॥

ಎಸೆವ ಈರೇಳು ಲೋಕದಲಿ । ಪರ ।
ರಸುವ ಯಾಚಿಸುವರ ಕಾಣೆನಿಂದಿನಲಿ ।

ಹೊಸ ನೂತನವಿದಾಯ್ತಿವರಲಿ । ಬಲು ।
ಹಸನವಾಗಿವೆ ತೋರ್ಪುದಕಟ ಮನದಲಿ ॥ ॥ ೧ ॥

ತಮ್ಮಸುವನು ಸಲಹುವರೆ । ಬಂದು ।
ಸುಮ್ಮನೆ ಪರರ ದೇಹವನು ಕೇಳುವರೆ ॥
ಧರ್ಮವಲ್ಲಿದನೆಣಿಸಿದರೆ । ಯಿವ ।
ರೆಮ್ಮ ಸಂಕಟದ ಕೊರೆತೆಯನರಿವರೆ ॥ ॥ ೨ ॥

ಹರಿನಿರೂಪವಿದೆಂದು ಮನದಿ । ತಾನಿಂ ।
ದರಿತೆ ನಿಜದೊಳಗಿವರ ಮನದಿರದಿ ।
ಸರಿಬಂತೆ ಹರಿಗೆ ಸನ್ಮತದಿ । ಹರ ।
ಹರ ಇನ್ನೇಗೈವೆನೀ ಪರಿಗೆ ತಾ ಮುದದಿ ॥ ॥ ೩ ॥ [೨೬೪]

ವಾರ್ಧಕ

ಬಳಲಿ ಫಲವೇನಿವರ ಮನಸಿನಭಿಲಾಷೆಯಂ ।
ಸಲಿಸಿದರೆ ಲೋಕದೊಳ್ಜನರರಿತೆನ್ನನ ।
ಗ್ಗಳಿಸಿ ನುಡಿದರೆ ಕೀರ್ತಿಯಪ್ಪುದಜನಿಹತನಕ ಮಾಣದಿದು ದಿಟವೆ ಬಳಿಕ ॥
ಒಲಿವನೆನಗಸುರಾರಿ ಕಡುಕರುಣದಿಂದೆನುತ ।
ತಿಳಿದು ಕೇಶವ ಮಾಧವಾಯೆನುತ ಹರಿಪಾದ ।
ನಳಿನವಂ ನೆನೆನೆನೆದು ವಿನಯದಿಂದನಿಮಿಷರಂ ಕರೆದು ಮಗುಳಿಂತೆಂದನು ॥
॥ ೧ ॥ [೨೬೫]

ಭಾಮಿನಿ

ಕೊಟ್ಟೆನೊಡಲನು ಕೊಂಬುದಿದನು ಯ ।
ಥೇಷ್ಟವೆಂದೊರೆದಾಗ ಧನ್ಯರ ।
ಶ್ರೇಷ್ಠ ನಿಜಮುಕ್ತಿಯನು ಪಡೆವ ಕುತೂಹಲದಿ ತನುವ ॥
ಬಿಟ್ಟು ನಡೆಯಲು ಮೇಲೆ ಸುಮನೋ ।
ವೃಷ್ಟಿ ಸುರಿದುದು ಭಾಪೆನುತ ತ್ರೈ ।
ವಿಷ್ಟಪಾಧೀಶ್ವರರು ಹೊಗಳಿದರಧಿಕಹರುಷದಲಿ ॥
॥ ೧ ॥ [೨೬೬]

ರಾಗ ಸೌರಾಷ್ಟ್ರ ತ್ರಿವುಡೆತಾಳ

ಕ್ಷಿತಿಪ ಕೇಳಾ ಬಳಿಕ ಸುಮನಸ । ಪತಿಗಳಿಂದಿನ ಕಾರ್ಯ ಲೇಸೆನು ।
ತತಿಜವದೊಳಾ ವಿಶ್ವಕರ್ಮನ । ಮತದೊಳಂದು ॥ ॥ ೧ ॥

ಮುನಿಪ ಬಿಟ್ಟೆಯ್ದಿದ ಕಳೇಬರ । ವನು ಬಗಿಯೆ ಝುಗಝುಗಿಸಿ ತೋರ್ದುದು।
ಘನತರದ ವಜ್ರದ ಮಹಾಯೆಲು । ಬಿನ ರಭಸವು ॥ ॥ ೨ ॥

ಮತ್ತದನು ಕತ್ತರಿಸಿ ಆಯುಧ । ಚಿತ್ರತರದಿಂ ರಚಿಸಿ ಹರುಷದೊ ।
ಳೊತ್ತಿಕೊಂಡೈದಿದರು ಬಲುಸಂ । ಪತ್ತಿನೊಳಗೆ ॥ ॥ ೩ ॥ [೨೬೯]

ಭಾಮಿನಿ

ಧರದೊಳಿಂತೆದ್ದಖಿಳ ವಿಬುಧೇ ।
ಶ್ವರರ ಪೆರ್ಬಲವೈದಿ ಮಿಗೆ ತ ।
ತ್ಪುರವನೀಕ್ಷಿಸಿ ರೋಷದಿಂ ಪಲ್ಗಡಿವುತೊಗ್ಗಿನಲಿ ॥
ತರಣಿಯಡಗಿದ ಮೇಲೆ ಯಾಮಿನಿ ।
ಧರಣಿಯನು ಕವಿವಂತೆ ಮತ್ತಾ ।
ಪುರವನುರೆ ಮುತ್ತಿದರು ಜಂಭಾರಾತಿಯಾಜ್ಞೆಯಲಿ ॥ ॥ ೧ ॥ [೨೭೦]

ವಾರ್ಧಕ

ಗಾಢದಿಂದಧಟಿನೊಳಗಾಪುರದ ಗೋಪುರದ ।
ಬೀಡಿನೊಳಗಿರುವ ಸುರವೀರರಂ ಶೂರರಂ ।
ಜೋಡು ಜೋಡಲಗ ತೆಗೆದೆಚ್ಚುತ್ತ ಕೊಚ್ಚುತ್ತಲೀಡಿರಿದು ಬೊಬ್ಬಿಡುತಲಿ ॥
ಪಾಡುಪಂಥವ ಬಿಟ್ಟು ಎರಗಿದರ ಮರುಗಿದರ ।
ನೋಡಿಸದೆ ಕರುಣದಿಂದೊಡಗೊಂಡು ಬಲಹಿಂಡು ।
ಗೂಡಿರಲ್ಕದ ಕೆಲನೋರ್ಡುತಂ ಓಡುತಂ ದನುಜೇಶಗಿಂತೆಂದರು ॥
॥ ೧ ॥ [೨೭೧]

ರಾಗ ಮುಖಾರಿ ಏಕತಾಳ

ದಾನವಾಗ್ರಣಿ ಕೇಳ್ವಿವರವ । ಇಂದಿನೊಳಮರ ।
ಸೇನೆಯು ಗೈವವುಪಟಳವ ॥ ಪಲ್ಲ ॥

ಏನೆಂಬೆವು ಬಲು । ಶಾನೆ ಬಲಗಳವ ।
ರ್ಬಾಣಹತಿಗೆ ರವಿ । ಸೂನುವಿಗೊಪ್ಪಿತು ।
ಸಾನುರಾಗದಿ ಮ । ನ್ಮಾನಭಂಗವ ನೋಡ್ ।
ತ್ರಾಣವಿಲ್ಲದೆ ತನು । ತಾನೆ ನಡುಗುವುದ ।
ನೀನತಭಯನಿ । ದಾನದಿ ಪಾಲಿಸು ॥ ॥ ೧ ॥

ಅಷ್ಟದಿಕ್ಕಿನೊಳು ಸಂಚಯವು । ನೋಡಿದಡಿಂಬು ।
ಗೊಟ್ಟುದಿಲ್ಲಿದುವೆ ನಿಶ್ಚಯವು ।
ಅಟ್ಟಹಾಸದಿ ಬಲು । ಕಟ್ಟಾಳಿನ ಭಟ ।
ರೊಟ್ಟದಟಿಲಿ ದಾ । ಳಿಟ್ಟಿಹರೆಮಗತಿ ।
ಗುಟ್ಟಿನ ನುಡಿಯೇ । ನ್ಪೆಟ್ಟಿನೊಳೌತಣ ।
ಗೊಟ್ಟಿಹರ್ಯೆ ಮೊರೆ । ಯಿಟ್ಟರು ಬಿಡದೇ ॥ ದಾನಾವಾಗ್ರಣಿ ॥
॥ ೨ ॥

ಕರ್ಬುರಾನ್ವಯಕೆ ಹಾನಿಯನು । ತಂದಿರ್ಪರವರ ।
ದರ್ಬಾರವುಸುರಲಿನ್ನೇನು ।
ನಿರ್ಭಯದಿಂದಿರು । ವರ್ಬಡಗೋಟೆಯ ।
ಪರ್ಬಿಕೊಂಡವರೆ । ಲ್ಲರ್ಬಿಲುಧ್ವನಿಗೈ ।
ವರ್ಬಿಂಕದಿ ತೋ । ರ್ಪರ್ಬಿರುಸನು ಮಹ ।
ದಾರ್ಭಟೆಯಿಂ ನಲಿ । ವರ್ಬಿಡುಗಣ್ಣರ । ಪೆರ್ಬಡೆ ಭಟರು ॥
॥ ೩ ॥ [೨೭೪]

ರಾಗ ಕಾಂಭೋಜ ಝಂಪೆತಾಳ

ಕಾಯದಲಿ ಕಳವಳಿಸಿ ದೂತರಿಂತೆನುತ ಬಲು ।
ಬಾಯ ಬಿಟ್ಟೊರಲೆ ರಾಕ್ಷಸರ ॥

ರಾಯನೀಕ್ಷಿಸುತ ಮನ್ನಿಸುತೆಂದನಾ ಸಭಾ ।
ನಾಯಕರ ವದನವೀಕ್ಷಿಸುತ ॥ ೧ ॥

ಅರರೆ ಯೇನೇನಿದೇನಾಶ್ಚರ್ಯವಿಂತೆಂದು ।
ಧುರದಿ ಸೋತವರೊಂದುಗೂಡಿ ।
ಮರಳಿ ಉನ್ನತ್ತಿಕೆಯೊಳೊದಗಿದರೆ ಧುರದೊಳವ ।
ದಿರ ಮದಾಂಧಿಕೆಯನೀಕ್ಷಿಸುವೆ ॥ ॥ ೨ ॥

ಇಂತೆನುತ ರೋಷದಿಂದುಬ್ಬೆದ್ದು ಪ್ರಳಯಕಾ ।
ಲಾಂತಕನವೋಲ್ ಗರ್ಜಿಸುತಲಿ ।
ಕುಂತಿರುವ ರಾಕ್ಷಸರ ತಿಂತಿಣಿಯನೊಡಗೊಂಡು ।
ಸಂತಸದಿ ಪೊರಟನಾಹವಕೆ ॥ ॥ ೩ ॥ [೨೭೭]

ಭಾಮಿನಿ

ನೃಪಕುಲೋತ್ತಮ ಕೇಳು ಖಳನಿಂ ।
ತಪರಿಮಿತ ಮೋಹರದಿ ಪ್ರಳಯದ ।
ತಪನಜನ ಕೊಳುಗುಳಕ್ಕಿಮ್ಮಡಿಯಿದೆಂಬಂತೆ ॥
ಸುಪರುವಾಣರ ಮೇಲೆ ಬಲಗೈ ।
ಚಪಲವನುದೋರುತ್ತ ನಿಮಿಷದಿ ।
ನಿಪುಣಖಳ ಸೇನಾಬ್ಧಿ ಮುಸುಕಿತು ಸುರರ ಬೊಬ್ಬಿರಿದು ॥
॥ ೧ ॥ [೨೭೮]

ರಾಗ ಭೈರವಿ ತ್ರಿವುಡೆತಾಳ

ಏನನೆಂಬೇ । ಸಮರವ । ಏನನೆಂಬೇ ॥ ಪಲ್ಲ ॥

ರೋಷದಲಿ ಖಳರಗಣಿತಾಯುಧ । ರಾಶಿಯನು ತೆಗದೆಸೆವುತ ।
ಮೀಸೆಯನು ತಿರುಹುತಲಿ ಖಡ್ಗವ । ರೋಷದಿಂದುಗಿದೆತ್ತುತ ।
ವಾಶಿಪಂಥವನಾಡಿ ಭಳಿರೆ ಶ । ಭಾಸು ಜತನವು ಎನ್ನುತ ।
ಆಶುಗಾದಿ ಸಮಸ್ತ ಭಟರನು । ಆಶುಗದ ಸಾರದಲಿ ಮುಸುಕಿದ । ರೇನನೆಂಬೆ॥
॥ ೧ ॥

ನೋಡುತನಿಮಿಷವರರು ಧನುವಿಗೆ । ಪೂಡಿದರು ಖಗಜಾಲವ ।
ಕೂಡೆ ತರುಬಿದರಾಗ ತವಕದೊ । ಳೀಡಿರಿವ ಖಳಮೇಳವ ।
ನೋಡಿನೋಡಿಕೊ ಕೊಲ್ಲು ತಿವಿರೆಂ । ದಾಡುತಿರ್ದರು ಶೌರ್ಯವ ।
ಆಡಲೇನ ತಂತಮ್ಮವೊಳಗೆ ಜರೆ । ದಾಡಿ ಖತಿಯಲಿ ಹೆಣಗುತಿರ್ದರ ।
ದೇನನೆಂಬೆ ॥ ॥ ೨ ॥

ರಾಗ ಮಾರವಿ ಏಕತಾಳ

ಅನಿತರೊಳನಿಬರನೀಕ್ಷಿಸಿ ಶಂಬರ । ದನುಜರ ನೆರವಿಯನು ।
ವಿನಯದಿ ಪಂತಿಕ್ಕುತ ತರುಬಿದನಂ । ದನಿಮಿಷಸೈನ್ಯವನು ॥
॥ ೧ ॥

ಕಂಡುರೆ ಕನಕವರೂಥನು ಚಾಪವ । ಕೊಂಡಬ್ಬರಿಸುತಲಿ ।
ಪುಂಡುತನದ ರಿಪುಮಂಡಲದದಟರ । ದಿಂಡುರುಳಿಸುತೆಂದ ॥
॥ ೨ ॥

ಬಲ್ಲಿದನಹೆ ರಣಮಲ್ಲ ಪರಾಕ್ರಮಿ । ನಿಲ್ಲೆಲೊ ಸಮ್ಮುಖದಿ ।
ಗುಲ್ಲಿನೊಳೆಮ್ಮವರಲ್ಲಿ ಕೈಗಲಿಪುದ । ಸೊಲ್ಲಿಸೆಮ್ಮೊಳು ದಿಟದಿ ॥
॥ ೩ ॥

ಮೊದಲೆಮ್ಮಯ ಆಯುಧದೊಳು ನೊಂದಿ । ರ್ಪುದ ಮರೆತಿಂದಿನಲಿ ।
ಮದಭ್ರಮೆಯಿಂದೊದಗಿದ ಕಾರಣ । ವದನೊರೆ ನೀ ಜವದಿ ॥
॥ ೪ ॥

ಹಿಂಗದೆಮ್ಮೊಳು ಹಲವಂಗದಿ ಬಾಯ ಪ್ರ । ಸಂಗವಿದ್ಯಾಕೆಲವೊ ॥
ಸಂಗಡಿಗರು ನಿಮಗಿಟ್ಟಿಹ ಪೆಸರಾ । ವಂಗವು ಪೇಳೆನಲು ॥
॥ ೫ ॥

ಅಂಬರಚರ ಕೇಳ್ ಶಂಬರನೆಂದೆನ । ಗೆಂಬರು ಮೂಜಗದಿ ।
ಡೊಂಬಿಯೊಳೆನಗಿದಿರಂಬನು ಕೊಡಲು ತ್ರಿ । ಯಂಬಕನಿಂಗರಿದು ॥
॥ ೬ ॥ [೨೮೬]

ರಾಗ ಶಂಕರಾಭರಣ ಏಕತಾಳ

ದಾನವ ಕೇಳಿನಿತು ಹೆಮ್ಮೆ । ಯೇನೆಂದು ಪೇಳುವೆ ಜವನ ।
ಸ್ಥಾನದಿ ನಿನ್ನುವನಿಡುವ । ತ್ರಾಣವ ನೋಡು ॥ ॥ ೧ ॥

ಅಂತದಟಲಿ ಕಣೆಯ । ನಾಂತುಕೊಳ್ಳೆನುತ್ತ ಖಳನು ।
ನಿಂತು ತೆಗೆದೆಚ್ಚನು ಮ । ಹಾಂತಶೌರ್ಯದಿ ॥ ॥ ೨ ॥

ಬಲ್ಲಿದ ನೀನಹುದು ಭಳಿರೆ । ಹುಲ್ಲುಶರದಿಂದಪ್ಪುದೇನು ।
ನಿಲ್ಲೆನುತ್ತಲೈದು ಶಸ್ತ್ರ । ದಲ್ಲಿ ಮುಸುಕಿದ ॥ ॥ ೩ ॥ [೨೮೯]

ರಾಗ ಸೌರಾಷ್ಟ್ರ ತ್ರಿವುಡೆತಾಳ

ಅಂಬಿನುರಿಯನು ತಾಳಲಾರದೆ । ಶಂಬರನು ಬೆರಗಾಗಿ ಸಮರದ ।
ಹಂಬಲನು ಬಿಟ್ಟೋಡಿದನು ಹಾ । ಯೆಂಬ ರವದಿ ॥ ॥ ೧ ॥

ಆಯತಿಕೆಯಿಂ ಕಂಡು ಕೆಲಬರು । ಜೀಯ ಹಾಹಾ ಎನುತ ಭಯದಲಿ।
ಸಾಯಕವ ಬಿಸುಟೋಡುತಿರ್ದರು । ಬಾಯ ಬಿಡುತ ॥ ॥ ೨ ॥

ಈ ತೆರನನೀಕ್ಷಿಸುತ ವೃತ್ರನು । ಯಾತಕೀ ಭಯ ಬೇಡ ನಿಮಗೆನೆ ।
ಭೀತಿಯಿಂ ಪಿಂತಿರುಗದೈದಿದ । ಸೋರ್ತವೆನುತ ॥ ॥ ೩ ॥ [೩೯೨]

ವಾರ್ಧಕ

ರಾಜಕುಲತಿಲಕ ಕೇಳಸುರಮೋಹರವು ಪಂ ।
ಕೇಜಸಖನುದಯಿಸಲ್ ಯಾಮಿನಿಯು ಬೆದರುತ್ತ ।
ಲೀ ಜಗವ ಬಿಟ್ಟಡುಗುವಂತೆ ಕಾಳಗವ ಮರೆತಡಗಿದರಜಯ್ಯಯೆನುತ ॥
ಮೂಜಗಕೆ ಬಾಹಿರನೀರ್ವೆಂದು ಜರೆದಸುರ ।
ರಾಜ ದಿವ್ಯಜ್ಞಾನದಿಂದರಿದನಪಜಯಂ ।
ಮಾಜದೆನಗೆಂದು ಶ್ರೀ ಹೈಮಾಂಬರನ ದಿವ್ಯಮೂರ್ತಿಯಂ ಧ್ಯಾನಿಸಿದನು॥
॥ ೧ ॥ [೨೯೩]

ರಾಗ ನೀಲಾಂಬರಿ ತ್ರಿವುಡೆತಾಳ

ತ್ರಾಹಿ ದೇವರ ದೇವ । ಜಯತು ಜಯ । ತ್ರಾಹಿ ಮಹಾನುಭಾವ ॥ ಪಲ್ಲ ॥
ತ್ರಾಹಿ ಕೇಶವ ತ್ರಾಹಿ ಮಾಧವ । ತ್ರಾಹಿ ಜಗದಾಧಾರಮೂರುತಿ ॥ ಅನುಪಲ್ಲ॥

ಹರಿಯೆ ಶ್ರೀ ಸಾರ್ವಭೌಮ । ಪಾಲಯಮಾಂ । ಹರಿಮಧ್ಯಹರಿಜೆಯಾಣ್ಮ ।
ಹರಿವದನ ಹರಿಭಯನಿವಾರಣ । ಹರಿಮಯಾಂಬರ ಹರಿನಿಭಾಂಗನೆ ।
ಹರಿವರದ ಹರಿಮಧ್ಯ ಹರಿಪಿತ । ಹರಿಶಯನ ನರಹರಿ ನಮೊ ನಮೊ ॥
॥ ೧ ॥

ಇಂದು ನಿನ್ನಯ ಭಕ್ತರ । ಸಂಗವಗೊಳಿ । ಸೊಂದೆ ಶ್ರೀ ಶರಣೋದ್ಧರ ।
ಬಂಧಹರ ಭವದೂರ ಮಧುಹರ । ಇಂದಿರೇಶ್ವರ ಪಾಹಿ ಅನಾಥ ।
ಬಂಧು ಕರುಣಾಪಾಂಗ ಜಯತು ಗೋ । ವಿಂದ ಪರಮಾನಂದ ಜಯ
ಜಯ ॥ ॥ ೨ ॥

ಇನಿತಸುರೇಂದ್ರ ತಾನು । ಧ್ಯಾನಿಸುತ ಕಂ । ಬನಿಯ ಭಕ್ತಿಯೊಳದನು ।
ವನಜನಾಭನ ಚರಣಕರ್ಪಿತಂಗ । ಳೆನುತೊರೆದು ಶ್ರೀವಿಷ್ಣುನಾಮದ ।
ವನಧಿಯಲಿ ಮುಳುಗಾಡಿ ಮೂರ್ಛಿಸಿ । ದನುಪತಿ ಮತ್ತೆದ್ದು ಪೊಗಳಿದ ॥
ತ್ರಾಹಿ ॥ ೩ ॥ [೨೯೬]

ರಾಗ ಕೇದಾರಗೌಳ ಅಷ್ಟತಾಳ

ವಂದಿಸುತತಿ ಭಕ್ತಿಯಿಂ ಪೊರಳುತ್ತಸು । ರೇಂದ್ರ ಚೇತರಿಸುತೆದ್ದು ॥
ಇಂದೀ ದಿವೌಕಸರೊಳು ಮಡಿದರೆ ಮುಕ್ತಿ । ಹೊಂದದುಳಿಯದೆನಗೆ ॥
॥ ೧ ॥

ಎನುತ ಯೋಚಿಸಿ ರೋಷದಿಂದೆದ್ದು ತನ್ನಯ । ಧನುಶರಾಯುಧಗಳನು।
ಘನಪರಾಕ್ರಮಿಯು ಹೂಂಕರಿಸಿಕೊಂಡನಿಮಿಷ । ರನು ಕೊಲತೊಡಗಿದನು॥
॥ ೨ ॥

ವಿಲಯಭೈರವನಂತೆ ಮೆರೆದಿರುವನ ಕಂಡು । ಛಲದಂಕ ಕ್ರೂರಸೇನ ॥
ಬಲುಪರಾಕ್ರಮದಿ ಮಾರಾಂತು ದೈತ್ಯನನು ಕೂ । ರಲಗಿನಿಂ ಮುಸುಕಿದನು॥
॥ ೩ ॥ [೨೯೯]

ರಾಗ ಭೈರವಿ ಏಕತಾಳ

ಎಲೆ ಪಟುಭಟ ಕೇಳಿತ್ತಾ । ಮಾ । ರ್ಮಲೆತಿದಿರಾಗುವ ಚಿತ್ತ ।
ಗಳಿಸಿದೆ ಯಾತಕೆ ನೀನು । ಬಲು । ಬಲವೆಲ್ಲಿದೆ ನೋಡದನು ॥
॥ ೧ ॥

ಹಲಬರನಂಜಿಸಿದಂತೆ । ಎ । ನ್ನಳವಿಯು ಸುಲಭವೆ ಪಿಂತೆ ।
ಕಲಹದಿ ಗೆದ್ದವನಹುದು । ಭಳಿ । ಭಳಿರೆನುತೆರಗಿದ ಮುಳಿದು ॥
॥ ೨ ॥

ಸಿಕ್ಕಿತು ನಾಕವು ಎನುತಾ । ಮನ । ವುಕ್ಕಳಿಸದಿರುನ್ಮತ್ತ ।
ಇಕ್ಕಳಕಿಕ್ಕಿತು ವ್ಯಾಧಿ । ನೋ । ಡಕ್ಕರದಿಂ ನಿಲು ರಣದಿ ॥
॥ ೩ ॥

ಹರಣದಾಶೆಯು ನಿನಗಿರಲು । ಇದು । ತರವಲ್ಲರಿತುಕೊ ಮರಳು ।
ಕರುಳನುಗಿವೆ ನೋಡೆನುತ । ಖಳ । ಪರಿಘದೊಳೆಚ್ಚನು ನಗುತ ॥
॥ ೪ ॥ [೩೦೩]

ಭಾಮಿನಿ

ಕೆರಳಿ ಬಹ ಪರಿಘವನು ಚೂರ್ಣಿಸಿ ।
ಮರಳಿ ರೋಷಾವೇಷದಿಂದಲಿ ।
ಮರುಳೆ ನೋಡೆನ್ನಂಬಿಗೀ ಪರಿಘ ಗಿರಿಗಗಳು ॥
ಗರಳಗಳ ಮಾರಾಂತಡಂಜೆನು ।
ದುರುಳ ನೀನೇಸರವನೆನ್ನಯ ।
ಸರಳಿನಾಟೋಪವನು ನೋಡೆಂದೆಚ್ಚನಸ್ತ್ರವನು ॥ ॥ ೧ ॥ [೩೦೪]

ರಾಗ ಸೌರಾಷ್ಟ್ರ ತ್ರಿವುಡೆತಾಳ

ಭಟರೆರೆಯನೆಚ್ಚಂಬು ಬಿರುಸಿನ । ಸ್ಫಟಿಕದೊಲ್ಧಳಥಳಿಸುತಸುರನ ।
ನಿಟಿಲಕಾಂತಲ್ಕೆಡೆದ ಮೂರ್ಛೆಯ । ಘಟನೆಯಿಂದ ॥ ॥ ೧ ॥

ಎಚ್ಚರಿತು ರೋಷಾಗ್ನಿಯಿಂದಲಿ । ಅಚ್ಚಭಟಭಾಪೆನುತ ಕೋಲ್ಗಳ ।
ನೆಚ್ಚಡೊರಗಿದನದಟಸಾಹಸ । ಪೆಚ್ಚನಾಗಿ ॥ ॥ ೨ ॥

ಈಕ್ಷಿಸುತ್ತಾಗಸದಿ ನಿರ್ಜರ । ಪಕ್ಷದವರಂಜುತ್ತ ಹಾಯೆನ ।
ಲಾಕ್ಷಣದಿ ಬಿಲ್ಲವರ ತರುಬಿದ ರಾಕ್ಷಸೇಶ ॥ ॥ ೩ ॥ [೩೦೭]

ಭಾಮಿನಿ

ಎಲ್ಲಿಹನು ವಿಬುಧೇಂದ್ರ ಕರೆ ಕರೆ ।
ಕೊಲ್ಲಿರೋಮವನುರದ ರಕುತವ ।
ಚೆಲ್ಲಿರೋ ವಾಂಛಿತವ ಸಲಿಸಿರೊ ವಿಕ್ರಮರು ಭುಜದ ॥
ಬಲ್ಲತಿಕೆಯನು ಬೀರಿ ತ್ರಿದಶರ ।
ಹಲ್ಲನುದುರಿಸಿರೀಗಳೆನೆ ಕರಿ ।
ವಲ್ಲಭನ ಮೇಲೇರಿ ತಡೆದನು ವಜ್ರರಿಪು ಭಟನ ॥ ॥ ೧ ॥ [೩೦೮]

ರಾಗ ಮಾರವಿ ಏಕತಾಳ

ಮಾರಾಂತದಟಿರಲೆಲೆ ದನುಜಾಧಮ । ಭೂರಿ ಭಟೌಘವನು ।
ತೀರಿಸಿದಂದವ ತೋರೆನುತಾಯುಧ । ವೇರಿಸಿ ಝಳಪಿಸಲು ॥
॥ ೧ ॥

ಹೋ ಹೋ ಮೆಚ್ಚಿದೆ ಭಳಿರೇ ಸಿಕ್ಕಿದೆ । ಸಾಹಸಿ ತನ್ನಿದಿರು ।
ಹೋಹಲು ಬಿಡೆ ಹರಣವ ಕಾಪಾಡುವ । ಸಾಹಯಿಕರದ್ಯಾರು ॥
॥ ೨ ॥

ಬಗುಳದಿರೆಲೆ ದುಷ್ಟಾತ್ಮನೆ ನೊರಜನು । ಸಿಗುಳಲು ಶರವ್ಯಾಕೆ ।
ಬಗವೆನೆ ನಿನ್ನಾಟೋಪವ ಬಲು ಬಲು । ಹುಗಳಿರೆ ನಿಲು ರಣಕೆ ॥
॥ ೩ ॥

ಕುಗ್ರಹಿಕೆಯೊಳೆನ್ನಗ್ರಜನನು ಕೊಂ । ದಗ್ಗಳಿಕೆಯು ನಿನ್ನ ।
ಅಗ್ರಕಡರಿದುದಗ್ರದೊಳಿಳಿಸುವ । ಉಗ್ರವ ನೋಡೆಂದ ॥ ॥ ೪ ॥

ಅಣ್ಣನು ಪೋಗಿಹ ತಾವಿಗೆ ಜವದೊಳು । ನಿನ್ನನು ಕಳುಹಿಸುವ ।
ಬಣ್ಣವ ನೋಡೆಂದೆರಗಲು ರಾಕ್ಷಸ । ಮುನ್ನವೆ ಗಜಕೊದೆದ ॥
॥ ೫ ॥ [೩೧೩]

ಭಾಮಿನಿ

ಕುಲಿಶಗೊಂಡ ಮಹಾದ್ರಿಯಂದದಿ ।
ವೊಲೆವೊಲೆದು ಎದೆಯಾರಿ ದಿಗ್ಗಜ ।
ವಿಳೆಗೆ ಮುಂಗಾಲೂರಿ ಡೆಂಘಣಿಸುತ್ತ ವೇದನೆಗೆ ॥
ಬಳಲಿದುದು ಬಿಲ್ಲೇಳರಂತರ ।
ಕಳುಹಿ ಹಿಮ್ಮೆಟ್ಟಿದುದು ನೆತ್ತರ ।
ಮಳೆಗರೆವುತೇನೆಂಬೆನಮರವ್ರಾತ ಮನಗುಂದೆ ॥ ॥ ೧ ॥ [೩೧೪]

ರಾಗ ಸೌರಾಷ್ಟ್ರ ತ್ರಿವುಡೆತಾಳ

ವೃತ್ರನದನೀಕ್ಷಿಸುತ ವೈರಿ ವಿ । ಪತ್ತಿನಲಿ ಕೈದುವನು ಧರಿಸಲು ।
ಸತ್ಯಧರ್ಮಕ್ಕೆಡರೆನುತ ನೋ । ಡುತ್ತಲಿರ್ದ ॥ ॥ ೧ ॥

ವೃತ್ರರಿಪು ಪೀಯೂಷಪಾವನ । ಹಸ್ತದಿಂ ತಡವಿದನು ಕರಿವರ ।
ಮಸ್ತಕವನಾ ಕ್ಷಣದಲೆದ್ದುದು । ನೃತ್ತದಿಂದ ॥ ॥ ೨ ॥

ಅಡರುತಲಿ ಬಲಹರನು ಕುಲಿಶವ । ತುಡುಕಿ ಹೂಂಕರಿಸುತ್ತ ಗಜವನು।
ನಡೆಸುತೆಂದನು ದನುಜ ನಿಲ್ಲೈ । ಅಡಗದೆನಲು ॥ ॥ ೩ ॥

ನುಡಿಯ ಕೇಳ್ದಸುರೇಶನೆಂದನು । ಬೆಡಗಿ ನಿನ್ನುವನಧಟ ಬಲ್ಲೆನು ।
ನುಡಿಯಲೇನ್ ವಿಶ್ವಾಸಘಾತಿ ಗ । ಳೊಡೆಯ ನಿನ್ನ ॥ ॥ ೪ ॥

ಹೊರುವಳೇ ಭೂದೇವಿ ಕಂಗಳ । ತೆರೆವಳೇ ಜಯಯುವತಿ ನಿನ್ನೊಳ ।
ಗಿರುವಳೇ ಸಿರಿ ಒಲಿವರೇ ಮುನಿ । ವರರು ನಿನಗೆ ॥ ॥ ೫ ॥

ಸತತ ನಿಮ್ಮೆಲ್ಲರನು ಕೃಪೆಯಲಿ । ಜತನದಿಂ ರಕ್ಷಿಸುತಿರುವ ಗೀ ।
ಷ್ಪತಿಯ ಮನ್ನಿಸದವನ ಮಾನವ । ಹತಿಸಿದೆಯಲ್ಲೈ ॥ ॥ ೬ ॥

ಸೊಲ್ಲಿಸುವದೇನ್ ಗೌತಮಾಖ್ಯನ । ಕ್ಷುಲ್ಲತನದಿಂ ವಂಚಿಸುತ್ತವ ।
ನೊಲ್ಲಭೆಗೆ ಮನವೆಳಸಿದಧಮ ನೀ । ನಲ್ಲವೇನೈ ॥ ॥ ೭ ॥

ಕಪಟದಿಂದಸುರರನು ಬೋಧಿಸಿ । ನಿಪುಣದಿಂದುದಧಿಯನು ಮಥಿಸುತ।
ಗುಪಿತದಿಂ ಸುಧೆಯುಂಡಿರ್ಪೈ ಗಡ । ಕೃಪಣತನದಿ ॥ ॥ ೮ ॥

ಮತ್ತೆ ಕೇಳಾ ವಿಶ್ವರೂಪನಿ । ಗಿತ್ತು ಗುರುತನವನ್ನು ಕಡೆಯಲಿ ।
ಮಸ್ತಕವ ನೀ ತರಿದು ದುರಿತವ । ಪೊತ್ತೆ ಯಾಕೈ ॥ ॥ ೯ ॥

ಚೋರತನದಿಂದೈದುತಾ ಮುದಿ । ಹಾರುವನ ಮರುಳ್ಗೊಳಿಸಿ ಕೊಂದೀ।
ನಾರುತಿರುವಸ್ಥಿಯನು ಧರಿಸಿದೆ । ವೀರನಹುದೈ ॥ ॥ ೧೦ ॥

ಮುಟ್ಟುವರೆ ಪರ ಸ್ತ್ರೀಯರನು ನಿ । ನ್ನೊಟ್ಟಿನವಳಿದ ಕೇಳಿ ಜರೆಯಳೆ ।
ಬಟ್ಟಕುಚದೂರ್ವಸಿಯು ಮಿಗೆ ಕೈ । ತಟ್ಟಿ ನಗಳೆ ॥ ॥ ೧೧ ॥

ಕೃತುಭುಜರ ಪಟ್ಟಣಕೆ ನೀನಧಿ । ಪತಿಯು ಭಾವುರೆ ಈ ತೆರದ ದು ।
ಷ್ಕೃತಿಯ ಹೋಗಾಡಿಸಲು ಕಾಣೆ ನಿ । ಷ್ಕೃತಿಯ ನಿನಗೆ ॥
॥೧೨॥ [೩೨೬]

ಭಾಮಿನಿ

ಅಧಿಕತರ ಬೆಡಗಿನಲಿ ಭಟಕುಲ ।
ದಧಿಪತಿಯು ವಿವರಿಸುವ ವಾಕ್ಯಕೆ ।

ತ್ರಿದಶಪತಿ ಮಾರ್ನುಡಿಯದಿರ್ದನು ಶಿರವ ತಗ್ಗಿಸುತ ॥
ಚದುರತನವಡಗಿದುದು ನಾಚಿಕೆ ।
ಯಧಿಕತರ ಭಾವದಲಿ ಮೆಲ್ಲನೆ ।
ಮಧುರತರವಚನದಲಿ ನುಡಿದನು ಖಳಕುಲಾಗ್ರಣಿಗೆ ॥ ॥ ೧ ॥ [೩೨೭]

ರಾಗ ಕೇದಾರಗೌಳ ಝಂಪೆತಾಳ

ಯಾಕೆನ್ನ ಜರವೆ ವೀರಾ । ನಿನಗಿದಿರು । ಸೋಕುವರ ಕಾಣೆನಾರಾ ।
ಸಾಕುಮಾಡಿನ್ನು ಧುರವಾ । ನಮ್ಮೊಳಗೆ । ಏಕಮತಿಯಿಂದಲಿರುವ ॥
॥ ೧ ॥

ಮೆಚ್ಚುವನು ವಿಧಿಯು ಮನದಿ । ಆಶ್ಚರ್ಯ । ಬಿಚ್ಚುವುದು ಮೂರು ಜಗದಿ ।
ಹೆಚ್ಚುವದು ಕೀರ್ತಿ ನಮಗೆ । ಬಳಿಕೊಲಿವ । ಅಚ್ಚುತನು ಲಾಲಿಸು ಮಿಗೆ॥
॥ ೨ ॥

ಹಗೆತನವ ಮರೆಯದಿರಲು । ತಿರುಹುವರು । ಮೊಗವ ತ್ರೈಮೂರುತಿಗಳು।
ಮಿಗುವರಿಯಬೇಡ ದಿಟವು । ನಿಮ್ಮೊಡನೆ । ಜಗಳಿಸಲು । ನಾವಂಜೆವು॥
॥ ೩ ॥

ನಮ್ಮ ಬಳಗವನು ಮುದದಿ । ಪೊರೆವ ಶ್ರೀ । ನಿರ್ಮಲಾತ್ಮಕನು ದಯದಿ।
ನಿಮ್ಮದಟಿಗಂಜೆವೀಗ । ಹಗೆತನವು । ಸುಮ್ಮಗೆನಲೆಂದನಾಗ ॥
॥ ೪ ॥ [೩೩೧]

ಭಾಮಿನಿ

ಭಿನ್ನವುಂಟೇ ದೇವನಿಗೆ ಕೇಳ್ ।
ತನ್ನ ಚೈತನ್ಯದಲಿ ಲೋಕಗ ।
ಳನ್ನು ಪಾಲಿಸುತಖಿಳರೊಳು ವ್ಯಾಪಿಸಿಹನೆಂದೆನುತಾ ॥
ಮುನ್ನವೇ ಒದರುವದು ಶ್ರುತಿ ನಿಜ ।
ವೆನ್ನುವಷ್ಟಾದಶಪುರಾಣಕೆ ।
ಸನ್ಮತವೆ ನೀನೆಂದ ನುಡಿ ಹರಹರ ಮಹಾದೇವ ॥ ॥ ೧ ॥

ಕನ್ನಡಿಯ ಚೂರುಗಳ ಸುತ್ತಲು ।
ಉನ್ನತದಿ ಸಾಲ್ಗೈದುಯಿರಿಸುತ ।
ರನ್ನದೀಪವ ಮಧ್ಯವಿಡಲಲ್ಲಲ್ಲಿ ತೋರ್ದಂತೇ ॥
ಸನ್ನುತರ ಹೃತ್ಕಮಲವೇ ನಿಜ ।
ತನ್ನ ಮನೆಯೆಂದಿರುತಲಿರ್ಪನ ।
ತನ್ನವನು ನೀನೆಂಬೆಯಂತಾದ್ಯಂತ್ಯರಹಿತನನು ॥ ॥ ೨ ॥

ಭ್ರಾಂತರಂದದಿ ಯೋಚಿಸುತ ನೀ ।
ನಿಂತುಕೊಂಡಿರಲ್ಯಾಕೆ ನಿನ್ನಯ ।
ಹೊಂತಕಾರಿಕೆಯನ್ನು ತೋರಿಸು ವಜ್ರವನು ತುಡುಕು ॥
ಪಂಥವನು ನಾ ಸರ್ವಥಾ ಬಿಡೆ ।
ಗೊಂತಿದೆನುತಸುರೇಂದ್ರ ತನ್ನಯ ।
ಅಂತರಂಗದಿ ನೆನೆದ ಸರ್ವಾತ್ಮಕನನುರುಪದವ ॥ ॥ ೩ ॥

ಜಯ ಜನಾರ್ದನ ದೈತ್ಯಮರ್ದನ ।
ಜಯಹರೇ ವೈಕುಂಠನಾಯಕ ।
ಜಯ ಜಯಾನಾಥಬಂಧು ಕರುಣಾಸಿಂಧು ಸಲಹಿಂದು ॥
ಜಯಜಯತು ಕಮನೀಯಗಾತ್ರನೆ ।
ಜಯಜಯತು ಶತಪತ್ರನೇತ್ರನೆ ।
ಜಯಜಯತು ದುರಿತಾಬ್ಧಿದೂರನೆ ಲೋಕಪಾವನನೆ ॥ ॥ ೪ ॥

ನೀನೆ ತ್ರಿಜಗತ್ಸೂತ್ರಧಾರಿಯು ।
ನೀನೆ ಮಧುಕೈಟಭಕುಠಾರಿಯು ।
ನೀನೆ ದೀನೋದ್ಧರಣ ಪಾರಂಜ್ಯೋತಿ ನೀನೆ ಕಣಾ ॥
ನೀನೆ ಆದಿಮಧ್ಯಾಂತರಹಿತನು ।
ನೀನೆ ಚಾತುರ್ವೇದಗಮ್ಯನು ।
ನೀನೆಯೇಕೋವಿಷ್ಣು ಪರಮಾತುಮನು ನಮೊಯಿಂದ ॥
॥ ೫ ॥[೩೩೬]

ರಾಗ ಕಾಂಭೋಜ ಝಂಪೆತಾಳ

ದೇವ ಇಂದಿನೊಳೆನಗಿನ್ನಾವ ಬಯಕೆಯುಮಿಲ್ಲ ।
ಭಾವಿಸಿಹ ಮುಕ್ತಿಯನು ದಿಟದಿ ॥
ನೀವೊಲಿದು ಕರುಣಿಸುತ ಕಾವುದೆನ್ನುವನಿಂದು ।
ಕೋವಿದನೆ ನಂಬಿದೆನು ನಿನ್ನ ॥ ॥ ೧ ॥

ಸಂಗರದೊಳಿಂದು ವಿಜಯಾಂಗನೆಯನಮರರಿಗೆ ।
ಸಂಗಿಸುತ್ತೆನಗೆ ವಿಷಯಗಳ ॥
ಹಂಗಹರಿವಂತೆಸಗುತಿಂಗಿತವ ಪಾಲಿಸೈ ।
ಮಂಗಲಾತ್ಮಕನೆ ಮನವೊಲಿದು ॥ ॥ ೨ ॥

ಹುಚ್ಚುತನದಿಂದ ಮದ ಹೆಚ್ಚಿ ಗೈದಿಹ ಪಾಪ ।
ಮುಚ್ಚಿತೆನ್ನಸುವನಸಿಯಂತೆ ।
ಸಚ್ಚಿದಾನಂದ ನಿನ್ನಯ ಕೃಪಾ ಜ್ಯೋತಿಯನು ।
ಹಚ್ಚೆನ್ನ ಹೃದಯಕಮಲದಲಿ ॥ ॥ ೩ ॥

ಎಂದೆನುತ್ತೆರಗಿ ಹರುಷಿತನಾಗಿ ಕೈದುಗಳ ।
ಚಂದದಿಂ ಧರಿಸಿ ಭೋರ್ಗರೆದು ॥
ನಿಂದಿರಿದಿರಿನೊಳು ಪುರಂದರನೆ ಸಹಸವಿರ ।
ಲೆಂದು ಖಾತಿಯೊಳೆರಗಲಾಗ ॥ ॥ ೪ ॥

ನಗಹರನು ಮನದಿ ರೋಷಿತನಾಗಿ ಕುಲಿಶವನು ।
ನೆಗೆದು ಝಳಪಿಸುತ ಗದ್ದಲಿಸಿ ।
ಹಗೆಯೆ ಕೇಳೆನ್ನಳವಿ ಬಗೆಯ ನೋಡೆಂದು ಕರ ।
ಯುಗವ ತುಂಡಿಸಿ ಕೆಡೆದನಾಗ ॥ ॥ ೫ ॥ [೩೪೧]

ವಾರ್ಧಕ

ಭೂರಮಣ ಕೇಳಿಂತು ಕರವ ತರಿಯೆಲ್ಕೆ ಖತಿ ।
ಯೇರಿ ವೃತ್ರಾಸುರನ ಕೋಪಾಗ್ನಿ ತ್ರಿಜಗಮಂ ।
ವೀರವಡಬಾನಲನ ದಾಳಿಯಂದದಿ ದಹಿಸುತಿರ್ದುದೇನೆಂಬೆ ಬಳಿಕ ॥

ಆರುಭಟೆಯಿಂ ಮಹಾಬಿಲದಂತೆ ಬಾಯ್ದೆರೆದು ।
ಚಾರುಗಜಸಹಿತಿಂದ್ರನಂ ನುಂಗಲಾಗ ವೃಂ ।
ದಾರಕರು ತರುಬಲವರಂ ನುಂಗುತಿರ್ದಮವಗೇಸು ಸಾಹಸಮಿಪ್ಪುದೊ
॥ ೧ ॥ [೩೪೨]

ಭಾಮಿನಿ

ಹೊಟ್ಟೆಯಲಿ ಧುರವೆಸಗಿರೋ ಎಂ ।
ದಟ್ಟಹಾಸದೊಳದರ ಮುಗಿಯಲು ।
ಕೆಟ್ಟೆವೈ ಹಾಯೆನುತ ಚೆಲ್ಲಿದುದನಿಮಿಷಾವ್ರಾತಾ ॥
ಅಷ್ಟರಲಿ ವಾಸವನು ನೆನೆದನು ।
ಶ್ರೇಷ್ಠ ನಾರಾಯಣಕವಚವನು ।
ತಟ್ಟನೊಡೆದುದು ಖಳನ ಬಸುರಾಕ್ಷಣಕೆ ಹೊರವಂಟ ॥
॥ ೧ ॥ [೩೪೩]

ರಾಗ ಮಾರವಿ ಏಕತಾಳ

ಇನಿತೆಲ್ಲರು ಹೊರವಡುತಾ ಕ್ಷಣದೊಳು । ಕನಲಿ ವಾಸವನಂದು ॥
ಘನತೆಯೊಳೊಜ್ರಾಯುಧವನು ಪಿಡಿವುತ । ದನುಜನೊಳಿಂತೆಂದನು ॥
॥ ೧ ॥

ನಿಶಿಚರ ಕೇಳೀ ಕುಲಿಶದಿ ನಿನ್ನಯ । ಅಸುವನು ಕೆಡಹುವಡೆ ॥
ಹಸನದಿ ನಿರ್ಜರಪಾಲಕನೆಂಬೀ । ಪೆಸರ ಮಾಣಿಸಬೇಕೈ ॥
॥ ೨ ॥

ನುಡಿದಾಕ್ಷಣ ಕುಲಿಶವ ವೃತ್ರನ । ಒಡಲನು ಅಪ್ಪಳಿಸಿ ।
ಕಡಿವಡೆಯಲು ಪಿಡಿದರಿದುದಾಗಸ । ದೆಡೆಯನು ಕಡುಭರದಿ ॥
॥ ೩ ॥ [೩೪೬]

ಭಾಮಿನಿ

ಪಕ್ಷಿವಾಹನ ರಕ್ಷಿಸುಗೆ ಸುರ ।
ಪಕ್ಷಸಜ್ಜನರಕ್ಷ ತ್ರಿಜಗಾ ।

ಧ್ಯಕ್ಷ ವಿಶ್ವಪರೀಕ್ಷ ಅರವಿಂದಾಕ್ಷ ಮುರಶಿಕ್ಷ ॥
ಮೋಕ್ಷದಾಯಕ ಆದಿಕೇಶವ ।
ಅಕ್ಷಯಾನುಗ್ರಹನೆ ಚಾರುಕ ।
ಟಾಕ್ಷ ಭರಿತನೆ ರಕ್ಷಿಸೆನುತಿಳೆಗುದುರಿತಾ ಶಿರವು ॥ ॥ ೧ ॥ [೩೪೭]

ರಾಗ ಶಂಕರಾಭರಣ ರೂಪಕತಾಳ

ಭೂಮೀಶ ಕೇಳು ಪುಣ್ಯಾತ್ಮರಾದವರಿಗೆ । ದೇವನಾಗಿಹ ವೃತ್ರಾಸುರಗೆ ।
ಪೂವರ್ಷವನು ಸುರಿದರು ಆನಂದದಿ ಹರಿ । ಸೇವಕರ್ಬಂದಾಡಿ ಜವದಿ॥
॥ ೧ ॥

ಏಸು ಬಳಲಿಕೆಯಾಂತುದೋ ಜೀಯೆನುತಾಗ । ಬೀಸಿದರ್ಸೆರಗ ನೇವರಿಸಿ।
ದೋಷರಹಿತನಾದೆಯೆಂದು ಕರೆದೊಯ್ದರಿ । ನ್ನೇಸು ಧನ್ಯನೊ ಮೂರುಜಗದಿ।
॥ ೨ ॥

ಪರಮಮುಕ್ತಿಯ ಪಡದತಿಸೌಖ್ಯದೊಳಗಿರ್ದ । ಹರಿಸ್ಮರಣೆಯ ಪ್ರಭಾವದಲಿ।
ನೆರೆ ಸಾಧುಗಳಿಗೆ ಶ್ರೀಹರಿಧ್ಯಾನವೇ ಮೋಕ್ಷ । ಕರವೆಂಬುದು ಸುಪ್ರಸಿದ್ಧ ॥
॥ ೩ ॥ [೩೫೦]

ರಾಗ ಸೌರಾಷ್ಟ್ರ ತ್ರಿವುಡೆತಾಳ

ಚಿತ್ತವಿಸು ಭೂಪಾಲಕನೆ ಬಳಿ । ಕಿತ್ತ ಲೇಖಾಧಿಪರ ನಿವಹದಿ ।
ಪೊತ್ತರತಿಸಂತೋಷವನು ಭಯ । ಪತ್ತಿ ಕೆಲಕೆ ॥ ॥ ೧ ॥

ಮೊಳಗುತಿಹ ಜಯಭೇರಿ ದುಂದುಭಿ । ಗಳ ರವವು ಬ್ರಹ್ಮಾಂಡಭಿತ್ತಿಯ।
ನಳಿದು ಬಿರಿವಂತಾದುದದನಿ । ನ್ನೇನನೆಂಬೆ ॥ ॥ ೨ ॥

ಖಳನಳಿದ ಮೇಲಿನ್ನು ನಮ್ಮಯ । ಬಳಗಕಿನ್ನೆಡರಿಲ್ಲವೆನುತಲಿ ।
ಪೊಳಲೆಡೆಗೆ ಮರಳಿದುದು ನಿರ್ಜರ । ದಳವು ನಲಿದು ॥ ॥ ೩ ॥

ಮತ್ತಕಾಶಿನಿ ಶಚಿಯು ದ್ವಾರದಿ । ವೃತ್ತಸ್ತನೆಯರ ಬಳೆಕೆಯಿಂ ನವ ।
ರತ್ನದಾರತಿಯನ್ನು ಬೆಳಗಿದಳ್ । ವೃತ್ರಹರಗೆ ॥ ॥ ೪ ॥ [೩೫೪]

ಭಾಮಿನಿ

ಜ್ಞಾನಿಶೀಲನೆ ಕೇಳು ನಗರವ ।
ಸಾನುರಾಗದಿ ಪೊಕ್ಕು ನಿರ್ಜರ ।
ಸೇನೆ ಸಡಲಿತು ತಮ್ಮತಮ್ಮ ನಿವಾಸದೆಡೆಗಾಗ ॥
ಶಾನನೇತ್ರನು ಪದುಳದಿಂ ಪಂ ।
ಚಾನನನ ಪೀಠವನುಯೇರುತ ।
ವೈನದಿಂದೋಲಗಿಸಿದನು ನಿಜರಾಜತೇಜದಲಿ ॥ ॥ ೧ ॥ [೩೫೫]

ವಾರ್ಧಕ

ವೃತ್ರ ಹತ್ಯಾದೋಷವಂದು ಕಡುಮುಳಿದು ಮಿಗೆ ।
ಮೃತ್ಯುವಂದದಲಿ ಕಾರೊಡಲ ದುರ್ಗಂಧ ಬೀ ।
ಸುತ್ತಸಿತಕಾಂತಿಯಿಂದುರಿನೇತ್ರದೋರೆ ಭ್ರುಕುಟೀಬದ್ಧ ಭೀಷಣದಲಿ ॥
ಬತ್ತಲೆಯ ಗಾತ್ರ ಜಂಜುರದಲೆಯ ಭೀಕರದಿ ।
ವೃತ್ರಹರನಿದಿರಿನೊಳ್ನಿಂದು ಬೈದೆರೆವುತಿರೆ ।
ಚಿತ್ತದೊಳ್ ಝುಕ್ಕುಲಿಸುತಮಮ ಎತ್ತಣಮಾರಿಯೆನುತಲಿಂತೆಂದ ಮನದಿ
॥ ೧ ॥ [೩೫೬]

ರಾಗ ಸಾವೇರಿ ರೂಪಕತಾಳ

ಹರಹರೆನ್ನಯ ಪೂರ್ವಾರ್ಜಿತ ಫಲವಿನ್ನೇನಿಹುದೊ ।
ಪರಿಹರಿಸುವೆನೆಂತೀ ದುರಿತವನಕಟಕಟ ॥
ಬೆರಸಿ ಬಂದುದು ಮೂರುಮುಖನ ಕೊಂದಘ ಪಿಂತೆ ।
ಹೊರಿಸಿದೆನದನು ನಾಲ್ವರಿಗೆ ಯುಕ್ತಿಯಲಿ ॥ ॥ ೧ ॥

ತೀರ್ಥಯಾತ್ರೆಯೊಳಾದರು ದುರಿತವ ತೊರದಪೆನೆನ್ನುತ ।
ಆರ್ತಿಳಿಯದವೋಲು ಪೊರಟನು ಕೊರತೆಯಲಿ ॥
ಅರ್ತಿಯಿಂದಲಿ ಪುಣ್ಯಕ್ಷೇತ್ರಕ್ಷೇತ್ರಕೆ ಪೋಗೆ ।
ಧೂರ್ತಾಕಾರದಿ ಬೆನ್ನಬಿಡದೇ ಐತರಲು ॥ ॥ ೨ ॥

ಎನ್ನ ಬಾಳುವೆಗೆ ಸಾಕೀ ಸುರಪದವಿಗಳಿಂದಿಗೆ ।
ಇನ್ನೀತನ ರಕ್ಷಿಸುವ ಪರಿಯೇನೆನುತ ॥
ಅನ್ನೆಗೀಕ್ಷಿಸಿದ ಮಾಸರಸಿಯ ಮಧ್ಯದಲಿ ।
ಹೊನ್ನಬಣ್ಣದ ತಾವರೆಯನ್ನತಿಹರುಷದಲಿ ॥ ॥ ೩ ॥

ಚಾರುರೂಪವ ಮಾಣಿಸುತ್ತಣುರೂಪ ಧರಿಸುತ ।
ನೀರಜದೊಳವೊಕ್ಕು ಬದುಕಿಹೆ ತಾನೆನುತ ॥
ಭೂರಿನೇತ್ರದ ಕಾಯವಡಗಿಸಿ ಸೂಕ್ಷ್ಮಾಕಾರದಿ ।
ಸೇರಿದ ಕಮಲನಾಳವನು ಭೀತಿಯಲಿ ॥ ॥ ೪ ॥ [೩೬೦]

ಭಾಮಿನಿ

ಅಲ್ಲಿ ನಾರಾಯಣನ ಮೂರ್ತಿಯ ।
ಸಲ್ಲಲಿತ ಪಾದವನು ನೆನವುತ ।
ಲಲ್ಲಿ ತಾ ಮೆಯ್ಮರೆದು ನಿಜಯೋಗಪ್ರಭಾವದಲಿ ॥
ಬಲ್ಲಿದನು ಹಲಗಾಲವೀ ಪರಿ ।
ಯಲ್ಲಿ ನೆಲಸಿರಲಿತ್ತಲನಿಮಿಷ ।
ವಲ್ಲಭರು ಭಯಗೊಂಡರರಸನ ಕಾಣೆವೇಕೆನುತ ॥ ॥ ೧ ॥ [೩೬೧]

ರಾಗ ಸೌರಾಷ್ಟ್ರ ಅಷ್ಟತಾಳ

ಹರಹರಿಂದಿನೊಳೆಮ್ಮ ದೊರೆಯೆತ್ತ ಪೊದನಿ । ದೇನಿರಯ್ಯ । ಎತ್ತ ।
ಲರಸಿ ನೋಡಿದಡಾತನಿರುವ ತಾವರಿಯೆವಿ । ದೇನಿರಯ್ಯ ॥
॥ ೧ ॥

ದೈತ್ಯನಿಕಾಯಕೀ ವರ್ತಮಾನಗಳಾದ । ಕೇಳಿರಯ್ಯ । ಬಂದು ।
ಮುತ್ತುತೆಮ್ಮನು ಬಡಿವುತ್ತ ಕೊಲ್ಲದೆ ಬಿಡ । ಕೇಳಿರಯ್ಯ ॥
॥ ೨ ॥

ಕಷ್ಟವೆ ಸರಿ ಮುಂದೆ ಬಟ್ಟೆಯೇನೆಮಗಿನ್ನು । ನೋಡಿರಯ್ಯ । ಬಲು ।
ಗುಟ್ಟನೊಳಾವಿರೆ ಕೆಟ್ಟುಪೋಪುದು ಕಾರ್ಯ । ನೋಡಿರಯ್ಯ ॥
॥ ೩ ॥ [೩೬೪]

ಕಂದ

ಎಂದಾ ನಿರ್ಜರತತಿಯೀ ।
ಅಂದವ ಶಚಿಗರುಹುವೆವೆನುತಾಗಳ್ ।
ಬಂದೆಲ್ಲರು ಮಗುಳರ ।
ವಿಂದಾಕ್ಷಿಯೊಳಿಂತೆಂದರ್ಕಡು ವಿನಯದೊಳಂ ॥ ॥ ೧ ॥ [೩೬೫]

ರಾಗ ಸೌರಾಷ್ಟ್ರ ಅಷ್ಟತಾಳ

ಕೇಳವ್ವಾ । ಮಾತ । ಕೇಳವ್ವಾ ॥ ಪಲ್ಲ ॥

ಕೇಳವ್ವ ಮಾತ ಸದ್ಗುಣಶೀಲಮತೇ ।
ತಾಳದಿರ್ದುಗುಡವೆಮ್ಮರಸನ ಕಾಂತೆ ॥ ಅನುಪಲ್ಲ ॥

ಲೇಖರ ಕುಲಕೆ ಶಿಖಾಮಣಿಯೆನಿಸಿ ।
ಲೋಕಮೂರರೊಳತಿಖ್ಯಾತಿಯ ಧರಿಸಿ ।
ಜೋಕೆಯಿಂದೆಮ್ಮ ರಕ್ಷಿಸುವ ವಾಸವನು ।
ನಾಕನಗರದೊಳು ಕಾಣನಿಂದವನು ॥ ॥ ೧ ॥

ಸೃಷ್ಟಿಯೀರೇಳರೊಳರಸಿ ನೋಡಿದೆವು ।
ಅಷ್ಟದಿಕ್ಪಾಲಕರ ಪುರದಿ ಕೇಳಿದೆವು ।
ದಿಟ್ಟ ಬಲಾಸುರನನ್ನು ಗೆದ್ದವನ ।
ಗುಟ್ಟ ಪೇಳುವರಿಲ್ಲ ಲಾಲಿಸೀ ಹದನ ॥ ॥ ೨ ॥

ಬದ್ಧ ವೈರಿಗಳಾದವರು ಸಮೀಪದಲಿ ।
ಗದ್ದಲಿಸುವರೆಂತಿರುವುದು ನಾವಿಲ್ಲಿ ।
ಬಿದ್ದೆವೀ ಬವಣೆಯೊಳೆನಲು ಕೇಳುತ್ತ ।
ಬಿದ್ದಳಂಗನೆಯು ರೋದನದಿ ಹಾ ಯೆನುತ ॥ ॥ ೩ ॥ [೩೬೮]

ರಾಗ ನವರೋಜು ಆದಿತಾಳ

ಎಲ್ಲಿ ಪೋದೆಯೊ ರಮಣ । ಸನ್ಮೋಹನ ಸುಗುಣ ॥ ಪಲ್ಲ ॥

ನಲ್ಲ ನೀಯೆನ್ನನಗಲುತ । ಪೋದೆಯೋ ನೀನೆತ್ತ ॥
ನಿಲ್ಲಗೊಡರು ಖಳ । ವಲ್ಲಭರೆಮ್ಮನು ।
ಕೊಲ್ಲುವರಲ್ಲೈ । ವಲ್ಲಭನೇ ನೀ ॥ ನೆಲ್ಲಿ ಪೋದೆಯೊ ರಮಣ ॥ ಅನುಪಲ್ಲ॥

ದಿಗುಪಾಲರೊಳು ನಿನಗೆ । ಅವಮಾನವಾಯ್ತೆ ।
ಜಗದೀಶಾನಿಂದೇನಾಯಿತೇ । ಹರಿಕರುಣವು ಹೋಯಿತೆ ।
ಮಿಗುವರಿದರೆ ಈ । ನಗರದವರು ಮಿಗೆ ।
ನಗೆಮೊಗದೋರದೆ । ಸುಗುಣ ನೀನಿಂದಿನೊ । ಳೆಲ್ಲಿ ಪೋದೆಯೊ ರಮಣ
॥ ೧ ॥

ದನುಜಾದಿಗಳೇನ್ಗೈದರೊ । ಮತ್ತಾ ಮನುಷ್ಯ ।
ಬಿನುಗರ್ಧುರಕೆ ಬಂದರೊ । ಆಶೀರ್ವದಿಸಿದರೊ ।
ಭಾನು ಮುಂತಾದವ । ರೇನ್ ಗೈದರೊ ಬಹು ।
ಮಾನವಂತನೆ ನಿನ । ಗಾನೇನೆಂಬೆನೊ ॥ ಎಲ್ಲಿ ಪೋದೆಯೊ ರಮಣ ॥
॥ ೨ ॥

ಮಾತಾನೆನ್ನೊಳು ಪೇಳದೇ । ಮೌನಾವವನಾಂತು ।
ಪ್ರೀತ ನೀನೆಲ್ಲಿಗೈದಿದೆ । ಬಳಲಿಸದಿರು ಬರಿದೇ ।
ಖ್ಯಾತಿಯೊಳೋಲಗಿಸದೆಯೆತ್ತೈದಿದೆ ।
ಭೀತಿಯಪ್ಪುದು ಪ್ರಾಣ । ನಾಥನೆ ಹಾಹಾ ॥ ಎಲ್ಲಿ ಪೋದೆಯೊ ರಮಣ
॥ ೩ ॥[೩೭೧]

ಭಾಮಿನಿ

ಏನ ಹೇಳಿದರೇನು ವಿಧಿಕೃತ ।
ಹೀನವಾಯ್ತುಕಟಕಟ ತನಗೆನು ।
ತಾ ನಿತಂಬಿನಿಯಳಲುತಿರಲೀಚೆಯಲಿ ಸುರಕಟಕ ॥

ಏನೆಸಗಲಿನ್ನರಸನಿಲ್ಲದ ।
ಸ್ಥಾನ ಲೇಸಲ್ಲೆನುತಲರಸಿದರ್ ।
ಮಾನವರೊಳಾರಿಹರು ಶತಮಖವೆಸಗಿದವರೆನುತ ॥
॥ ೧ ॥ [೩೭೨]

ರಾಗ ಸೌರಾಷ್ಟ್ರ ತ್ರಿವುಡೆತಾಳ

ಸೋಮವಂಶಸುಧಾಬ್ಧಿಚಂದ್ರಮ । ಭೂಮಿಪತಿ ನಹುಷಾಖ್ಯನಿತ್ತಲು ।
ನೇಮದಿಂ ಶತಮುಖವಗೈದತಿ । ಕ್ಷೇಮದಿಂದ ॥ ॥ ೧ ॥

ಧರಣಿಯನು ಬಿಟ್ಟಮರನಗರಿಗೆ । ಕಿರಿದು ದಿವಸದೊಳೈದಿ ಹರುಷದಿ ।
ತರಣಿತೇಜದಿ ಮೆರೆವುತೊಂದೆಡೆ । ಯರಸನಾಗಿರಲು ॥ ॥ ೨ ॥

ದೇವಮುಷಿಗಳು ಸಹಿತ ನಿರ್ಜರ । ಕೋವಿದರು ಬಂದಿದಿರು ನಿಲಲಾ ।
ಭೂವರನು ಬೆರಗಿಂದ ನುಡಿಸಿದ । ಸುವಿವರದಿ ॥ ॥ ೩ ॥ [೩೭೫]

ರಾಗ ಸುರುಟಿ ಏಕತಾಳ

ತಟ್ಟನುಸುರಿ ಕಾರ್ಯ । ನಿಮ್ಮಲಿ । ಕೆಟ್ಟಿಹುದೇನ್ ಧೈರ್ಯ ॥ ಪಲ್ಲ ॥

ಗುಟ್ಟನುಳಿದು ಬಂ । ದಿಷ್ಟವ ಬೆಸಸಿರಿ ।
ನಿಟ್ಟುಸುರಿಲಿ ಗಡ । ಗುಟ್ಟುವಿರೇಕೈ ॥ ಅನುಪಲ್ಲ ॥

ಅನಿಮಿಷರೆಲ್ಲವರು । ಗದ್ಗದ । ಧ್ವನಿಯಲಿ ನುಡಿಯುವರು ।
ಮನಸಿನೊಳಗೆ । ಬಲು । ದಣುವಾಂತಿಹ ಪರಿ ।
ಯನು ಬೇಗುಸುರಿರಿ । ಅನುಮಾನಿಸದಿರಿ ॥ ತಟ್ಟನುಸುರಿ ॥ ॥ ೧ ॥

ಎಂದಿನ ತೆರನಲ್ಲ । ಮುಖಸಿರಿ । ಕುಂದಿ ತೋರುವದಲ್ಲ ।
ಕಂದಿಲಿ ತನು ಬೆವ । ರ್ದಂದದಿ ತೋರ್ಪುದು ।
ಬಂದುದುಸುರಿರೆನ । ಲೆಂದರು ವಿನಯದಿ ॥ ॥ ೨ ॥ [೩೭೮]

ರಾಗ ಸುರುಟಿ ಆದಿತಾಳ

ಚಿತ್ತವಿರಿಸಿ ಕೇಳು । ಸದ್ಗುಣ । ಚಿತ್ತನೆ ಹರುಷದೊಳು ॥ ಪಲ್ಲ ॥

ಸತ್ವನಿಧಿಯೆ ನಾವ್ ಬಿತ್ತರಿಸುವ ನುಡಿ ।
ಸತ್ಯಗಳಲ್ಲದೆ । ಕೃತ್ರಿಮವಲ್ಲವು ॥ ಅನುಪಲ್ಲ ॥

ಸುರಪನು ಈವೂರ । ಹಂಬಲ । ಹರಿದು ಪೋಗಿಹ ದೂರ ॥
ಅರಸನಿಲ್ಲದ ಪುರ । ಸರಸವೆ ಲಾಲಿಸು ।
ಬರುವರೀ ಕ್ಷಣದೊಳ । ಗರಿಗಳು ಸುಲಿಗೆಗೆ ॥ ॥ ೧ ॥

ಅರಸ ನೀನತಿಬಲನು । ಶತಕ್ರತು । ವಿರಚಿಸಿದವ ನೀನು ।
ಹರುಷದಿಂದಲಿ ಸುರ । ಪುರದಾಧಿಪತ್ಯವ ।
ಧರಿಸಿ ಸತ್ಕುರಣದಿ । ಪಾಲಿಸಬೇಕೈ ॥ ॥ ೨ ॥ [೩೮೦]

ಭಾಮಿನಿ

ಬಿತ್ತರಿಪ ವಾಕ್ಯವನು ಕೇಳುತ ।
ಪೃಥ್ವಿಪತಿ ನಗುತೆಂದನೇನಿದು ।
ಮರ್ತ್ಯರಿಂದಹುದುಂಟೆ ನಿರ್ಜರಪುರದ ದೊರೆತನವು ।
ಶಕ್ತಿ ಸಾಲದು ಮೇಣು ಬಲುಬಲು ।
ಶತ್ರುಗಳು ಕಾಡುವರು ಅದರಿಂ ।
ಹೊತ್ತುಗಳೆಯುವ ನುಡಿಯೊಳೇನ್ ಫಲ ಹರಿಯದೆನ್ನಿಂದ
॥ ೧ ॥ [೩೮೧]

ರಾಗ ಕೇದಾರಗೌಳ ಅಷ್ಟತಾಳ

ಎಂದು ಭೂಪತಿ ನುಡಿಯಲ್ಕೆ ನಿರ್ಜರರು ಮ । ತ್ತೆಂದರು ವಿನಯದಲಿ।
ಇಂದು ನೀನೇ ತೆರನೆಂದರೆಮ್ಮನು ಕಾವ । ಬಂಧುಗಳಿಹರೆ ಮತ್ತೆ ॥
॥ ೧ ॥

ಎನಲು ನಹುಷನೆಂದ ಕರುಣಿಸಿರಿನ್ನು ಬ । ಲ್ಕನಿಸಿನಿಂದಾರ ನಾನು ।
ಘನತೆಯಿಂದಲಿ ನೋಡಲವರ ಸಹಸವು ಸ್ತಂ । ಭನವಪ್ಪ ವರವನೀಗ ॥
॥ ೨ ॥

ಇತ್ತೆವೈ ನೀನೆಂದ ವರವನೆನ್ನುತ ಮುದ । ವೆತ್ತನಿಮಿಷರೆಲ್ಲರು ।
ಪೃಥ್ವಿಪಾಲಕನ ಪೊಗಳುತ । ಕೊಂಡೊಯ್ದರಂ । ದತ್ತ್ಯಂತ ಪದುಳದೊಳು
॥ ೩ ॥ [೩೮೪]

ರಾಗ ಕಾಂಭೋಜಿ ಝಂಪೆತಾಳ

ಧರಣಿಯಾಣ್ಮನೆ ಕೇಳು ಹರುಷದಿಂದೆಲ್ಲವರು ।
ಮೆರೆವ ಮಂಗಳಘೋಷದಿಂದ ॥
ತರುಣಿಯರ ಗೀತಪಾಠಕರ ಪೊಗಳಿಕೆಯಿಂದ ।
ಅರಸನನು ಮಗುಳಲಂಕರಿಸಿ ॥ ॥ ೧ ॥

ಪಟ್ಟಣವ ಶೃಂಗರಿಸುತತಿವಿಚಿತ್ರವ ಗೈದು ।
ಪಟ್ಟಾಭಿಷೇಕವನು ಮುದದಿ ॥
ಸೃಷ್ಟಿಪಾಲಕನ ಸಿಂಹಾಸನದೊಳೇರಿಸುತ ।
ಶ್ರೇಷ್ಠದಿಂ ವಿರಚಿಸಿದರೊಲಿದು ॥ ॥ ೨ ॥

ಅಂಗನೆಯರೊಲಿದು ಗೀತವ ಪಾಡಿ ಸುರುಚಿರದ ।
ಮಂಗಳಾರತಿಯ ಬೆಳಗುತಿರೆ ॥
ಡಂಗುರವ ಸಾರಿದರು ನಹುಷರಾಯನು ಅಮರ ।
ರಿಂಗರಸನಾದನೆಂದೆನುತ ॥ ॥ ೩ ॥ [೩೮೭]

ರಾಗ ಶಂಕರಾಭರಣ ತ್ರಿವುಡೆತಾಳ

ಅರಸನತಿಸಂತೋಷದಿಂದಲಿ । ಸುರುಚಿರಾಸನವೇರಿ ಸಕಲಾ ।
ಮರರೊಡನೆ ಓಲಗಿಸುತೊಂದಿನ । ವೊರೆದ ತನ್ನಯ ಮನದೊಳು ॥
॥ ೧ ॥
ದೇವಲೋಕದ ಪದವಿ ತನಗಿರೆ । ದೇವಸತಿಯರು ತನಗೆ ಸೇವಿಸೆ ।
ದೇವಗಣ ನಾ ಪೇಳಿದಂದದಿ । ತಾವಿರಹರು ದಿಟ ಬಳಿಕಲಿ ॥
॥ ೨ ॥

ದೇವರಾಜಗೆ ಸತಿಯೆನಿಸುವೀ । ದೇವಪಟ್ಟದ ವನಿತೆ ತನ್ನನು ।
ದೇವನೆಂದೊಡಗೂಡದಿರ್ದೊಡೆ । ಕೋವಿದನು ತಾನಪ್ಪೆನೆ ॥
॥ ೩ ॥

ಎಂದರಿತು ಚರನೊಡನೆ ಪೇಳ್ದನು । ಇಂದರನ ಸತಿಯಾದ ಶಚಿಯನು।
ತಂದು ನಿಲಿಸದಡೀಗ ನಿನ್ನನು । ಕೊಂದಪೆನು ನಡೆ ಶೀಘ್ರದಿ ॥
॥ ೪ ॥ [೩೯೧]

ಭಾಮಿನಿ

ಎನಲು ಕೇಳ್ದಾ ಚರನು ದೇವಿಯ ।
ಸನುಮುಖಕೆ ಬಂದುಸುರಿದನು ಕೇ ।
ಳ್ವನಜಮುಖಿ ಈ ನಾಕದೊಡೆತನವಾಂತ ನಹುಷಾಖ್ಯ ॥
ವಿನಯದದಲಿ ನಿಮ್ಮುವನು ಕರೆತಾ ।
ರೆನುತಲೆನ್ನಟ್ಟಿದನು ತಾನೇ ।
ನೆನುವುದೆನೆ ಲಲಿತಾಂಗಿ ಕೆಡೆದಳು ತನುವ ಭೀತಿಯಲಿ ॥
॥ ೧ ॥ [೩೯೨]

ರಾಗ ಘಂಟಾರವ ಆದಿತಾಳ

ಶಿವಶಿವೆನ್ನೇನನೆಂಬೆನು । ಎನ್ನಯ ಪೂರ್ವ । ಭವದಾಸುಕೃತಿಗಳನು ॥
ಭುವನ ಮೂರರೊಳೆನ್ನೊಲು । ಪಾಪಿಗಳುಂಟೆ । ಯುವತಿ ಸಮೂಹದೊಳು
॥ ೧॥

ಪತಿಯು ಮೋಸದಲಿ ಬಿಟ್ಟು । ಪೋದನು ಎನ್ನ । ಅತಿವೈರಿಗಳಲಿ
ಕೊಟ್ಟು ॥ ಹಿತಶತ್ರುಗಳಾಗುತಲಿ । ನಿರ್ಜರರೀ ಸಂ । ಗತಿಗೈದುದೇನ
ಪೇಳಲಿ ॥ ॥ ೨ ॥

ಎನ್ನಯ ಪ್ರಾಣಧವನ । ನೆಲೆಯರಿಯದೆ । ಮುನ್ನವೀ ಮರ್ತ್ಯಾಧಮನ॥
ಮನ್ನಿಸಿ ಕರೆದು ತಂದು । ಪಟ್ಟವನಿತ್ತ । ರನ್ಯಾಯಕಂಜದಿಂದು ॥
॥ ೩ ॥

ಹೀನಮತಿಗಳಾದರೆ । ಪಟ್ಟಣವನ್ನು । ಮಾನುಷ್ಯಗೊಪ್ಪಿಸಿದರೇ ॥
ತಾನೆ ವ್ಯಾಘ್ರನ ಕರೆದು । ಮನ್ನಿಸುತಲಿ । ಧೇನುವವಿತ್ತಂತಾದುದು ॥
॥ ೪ ॥

ಏಕಾಂಗಿಯಾಗಿ ಹೀಗೆ । ಸಿಕ್ಕಿದೆನಲ್ಲ । ವ್ಯಾಕುಲಾರಣ್ಯದೊಳಗೆ ॥
ಪೋಕಾದೆ ಮೂರೂ ಜಗಕೆ । ಈ ಹೆಣ್ಣುಜನ್ಮ । ಸಾಕಿನ್ನು ಭವ ಭವಕೆ ॥
॥ ೫ ॥

ಯಾತಕೆ ವಿಧಿಸಿದನು । ಪೌಲೋಮನ । ಜಾತೆಯೆಂದೆನ್ನಜನು ॥
ದೂತನಿಂದೆನ್ನ ಬಿಡನು । ಎನ್ನನು ಕಾಯ್ದ । ದಾತಾರರನು ಕಾಣೆನು ॥
॥ ೬ ॥ [೩೯೮]

ಭಾಮಿನಿ

ಅಳಲುತೀ ಪರಿಯಿಂದ ಬಿಸಿಲಿನ ।
ಝಳಕೆ ಬಾಡಿದ ಬಳ್ಳಿಯಂದದಿ ।
ಲಲನೆ ಚಿಂತಾಭಾರದಿಂ ಬಳುಕತಿರೆ ಜಾರಕನು ॥
ತಿಳಿದು ಮೌನವನಾಂತು ತಿರುಗುತ ।
ಗಳಿಲನೈದಿ ನೃಪಾಲನಿದಿರೊಳು ।
ತಲೆಯನುರೆ ಬಾಗುತ್ತ ಬಿನ್ನವಿಸಿದನು ಕಡುಭಯದಿ ॥ ॥ ೧ ॥ [೩೯೯]

ರಾಗ ಆದಿತಾಳ

ಲಾಲಿಸಿ ಕೇಳು ರಾಜ । ಭಾಸ್ಕರ ತೇಜ ॥ ಲಾಲಿಸಿ ಕೇಳು ರಾಜ ॥ ಪಲ್ಲ॥

ಪಾಲಿಸಿದಾಜ್ಞೆಯಂತೆ । ಬಾಲೆ ಶಚಿಯ ಮುಂತೆ ।
ಪೇಳಿದೆ ನಾನು ಪೋಗಿ । ವಿಸ್ತಾರವಾಗಿ ॥ ॥ ೧ ॥

ಮಾತನೆನ್ನೊಡನಾಕೆ । ಯಾತರಾಡದೆ ಬ್ಯಾಕೆ ।
ಖ್ಯಾತೆ ಶೋಕಾಬ್ಧಿಯಲಿ । ಬಳಲಿದಳಳಲಿ ॥ ॥ ೨ ॥

ಬೆದರಿ ನಾ ತಿರುಗಿದೆನು । ಹದನವ ಲಾಲಿಸಿನ್ನು ।
ಸದರವು ಎನ್ನೊಳೀಗ । ನಿಮ್ಮೊಳಗ ॥ ॥ ೩ ॥ [೪೦೨]

ಭಾಮಿನಿ

ಎಂದು ಶಿರವೆರಗಿದನನೀಕ್ಷಿಸಿ ।
ಹಂದೆ ಹೋಗೆಂದೆನುತ ಗರ್ಜಿಸಿ ।
ಮಂದಹಾಸದೊಳಾಗ ಮತ್ತೋರ್ವನನು ಬರಿಸುತ್ತ ॥
ಚಂದದಿಂ ನೀನೈದಿ ಸವಿನುಡಿ ।
ಯಿಂದಲಾ ಇಂದ್ರಾಣಿಯೆನಗೊಲಿ ।
ವಂದವನು ವಿರಚಿಸುತ ಕರೆತಾರೆಂದು ಕಳುಹಿದನು ॥ ॥ ೧ ॥ [೪೦೪]

ಕಂದ

ನೇಮವನಾಂತಾ ದೂತನು ।
ಕಾಮಿನಿಯಿರ್ಪೆಡೆಗಂ ಬಂದಾಗಳ್ ।
ಭೂಮಿಪನಾಜ್ಞೆಯ ಪೇಳಲ್ ।
ಕೋಮಲೆ ಹಾಯೆಂದಳಲಿದಳಾಗಳ್ ॥ ॥ ೧ ॥ [೪೦೩]

ರಾಗ ಕಾಂಭೋಜಿ ಆದಿತಾಳ

ಎಂತು ಬಾಳಲಯ್ಯೊ ಕಾರ್ಯ । ವಿಂತಾಗಲಿನ್ನು ॥ ಪಲ್ಲ ॥

ದುರುಳರು ಕಾಯ್ವರೊಂದೆಸೆಯಲಿ ನೆರೆದು ।
ಅರಸ ಬಿಟ್ಟೈದಿದನೆನ್ನನು ತೊರೆದು ।
ನರರೊಳಧಮನಾದವನು ಮೇಲ್ವರಿದು ।
ಇರಗೊಡನೆನ್ನನೇಗೆಯ್ಯಲೆಂದರಿದು ॥ ॥ ೧ ॥

ಈವರೆಗೆನ್ನ ಸುವ್ರತವನ್ನು ದಯದಿ ।
ಶ್ರೀವರನೊಲಿದು ಪಾಲಿಸಿದನೀ ದಿನದಿ ।
ಸಾವೆನಲ್ಲದೆ ನರಾಧಮಗೆ ತಾ ಮುದದಿ ।
ಸೇವಿಸಿಕೊಂಡು ಇರುವೆನೆಂತು ಸ್ಥಿರದಿ ॥ ॥ ೨ ॥

ಕರುಣಿಯಾಗಿಹ ನಮ್ಮಯ ಗುರುನಾಥ ।
ಇರಲೆಮಗಪ್ಪುದೆ ಈ ವಿಪರೀತ ।
ಭರದಿ ಮೆಯ್ದೋರಿಸಕಟ ಪ್ರಖ್ಯಾತ ।
ಮರಣವ ನೋಳ್ಪುದುಚಿತವೆ ದಾತ ॥ ॥ ೩ ॥ [೪೦೮]

ಭಾಮಿನಿ

ಆ ಪತಿವ್ರತೆಯಳಲ ಕಾಣು ।
ತ್ತಾ ಪರಮಗುರು ಕರಗಿ ಮನದಿ ದ ।
ಯಾಪರನು ತಾನಾಗಿ ಮೆಯ್ದೋರುತ್ತ ವಿನಯದಲಿ ॥
ತಾಪವೇನೌ ಮಗಳೆ ಬಳಲದಿ ।
ರೀ ಪರಿಯ ಶೋಕದಲಿ ನಿನ್ನಯ ।
ಆಪತ್ತಿಗೆ ತಾ ಹೊಣೆಯು ಎಂದೊಡಬಡಿಸಿದನು ಶಚಿಯ ॥
॥ ೧ ॥ [೪೦೯]

ರಾಗ ಮಾರವಿ ಏಕತಾಳ

ಇನಿತನು ನಿಂದೀಕ್ಷಿಸುತಾ ದೂತನು । ಜನಪನ ಬಳಿಗೈದಿ ।
ವಿನಯದಿ ಗೀಷ್ಪತಿಯಾ ದೇವಿಯ ಬರ । ವನು ತಡೆಸಿದನೆನಲು ॥
॥ ೧ ॥

ಘಡ ಧಿಷಣನು ಇಂದೆನ್ನುಕ್ತಿಗೆ ಕಡು । ಕೆಡುಕನು ಎಸಗಿದನೇ ।
ಬಡಿದಾತನ ಕೆಡಹುತಲಾ ಶಚಿಯನು । ಪಿಡಿತರುವೆನು ಬಿಡದೆ ॥
॥ ೨ ॥

ಎನುತ್ತೈತರುತಿರಲರಿತಾ ಬೃಹಸ್ಪತಿ । ವನಜಾಕ್ಷಿಯು ಸಹಿತ ।
ಜನಪಗದೃಶ್ಯವಾಗಿರಲೀಕ್ಷಿಸುತವ । ಮುನಿಸಿನೊಳಿಂತೆಂದ ॥
॥ ೩ ॥ [೪೧೧]

ಭಾಮಿನಿ

ಅರರೆ ಘಡ ಧಿಷಣಾಖ್ಯನಿಂದಿಲಿ ।
ಪಿರಿದು ಬಲ್ಲಿದನಾದನೇಯೆ ।

ನ್ನಿರವನುರೆ ಕೆಡಿಸಿದನಲಾ ಪೌಲೋಮಿಯೊಡನೆನಗೆ ॥
ಎರಕವಾಗುವ ಕೆಲಸದೊಳಗೀ ।
ಗುರುವು ಪಗೆತನವೆಸಗಿದನೆ ಬಡಿ ।
ದುರುಳಿಸುವೆನೀ ಸುರರನೆಂದಬ್ಬರಿಸುತಿಂತೆಂದ ॥ ॥ ೧ ॥ [೪೧೨]

ರಾಗ ಸೌರಾಷ್ಟ್ರ ತ್ರಿವುಡೆತಾಳ

ಹಿಡಿಹಿಡಿರೊ ನಿರ್ಜರರ ಬೇಗ ದ । ವಡೆಯ ಹಲ್ಲುಗಳುರುಳುವಂದದಿ।
ಹೊಡಿಹೊಡಿರೊ ಖಂಡೆಯದಿ ಖೇಚರ । ಗಡಣವನ್ನು ॥ ॥ ೧ ॥

ಎನುತ ಬಲುದಳವೆರಸಿ ನಿರ್ಜರ । ರನು ಹಿಡಿದು ದಂಡಿಸುತ ಭೂಪಾ।
ಲನು ಮಹಾರೋಷದಲಿ ಹೊಯ್‌ಹೊ । ಯ್ಯನಿಬರೊಡಲ ॥
॥ ೨ ॥

ಕೂಡೆ ತರಿದೊಟ್ಟಿರೊ ಮಹಾ ತಿಳಿ । ಗೇಡಿಗಳ ಹೆಡಮುಡಿಯಗಟ್ಟುತ ।
ಜೋಡಿಸಿರೊ ನಿಗಳವನು ನೀವ್ ತಡ । ಮಾಡದೆನಲು ॥
॥ ೩ ॥ [೪೧೫]

ವಾರ್ಧಕ

ಧುರಪರಾಕ್ರಮಿ ಕೇಳು ನಹುಷನೀ ತೆರದೊಳಖಿ ।
ಳರನು ಹಿಡಿಹಿಡಿದು ದಂಡಿಸುತಿರಲ್ಕಾಗಳಾ ।
ಪುರದಿ ಗಜಬಜಿಸುತೆಣ್ದೆಸೆಗೆ ಮೊರೆಯಿಡುತ ಹಾಹಾರವದಿ ಖಚರಾದ್ಯರು॥
ಭರದಲೋಡಾಡುತಿರಲಕಟ ಹಾಯೆಂದು ಸುರ ।
ವರರು ಗಾಬರಿಗೊಂಡು ಜವದೊಳಾಂಗೀರಸನ ।
ಚರಣಕೆರಗುತ್ತ ಬಿನ್ನವಿಸಿದರ್ಕರುಣನಿಧಿ ಕೈಗಾವುದೆಮ್ಮನೆಂದು ॥
॥ ೧ ॥ [೪೧೬]

ರಾಗ ಯರಕಲಕಾಂಭೋಜಿ ಆದಿತಾಳ

ಗುರುರಾಯ ಲಾಲಿಸಯ್ಯ । ಬಿನ್ನಪವ ಸ । ತ್ಕರಣದಿ ಕೇಳು ಜೀಯ
॥ ಪಲ್ಲ ॥

ಸುರರ ಸಂಕುಲವನೆಲ್ಲ । ನಹುಷನ\ಖಂಳಿಷನೆಂಬ । ದನು ಕೊಲುವನಲ್ಲ ।
ಅರುಹುವುದೇನಷ್ಟವಸುಗಳು ಸಹಿತಲಿ ।
ಸರಕುಮಾಡಿದನಿಂದಿಲಿ । ರೋಷದಲಿ ॥ ॥ ೧ ॥

ಮುಗುದೆಯರೆಲ್ಲರನು । ಪಿಡಿವುತಲಿ । ನಿಗಳವನಿಕ್ಕಿದನು ।
ಹಗೆತನದಿಂದ ಬಾಧಿಸುವ ದುಷ್ಟಾತ್ಮನ ।
ಬಗೆಯನೇನೆಂಬೆವಯ್ಯ । ಕೇಳಯ್ಯ ॥ ॥ ೨ ॥

ಫುಲ್ಲನೇತ್ರೆಯ ನೆವದಿ । ಆತನು ನಮ್ಮ । ಕೊಲ್ಲುವನ್ನೆ ದಿಟದಿ ।
ಬಲ್ಲಿದ ನೀನಲ್ಲದಿನ್ನು ನಮ್ಮನು ಕಾಯ್ವ ।
ಬಲ್ಲಿದರಿಹರೇ ಪೇಳು । ನೀ ಕೇಳು ॥ ॥ ೩ ॥ [೪೧೯]

ರಾಗ ಸಾಂಗತ್ಯ ರೂಪಕತಾಳ

ಎಂದ ನುಡಿಯ ಕೇಳುತಾಗ ಕಾರುಣ್ಯದೊ ।
ಳೆಂದನು ಸೈರಿಸಿರೀಗ ॥
ಹಿಂದುಗಳೆವೆನಾತನದಟನುಯೆನುತರ ।
ವಿಂದಮುಖಿಯೊಳೆಂದನಾಗ ॥ ॥ ೧ ॥

ಲಾಲಿಸು ಕೀರಭಾಷಿಣಿ ಭೂವರನೆಡೆಗೈದಿ ।
ಕೇಳುವೊಂದೊತ್ಸರಾವಧಿ ।
ಮೇಲೆ ನಿನ್ನುಕ್ತಿಯಂತಾಪೆನು ದಿಟವೆಂದು ।
ಪೇಳಿ ಬಾರೆನಲೆಂದಳಾಗ ॥ ॥ ೨ ॥

ಎಂತು ತಾನೊರ್ವಳೆ ಸುಳಿವೆನಿಂದಿಲಿ ಕಾಮ ।
ಭ್ರಾಂತನ ಇದಿರಿನೊಳೈದಿ ।
ಎಂತುಸುರುವೆನು ನುಡಿಯನಾತನೆನ್ನನು ।
ಎಂತು ಭಾವಿಪನೊ ಹಾಯೆನಲು ॥ ॥ ೩ ॥

ಗುಣಶೀಲೆ ಬೇಡವೀ ಭಯವು ಬಂದುದಕೆ ತಾ ।
ಹೊಣೆಯೆನುತಿರಲತಿಜವದಿ ।
ಮನುಜಾಧಿಪತಿಯ ಮುಂದೆಸೆಯಲು ಕಾಣುತ್ತ ।
ಘನತೋಷದಿಂದಲಿಂತೆಂದ ॥ ॥ ೪ ॥ [೪೨೩]

ರಾಗ ತೋಡಿ ಅಷ್ಟತಾಳ

ಭಳಿರೆ ಮೆಚ್ಚಿದೆ ಗುಣಸದನೇ । ತೋಷ । ತುಳುಕಿತಿಂದಿಲಿ ವಿಧುವದನೇ।
ಲಲನೆ ಕೇಳೆಲೆ ನಿನ್ನ ಚಲುವಿಕೆಯಲಿ ಮನ ।
ವಳುಕಿ ಬಹುಪರಿಯಿಂದಲನುದಿನ ।
ಬಳಲಿ ಬೆಂಡಾಗಿರ್ದೆನಿದು ದಿಟ ॥ ॥ ೧ ॥

ನಿನ್ನಾಳಿದವನ ವೈಭೋಗ । ವೆಲ್ಲ । ಎನ್ನಾಧೀನವಿದೆ ನೋಡೀಗ ।
ಕನ್ನೆಮಣಿಯೆ ಭೇದವನ್ನು ನಿಗ್ರಹಿಸದೆ ।
ಮುನ್ನವೇ ಮುದಗೊಳಿಸುತಲಿ ಮನ ।
ವನ್ನು ಸಂತಸ ರಚಿಸು ಕರುಣದಿ ॥ ॥ ೨ ॥

ಈ ವಿಬುಧರು ಸಹಿತೆನಗೆ । ಬಲು । ಸೇವಿಸುವರು ಕೇಳೀ ಬಗೆಗೆ ।
ನೀವೊಲಿದೆನ್ನ ಸುಮೇಳದೊಳಿರದಿರೆ ।
ಕೋವಿದನು ತಾನಹೆನೆ ಕೇಳ್ ತ್ರೈ ।
ಭೂವಳೆಯದಿ ಖ್ಯಾತಿಯಪ್ಪುದೆ ॥ ॥ ೩ ॥ [೪೨೬]

ರಾಗ ರೇಗುಪ್ತಿ ಅಷ್ಟತಾಳ

ಮಾನವೇಂದ್ರ ಕೇಳು ಮಾತ । ನೀನೆಂಬುದಿದ್ಯಾವನೀತ ।
ಪ್ರಾಣನಾಥನಿರವನು ನಿ । ಧಾನಿಸದಾವೆನೇ ನಿನಗೆ ॥ ॥ ೧ ॥

ವರುಷವೊಂದರೊಳಗೆ ಎನ್ನ । ಪುರುಷನ ನೆಲೆಯನರಿತು ।
ಬರುವೆನು ನಾ ನಿನ್ನ ಬಳಿಗೆ । ಕರುಣಿಸು ಅವಧಿಯನೆನಗೆ ॥ ॥ ೨ ॥

ವೇಶ್ಯಳೆಂದು ಜನರು ಬಹಳಾ । ಪಾಶ್ಯವಾ ಮಾಡರೆ ತಾನಾ ।
ವಶ್ಯದಿ ನೋಡಲು ಬೇಕು । ಕಶ್ಯಪಾತ್ಮಜನಯಿರವ ॥ ॥ ೩ ॥

ಸಟೆಯಿದೆಂದರಿಯಬೇಡ । ಪಟುಪರಾಕ್ರಮಿ ನೀ ನೋಡ ।
ಕುಟಿಲದ ಮಾತಲ್ಲ ವಿಧಿಯ । ಪಟದ ರೀತಿಯಪ್ಪುದಯ್ಯ ॥ ॥ ೪ ॥

ಚದುರೆಯಿಂತೆನುತ್ತ ತಿರುಗಿ । ಸದನಕ್ಕೈದಿ ಗುರುವಿನೊಡನೆ ।
ಹದನವ ಪೇಳಲು ತಿಳಿದು । ಮುದವನಾಂತುಸುರಿದನೊಲಿದು ॥
॥ ೫ ॥ [೪೩೧]

ರಾಗ ಮಧ್ಯಮಾವತಿ ತ್ರಿವುಡೆತಾಳ

ಲಾಲಿಸಂಬುರುಹಾಕ್ಷಿ ಸದ್ಗುಣ । ಶೀಲೆ ನಿನ್ನ ರಮಣನು ।
ಲೀಲೆಯಿಂದ್ಯೆತೆಂದು ಪಾಲಿಪ । ಪೋಲಿಯಲ್ಲ ॥ ॥ ೧ ॥

ಆವೆಡೆಯೊಳಿಹನೆಂದು ತಿಳಿವಡೆ । ಸಾವಕಾಶ ಮಾಡದೆ ।
ಭಾವಿಸತಿಭಕ್ತಿಯೊಳುಪಕೃತಿ । ದೇವಿಯನ್ನು ॥ ॥ ೨ ॥

ಪೇಳುವಳು ನಿಜಮನ್ನೆನಲ್ಕಾ । ಬಾಲೆ ಮನದಿ ನೆನೆಯಲು ।
ಶೀಲವಂತೆಯು ಬರಲು ಮಣಿದಳು । ಲೀಲೆಯಿಂದ ॥ ॥ ೩ ॥

ದೇವಿ ಲಾಲಿಪುದೆನ್ನ ರಮಣನು । ಆವೆಡೆಯೊಳು ಇರುವನೆಂ ।
ಬೀ ವಿವರವೆನಗರುಹಬೇಕೌ । ನೀವೊಲಿವುತ ॥ ॥ ೪ ॥ [೪೩೫]

ರಾಗ ನೀಲಾಂಬರಿ ಏಕತಾಳ

ಲೇಸುಲೇಸೌ ಬಳಲದಿರು ನಿ । ನ್ನಾಶೆಯನು ಕೈಗೂಡಿಸುವೆ ಸಂ ।
ತೋಷೆಯಾಗೆಂದಪ್ಪುತೆಂದಳು । ಆ ಶಶಿವದನೆ ॥ ॥ ೧ ॥

ಕನ್ನೆಮಣಿ ಕೇಳೀಗ ಮಾನಸ । ವೆನ್ನುತಿಹ ಸರಸಿಯಲಿ ತೋರ್ಪುದು ।
ಹೊನ್ನಬಣ್ಣದ ತಾವರೆಯು ರವಿ । ಯನ್ನು ಬಯಸುತ್ತ ॥ ॥ ೨ ॥

ಆ ಜಡಜನಾಳದಲಿ ನಿನ್ನನು । ನೈಜದಿಂದಾಳ್ದವನು ನೆಲಸಿಹ ।
ನೀ ಜವದಿ ನೋಡೆಂದು ಮರಳಿದ । ಲ್ಲೋಜಗದಿ ತರಳೆ ॥
॥ ೩ ॥ [೪೩೮]

ಭಾಮಿನಿ

ದೇವಿಯಡಗಲ್ಕಾಗಲಾ ರಾ ।
ಜೀವಮುಖಿಯೀ ಹದನವೆಲ್ಲವ ।
ಜೀವನಿಂಗರುಹಲ್ಕೆ ಇರುನಿಳಯದಲಿ ನೀನೀಗ ॥
ದೇವರಾಜನ ಕರದು ತಹೆ ನಿನ ।
ಗಾವ ಸಂಶಯ ಬೇಡವೆಂದಾ ।
ಕೋವಿದನು ನಡೆತಂದನಾ ಮಾನಸ ಸರೋವರಕೆ ॥ ॥ ೧ ॥ [೪೩೯]

ವಾರ್ಧಕ

ಎಲೆ ನಿಶಾಕರಕುಲಜ ಕೇಳು ಧಿಷಣಾಖ್ಯನಿಂ ।
ತಳುಕದಾ ದಡದಿ ನಿಂದತಿಮಧುರಸೂಕ್ತಿಯಿಂ ।
ಬಲಹರನೆ ಬಾರೊ ಸುರಕುಲತಿಲಕ ಬಾ ಭಾಗ್ಯನಿಧಿಯ ಚಂದ್ರಮನೆ ಬಾರೊ ॥
ಅಳುಕದಿರು ನಾ ನಿನ್ನ ಗುರುವಲ್ಲವೇ ನೋಡು ।
ತಳುವದೀಗೆನಗೆ ಗೋಚರಿಸೆಂದು ನುಡಿಯಲತಿ ।
ನಲವಿನಿಂದೈತಂದು ಗುರುಪದಕೆ ಭುಕುತಿಯಿಂ ಮಣಿಯಲಪ್ಪುತ ನುಡಿದನು॥
॥ ೧ ॥ [೪೪೦]

ರಾಗ ಮಧುಮಾಧವಿ ತ್ರಿವುಡೆತಾಳ

ಕಂದ ಲಾಲಿಸು ನಿನ್ನ ಸಿರಿಮೊಗ । ಕಂದಿತ್ಯಾಕೆ । ಈ ಪರಿ ।
ಯಿಂದ ನೀನಿರುವಂದವೆನ್ನೊಡ । ನಿಂದು ಬೆಸಸು ॥ ॥ ೧ ॥

ಕುಲಗುರುವೆ ಚಿತ್ತೈಸು ಈ ಮಹಾ । ಕಲುಷಕಂಜಿ ಬೆದರುತ ।
ಜಲಜದೊಳಗಡಗಿದೆನು ಲಕ್ಷ್ಮೀ । ನಿಳಯವೆನುತ ॥ ॥ ೨ ॥

ದಾರಿಯನು ತೋರೆನಗೆ ಕರುಣಾ । ವಾರಿಧಿಯೆ ನಾನೆಸಗಿದ ।
ಭೂರಿಕುಮತಿಯ ಕ್ಷಮಿಸು ಶಾಂತಾ । ಕಾರನಾಗಿ ॥ ॥ ೩ ॥

ಲೇಸು ಭಾಗ್ಯದ ಕಣಿಯೆ ಮನಸಿನ । ಕ್ಲೇಶಲತೆಯ ಕರಿದೆನು ।
ಬೇಸರಿಸಬೇಡೇಳು ಪೊರೆವೆ ಸಂ । ತೋಷದಿಂದ ॥ ॥ ೪ ॥

ತುರಗಮೇಧವ ರಚಿಸಿದರೆ ಈ ದುರಿತ । ಹರಿದು ಪೋಪುದು ।
ಭರದಿ ತುರಗಾದ್ಯಖಿಳವಸ್ತುವ । ತರಿಸು ಮುದದಿ ॥
॥ ೫ ॥ [೪೪೫]

ವಾರ್ಧಕ

ಗುರುವಚನಮಂ ಕೇಳ್ದು ಸುರಪ ನಲವಿಂದಾಗ ।
ತರಿಸಿದಂ ಬೇಕಾದ ವಸ್ತುವಂ ದಿವ್ಯತರ ।
ತುರಗಮಂ ಬರಿಸಿ ಬಾಂಧವರನೊಡಗೊಂಡು ಮಿಗೆ ದೀಕ್ಷೆಯಂ ತಳೆದು ಬಳಿಕ ॥
ಹರುಷದಿಂ ವಿಧಿವಿಧಾನಂಗಳಿಂ ಗುರುಮುಖದಿ ।
ವರತುರಗಮೇಧಮಂ ನೆರವೇರಿಸುತ್ತ ಶ್ರೀ ।
ವರನನಾರಾಧಿಸಲ್ಕಡಗಿತಾ ಬ್ರಹ್ಮಹತಿ ಸುರಪನಂ ಬಿಟ್ಟು ಬೆದರಿ ॥
॥ ೧ ॥ [೪೪೬]

ಭಾಮಿನಿ

ಸರ್ವಜನ ಸಂತುಷ್ಟಿ ಪಡೆದು ಸು ।
ಪರ್ವರೆಲ್ಲರು ಹರುಷಿಸಿದರಾ ।
ಶರ್ವವಿಧಿಕಮಲಾಕ್ಷರೊಲಿದರು ಯಜ್ಞಮುಖದಿಂದ ॥
ಸರ್ವರುಷಿವರರೊಲಿದು ಮಿಗೆ ಆ ।
ಶೀರ್ವಚನವನುಗ್ರಹಿಸೆ ಸುರಕುಲ ।
ಸಾರ್ವಭೌಮನು ಗೀಷ್ಪತಿಯ ಪದಕೆರಗುತಿಂತೆಂದ ॥
॥ ೧ ॥ [೪೪೭]

ರಾಗ ಆನಂದಭೈರವಿ ಆದಿತಾಳ

ಭೋ ಮಹಾತ್ಮನೆ ನೀನಿಂದು । ಈ ಮಹಾಕ್ರತು ವಹಿಸಿ ।
ಸಲಹಿದೆ । ಯೆನ್ನ । ಉಳುಹಿದೆ ॥ ॥ ೧ ॥

ಇಂದೆಮ್ಮ ಮೇಲೊಲಿದು ಬಹುಘನತೆ । ಯಿಂದ ಸಲಹುವ ।
ದಾತರಾರು । ಇನ್ನಾ । ರಿರುವರು ॥ ॥ ೨ ॥

ವಂದಿಸುತಿನ್ನು ತಾ ಪೊಗಳು । ವಂದವನ್ನು ತಿಳಿದು ಗುರುವು ।
ಒಪ್ಪಿದ । ತೆಗೆ । ದಪ್ಪಿದ ॥ ॥ ೩ ॥ [೪೫೦]

ರಾಗ ಕಾಪಿ ಅಷ್ಟತಾಳ

ಮೆಚ್ಚಿದೆನೈ ನಿರ್ಜರೇಂದ್ರ । ಎನ್ನ ।
ಹೆಚ್ಚು ಪೊಗಳುವುದ್ಯಾತಕೆ ಗುಣಸಾಂದ್ರ ॥ ಪಲ್ಲ ॥

ಸುರಪುರದಾಧಿಪತ್ಯವನು । ಈಗ ।
ನರಪತಿ ನಹುಷನಾಳುವನು ।
ದುರುಳತನದಲಿ ಸರ್ವರನು । ಆತ ।
ನಿರಗೊಡದೆಯು ದಂಡಿಸುತಲಿರುವನು ॥ ಮೆಚ್ಚಿ ॥ ॥ ೧ ॥

ನೊಂದರಖಿಳರು ಭೀತಿಯಲಿ । ನೀನು ।
ಬಂದು ಪಾಲಿಸು ನಿನ್ನವರನು ತೋಷದಲಿ ।
ಚಂದದಿ ನಿನ್ನ ಪಟ್ಟವನು । ಮುನ್ನಿ ।
ನಂದದಿ ಧರಿಸಿ ರಕ್ಷಿಸು ನಾಕವನು ॥ ॥ ೨ ॥ [೪೫೨]

ಭಾಮಿನಿ

ನರಜಸುಕುಮಾರಕನೆ ಕೇಳ್ಳೈ ।
ಗುರುನಿರೂಪದವೋಲು ಶಕ್ರನು ।
ಪುರಕೆ ಬಲುಸಂತಸದಿ ನಡೆತರಲಿತ್ತ ನಹುಷಾಖ್ಯ ॥
ಶರಜಸಖಿಗಿಮ್ಮಡಿಯ ಸೊಬಗಿಲಿ ।
ಸುರುಚಿರಾಸನವೇರಿ ಸಕಲಾ ।
ಮರರೊಡನೆ ಕುಳಿತಿರಲು ವಾಸವನೈದಿ ಬೆಸಸಿದನು ॥
॥ ೧ ॥ [೪೫೩]

ರಾಗ ಕೇದಾರಗೌಳ ಅಷ್ಟತಾಳ

ಮಾತ ಲಾಲಿಸು ನಹುಷಾಖ್ಯ ಭೂಪಾಲಕ । ಪ್ರೀತಿಯಿಂ ಮೊಗವನಿಟ್ಟು।
ನೀತಿಯಿಂದೆನ್ನ ಪೀಠವನೆನಗಿತ್ತು ನೀ । ಖ್ಯಾತಿಯೊಳಿಹುದೆ ಗುಟ್ಟು ॥
॥ ೧ ॥

ಬಿಡುವ ನೇಮವ ಮಾಡಿಕೊಡಲಿಲ್ಲ ಈ ಪುರ । ದೊಡೆತನವನು ಎನಗೆ।
ಕೊಡುಬಿಡೆಂತಧಿಕಾರವನು ನುಡಿಯೆ ದ । ವಡೆಯ ಹಲ್ಲನು ಕಳೆವೆ ॥
॥ ೨ ॥

ಹೇಗೆ ಈ ಪುರದಧಿಕಾರಿ ತಾನಾಗಿರು । ವಾಗ ನಿನ್ನನು ಕರೆದು ।
ಹೇಗೆ ಪೀಠವನಿತ್ತರಕ್ರಮ ಕೆಲಸವಿ । ದಾಗಲಿಲ್ಲವೆ ತಿಳಿದು ॥
॥ ೩ ॥

ಅಕ್ರಮವೆನ್ನುವದು ಹೇಗೆ ನಿನ್ನಂತೆ ಶ । ತಕ್ರತುವನು ಗೈದಿಹೆ ।
ವಿಕ್ರಮವರಿಯೆ ಹೋಗೆಂದು ಝೇಂಕರಿಸಿ ಪ । ರಾಕ್ರಮಿ ಕಿಡಿಗೆದರಿ ॥
॥ ೪ ॥

ಕಣ್ಣಬಿಡುತಲಿ ವಾಸವನನೀಕ್ಷಿಸಲಾಗ । ತಣ್ಣಗಾದುದು ಶೌರ್ಯವು ।
ಪೆಣ್ಣುಗಳಂದದಿ ನಾಚಿಕೊಂಡಿರೆ ಸಭೆ । ತನ್ನಂತೆ ನಗುತಿರ್ದುದು ॥
॥ ೫ ॥

ತಿರುಗಿದನಾಗ ವಾಸವನು ಮುನ್ನಿನವೋಲಾ । ಸರಸಿಯ ಬಳಿಗೆ ಪೋಗಿ।
ಸರಸಿಜನಾಳದಿ ಪೊಕ್ಕು ಕುಳ್ಳಿರ್ದನು । ಕೊರತೆಯಿಂ ಮನದಿ ನೊಂದು ॥
॥ ೬ ॥ [೪೫೯]

ರಾಗ ಸೌರಾಷ್ಟ್ರ ತ್ರಿವುಡೆತಾಳ

ಸುರಪನಿಂತಿರಲತ್ತ ನಹುಷನು । ಅರಿತನಿಂದಿಗೆ ಸಹಜಾಂಬಿಕೆ ।
ಯೊರೆದವಧಿಯು ಮಾಣ್ದುದಾಕೆಯ । ಬರವ ಕಾಣೆ ॥ ॥ ೧ ॥

ನಾರಿಯರು ಕಪಟಿಗರೆನುತ್ತಲಿ । ಸಾರುತಿದೆ ಶ್ರುತಿಯಾದಡಿದರ ವಿ ।
ಚಾರವೇನ್ಮನಕರಿಯದಾದುದೀ । ನಾರಿಯಿರವು ॥ ॥ ೨ ॥

ಅದರಿನಿಂದಾ ಚದುರೆಯಿರುತಿಹ । ಸದನದೆಡೆಗೋರ್ವನನು ಕಳುಹಿಸಿ ।
ಹದನವನು ನೆರೆ ತಿಳಿಯಬೇಕಾ । ಗಿದೆಯೆನುತ್ತ ॥ ॥ ೩ ॥

ಚರರನಡಿಗಟ್ಟುತಿರಲಾ । ತರುಣಿಯದನರಿತಾಗ ಗೀಷ್ಪತಿ ।
ಗೆರಗಿ ಬಿನ್ನವಿಸಿದಳು ಸದ್ಗುಣ । ಭರಿತೆ ಭಯದಿ ॥ ॥ ೪ ॥ [೪೬೩]

ರಾಗ ಕಾಂಭೋಜಿ ಅಟತಾಳ

ಮಾತ ಲಾಲಿಸಯ್ಯ । ತ್ರಿಭುವನ ಪ್ರಖ್ಯಾತ ಪಾಲಿಸಯ್ಯ ॥ ಪಲ್ಲ ॥
ಹಿಂದೆ ಪೇಳ್ದವಧಿ । ವರುಷವಾಗಿ । ಸಂದಿತೀ ದಿನದಿ ।
ಎಂದು ಮಾನುಷನು ಚಾರಕರನಟ್ಟಿಹನಲ್ಲ ।
ಮುಂದಿದಕೆತ್ನವೇನು । ಪೇಳಿನ್ನು ॥ ॥ ೧ ॥

ಕ್ರೂರಪಾಪಿಯಿನ್ನು । ಬಿಡನು ಎನ್ನ । ನಾರು ಕಾವರಿನ್ನು ।
ದಾರಿಯೇನೆನಗೆ ಭೂ । ಭಾರಕಳಾದೆನಿ ।
ನ್ನಾರಿಗೆಂಬೆನು ಇದರಾ । ಈ ದೂರ ॥ ॥ ೨ ॥

ಬಂದು ಪ್ರಾಣನಾಥಾ । ಪಾಲಿಸುವನು । ಎಂದು ಪೇಳ್ದೆ ಮಾತ ।
ಒಂದೆ ಮನದಿ ಪತಿ ಬಂದು ರಕ್ಷಿಸುವನೆಂ ।
ದೆಂದು ದಿನವ ಕಳೆದೆ । ಬಳಲಿದೆ ॥ ॥ ೩ ॥

ಇನ್ನು ಬಾಳಲಾರೆ । ಕಾಂತನ ಪಾದ । ವನ್ನು ಕಾಣದಿರೆ ।
ಕುನ್ನಿಗಳಟ್ಟುಳಿಯಲ್ಲಿ ದಣಿದೆನಗ್ನಿ ।
ಯನ್ನು ಹೊಗುವುದಲ್ಲದೆ । ತಾನಿಹುದೆ ॥ ॥ ೪ ॥ [೪೬೭]

ಭಾಮಿನಿ

ಇಂತು ದುಃಖಿಸುವಬಲೆಯನು ಮಿಗೆ ।
ಸಂತವಿಸಿ ತೆಗೆದೆತ್ತಿ ಕರುಣಾ ।

Scanned with CamScanner

ಕ್ರಾಂತನಾಗುತ ನುಡಿದ ಸೈರಿಸು ಮನದ ಶೋಕವನು ॥
ಅಂತರಂಗವನರಿತೆನೌ ತವ ।
ಕಾಂತನಾ ಸರಸಿಯೊಳು ನೆಲಸಿಹ ।
ಚಿಂತಿಸದೆ ನೀ ಬರಿಸು ಸರ್ವರನಲ್ಲಿ ಪೋಗುವಡೆ ॥ ॥ ೧ ॥ [೪೭೮]

ವಾರ್ಧಕ

ವಾಗೀಶನಿಂತೆನಲ್ಕಮಲಲೋಚನೆಯು ಮುದ ।
ವಾಗಿ ಸರ್ವರ ಬರಿಸಲಖಿಳರಂ ವೊಡಗೊಂಡು ।
ಸಾಗಿದರ್ಮಾನಸಾಖ್ಯೆಯ ಸರೋವರದೆಡೆಗೆ ನಲವಿನಿಂದತಿ ಜವದೊಳು॥
ಆಗಲಾ ಸ್ಥಳಕೆ ವರಸಪ್ತಋಷಿಗಳ ಬರಿಸಿ ।
ವಾಗೀಶಸಹಿತೆಲ್ಲರೊಗ್ಗಿನಿಂ ಕರೆಯೆ ಸಿತ ।
ನಾಗವಹನಂ ಬಂದು ಪದಕೆರಗಲಾಗಲಾ ಜೀವನಪ್ಪುತ ನುಡಿದನು ॥
॥ ೧ ॥ [೪೭೯]

ರಾಗ ನೀಲಾಂಬರಿ ಏಕತಾಳ

ಕಾರಿಯವೇನಿದು ಕಂದಾ । ಪ್ರೇರಿಸು ಸದ್ಗುಣವೃಂದಾ ।
ಊರುನಿಕಾಯವ ಮಿಕ್ಕು । ನೀರೊಳಗ್ಯಾಕಿಹೆ ಪೊಕ್ಕು ॥ ॥ ೧ ॥

ತರುಣಿಯು ಶೋಕಿಪಳ್ದಿನದಿ । ಕರುಣವುಯಿಲ್ಲವೆ ಮನದಿ ।
ಮರೆತೆಯ ನಿರ್ಜರರನ್ನು । ಕೊರತೆಯಿದೇನುಸುರಿನ್ನು ॥ ॥ ೨ ॥

ನರನಿಗೆ ಮಾರಿತೆ ಪುರವು । ಕುರಿಗಳಿರಾದಿರೆ ನೀವು ।
ತೋರದೆ ವಿಕ್ರಮವನ್ನು । ಬಾರೆಯ ನೀ ಪುರಕಿನ್ನು ॥
॥ ೩ ॥ [೪೮೦]

ಭಾಮಿನಿ

ಎಂದುದನು ಕೇಳುತ್ತ ನಿರ್ಜರ ।
ನೆಂದನೆಲೆ ವಾಗೀಶ ಲಾಲಿಸು ।

ಮಂದಮತಿ ನಹುಷಾಖ್ಯನಿಹ ಠಾಣದಲಿ ನಾ ನಿನ್ನ ॥
ಬಂದು ಅಡಿಯಿಡಲಾರೆನಿದು ದಿಟ ।
ವೆಂದು ಬಹುಭಲವಾಂತಿರಲ್ಕರ ।
ವಿಂದಮುಖಿ ಪೌಲೋಮಿ ನುಡಿದಳು ಪತಿಯ ಪದಕೆರಗಿ ॥
॥ ೧ ॥ [೪೭೩]

ರಾಗ ಆದಿತಾಳ

ಸಾಕುಸಾಕು ಛಲ । ನುಡಿಯ ಕೇಳ । ಬೇಕು ಪ್ರಾಣಲೋಲ ॥ ಪಲ್ಲ ॥

ಇಂತು ನೀನಿರಲು । ಪುರದಿ ಬಾಳ । ಲೆಂತು ನಾನು ಪೇಳು ।
ಭ್ರಾಂತನಾಗಿಹ ನಹುಷಾಖ್ಯನ ಬಾಧೆಯ ।
ನೆಂತು ಬಣ್ಣಿಪೆನು ಪೇಳು ॥ ದಯಾಳು ॥ ॥ ೧ ॥

ಒಂದು ದಿವಸದಲ್ಲಿ । ತಪ್ಪದೆ ನೋಡ । ಬಂದನು ರೋಷದಲಿ ।
ನಿಂದು ಪೀಡಿಸುವನು । ಇಂದೀವರೆಗೆ ಪ್ರೀತಿ ।
ಯಿಂದೆನ್ನ ಸಲಹಿದನು । ವಾಗೀಶನು ॥ ॥ ೨ ॥

ಮಂದಮತಿಯ ನೀನು । ನೂಕುತ ತೋಷ । ದಿಂದಲೆಮ್ಮುವನು ।
ಚಂದಗೊಳಿಸುತೀಗ । ಬಂದ ಪುರಕೆ ಸುರ ।
ವೃಂದಕೆ ದಯವದೋರು । ಇನ್ನಾದರು ॥ ॥ ೩ ॥ [೪೭೩]

ಭಾಮಿನಿ

ತರುಣಿಯಿಂತೀ ಪರಿಯ ಶೋಕದಿ ।
ಕರಗುತಿರೆ ಧಿಷಣಾದಿಗಳು ಬಲು ।
ತರದಿ ಚಿಂತಿಸುತೆಂದರಿದಕೇನ್ ಯತ್ನ ಮಾನುಷನ ॥
ಉರುಳಿಸುವಡೆಂದಾಗ ನೆನೆದರು ।
ಕರುಣನಿಧಿ ಕರೆತಂದನಾಕ್ಷಣ ।
ವರತಪೋಧನ ಬಂದು ಮೆಯ್ದೋರುತ್ತಲುಸುರಿದನು ॥
॥ ೧ ॥ [೪೭೬]

ರಾಗ ಕೇದಾರಗೌಳ ಅಷ್ಟತಾಳ

ಯಾಕೆ ನೆನೆದಿರೆನ್ನನೀ ಕಡೆಯೊಳಗೆ ಈ । ಲೋಕಾಧಿಪರು ಸಹಿತ ॥
ಯಾಕೆ ನಿಂದಿಹಿರಿ ವಿಸ್ತರಿಸಿರೆನ್ನೊಳು ಬಹು । ವ್ಯಾಕುಲಗಳನೆನಲು ॥
॥ ೧ ॥

ಸುಗುಣನಿಧಿಯೆ ಲಾಲಿಸೆಮ್ಮ ನಾಕವನ್ನು । ಅಗಡುನಹುಷನು ಬಂದು ।
ಬಗೆಯದೆ ಸ್ವರ್ಗವಾಳುವನು ನಿರ್ಜರರೆಲ್ಲ । ಹಗುರವಾದರು ಲಾಲಿಸು ॥
॥ ೨ ॥

ಮತ್ತತನದೊಳಾತನನಿಮಿಷಾದ್ಯರ ನೆರೆ । ಒತ್ತಿ ದಂಡಿಸುತ ಮತ್ತಾ ।
ಮತ್ತಕಾಶಿನಿ ಶಚಿಯನ್ನಪೇಕ್ಷಿಸಿ ತಾನೀ । ವೃತ್ತಾಂತ ಕೇಳು ತಾತ ॥
॥ ೩ ॥

ಅದರಿನಿಂ ದಿವದಾಧಿಪತ್ಯವ ಕೆಲಕಿತ್ತು । ತ್ರಿದಶಪಾಲಕನಿಗಿನ್ನು ।
ಮುದದಿ ಸ್ಥಿರವಗೊಳಿಪಂದವು ಅರಿಯದಾ । ದುದಕೆ ಚಿಂತಿಪೆವೆನಲು
॥ ೪ ॥ [೪೮೧]

ವಾರ್ಧಕ

ಕೇಳಿ ತಾ ಮುನಿಪನಿಂತೆಂದನೆಲೆ ವಿಬುಧರ್ಕಳ ।
ಲಾಲಿಸಿರಿ ತಾನಿಂದು ನಹುಷಾಖ್ಯ ಭೂಪತಿಯ ।
ಪಾಳುಮಾಳ್ಪುಜ್ಜಗವ ನೆಗಳಬೇಕಾದರೊಂದ್ಯುಕ್ತಿಯುಂಟವನ ಬಳಿಗೆ ॥
ನಾಳಿನಲಿ ತನ್ನ ನಿಳಯಕೆ ಸಪ್ತಋಷಿವರರ ।
ಮೇಲೆ ಯಾನವನೇರಿ ಬಂದಡಾನಹೆನೆಂದು ।
ಬಾಲಕಿಯು ಚರರನಟ್ಟಲು ಮುಂದಣಾವುದಂ ತಾ ನೆಗಳ್ವುವೆನೆಂದನು ॥
॥ ೧ ॥ [೪೮೨]

ಭಾಮಿನಿ

ವರಮುನಿಪನಾಜ್ಞೆಯನು ಕೇಳುತ ।
ಪುರಕೆ ಧಿಷಣಾದಿಗಳು ತೆರಳುತ ।

ಚರನೊಳದನುರೆ ಬೆಸಸಿ ಕಳುಹಲ್ಕಾತನಾ ಕ್ಷಣದಿ ॥
ಭರಿತಭಯಭಾರದಲಿ ಭಿರ್‍ರನೆ ।
ಸರಿದು ಧರಣೀಶ್ವರನು ರಚಿಸಿಹ ।
ವರಸಭಾಮಂಡಲದಿ ಬಿನ್ನವಿಸಿದನು ಭೀತಿಯಲಿ ॥ ॥ ೧ ॥ [೪೮೩]

ರಾಗ ಕೇದಾರಗೌಳ ಅಷ್ಟತಾಳ

ದೊರೆಯೆ ಲಾಲಿಪುದೆನ್ನ ಸೊಲ್ಲ । ನಿನ್ನ । ಸಿರಿಗೆ ಲೋಕದೊಳಿದಿರಿಲ್ಲ ।
ದೊರಕಿತಿಂದಿಲಿ ನಿನ್ನ ಮನದ ಕುತೂಹಲ ।
ದಿರವ ಪೇಳುವೆನದ ಹರುಷದಿ ಲಾಲಿಸು ॥ ॥ ೧ ॥

ಶಚಿಯು ನಿನ್ನಯ ಬಗೆಗೊಲಿದು । ಬಲು । ಪ್ರಚುರದಿಂದಟ್ಟಿದಳೊಲಿದು।
ಶಚಿಯುತನಿಂದು ನೀ ಬಂದರೊಲಿವೆನೆಂದು ।
ಖಚಿತಾದಿಂದಲಿ ಗುರುಕುಚೆಯು ಅಟ್ಟಿದಳೆನ್ನ ॥ ॥ ೨ ॥

ವರ ಸಪ್ತಋಷಿಗಳ ಕರೆಸಿ । ಸುರು । ಚಿರದ ದಂಡಿಗೆಯನ್ನು ಹೊರಿಸಿ ।
ಸರಸದಿಂದೇರಿ ನೀ ಬರಲಾ ಮಹೋತ್ಸವ ।
ಪರಿಕೀಸಬೇಕೆಂಬ ಕೊರತೆಯೊಂದುಂಟಂತೆ ॥ ॥ ೩ ॥

ಎಂದು ನಿಂದಿರೆ ಭೂಪಾಲಕನು । ತೋಷ । ದಿಂದಲಿತ್ತನು ಉಚಿತವನು।
ಮಂದಹಾಸದಿ ಋಷಿವೃಂದವೆಲ್ಲಿದೆ ಕರೆ ।
ಯೆಂದು ಗರ್ಜಿಸುತಿರಲ್ಬಂದು ಮೆಯ್ದೋರ್ದರು ॥
॥ ೪ ॥ [೪೮೭]

ರಾಗ ನೀಲಾಂಬರಿ ಏಕತಾಳ

ಹರುಷಗಳಾಯಿತು ರಾಯ । ಬರಿಸಿದುದೀಗೇಕಯ್ಯ ।
ಸುರಪುರದ್ವೈಭವವಿನಿತು । ದೊರಕಿತೆ ಸಂತಸವಾಯ್ತು ॥
॥ ೧ ॥

ಕುಶಲವೆ ಭೂಪತಿ ನಿನಗೆ । ಗಸಣಿಗಳೇನಿದು ಹೀಗೆ ।
ಉಸುರು ನಿದಾನದೊಳೀಗ । ಶಶಿಕುಲರತ್ನವೆ ಬೇಗ ॥
॥ ೨ ॥ [೪೮೯]

ಭಾಮಿನಿ

ಉಸುರೆ ನೃಪನಿಂತೆಂದನೆಲೆ ತಾ ।
ಪಸರು ಲಾಲಿಸಿರೆನ್ನ ಯಾನವ ।
ಕುಶಲದಿಂ ಶಚಿಯಾಲಯಿಕ್ಕೀಗೊಯ್ಯಬೇಕೆನಲು ॥
ವ್ಯಸನಿಸುತ ಮೌನದಲಿ ಘನ ತಾ ।
ಪಸರು ನಿಂದಿರಲಾ ಮುಹೂರ್ತದಿ ।
ಕುಶಲಮತಿ ಕುಂಭಜನು ಸುಳಿದಿಂತೆಂದ ನೃಪನೊಡನೆ ॥
॥ ೧ ॥ [೪೯೦]

ರಾಗ ತುಜಾವಂತು ಮಟ್ಟೆತಾಳ

ಸಾಕು ಸ್ವೈರಿಸೀಗ ಭೂಪತಿ । ಯೇನಿದಿಂಥ ।
ಪೋಕು ಕೆಲಸವ್ಯಾಕೆ ಮಾಡುತಿ ॥ ಪಲ್ಲ ॥

ಸರಸಿಜಾಕ್ಷಿ ಶಚಿಯುಯೆನ್ನಲು । ತರುಣಿಕುಲದಿ ।
ಪರಮಪತಿವ್ರತೆಯು ತಿಳಿಯಲು ।
ಅರಿಯದಿಂತು ಮರುಳುತನದಿ । ಪರವನಿತೆಗೆ ಮನವನೆಳಸೆ ।
ನರಕಿಯಾಗಿ ಉರುಳದಿಹರೆ । ಅರಿತು ಬರಿದೆ ಉರಿಹೋಗುವರೆ ॥
॥ ೧ ॥

ಸ್ಥಿರವಿದಲ್ಲ ಪಟ್ಟ ನಿನ್ನದು । ಮುನ್ನಿನವನ ।
ಕರೆದುಕೊಡುವ ಕೆಲಸ ಲೇಸಿದೂ ।
ಬರಿದೆ ಸುರಪನರಸಿಯೊಡನೆ । ಎರಕವಾಪೆನೆಂದು ಪರಮ ।
ಪುರುಷರಾದ ಸಪ್ತಋಷಿಗ । ಇರವನರಿಯದುಸುರಬಹುದೆ ॥
॥ ೨ ॥ [೪೯೨]

ರಾಗ ಮಾರವಿ ಏಕತಾಳ

ಆರೆಲೊ ಫಡ ಮುದಿಹಾರುವ ನಿನ್ನನು । ಆರೆಲೊ ಕರೆಸಿದವ ।
ರಾರಲೊ ನಿನ್ನ ವಿಚಾರಿಸಿದವರ್ಕೆಲ । ಸಾರೆಲೊ ಜತನದೊಳು ॥
॥ ೧ ॥

ಪರಮಸುನೀತಿಯನೊರೆಯಲಿಕೆಮ್ಮನು । ಕರೆಯುವದ್ಯಾಕಾರೂ ।
ಬಿರಿಸಿನ ಮಾತುಗಳೊರೆಯಲು ಈ ಕ್ಷಣ । ಉರುಹುವೆ ನೋಡೆನಲು ॥
॥ ೨ ॥

ಬಲ್ಲೆ ಬಲ್ಲೆನು ನೀ ಬಲ್ಲಿದನೆಂಬುದ । ನಿಲ್ಲಿ ನಿಲದೆ ಬೇಗ ।
ಮೆಲ್ಲನೆ ನಡೆಯೆನಲಾಕ್ಷಣದಲಿ ಮುನಿ । ವಲ್ಲಭ ಮುನಿದೆಂದ ॥
॥ ೩ ॥ [೪೯೫]

ರಾಗ ಸೌರಾಷ್ಟ್ರ ತ್ರಿವುಡೆತಾಳ

ಅರರೆ ಪರವಧುವಿಂಗೆ ಅಳುಪಿದ । ಪರಮಪಾತಕಿ ನಿನ್ನ ಮುಸುಡನು ।
ಅರಿತು ನೋಡಿದಡೀಗ ಕಿಲ್ಬಿಷ । ಬರುವುದೈಸೆ ॥ ॥ ೧ ॥

ನೀತಿನುಡಿಗಳ ನುಡಿಯೆ ನೀನತಿ । ಕಾತರಿಸಿದೆಯ ಭಳಿರೆ ಮೆಚ್ಚಿದೆ ।
ಪಾತಕಿಯೆ ನೋಡಾದಡೆನ್ನಯ ರೀತಿಗಳನು ॥ ॥ ೨ ॥

ಓಡಿಯೆಲವೋ ಶಾಪವನು ದುರುಳನೆ । ತಡೆಯದೀಗಲೆ ಸರ್ಪದೇಹವ।
ಪಡೆದುರುಳು ಭೂತಳದೊಳೆಂದನು । ಕಿಡಿಗೆದರುತ ॥
॥ ೩ ॥ [೪೯೬]

ಭಾಮಿನಿ

ಎಲೆ ನೃಪಾಲಕ ಕೇಳು ದೈವದ ।
ಒಲವು ತಪ್ಪಿದ ಮನುಜ ಬರಿದೇನ್ ।
ಫಲವ ಗಳಿಸಿದಡೊಳ್ಳಿತಹುದೇ ನೃಪನು ಮುನಿಪತಿಯ ।
ಛಲದ ನುಡಿಯನು ಕೇಳುತಾಕ್ಷಣ ।

ವಲುಗಿ ಧೊಪ್ಪನೆ ಕೆಡದು ತನುವನು ।
ಕಲಶಜನ ನೋಡುತ್ತ ನುಡಿದನು ದೈನ್ಯಭಾವದಲಿ ॥
॥ ೧ ॥ [೪೯೯]

ರಾಗ ಸುರುಟಿ ಅಷ್ಟತಾಳ

ಕೆಟ್ಟೆನಕಟಕಟ ಬಿಟ್ಟುಳುಹು ಕೃಪೆಯ । ಮಹಾಮುನಿಪ ।
ಸಿಟ್ಟನೀಪರಿ । ತೊಟ್ಟೆಯಾಕಯ್ಯಾ ॥ ಪಲ್ಲ ॥

ಜ್ಯೇಷ್ಠರಿನ್ನಾರಿಹರು ನೀ ಮುನಿದಿಟ್ಟ ಶಾಪವ ಮಾಣಿಸುವರಜ ।
ಸೃಷ್ಟಿಯಲಿ ನಾ ಕಾಣೆನಭಯವ । ಕೊಟ್ಟು ನುಡಿಯಿನ್ನೊಮ್ಮೆ ವಾಕ್ಯವ ॥
॥ ೧ ॥

ಆರಿಗೇನಪಕಾರ ಮಾಡಿದೆನೊ । ಮುನ್ನಿನ ಭವದಿ ।
ಕ್ರೂರತನದಿಂದಾರ ಶಪಿಸಿದೆನೊ ॥
ಊರದೆ ಪ್ರಾರಾಬ್ಧವು ಬಿಡ । ದಾರಿಗೆಂಬೆನಿನ್ನಾರು ಕಾವರು ।
ಈ ರುಷಿಯ ದುರ್ವಾಕ್ಯಗಳ ಪರಿ । ಹಾರಗೆಯ್ಯುವವರನು ಕಾಣೆನು ॥
॥ ೨ ॥

ಯಾಕೆಯೀ ಸುರಲೋಕಕ್ಕೈದಿದೆನು । ಪುರಾಕೃತಫಲ ।
ಶೋಕದೀ ಋಷಿ ಯಾಕೆ ಶಪಿಸುವನು ।
ಶೋಕಿಸಿದರಿನ್ನಾರು ಹೊಣೆಯಹ । ರಾ ಕಮಲಭವನಾಜ್ಞೆಯೆನು ನೆರೆ ।
ನೂಕಲೆನ್ನಳವಲ್ಲ ಹರಯೆನು । ತಾ ಕುಂಭಜನಡಿಗೆರಗಿ ಹೊರಳಿದ ॥
॥ ೩ ॥ [೫೦೨]

ಭಾಮಿನಿ

ಪಾದದಲಿ ಮೆಯ್ಯಿಕ್ಕಿ ಗೋಳಿಡು ।
ವಾ ಧರಾಧಿಪನನ್ನು ಕಾಣುತ ।
ಕ್ರೋಧಶಿಖಿಯಡಗಲ್ಕೆ ಕರುಣದೊಳಾ ಘಟೋದ್ಭವನು ॥

ಆದರಿಸುತುಸುರಿದನು ಮುಂದಕೆ ।
ಸಾಧುಪಾಂಡವರೈವರುದಿಪರು ।
ಆದಪುದುಯೀಶಾಪ ಗತ ನಿನಗವರ ದೆಸೆಯಿಂದ ॥
॥ ೧ ॥ [೫೦೩]

ರಾಗ ಭೈರವಿ ಝಂಪೆತಾಳ

ಪರಮಪುರುಷರುಯಿಂತು । ಅರುಹಿ ತೆರಳಲಿಕೆ ತಾ ।
ಉರುಳ್ದನಾ ನೃಪನಜ । ಗರನಾಗಿ ಧರೆಗೆ ॥ ॥ ೧ ॥

ಅದನರಿತು ಮಗುಳೋರ್ವ । ಚದುರನ್ಯೆದುತ್ತ ।
ತ್ರಿದಶಪತಿಯಡಿಗೆರಗಿ । ಮುದದೊಳರುಹಿದನು ॥ ॥ ೨ ॥ [೫೦೫]

ಭಾಮಿನಿ

ಚಿತ್ತವಿಸು ಸುರಪಾಲಕನೆ ಭೂ ।
ಪೋತ್ತಮನು ನಹುಷಾಖ್ಯರಾಯನು ।
ಪೃಥ್ವಿಗುರುಳಿದನಿಂದಗಸ್ತ್ಯನ ಶಾಪವನು ತಳೆದು ॥
ಸತ್ಯನಿಧಿ ನೀ ಬಂದು ನಮಗತಿ ।
ಸ್ವಸ್ಥವನು ಕರುಣಿಸುತ ನಿರ್ಜರ ।
ಪತ್ತನವನುರೆ ಪಾಲಿಸೆನಲ್ಯೆತಂದನೊಲವಿನಲಿ ॥ ॥ ೧ ॥ [೫೦೬]

ವಾರ್ಧಕ

ನರಪೌತ್ರ ಲಾಲಿಸಿಂತಮರಪಾಲಕನ್ಯೆದಿ ।
ಪುರವನುಂ ಪೊಕ್ಕು ಧಿಷಣಾದ್ಯರಿಂಗೆರಗಿ ಸುರು ।
ಚಿರ ಸಿಂಹಾಸನವನೇರ್ದತಿವಿಲಾಸದಿಂದಖಿಳ ವಿಬುಧರ್ಕಳೊಡನೆ ॥
ಮೆರೆವ ಚಾಮರಛತ್ರಗೀತನಟನಾದಿ ವಿ ।
ಸ್ತರದ ಸಂಭ್ರಮ ವಿರಾಜಿಸುತಿರಲ್ಕೊಲವಿನಲಿ ।
ಹರಿಣಲೋಚನೆ ಶಚಿಯನೊಡಗೊಂಡು ಓಲಗವ ವಿಚರಿಸಿದನುತ್ಸವದೊಳು॥
॥ ೧ ॥ [೫೦೭]

ರಾಗ ಮಧುಮಾಧವಿ ಆದಿತಾಳ

ಇಂತು ವೈಭವದಲಿ ಓಲಗಿಸಿರಲು ।
ಸಂತಸದಲಿ ಶಚಿಸಹಿತವೊಪ್ಪಿರಲು ।
ಕಾಂತೆಯರೊಲಿದು ಶೋಭಾನ ಪಾಡುತಲಿ ।
ಕಂತುವಿನರಗಿಣಿಯರು ಮಹೋತ್ಸವದಲಿ ॥
ಮಂಗಳದಾರತಿಯ ಬೆಳಗಿದರೆ ॥ ಶೋಭಾನೆ ॥ ॥ ೧ ॥

ದಿನಕರಗಿಮ್ಮಡಿ ಕಾಂತಿಯಿಂದಿಹಗೆ ।
ಮನುಮಥಕೋಟಿ ಶೃಂಗಾರಗಾತ್ರನಿಗೆ ।
ಕನಕನಿಭಾಂಗಿಸನ್ಮಂಗಲವತಿಗೆ ।
ವನಿತಾಮಣಿಗುಣಯುತೆಗೆ ಸುವ್ರತೆಗೆ ॥
ಶೃಂಗಾರದಾರಾತಿಯ ಬೆಳಗಿದರೆ ॥ ಶೋಭಾನೆ ॥ ॥ ೨ ॥

ಜಂಭವೃತ್ರಾದ್ಯಸುರರನು ಗೆದ್ದವಗೆ ।
ಅಂಬುಧಿಶಯನನ ಪಾದಭಕುತಗೆ ।
ಕುಂಭಕುಚೆಗೆ ಸುಕುರಂಗಲೋಚನೆಗೆ ।
ಕಂಬುಕಂಠಿಗ ಮುಗುಳಂಬನ ಕರಿಗೇ ॥
ಅಂಬುಜದಾರತಿಯ ಬೆಳಗಿದರೆ ॥ ಶೋಭಾನೆ ॥ ॥ ೩ ॥ [೫೧೦]

ಭಾಮಿನಿ

ಸಂತಸದಿ ಕೇಳರಸ ನಾರಿಯ ।
ರಿಂತು ರತುನಾರತಿಯ ಬೆಳಗಲು ।
ಕಾಂತೆಯೂರ್ವಶಿಮುಖ್ಯಗಣಿಕಾಂಗನೆಯರಾಡುತಿರೆ ॥
ಅಂತಕಾದಿಗಳೊಪ್ಪಿರಲು ಗುರು ।
ಸಂತಸದಿ ಸನ್ಮಂಗಳಾಕ್ಷತೆ ।
ಯಂ ತಳಿದು ಪರಸಿದನು ಲೇಖಾಧಿಪನ ಕರುಣದಲಿ ॥
॥ ೧ ॥ [೫೧೧]

ರಾಗ ಸೌರಾಷ್ಟ್ರ ತ್ರಿವುಡೆತಾಳ

ಎಲೆ ಪರೀಕ್ಷಿತ ಕೇಳು ನಿರ್ಜರ । ತಿಲಕನಧಿಕೈಶ್ವರ್ಯದಿಂದಲಿ ।
ಬಲವನುಂ ಪಾಲಿಸಿದ ಶ್ರೀಪತಿ । ಯೊಲುಮೆಯಿಂದಾ ॥ ॥ ೧ ॥

ಈ ತೆರದ ಅಮರೇಂದ್ರವಿಜಯಾ । ಖ್ಯಾತವಹ ಚರಿತವನು ಕೇಳ್ವರ ।
ಪಾತಕವು ಕಳೆಗುಂದಿಯಪ್ಪುದು । ಖ್ಯಾತಿಯಂದು ॥ ॥ ೨ ॥

ದೊರೆ ಪರೀಕ್ಷಿತಗೊಲಿದು ತಾಪಸ । ರರಸ ಶುಕಯೋಗೀಂದ್ರನುಸುರಿದ।
ಚರಿತವನು ಗಣನಾಥ ಮತಿಯೆನ । ಗೊರೆದ ತೆರದಿ ॥ ॥ ೩ ॥

ತೋಷದಿಂ ವಿರಚಿಸಿದೆನಿದನು ಸು । ಭಾಷಿತರು ಕೊಂಡಾಡುತೆನ್ನಯ ।
ಸಾಸಿರಪರಾಧವ ಕ್ಷಮಿಸಿರೈ । ಲೇಸನಿತ್ತು ॥ ॥ ೪ ॥ [೫೧೫]

ಮಂಗಲಪದ ತ್ರಿವುಡೆತಾಳ

ಮಂಗಲಂ ಜಯ । ಮಂಗಲಂ ಶುಭ । ಮಂಗಲಂ ಜಯತು ॥
ಬಾಲಕು ।
ರಂಗಧರ ಭಸಿ । ತಾಂಗನಿಗೆ ಜಯ । ಮಂಗಲಂ ಜಯತು ॥ ಪಲ್ಲ ॥

ಮಂಗಲಂ ವರಭಸಿತಭೂಷವು । ತ್ತುಂಗಬಲಮಹ । ಲಿಂಗದೇವಗೆ
॥ ಅನುಪಲ್ಲ ॥

ಕಾಲಕಾಲಕ । ಪಾಲಮಾಲ ಸು । ಶೀಲಸದ್ಗುಣಗೆ ॥ ಗಿರಿಜಾ ।
ಲೋಲ ಸನ್ನುತ । ಜಾಲಪಾಲಿತ । ನೀಲಲೋಹಿತಗೇ ॥ ಮೃದುಳ ಸು ।
ಲೀಲ ಮಹಿಮವಿ । ಶಾಲನೇತ್ರತ್ರಿ । ಶೂಲಧರ ಇಭ । ಚೇಲ ತ್ರಿಭುವನ।
ಮೂಲಚಾರುಕ । ಪೋಲಶಂಕರ । ನೀಲಕಂಠ ಸು । ಫಾಲನೇತ್ರಗೆ ॥
॥ ೧ ॥

ವ್ಯೋಮಕೇಶ ಸು । ಶ್ಯಾಮಭಾಸಸು । ಸೋಮಶೇಖರಗೆ ॥ ತಾರಕ ।
ನಾಮದೈತ್ಯಾ । ರಾಮದಹನ ಸು । ಕೋಮಲಾಂಗನಿಗೆ ॥ ಘೋಷಿಪ ।

ಸಾಮಗಾನಸು । ಪ್ರೇಮ ದೇವಲ । ಲಾಮ ದುರಿತವ । ರಾಮ ನಿರ್ಜರ।
ಸ್ತೋಮನುತ ಗುಣ । ಧಾಮ ಅರಿಕುಲ । ಭೀಮನಿರುಪಮನಾದ ದೇವಗೆ॥
॥ ೨ ॥

ಧೀರ ವೀರ ಉ । ದಾರ ಮಾರಕು । ತಾರಪುರಹರಗೆ ॥ ಫಣಿಪತಿ ।
ಹಾರಸುಜನೋ । ದ್ಧಾರ ಸದ್ದಯ । ಸಾರ ಶುಭಕರಗೆ ॥ ಪರಾತ್ಪರ ।
ಪಾರವಾರಗ । ಭೀರ ವಿಘ್ನವಿ । ದೂರ ವಿಶ್ವಾ । ಧಾರ ಅಘಹರ ।
ಮೇರುಧನ್ವಕು । ಮಾರಜನಕ ಅ । ಘೋರಶಾಂತಾ । ಕಾರ ಮೂರ್ತಿಗೆ॥
ಮಂಗಲಂ ಜಯಮಂಗಲಂ ಶುಭಮಂಗಲಂ ಜಯತು ॥
॥ ೩ ॥ [೫೧೮]

ವಾರ್ಧಕ

ಮಂಗಲಂ ಶ್ರೀಗಣಾಧೀಶನಿಗೆ ಈಶನಿಗೆ ।
ಮಂಗಲಂ ಕವಿಜನರ ದಾತನಿಗೆ ಖ್ಯಾತನಿಗೆ ।
ಮಂಗಲಂ ವಿಘ್ನೌಘದೂರನಿಗೆ ಶೂರನಿಗೆ ಕವಿತಾಬ್ಧಿಚಂದ್ರಮನಿಗೆ ॥
ಮಂಗಲಂ ಹರನಸುಕುಮಾರದಯಸಾರನಿಗೆ ।
ಮಂಗಲಂ ಮನದಿಷ್ಟವೀವ ಜಗದ್ದೈವನಿಗೆ ।
ಮಂಗಲಂ ತೀರ್ಥಗಿರಿನಿಲಯ ಲಂಬೋದರಗೆ ಮಂಗಲಂ
ಜಯಮಂಗಲಂ ॥ ॥ ೧ ॥ [೫೧೯]

॥ ಯಕ್ಷಗಾನ ಇಂದ್ರವಿಜಯ ಮುಗಿದುದು ॥

■

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಮೂಲಕ, ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟಗಳನ್ನು ನೂರು ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದೆ (ಸಮಗ್ರ ವಚನ ಸಾಹಿತ್ಯ ಸಂಪುಟ ಮತ್ತು ದಾಸ ಸಾಹಿತ್ಯ ಸಂಪುಟಗಳ ನಂತರದ ಬೃಹತ್ ಯೋಜನೆ ಇದು). ಪುನರುಕ್ತಿಗೆ ಅವಕಾಶವಿಲ್ಲದಂತೆ ಆಶಯಾತ್ಮಕವಾಗಿ ಮುಖ್ಯವೆನಿಸುವ ಸಾಹಿತ್ಯದ ಪಾಠಗಳನ್ನು ಮೂರು ಹಂತದಲ್ಲಿ ಪ್ರಕಟಿಸುವ ಯೋಜನೆ ಇದು. ಈಗಾಗಲೇ ಸಂಗ್ರಹಿತವಾದ, ಸಂಗ್ರಹಗೊಂಡಿದ್ದರೂ, ಪ್ರಕಟಣೆ ಆಗಿರದ ಹಾಗೂ ಕರ್ನಾಟಕದಾದ್ಯಂತ ವ್ಯಾಪಕವಾಗಿ ಹರಡಿಕೊಂಡಿರುವ ಜನಪದ ಸಾಹಿತ್ಯವನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿ ಪ್ರಕಟಿಸುವ ಆಶಯ ಈ ಯೋಜನೆಯದಾಗಿದೆ. ಭಾರತದ ಬೇರೆ ಯಾವುದೇ ರಾಜ್ಯದಲ್ಲಿಯೂ ಇಂಥದ್ದೊಂದು ಯೋಜನೆ ಇಲ್ಲ. ಇದು ಕರ್ನಾಟಕ ಸರ್ಕಾರದ ಹೆಮ್ಮೆಯ ಕೊಡುಗೆ.

ಕನ್ನಡಿಗರು ಈ ಸಂಪುಟಗಳನ್ನು ಪ್ರೀತ್ಯಾದರದಿಂದ ಸ್ವಾಗತಿಸುವರೆಂಬುದು ನಮ್ಮ ನಂಬಿಕೆ.

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು ೫೬೦೦೦೨